ಅಥವಾ ಕಂಕರಿನ ತಗ್ಗಾದ ಸಣ್ಣಸಣ್ಣ ಪಾತ್ರಗಳೂ ಹರಡಿಕೊಂಡಿವೆ. ಕೆಲವೆಡೆ ಗೋಡುಭೂಮಿಯಿದ್ದು, ಮಂಗೋಲಿಯದ ನೆಮೆಟ್ ಬೇಸಿನ್‌ನಲ್ಲಿ ಅರ್ವಾಚೀನ ಸ್ತನಿಗಳ ಹಾಗೂ ಡೈನೊಸಾರ್ ಮೊಟ್ಟೆಗಳ ಪಳೆಯುಳಿಕೆಗಳು ವಿಪುಲವಾಗಿರುವುದನ್ನು ನೋಡಿದರೆ ಹಿಂದೊಮ್ಮೆ ಇಲ್ಲಿ ತೇವಾಂಶ ಹೆಚ್ಚಾಗಿತ್ತೆಂದು ಊಹಿಸಬಹುದಾಗಿದೆ. ಇಲ್ಲಿ ದೊರಕಿರುವ ಅವಶೇಷಗಳಿಂದ ಹಳೆಶಿಲಾಯುಗದಿಂದ ಲೋಹಯುಗದ ವರೆಗಿನ ಹಲವು ಪ್ರತ್ಯೇಕ ಸಂಸ್ಕೃತಿಗಳನ್ನು ಗುರುತಿಸಬಹುದು. ಚಾರಿತ್ರಿಕ ಕಾಲದಲ್ಲಿ ರೇಷ್ಮೆ ಮಾರ್ಗವೂ (ಸಿಲ್ಕ್‌ರೂಟ್) ಇತರ ಹಲವು ವ್ಯಾಪಾರ ಮಾರ್ಗಗಳೂ ಈ ಮರುಭೂಮಿಯ ಮುಖಾಂತರ ಸಾಗಿದ್ದುವೆಂಬುದು ಗಮನಾರ್ಹ. ಅನಂತರ ಇದು ಮಂಗೋಲ್ ಸಾಮ್ರಾಜ್ಯದ ಭಾಗವಾಯಿತು.

ಚೀನೀಯರು ಗೋಬಿಯನ್ನು ಷಾಮೊ (ಮರಳುಗಾಡು) ಎಂದು ಕರೆಯುತ್ತಾರೆ. ಆದರೆ ಇದು ತಪ್ಪು ಕಲ್ಪನೆಯನ್ನುಂಟುಮಾಡುತ್ತದೆ. ಏಕೆಂದರೆ ಗೋಬಿಯಲ್ಲಿ ಸ್ವಲ್ಪಭಾಗ ಮಾತ್ರ ಮರಳು ಅಥವಾ ಮರಳುದಿಣ್ಣೆಗಳಿಂದ ಕೂಡಿದ್ದು, ಬಹುಪಾಲು ಭಾಗದಲ್ಲಿ ಚಪ್ಪಟೆಯಾದ ಬಂಡೆಗಲ್ಲು ಹರಡಿಕೊಂಡಿದೆ. ಹಲವು ಕಿಲೋಮೀಟರ್‌ಗಳಷ್ಟು ದೂರ ಅದರ ಮೇಲೆ ವಾಹನಗಳನ್ನು ಸರಾಗವಾಗಿ ನಡೆಸಬಹುದು.

ಸಹಾರದಂತೆ ಗೋಬಿಯಲ್ಲಿ ಬರಿಯ ಒಣಹವೆಯಿಲ್ಲ. ಇಲ್ಲಿಯ ಹವೆ ಅತಿರೇಕದಿಂದ ಕೂಡಿದೆ. ತೀಕ್ಷ್ಣವಾದ ಸುಡುಬಿಸಿಲಿನಲ್ಲಿ ಕಾದ ಮರಳನ್ನು ತೂರಿ ಬಿರುಸಾಗಿ ಬೀಸುವ ಚಂಡಮಾರುತದಂತೆಯೇ ಚಳಿಗಾಲದ ಅತಿಶೈತ್ಯದಿಂದ ಕೂಡಿದ ಶೀತಮಾರುತವೂ ಸಾಮಾನ್ಯ. ಮರಳು ದಿಣ್ಣೆಗಳ ಮೇಲೆ ಒಮ್ಮೊಮ್ಮೆ ಹಿಮ ಶೇಖರಗೊಳ್ಳುವುದೂ ಉಂಟು. ವರ್ಷಕ್ಕೆ ಸರಾಸರಿ 19.5 ಸೆಂಮೀ ಮಳೆಯಾಗುತ್ತದೆ. ವರ್ಷದ ಸ್ವಲ್ಪಕಾಲ ಮಾತ್ರ ಗೋಚರಿಸುವ ಇಲ್ಲಿಯ ನದಿಗಳು ಹರಿಯುವುದೂ ಸ್ವಲ್ಪ ದೂರ ಮಾತ್ರವೇ. ಈ ನದಿಗಳ ನೀರು ಮರಳಿನಲ್ಲಿ ಇಂಗಿಹೋಗುತ್ತದೆ; ಇಲ್ಲವೆ ಅಲ್ಲಲ್ಲಿ ಸ್ವಲ್ಪ ತಗ್ಗಾಗಿರುವ, ಸಾಮಾನ್ಯವಾಗಿ ಒಣಗಿ ನಿಂತಿರುವ, ಉಪ್ಪುಸರೋವರಗಳನ್ನು ಸೇರುತ್ತದೆ. ಈ ಮರುಭೂಮಿಯಲ್ಲಿ ಮರಗಳಿಲ್ಲ. ಆದರೆ ಕೆಲವೆಡೆ ಕುರುಚಲು ಗಿಡಗಳನ್ನು ಕಾಣಬಹುದು. 2800 ಮೀ ಎತ್ತರದ ಆಲ್ಟಾ ಮತ್ತು ಅಂಥ ಇತರ ಪರ್ವತಗಳಲ್ಲಿ ಅರ್ಧಕ್ಕೂ ಹೆಚ್ಚು ಎತ್ತರದ ವರೆಗೂ ಸ್ಟೆಪ್ ಹುಲ್ಲೂ ಅಲ್ಲಿಂದ ಎತ್ತರಕ್ಕೆ ಪರ್ವತ ಹುಲ್ಲೂ ಬೆಳೆಯುತ್ತವೆ. ಗೆಜ್ಜೆಲ್, ಬ್ಯಾಕ್ಟ್ರಿಯ ಒಂಟೆ, ಕಾಡು ಕತ್ತೆ, ನರಿ, ಮೊಲ ಮೊದಲಾದ ಪ್ರಾಣಿಗಳು ಈ ಮರುಭೂಮಿಯಲ್ಲಿ ಕಾಣಸಿಗುತ್ತವೆ. ಹಿಮಚಿರತೆಗಳು, ಕರಡಿ, ತೋಳಗಳು ವಿರಳವಾಗಿ ಇಲ್ಲಿ ವಿಹರಿಸುತ್ತವೆ. ಕುರಿಮೇಕೆಗಳು ಇಲ್ಲಿಯ ಮುಖ್ಯ ಸಾಕುಪ್ರಾಣಿಗಳು. ದನಕರುಗಳನ್ನೂ ಸಾಕುತ್ತಾರೆ. ಕುದುರೆಗಳು ಶೇ.4 ಮಾತ್ರ, ಇವು ಹೆಚ್ಚಾಗಿರುವುದು ತೇವದ ವಾತಾವರಣವಿರುವ ಆಗ್ನೇಯ ಭಾಗದಲ್ಲಿ. ಮರುಭೂಮಿಯ ಒಂದೆಡೆಯಿಂದ ಮತ್ತೊಂದೆಡೆಗೆ ಪ್ರಯಾಣ ಮಾಡಲೂ ಸರಕು ಸಾಗಿಸಲೂ ಉಪಯೋಗಿಸುವ ಪ್ರಾಣಿ ಎರಡು ಡುಬ್ಬಗಳ ಒಂಟೆ.

ಇಲ್ಲಿಯ ಬಹುಭಾಗಗಳಲ್ಲಿ ಜನಸಾಂದ್ರತೆ ಅತ್ಯಂತ ವಿರಳ. ಓಯಸಿಸ್‌ಗಳಿರುವೆಡೆಗಳಲ್ಲಿ ಮಾತ್ರ ಜನ ನೆಲೆಸಿದ್ದಾರೆ. ಮಂಗೋಲರು, ಕಜ಼ಕ್ ಮತ್ತು ಯುಗುರ್ ಜನಾಂಗದವರು ಇಲ್ಲಿ ಬಹುಕಾಲದಿಂದ ವಾಸಿಸುತ್ತಿದ್ದಾರೆ. ಹುಲ್ಲುಗಾವಲುಗಳಲ್ಲಿ ಈ ಅಲೆಮಾರಿ ಜನಾಂಗಗಳು ತಮ್ಮ ಕುರಿಮೇಕೆಗಳ ಮತ್ತು ಹಸುಗಳ ಮಂದೆಯ ಹಿಂದೆ ಸಕಲ ಸರಂಜಾಮುಗಳೊಂದಿಗೆ ಸ್ಥಳದಿಂದ ಸ್ಥಳಕ್ಕೆ ಸಂಚರಿಸುತ್ತಾರೆ. ಇವರ ವಾಸ ಗುಡಾರಗಳಲ್ಲಿ. ಇವರು ಪ್ರಾಣಿಗಳನ್ನು ಸಾಕುವುದರ ಜೊತೆಗೆ ತೊಗಲಿನ ವ್ಯಾಪಾರವನ್ನೂ ಮಾಡುತ್ತಾರೆ. ಸ್ಟೆಪಿಗಳ ಅಂಚುಗಳಲ್ಲಿ ಚೀನೀಯರು ನೆಲೆಸಿದ್ದಾರೆ.

ಗೋಬಿಯ ಪೂರ್ವಭಾಗದಲ್ಲಿ ಪೆಟ್ರೋಲಿಯಂ ದೊರೆಯುತ್ತದೆ. ಚೀನ-ಮಂಗೋಲಿಯ ಗಡಿರೇಖೆಯ ಸಮೀಪ ತಾಮ್ರ ಹಾಗೂ ಚಿನ್ನದ ಗಣಿಗಳು ಶೋಧಗೊಂಡಿದ್ದು ಗಣಿಗಾರಿಕೆಯ ಸಾಧ್ಯತೆಯನ್ನು ಪರಿಶೀಲಿಸಲಾಗುತ್ತಿದೆ.

ಇತ್ತೀಚಿನ ವರ್ಷಗಳಲ್ಲಿ ಗೋಬಿ ಮರುಭೂಮಿ ತ್ವರಿತಗತಿಯಲ್ಲಿ ವಿಸ್ತರಿಸುತ್ತಿದೆ. ಚೀನದ ವ್ಯಾಪ್ತಿಗೆ ಸೇರುವ ಮರುಭೂಮಿಯ ದಕ್ಷಿಣ ಭಾಗದಲ್ಲಿ ಈ ಪ್ರಕ್ರಿಯೆ (ಡೆಸರ್ಟಿಫಿಕೇಶನ್) ವ್ಯಾಪಕವಾಗಿದ್ದು ಇಲ್ಲಿ ಪ್ರತಿವರ್ಷ ಸು. 3600 ಚ.ಕಿಮೀ ಪ್ರದೇಶದಷ್ಟು ಹುಲ್ಲುಗಾವಲು ಬೆಂಗಾಡಾಗಿ ಮಾರ್ಪಡುತ್ತಿರುವುದು ಅಪಾಯಕಾರಿ ಸೂಚನೆಯಾಗಿದೆ. ಚೀನದಲ್ಲಿ ಮರಳು ಮಾರುತಗಳು ಸಾಮಾನ್ಯ. ಆದರೆ ಮರುಭೂಮಿಯ ವಿಸ್ತರಣಾ ಪ್ರಕ್ರಿಯೆಯಿಂದಾಗಿ ಕಳೆದೆರಡು ದಶಕಗಳಲ್ಲಿ ಮಾರುತಗಳು ಅಧಿಕವಾಗಿ ಬೀಸಲಾರಂಭಿಸಿವೆ. ಇದು ಚೀನದ ಕೃಷಿ ವ್ಯವಸ್ಥೆಗೆ ಮಾರಕವಾಗಿ ಪರಿಣಮಿಸಿದೆ. ಕಾಡಿನ ನಾಶ, ನೀರಿನ ಮೂಲಗಳ ಬತ್ತುವಿಕೆ ಹಾಗೂ ವ್ಯಾಪಕ ಪಶುಪಾಲನೆ (ಓವರ್ ಗ್ರೇಜಿಂಗ್) ಮರುಭೂಮಿಯ ವಿಸ್ತರಣೆಗೆ ಕಾರಣವೆನ್ನಲಾಗಿದೆ. ಈ ಪ್ರಕ್ರಿಯೆಯನ್ನು ಮೊಟಕುಗೊಳಿಸಲು ಚೀನಾ ಸರ್ಕಾರ ಹಲವು ಯೋಜನೆಗಳನ್ನು ಹಮ್ಮಿಕೊಂಡಿದೆ. ಮರುಭೂಮಿಯ ಅಂಚಿನುದ್ದಕ್ಕೂ ಕಾಡನ್ನು ಬೆಳೆಸಿ (ಗ್ರೀನ್ ವಾಲ್ ಆಫ್ ಚೈನ) ವಿಸ್ತರಣೆಯನ್ನು ತಡೆಗಟ್ಟುವುದು ಇತ್ತೀಚಿನ ಯೋಜನೆಗಳಲ್ಲೊಂದಾಗಿದೆ.

ಅಧಿಕ ಮಳೆಯಾಗುವ ಪೂರ್ವಭಾಗದಲ್ಲಿಯೂ (ಮಂಗೋಲಿಯ) ಪರಿಸರ ನಾಶ ಇತ್ತೀಚೆಗೆ ಹೆಚ್ಚುತ್ತಿದೆ. ಕುರಿಮೇಕೆ ಸಾಕಣೆಯಿಂದಾಗಿ ಹುಲ್ಲುಗಾವಲುಗಳು ಕ್ಷಯಿಸುತ್ತಿವೆ.

(ಎಂ.ಎಚ್.)

**ಗೋಬಿಂದ ಸಿಂಹ, ಗುರು :** 1660–1708. ಸಿಕ್ಖ್ ಪಂಥದ ಗುರು ಪಂಕ್ತಿಯಲ್ಲಿ ಹತ್ತನೆಯವನು; ಹಾಗೆಯೇ ಕಡೆಯ ಗುರು. ಸಿಕ್ಖ್ ಪಂಥದ ನಂಬಿಕೆಯಂತೆ, ಪಂಥದ ಸ್ಥಾಪಕನಾದ ಮೊದಲ ಗುರು ನಾನಕ್, ತನ್ನ ಅನಂತರ ಪಂಥದ ಗುರುವಾಗಿ ಇರಲು ಎರಡನೆಯ ಗುರು ಅಂಗದನನ್ನು ನೇಮಿಸುವಾಗ, ತಾನು ಅವನಲ್ಲಿ ತನ್ನ ಆತ್ಮವನ್ನಿರಿಸಿದ. ಹೀಗೆಯೇ ಈ ಗುರುತ್ವ ಗುರುವಿನಿಂದ ಗುರುವಿಗೆ ಸಾಗಿತು. ಗುರು ಗೋಬಿಂದ ಸಿಂಹ, ತಾನು ದೇಹವನ್ನು ಬಿಡುವ ಮುನ್ನ, ತನ್ನ ಅನಂತರ ಯಾವನೇ ಒಬ್ಬವ್ಯಕ್ತಿ ಗುರುವಾಗಿ ಇರುವುದಿಲ್ಲ, ಗುರುತ್ವ ಗುರುವಾಣಿಯಾದ ಆದಿಗ್ರಂಥದಲ್ಲಿರುತ್ತದೆ ಎಂದೂ ಮುಂದೆ ಪಂಥದ ಜನ ಈ ಪೂಜ್ಯಗ್ರಂಥವನ್ನು (ಗ್ರಂಥ್ ಸಾಹೆಬ್) ಗುರುವೆಂದು ಕಾಣಬೇಕು ಎಂದೂ ನಿಯಮಿಸಿದ. ಇದೇ ಗುರು ಆ ಮೊದಲೇ (1705) ಈ ಗ್ರಂಥಕ್ಕೆ ಒಂದು ನಿಷ್ಕೃಷ್ಟ ಆಕಾರವನ್ನು ಕೊಟ್ಟಿದ್ದ.

ಗುರು ಗೋಬಿಂದ ಸಿಂಹ ಪಂಥದ ಒಂಬತ್ತನೆಯ ಗುರುವಾದ ತೇಗ್ (ತೇಜ್) ಬಹದ್ದೂರನ ಕುಮಾರ. ಶಿಷ್ಯರ ಸಲುವಾಗಿ ದೇಶಾಟನ ಮಾಡುತ್ತ ತೇಗ್ ಬಹದ್ದೂರ್ ಬಿಹಾರದಲ್ಲಿನ ಪಾಟ್ನ ನಗರದಲ್ಲಿದ್ದ. ಈತ ಕಾರ್ಯಾಂತರಕ್ಕಾಗಿ ಕಾಮರೂಪಕ್ಕೆ ಹೋಗಿದ್ದಾಗ ಈ ಕುಮಾರ ಹುಟ್ಟಿದ. ತಾನು ಹೊರಡುವ ವೇಳೆ ಪ್ರಸವದ ನಿರೀಕ್ಷೆಯಲ್ಲಿದ್ದ ಪತ್ನಿಗೆ ತೇಗ್ ಬಹದ್ದೂರ್, ಹುಟ್ಟುವ ಮಗನಿಗೆ ಗೋವಿಂದರಾಯ್ ಎಂದು ಹೆಸರಿಡಲು



ಹೇಳಿ ಹೋದ. ಗೋವಿಂದ ತೇಜಸ್ವಿಯಾದ ಬಾಲಕ, ವ್ಯಾಯಾಮ ಪ್ರೇಮಿಯಾಗಿ ಬೆಳೆದ. ಔರಂಗಜೇಬ್ ಹಿಂದೂ ಗಳನ್ನು ಜಾತಿ ಕೆಡಿಸುತ್ತಿದ್ದಾನೆಂದು ಕಾಶ್ಮೀರದ ಬ್ರಾಹ್ಮಣರು ತೇಗ್ ಬಹದ್ದೂರನ ರಕ್ಷಣೆಯನ್ನು ಬೇಡಿ ಬಂದರು. ಗುರು ಈ ಸಂದರ್ಭದಲ್ಲಿ ಏನು ಮಾಡುವುದು ಎಂದು ಯೋಚಿಸುತ್ತ ಇದ್ದನಂತೆ. ಮಗ ಚಿಂತೆಯೇನು–ಎಂದು ಕೇಳಿದ. ತಂದೆ, ಕೆಲಸಕ್ಕೆ ಧೀರ, ಸತ್ವವಂತ ಆದ ಸತ್ಪುರುಷಬೇಕು, ಎಂದನಂತೆ. ಕುಮಾರ ಗೋಬಿಂದ, ನಿಮ್ಮಂಥ ಧೀರ ಸತ್ವವಂತ ಸತ್ಪುರುಷ ಬೇರೆ ಯಾರಪ್ಪ – ಎಂದನಂತೆ. ತೇಗ್ ಬಹದ್ದೂರ್ ಇದು ದೈವದವಾಣಿ ಎಂದು ನೆನೆದ; ದೆಹಲಿಗೆ ಹೋಗಿ ಔರಂಗಜೇಬನಿಗೆ ಅವನು ಮಾಡುತ್ತಿದ್ದ ಅಕೃತ್ಯಗಳನ್ನು ನಿಲ್ಲಿಸಬೇಕು ಎಂದು ಸೂಚಿಸಿದ. ಔರಂಗಜೇಬ್ ಅವನನ್ನು ಕೊಲ್ಲಿಸಿದ. ಹದಿನೈದು ವಯಸ್ಸಿನ ಬಾಲಕ ಗೋಬಿಂದ ಗುರುವಾಗಬೇಕಾಯಿತು. ಹಗೆಯೊಂದಿಗೆ ಹೋರದೆ ಬದುಕುವಂತಿಲ್ಲ ಎಂದು ನಿಶ್ಚಯಿಸಿಕೊಂಡ ಗುರು ಗೋಬಿಂದ ಸಿಂಹ ಸಿಕ್ಖ್ ಜನವನ್ನು ಒಂದು ಕ್ಷತ್ರಿಯ ಸಮುದಾಯವಾಗಿ ರೂಪಿಸಲು ನಿರ್ಣಯಿಸಿದ. ತನ್ನ ಶಿಷ್ಯರು ಖಾಲ್ಸಾ ಎಂಬ ಹೆಸರಿಂದ ಒಂದು ಯೋಧಸಮಾಜವಾಗಿ ಬಾಳಬೇಕು ಎಂದು 1669ರ ಯುಗಾದಿಯ ದಿನ ಆಜ್ಞೆ ಮಾಡಿ ಮೊದಲು ಹತ್ತು ಜನರಿಗೆ ಅಂದೇ ದೀಕ್ಷೆ ಕೊಟ್ಟ. ಖಾಲ್ಸಾ ಎಂದರೆ ಶುದ್ಧ. ಖಾಲ್ಸಾ ಮಂದಿ ಶುದ್ಧಜೀವನ ನಡೆಸಬೇಕು ಎಂದೂ ಸಿಕ್ಖ್ ಆದವನಿಗೆ ಕೇಶ, ಕಂಘ, ಕಚ್ಛ, ಕರ, ಕೃಪಾಣ ಎಂಬ ಪಂಚ ಕಕಾರರಕ್ಷಣ ಇರಬೇಕು ಎಂದೂ ನೇಮ ಹಾಕಿಕೊಟ್ಟ, ಶಿಷ್ಯರು ಸಿಂಹ ಎಂದು ಕರೆದುಕೊಳ್ಳಬೇಕು ಎಂದೂ ನಿಯಮಿಸಿದ. ಮೊದಲು ಐವರು ಶಿಷ್ಯರಿಂದ ತಾನೂ ದೀಕ್ಷೆ ತೆಗೆದುಕೊಂಡು ತಾನು ಅಂದಿನಿಂದ ಗೋಬಿಂದ ಸಿಂಹ ಆದ.

ಚಕ್ರವರ್ತಿ ಔರಂಗಜ಼ೇಬನಿಗೆ ಅವನ ಮತದ್ವೇಷವನ್ನು ಖಂಡಿಸಿ ಗೋಬಿಂದ ಒಂದು ಪತ್ರಬರೆದ. ಇದು ಜಫರ್ ನಾಮಾ ಎಂಬ ಹೆಸರಿನಿಂದ ಪ್ರಸಿದ್ಧವಾಯಿತು. ಆಯುಷ್ಯವೆಲ್ಲ ಧರ್ಮರಕ್ಷಣೆಗಾಗಿ ಕಾದಿ ಗೋಬಿಂದ ಸಿಂಹ 1708ರಲ್ಲಿ ಇಹಲೋಕವನ್ನು ತೊರೆದ.




ತಖತ್ ಹರಿಮಂದಿರ್–ಗೋಬಿಂದ ಸಿಂಹ ಜನಿಸಿದ ಸ್ಥಳ

ಕಾದಾಟದಲ್ಲಿ ಇವನ ಮಕ್ಕಳಲ್ಲಿ ಇಬ್ಬರು ಯುದ್ಧದಲ್ಲಿ ಮಡಿದರು, ಇಬ್ಬರು ಹಗೆಯ ಕೈಗೆ ಸಿಕ್ಕಿ ಬಲಿಯಾದರು. ಇಷ್ಟಾದರೂ ಈ ಧರ್ಮಸಿಂಹ ಧೈರ್ಯಗೆಡಲಿಲ್ಲ; ಬಂದ ದುಃಖಕ್ಕೆ ತಲೆಕೊಟ್ಟು ಶಿಷ್ಯರಿಗೆ ಮೇಲ್ಪಂಕ್ತಿಯಾಗಿ ಬಾಳಿದ.

ಹಿಂದಿನ ಗುರುಗಳ ಕೃತಿಗಳನ್ನೆಲ್ಲ ಸಂಗ್ರಹಿಸಿ ಪರಿಷ್ಕರಿಸಿ ಅವಕ್ಕೆ ಒಂದು ಸ್ಥಿರವಾದ ರೂಪವನ್ನು ಕೊಟ್ಟದ್ದು ಗುರು ಗೋಬಿಂದ ಸಿಂಹ ಮಾಡಿದ ಮಹತ್ಕಾರ್ಯಗಳಲ್ಲಿ ಒಂದು. ಗೋಬಿಂದ ಸಿಂಹ ತಾನೂ ಕೃತಿಗಳನ್ನು ರಚಿಸಿದ. ಆದರೆ ಅದನ್ನು ಗ್ರಂಥ್ ಸಾಹೆಬ್‌ನಲ್ಲಿ ಸೇರಿಸಲಿಲ್ಲ. ಈತ ತೀರಿದ ಅನಂತರ ಶಿಷ್ಯನೊಬ್ಬ ಆ ಕೃತಿಗಳನ್ನು ಸಂಗ್ರಹಿಸಿದ. ಅದು ದಶಮಗ್ರಂಥ ಎಂದರೆ ಹತ್ತನೆಯ ಗುರುವಿನ ಗ್ರಂಥ ಎಂಬ ಹೆಸರಿನಿಂದ ಬಳಕೆಗೆ ಬಂತು. ಇದರಲ್ಲಿ ಗೋಬಿಂದ ಸಿಂಹನ ಸುಮಾರು 2000ದಷ್ಟು ಕೃತಿಗಳು ಇವೆ. ಗುರು ನಾನಕ್ ಆರಂಭಿಸಿದ ಪಂಥ ಕೆಲವು ಕಾಲದಲ್ಲಿ ಒಂದು ಪ್ರತ್ಯೇಕ ಪಂಥ ಎಂದಾಗಿ ಗುರುಗೋಬಿಂದಸಿಂಹನ ಕಾರ್ಯದಿಂದ ಒಂದು ನಿಷ್ಕೃಷ್ಟ ರೂಪವನ್ನು ತಳೆಯಿತು; ತನ್ನದೇ ಧರ್ಮಗ್ರಂಥವನ್ನು ಪಡೆಯಿತು; ಧರ್ಮರಕ್ಷಣೆಯ ದೀಕ್ಷೆಯನ್ನು ವಹಿಸಿಕೊಂಡಿತು; ಭರತವರ್ಷದ ಇತಿಹಾಸದಲ್ಲಿ ಒಂದು ವಿಶಿಷ್ಟ ಸೇವೆಯನ್ನು ಸಲ್ಲಿಸಲು ಕ್ಷಮವಾದ ಒಂದು ದಕ್ಷ ಧರ್ಮಸಂಘ ಆಯಿತು. (ಎಂ.ವಿ.ಐ.;ಜಿ.ಆರ್.ಆರ್.)

**ಗೋಬಿ ಮೀನು :** ಪರ್ಸಿಫಾರ್ಮೀಸ್ ಗಣದ ಗೋಬಿಯಿಡೀ ಕುಟುಂಬಕ್ಕೆ ಸೇರಿದ ಹಲವಾರು ಮೀನುಗಳಿಗೆ ಇರುವ ಸಾಮಾನ್ಯ ಹೆಸರು. ಈ ಕುಟುಂಬದಲ್ಲಿ ನೂರಾರು ಪ್ರಭೇದಗಳಿವೆ. ಇವು ಉಷ್ಣವಲಯದ ಕಡಲುಗಳು ಇಲ್ಲವೇ ಸರೋವರಗಳ ತಳದಲ್ಲಿ ವಾಸಿಸುತ್ತವೆ. ಸಾಮಾನ್ಯವಾಗಿ ಇವು ಚಿಕ್ಕ ಗಾತ್ರದವು. ಫಿಲಿಪೀನ್ಸ್‌ನಲ್ಲಿನ ಲುಜ಼ಾನ್ ಎಂಬಲ್ಲಿರುವ ಒಂದು ಸರೋವರದಲ್ಲಿ ಕಂಡುಬರುವ ಪಂಡಾಕ ಪಿಗ್ಮೀಯ ಎಂಬ ಗೋಬಿ ಮೀನು ಕೇವಲ 12 ಮಿಮೀ ಉದ್ದ ಇದ್ದು ಅತ್ಯಂತ ಚಿಕ್ಕ ಕಶೇರುಕ ಎನಿಸಿಕೊಂಡಿದೆ. ಉಳಿದವು ಸುಮಾರು 8 ರಿಂದ 30 ಸೆಂಮೀ ವರೆಗೆ ಬೆಳೆಯಬಲ್ಲವು.

ಭಾರತದಲ್ಲಿ ಸಾಮಾನ್ಯವಾಗಿ ಸಿಹಿನೀರು ಪ್ರದೇಶಗಳಲ್ಲಿ ಕಾಣಸಿಗುವ ಗೋಬಿ ಮೀನು ಎಂದರೆ ಗ್ಲಾಸೊಗೋಬಿಯಸ್ ಗೈಯುರಿಸ್ (ಟ್ಯಾಂಕ್ ಗೋಬಿ). ಬಹುತೇಕ ಕೆರೆ, ಕೊಳಗಳು, ಅಳಿವೆಗಳು, ಹಿನ್ನೀರು ಪ್ರದೇಶಗಳಲ್ಲಿ ಸಾಮಾನ್ಯವಾಗಿ ಕಾಣಸಿಗುವ ಮೀನು. ಮರಳು, ಜಲ್ಲಿ, ಬಂಡೆಗಳಿಂದ ಕೂಡಿದ ಝರಿಗಳಲ್ಲೂ ಕಾಣಸಿಗುತ್ತವೆ. ಕೆಲವೊಮ್ಮೆ ಸಮುದ್ರಕ್ಕೂ ಪ್ರವೇಶಿಸುತ್ತವೆ. ಈ ಪ್ರಭೇದದ ಗಂಡು ಮೀನು ಕಂದುಬಣ್ಣವಿರುತ್ತದೆ, ಹೆಣ್ಣು ಹಳದಿ. ಹೆಣ್ಣಿನಲ್ಲಿ ಬೂದು ಮತ್ತು ಕಪ್ಪು ಚುಕ್ಕೆಗಳು ಇರುತ್ತವೆ. ಸುಮಾರು 30 ಸೆಂಮೀ ವರೆಗೆ ಬೆಳೆಯುತ್ತದೆ. ಗೋಬಿ ಮೀನುಗಳಿಗೆ ಚಪ್ಪಟೆಯಾದ ತಲೆ, ದುಂಡಾದ ಮೂತಿ, ತಲೆಯ ಮೇಲ್ಭಾಗಕ್ಕಿರುವ ದೊಡ್ಡ ಕಣ್ಣುಗಳು, ದಪ್ಪ ತುಟಿಗಳು, ಹಲವಾರು ಸಾಲುಗಳಲ್ಲಿರುವ ಸಣ್ಣ ಹಲ್ಲುಗಳು, ದುಂಡಾದ ಬಾಲದ ಈಜುರೆಕ್ಕೆಗಳಿವೆ. ಗುದದ ಈಜುರೆಕ್ಕೆಗಳು ದೇಹದ ಅಧೋಭಾಗದಲ್ಲಿ ಒಂದುಗೂಡಿ ಒಂದು ರೀತಿಯ ಹೀರು ಬಟ್ಟಲಾಗಿ ಪರಿವರ್ತನೆಯಾಗಿವೆ. ಇದರ ಸಹಾಯದಿಂದ ಗೋಬಿ ಬಂಡೆಗಳಿಗೆ, ಮರಳಿಗೆ ಅಂಟಿಕೊಂಡಿರುತ್ತದೆ. ಇವು ಸಣ್ಣ ಕೀಟಗಳು, ಇತರೆ ಸಣ್ಣ ಜಲಚರಗಳು ಹಾಗೂ ಮೀನುಗಳನ್ನು ತಿನ್ನುತ್ತವೆ.



ಫಿಲಿಪೀನ್ ಗೋಬಿ

ವಸಂತ ಋತುವಿನ ಪ್ರಾರಂಭದಲ್ಲಿ ಗೋಬಿಗಳು ಪ್ರಜನನ ಕ್ರಿಯೆಯಲ್ಲಿ ತೊಡಗುತ್ತವೆ. ಹೆಣ್ಣು ಮೊಟ್ಟೆಗಳನ್ನು ಇಟ್ಟ ಮೇಲೆ ಗಂಡು ಮೀನು ಕಾವಲಿರುತ್ತದೆ. ಇದು ಮೊಟ್ಟೆಗಳನ್ನು ತಿನ್ನಲು ಬರುವ ಇತರೆ ಮೀನುಗಳೊಡನೆ ಕಾದಾಡಿ ರಕ್ಷಣೆ ನೀಡುವುದಲ್ಲದೆ, ತನ್ನ ಭುಜದ ಈಜು ರೆಕ್ಕೆಗಳಿಂದ ಸುತ್ತಲಿನ ಪ್ರದೇಶವನ್ನು ಸ್ವಚ್ಛಗೊಳಿಸಿ ಬೆಳೆಯುವ ಮರಿಗಳಿಗೆ ಅನುಕೂಲ ವಾತಾವರಣವನ್ನು ಕಲ್ಪಿಸುತ್ತದೆ.

ವಾಣಿಜ್ಯವಾಗಿ ಅಷ್ಟು ಪ್ರಾಮುಖ್ಯವಲ್ಲದಿದ್ದರೂ ಈ ಮೀನು ತಿನ್ನಲು ಯೋಗ್ಯವಾಗಿವೆ. (ಜಿ.ಎಸ್.ಎಚ್.ಐ.)

**ಗೋಮತೀ ನದಿ :** ಭಾರತದ ಉತ್ತರಪ್ರದೇಶ ರಾಜ್ಯದಲ್ಲಿ ಹರಿಯುವ ಒಂದು ನದಿ, ಗಂಗಾನದಿಯ ಉಪನದಿಗಳಲ್ಲೊಂದು. ಪೀಲಿಭೀತ್‌ನಿಂದ ಪೂರ್ವಕ್ಕೆ 32 ಕಿಮೀ ದೂರದಲ್ಲಿರುವ ಗೋಮತ್ ತಾಲ್‌ನಲ್ಲಿ (ಉ.ಅ.$28^0$ 35′ ; ಪೂ.ರೇ.$80^0$ 75′) ಹುಟ್ಟಿ 19 ಕಿಮೀ ವರೆಗೆ ಝರಿಯಂತೆ ಹರಿಯುತ್ತದೆ. 56 ಕಿಮೀ ಹರಿದ ಅನಂತರ ಜೊಮ್‌ಕೈ ನದಿ ಇದನ್ನು ಸಂಗಮಿಸುತ್ತದೆ. ಅಲ್ಲಿಂದ ಮುಂದೆ ಶಾಶ್ವತವಾದ ಪ್ರವಾಹ ರೂಪದಲ್ಲಿ ಇದು ಹರಿಯತೊಡಗುತ್ತದೆ. ಸ್ವಲ್ಪ ದೂರದಲ್ಲಿ ಶಹಜಹಾನ್‌ಪುರ ದಿಂದ ಖೇರೀಗೆ ಹೋಗುವ ಮಾರ್ಗದಲ್ಲಿ ಗೋಮತಿಗೆ 63 ಮೀ ಉದ್ದದ ಸೇತುವೆ ನಿರ್ಮಾಣವಾಗಿದೆ. ಸೇತುವೆಯನ್ನು ದಾಟಿದ ಮೇಲೆ ಮಂದಗತಿಯಿಂದ ಹರಿಯುವ ಈ ನದಿಗೆ ಅನೇಕ ಉಪನದಿಗಳೂ ನಾಲೆಗಳೂ ಬಂದು ಸೇರುತ್ತವೆ. ಮುಹಮ್ಮದೀಯಿಂದ ಲಖನೌ ವರೆಗೆ ನದಿಯ ಪಾತ್ರದ ಅಗಲ 30–36 ಮೀ. ಇಲ್ಲಿ ನದಿಯ ದಡಗಳು ತಕ್ಕಮಟ್ಟಿಗೆ ಎತ್ತರವಾಗಿವೆ. ಸೀತಾಪುರ ಜಿಲ್ಲೆಯಲ್ಲಿ ಗೋಮತಿಯನ್ನು ಬಂದು ಸೇರುವ ನದಿಗಳು ಕಥ್‌ನಾ ಮತ್ತು ಸರಾಯಾನ. ಲಖನೌ ನಗರದಲ್ಲಿ ಇದಕ್ಕೆ ಅನೇಕ ಸೇತುವೆಗಳಿವೆ. ಲಖನೌದಿಂದ ಮುಂದೆ ಈ ನದಿ ಬಾರಾಬಂಕಿ, ಸುಲ್ತಾನ್‌ಪುರ ಮತ್ತು ಜೌನ್‌ಪುರ ಜಿಲ್ಲೆಗಳನ್ನು ದಾಟಿ ಮುಂದುವರೆಯುತ್ತದೆ. ಅಲ್ಲಿ ನದಿಯ ಮಾರ್ಗ ಅಂಕುಡೊಂಕು; ಪಾತ್ರದ ಅಗಲ 60–180 ಮೀ. ಜೌನ್‌ಪುರದಲ್ಲಿ 16ನೆಯ ಶತಮಾನದಲ್ಲಿ ಕಟ್ಟಿದ 196 ಮೀ ಉದ್ದದ ಶಾಹೀ ಎಂಬ ಕಲ್ಲುಸೇತುವೆ ತುಂಬ ಪ್ರಸಿದ್ಧವಾದುದು. ಮುಂದೆ ಗೋಮತಿಯನ್ನು ಸೇರುವ ನದಿ ಸಯೀ. ವಾರಾಣಸಿಯಿಂದ ಉತ್ತರಕ್ಕೆ 32 ಕಿಮೀ ದೂರದಲ್ಲಿ ಗೋಮತೀ ನದಿ ಘಾಜಿಪುರ ಜಿಲ್ಲೆಯ ಸೈದ್‌ಪುರ ಎಂಬ ಊರಿನ ಹತ್ತಿರ ಗಂಗಾನದಿಯನ್ನು ಸಂಗಮಿಸುತ್ತದೆ. ನದಿಯ ಒಟ್ಟು ಉದ್ದ ಸು. 940 ಕಿಮೀ.

ಗೋಮತೀ ನದಿ ಮತ್ತು ಅದರ ಉಪನದಿಗಳಿಂದ 30,437 ಚ.ಕಿಮೀ ಪ್ರದೇಶ ಫಲವತ್ತಾಗಿದೆ. ಅತಿವೃಷ್ಟಿಯಿಂದ ಆಗಾಗ್ಗೆ ನದಿಯಲ್ಲಿ ಅತಿಯಾದ ನೆರೆ ಬರುವುದುಂಟು. ಗೋಮತೀ ನದಿಯಲ್ಲಿ ಮುಹಮ್ಮದೀವರೆಗೆ ದೋಣಿ ಸಂಚಾರ ಸಾಧ್ಯ. ಲಖನೌ, ಸೀತಾಪುರ, ಬಾರಾಬಂಕಿ, ರಾಯ್‌ಬರೇಲಿ, ಸುಲ್ತಾನ್‌ಪುರ, ಜೌನ್‌ಪುರ ನಗರಗಳು ಗೋಮತೀ ನದಿಯ ದಂಡೆಯ ಮೇಲಿವೆ. (ಆರ್.ಪಿ.ಎಸ್.)

**ಗೋಮೇದಕ :** ಆದರ್ಶೀಕೃತ ರಾಸಾಯನಿಕ ಸೂತ್ರ $ZrSiO_4$ (ಜ಼ಿರ್ಕೋನಿಯಂ ಸಿಲಿಕೇಟ್) ಇರುವ ಒಂದು ಖನಿಜ (ಜ಼ಿರ್ಕಾನ್). ನವರತ್ನಗಳಲ್ಲಿ ಒಂದು. ಜ಼ಿರ್ಕೋನಿಯಮ್ ಧಾತುವಿನ ಬಲುಮುಖ್ಯ ಆಕರ. ಇದರ ರಾಸಾಯನಿಕ ಸಂಯೋಜನೆಯಲ್ಲಿ ಅಲ್ಪ ಮೊತ್ತದಲ್ಲಿ ಯುರೇನಿಯಮ್ ಪ್ರವೇಶಿಸಿದರೆ ಅದಕ್ಕೆ ಸಿರ್ಟೋಲೈಟ್ ಎಂದು ಹೆಸರಾಗುತ್ತದೆ.

ಗೋಮೇದಕ ಚತುಷ್ಕೋಣೀಯ (ಟೆಟ್ರಾಗೋನಲ್) ವರ್ಗದ ಹರಳುಗಳಾಗಿ ಚತುರ್ಮುಖ ಅಥವಾ ಅಷ್ಟಮುಖಗಳ ಪ್ರಿಸಮ್‌ಗಳಂತೆ ರೂಪುಗೊಳ್ಳುತ್ತದೆ. ಪ್ರಿಸಮ್‌ಗಳ ತುದಿಗಳು ಪಿರಮಿಡ್ಡುಗಳಂತೆ ಮೊನಚಾಗಿ ಮಾರ್ಪಡುತ್ತವೆ. ಅವಳಿಗಳಾಗಿ ಬೆಳೆಯುವ ಕೆಲವು ಹರಳುಗಳು ಬಗ್ಗಿದ ಮೊಣಕಾಲಿನ ರೂಪವನ್ನು ಪಡೆಯುತ್ತವೆ. ಸರ್ವ ಸಾಮಾನ್ಯವಾಗಿ ದೊರೆಯುವ ಗೋಮೇದಕ ಸ್ವಚ್ಛವಾಗಿರುವುದಿಲ್ಲ. ಅಚ್ಚ ಹೊಳಪನ್ನುಳ್ಳ ಅಚ್ಚಗೆಂಪು, ಕಿತ್ತಳೆ ಕೆಂಪು ಇಲ್ಲವೆ ಹಳದಿ ಬಣ್ಣಗಳಿಂದ ಕೂಡಿ ಪಾರದರ್ಶಕತೆಯುಳ್ಳ ಹೈಯಾಸಿಂತ್ ಎಂಬ ಅಪರೂಪದ ಗೋಮೇದಕಗಳು ಬೆಲೆಬಾಳುವ ರತ್ನಗಳು. ಕಾಯಿಸುವುದರಿಂದ ಗೋಮೇದಕದ ಬಣ್ಣ ಮಾಯವಾಗುತ್ತದೆ. ನಿರ್ಮಲವಾದ ಗೋಮೇದಕ ವಜ್ರಕ್ಕೆ ಸಮವಾದ ಹೊಳಪನ್ನು ಬೀರಿದರೆ ಅದಕ್ಕೆ ಮಟುರಾ ವಜ್ರವೆನ್ನುತ್ತಾರೆ. ಇದನ್ನು ಒಡೆದಾಗ ಶಂಖಾಕೃತಿಯ ಸೀಳುಗಳನ್ನು ಕಾಣಬಹುದು. ಇದರ ಕಠಿಣತೆ 7.5, ಸಾಪೇಕ್ಷ ಸಾಂದ್ರತೆ 4.7.

ರತ್ನ ಜಾತಿಗೆ ಸೇರಿದ ಗೋಮೇದಕಗಳು ಶ್ರೀಲಂಕ, ಇಂಡೋಚೀನ, ಆಸ್ಟ್ರೇಲಿಯ, ರಷ್ಯ, ಆಗ್ನೇಯ ಏಷ್ಯ, ಇಟಲಿ ಮೊದಲಾದ ದೇಶಗಳಲ್ಲಿ ದೊರೆಯುತ್ತವೆ. ಗೋಮೇದಕದ ಗಣಿಗಾರಿಕೆಯಲ್ಲಿ ಆಸ್ಟ್ರೇಲಿಯ ಮುಂಚೂಣಿಯಲ್ಲಿದೆ (37%). ಭಾರತದಲ್ಲಿ ಕೇರಳ, ತಮಿಳುನಾಡು, ಆಂಧ್ರಪ್ರದೇಶ ಮತ್ತು ಒರಿಸ್ಸ ರಾಜ್ಯಗಳಲ್ಲಿನ ಸಮುದ್ರತೀರದಲ್ಲಿರುವ ಮರಳಿನಲ್ಲೂ ಇವು ಹೇರಳ. ಗೋಮೇದಕ ಸಾಮಾನ್ಯವಾಗಿ ಅಗ್ನಿಶಿಲೆಗಳಾದ ಗ್ರಾನೈಟ್, ಸೈನೈಟ್ ಮತ್ತು ಪೆಗ್ಮೆಟೈಟ್ ಶಿಲೆಗಳಲ್ಲಿ ಉಪಖನಿಜವಾಗಿ ಭೂಮಿಯ ನಾನಾ ಭಾಗಗಳಲ್ಲಿ ಉತ್ಪತ್ತಿಯಾಗಿರುತ್ತದೆ. ಆಂಧ್ರಪ್ರದೇಶದ ಖಮ್ಮಮ್ ಜಿಲ್ಲೆಯ ಸೈನೈಟ್ ಶಿಲೆಗಳಲ್ಲಿ ಅಸ್ಪಷ್ಟವಾದ ಹರಳುಗಳು ಸಾಕಷ್ಟು ಮೊತ್ತದಲ್ಲಿ ದೊರೆಯುತ್ತವೆ. (ಸಿ.ಎಸ್.ಎನ್.ಆರ್.)

**ಗೋಯಾ, ಇ ಲೂಸ್ಯಾನ್ ದಾ :** 1746–1828. ಸ್ಪೇನಿನ ವರ್ಣಚಿತ್ರ ಕಲಾವಿದ ಹಾಗೂ ಕೆತ್ತನೆ ಕಲೆಯಲ್ಲಿ ನಿಷ್ಣಾತನೆನಿಸಿದವ. ಸರಗೋಸ ಬಳಿಯ ಫ್ಯುನ್‌ಡೆ ಟೊಡೋಸ್‌ನಲ್ಲಿ 30 ಮಾರ್ಚ್ 1746ರಂದು ಜನಿಸಿದ. ಈತ ಚಿತ್ರಿಸಿರುವ ಬೃಹತ್ ಪ್ರಮಾಣದ ಚಿತ್ರಗಳು ಆ ಕಾಲದ ರಾಜಕೀಯ, ಸಾಮಾಜಿಕ ರಂಗಗಳಲ್ಲಿ ಉಂಟಾದ ಮಹತ್ತ್ವಪೂರ್ಣ ಬದಲಾವಣೆಗಳನ್ನು ರೂಪಿಸುತ್ತವೆಯಲ್ಲದೆ ಸಮಕಾಲೀನ ಜೀವನದ ನಾನಾ ಮುಖಗಳನ್ನು ಪ್ರತಿಮಿಸುತ್ತವೆ.

ಗೋಯಾ ಸರಗೋಸದಲ್ಲಿ ತನ್ನ ಚಿತ್ರ ಕಲೆಯನ್ನು ಆರಂಭಿಸಿದ. ಈತನ ಮೊದಲ ಗುರು ಜೋಸೆ ಲುಕ್ಸಾನ್. 1763ರಲ್ಲಿ ಮ್ಯಾಡ್ರಿಡ್‌ಗೆ ಹೋಗಿ ಅಲ್ಲಿ ಫ್ರಾನ್ಸಿಸ್ಕೊ ಬೇ ಎಂಬಾತನ ಬಳಿ ಶಿಷ್ಯವೃತ್ತಿ ಕೈಗೊಂಡ. ಅನಂತರ 1773ರಲ್ಲಿ ಆತನ ಸೋದರಿ ಜೋಸೆಫಳನ್ನು ವಿವಾಹವಾದ. ಅಲ್ಲಿಂದ ಮುಂದೆ ಇಟಲಿ, ರೋಮ್‌ಗಳಿಗೆ ಹೋದ. 1771ರಲ್ಲಿ ಸರಗೋಸದ ಕತೀಡ್ರಲಿನಲ್ಲಿ ಭಿತ್ತಿಚಿತ್ರಣವನ್ನು ಕೈಗೊಂಡ. ಇವು ಬರೋಕ್–ರೊಕೊಕೊ ಶೈಲಿಯಲ್ಲಿವೆ. ಮ್ಯಾಡ್ರಿಡ್‌ನಲ್ಲಿದ್ದ ಕಲಾವಿದ ಜಿ.ಬಿ.ಟೈಪೋಲೊನ ಕೃತಿಗಳ ಪ್ರಭಾವವನ್ನಿಲ್ಲಿ ಕಾಣಬಹುದು.


1780ರಲ್ಲಿ ಗೋಯಾ ಸಾನ್ ಫರ್ನಾಂಡೊ ಅಕಾಡೆಮಿಯ ಸದಸ್ಯನಾಗಿ ಅವಿರೋಧವಾಗಿ ಆಯ್ಕೆಗೊಂಡ. 1785ರಲ್ಲಿ ಅದೇ ಅಕಾಡೆಮಿಯ ಉಪನಿರ್ದೇಶಕನಾದ. ಮರುವರ್ಷ ಮೂರನೆಯ ಚಾರ್ಲ್ಸ್‌ನ ಆಸ್ಥಾನದಲ್ಲಿ ಚಿತ್ರಗಾರನಾಗಿ ನೇಮಕಗೊಂಡ. ಇದರಿಂದ ಹೆಚ್ಚಿನ ಕೀರ್ತಿಪ್ರತಿಷ್ಠೆಗಳು ಲಭಿಸಿದವು. 1788ರಲ್ಲಿ, ಎಂದರೆ ಫ್ರಾನ್ಸಿನ ಮಹಾಕ್ರಾಂತಿಗೆ ಕೆಲವು ತಿಂಗಳು ಮೊದಲೇ, ದೊರೆ ಮೂರನೆಯ ಚಾರ್ಲ್ಸ್ ತೀರಿಕೊಂಡ. 1795ರಲ್ಲಿ, ಹೊಸ ರಾಜನಾದ ನಾಲ್ಕನೆಯ ಚಾರ್ಲ್ಸ್‌ನ ಆಳಿಕೆಯಲ್ಲಿ, ಗೋಯಾ ಅಕಾಡೆಮಿಯ ನಿರ್ದೇಶಕನಾದ. ಎರಡು ವರ್ಷಗಳ ತರುವಾಯ ತನ್ನ ಅನಾರೋಗ್ಯದ ನಿಮಿತ್ತ ನಿರ್ದೇಶಕ ಪದವಿಗೆ ರಾಜೀನಾಮೆ ನೀಡಿದ.

1792ರಲ್ಲಿ ತೀವ್ರಸ್ವರೂಪದ ಕಾಯಿಲೆಗೆ ತುತ್ತಾದದ್ದರಿಂದ ಗೋಯಾನ ಶ್ರವಣ ಶಕ್ತಿ ತೀರ ಕುಂಠಿತವಾಯಿತು. ಆದರೂ ಈತನ ಕಲಾಪ್ರೌಢಿಮೆ ಮಾತ್ರ ಅತಿಶಯವಾಗಿ ಬೆಳೆಯಿತು. ಪ್ರತಿಭೆ ಮತ್ತು ವಿಮರ್ಶನ ಬುದ್ಧಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಮೇಳೈಸಿದುವು. 1800ರ ಆರಂಭಿಕ ವರ್ಷದಲ್ಲಿ ಸ್ಪೇನ್ ದೇಶ ನೆಪೋಲಿಯನ್ ಯುದ್ಧಗಳಲ್ಲಿ ಭಾಗಿಯಾಗಿತ್ತು. ಆ ಕಾಲದಲ್ಲಿ ಸ್ಪೇನಿಗರು ಅನುಭವಿಸಿದ ಕಷ್ಟನಿಷ್ಠುರಗಳನ್ನು ತನ್ನ ಎರಡು ಮಹಾಚಿತ್ರಗಳಾದ ದಿ ಸೆಕೆಂಡ್ ಆಫ್ ಮೇ ಮತ್ತು ಷೂಟಿಂಗ್‌ಗಳಲ್ಲಿ ಗೋಯಾ ಅದ್ಭುತವಾಗಿ ಚಿತ್ರಿಸಿದ್ದಾನೆ. ಈ ಚಿತ್ರಗಳಲ್ಲಿ ಮಾನವನಿಂದ ಸಹಮಾನವನಿಗೆ ಆಗುತ್ತಿರುವ ಕ್ರೌರ್ಯಗಳ ಪ್ರಖರ ಚಿತ್ರಣವಿದೆ.

ಗೋಯಾನ ಇತರ ಕಲಾಕೃತಿಗಳಾದ ದಿ ಫ್ಯಾಮಿಲಿ ಆಫ್ ಚಾರ್ಲ್ಸ್ IV (1800) ಹಾಗೂ ಏಕೈಕ ನಗ್ನಚಿತ್ರ ಮಜಾ (ಸು. 1800–05) ಎಂಬವು ಉಲ್ಲೇಖನಾರ್ಹವಾದವು. ಸ್ಪೇನಿನ ಮೇಲೆ ಫ್ರೆಂಚರು ನಡೆಸಿದ ದುರಾಕ್ರಮಣವನ್ನೂ ಯುದ್ಧದ ಕರಾಳ ಸ್ವರೂಪವನ್ನೂ ದಿ ಕ್ಯಾಪ್ರೈಸಿಸ್ (1799) ಮತ್ತು ಡಿಸಾಸ್ಟರ್ಸ್ ಆಫ್ ವಾರ್‌ಗಳಲ್ಲಿ (1810–20) ಅತ್ಯಂತ ಮನೋಜ್ಞವಾಗಿ ಚಿತ್ರಿಸಲಾಗಿದೆ.

ಏಳನೆಯ ಫರ್ಡಿನೆಂಡನ ಆಳ್ವಿಕೆಯಲ್ಲಿ ಗೋಯಾಗೆ ಸ್ಪೇನಿನಲ್ಲಿ ಜೀವನ ನಡೆಸುವುದೇ ಅಸಹ್ಯಕರವಾಗಿ ತೋರಿತು. ಹಾಗಾಗಿ ಈತ ರಾಜನ ಅಪ್ಪಣೆ ಪಡೆದು ಪ್ಯಾರಿಸಿಗೆ ಹೋದ. ಅಲ್ಲಿ ಈತನಿಗೆ ಯುಕ್ತ ಮನ್ನಣೆ ದೊರಕಿತು. ಕೆಲಕಾಲ ಅಲ್ಲಿದ್ದು ಅನಂತರ ಬೋರ್ಡೋಗೆ ಹೋಗಿ ನೆಲಸಿದ. ಏಪ್ರಿಲ್ 16, 1828ರಂದು ಅಲ್ಲೇ ತೀರಿಕೊಂಡ. (ಎಚ್.ಎಸ್.ಎಚ್.)

**ಗೋಯೆಂಕಾ, ರಾಮನಾಥ :** 1902–91. ಭಾರತದ ಒಬ್ಬ ಪ್ರಮುಖ ಪತ್ರಿಕೋದ್ಯಮಿ, ಉದ್ಯಮಪತಿ. 1902ರ ಮೇ 11ರಂದು ಬಿಹಾರದ ದರ್ಬಂಗದಲ್ಲಿ ಜನನ. 1926 ರಲ್ಲಿ ಮದ್ರಾಸಿನಲ್ಲಿ ಇವರು ಸ್ವಂತ ಜವಳಿ ಗಿರಣಿ ಪ್ರಾರಂಭಿಸಿದರು. 1926–30ರಲ್ಲಿ ಮದ್ರಾಸ್ ವಿಧಾನಮಂಡಲದ ಸದಸ್ಯರಾಗಿದ್ದರು. 1927ರಲ್ಲಿ ವಿಧಾನಮಂಡಲದಲ್ಲಿ



ಇಂಡಿಪೆಂಡೆಂಟ್ ಪಾರ್ಟಿಯ ಕಾರ್ಯದರ್ಶಿಯಾದರು. 1971ರಲ್ಲಿ ಲೋಕಸಭೆಯ ಸದಸ್ಯರಾದರು. ಪತ್ರಿಕೋದ್ಯಮವನ್ನು ಒಂದು ಯಶಸ್ವಿ ಉದ್ದಿಮೆಯನ್ನಾಗಿ ಪರಿವರ್ತಿಸಿದ ಭಾರತೀಯರಲ್ಲಿ ಗೋಯೆಂಕಾ ಪ್ರಮುಖರು. ಸ್ವಾತಂತ್ರ್ಯೋತ್ತರದಲ್ಲಿ ಇವರ ಮತ್ತು ಇವರ ಕುಟುಂಬದವರ ಒಡೆತನಕ್ಕೆ ಸೇರಿದ ಪತ್ರಿಕೆಗಳು ಸಂಖ್ಯೆ ಹಾಗೂ ಪ್ರಸರಣದಲ್ಲಿ ಗಮನಾರ್ಹ ಪ್ರಗತಿ ಸಾಧಿಸಿವೆ. ಆರು ಭಾಷೆಗಳಲ್ಲಿ ಎಂಟು ದಿನಪತ್ರಿಕೆಗಳೂ ಮೂರು ವಾರಪತ್ರಿಕೆಗಳೂ ಇವರ ನಿಯಂತ್ರಣಕ್ಕೆ ಒಳಪಟ್ಟಿವೆ. ಅಹಮದಾಬಾದ್, ದೆಹಲಿ, ಬೆಂಗಳೂರು, ಮದ್ರಾಸ್, ಮಧುರೈ, ಮುಂಬಯಿ ಮತ್ತು ವಿಜಯವಾಡಗಳಿಂದ ಏಕಕಾಲಕ್ಕೆ ಪ್ರಕಟವಾಗುವ ಇಂಡಿಯನ್ ಎಕ್ಸ್‌ಪ್ರೆಸ್ ಭಾರತದಲ್ಲಿ ಅತ್ಯಧಿಕ ಪ್ರಸಾರವುಳ್ಳ ಇಂಗ್ಲಿಷ್ ಪತ್ರಿಕೆ. ಫೈನಾನ್ಷಿಯಲ್ ಎಕ್ಸ್‌ಪ್ರೆಸ್ ವಾಣಿಜ್ಯೋದ್ಯಮಗಳಿಗೆ ಸಂಬಂಧಿಸಿದ ದಿನಪತ್ರಿಕೆ. ಇದು ಮುಂಬಯಿಯಿಂದ ಪ್ರಕಟವಾಗುತ್ತದೆ. ಸ್ಕ್ರೀನ್ ಚಲನ ಚಿತ್ರೋದ್ಯಮಕ್ಕೆ ಮೀಸಲಾದ ವಾರಪತ್ರಿಕೆ. ಸಂಡೇ ಸ್ಟ್ಯಾಂಡರ್ಡ್ ಒಂದು ವಾರಪತ್ರಿಕೆ. ಭಾನುವಾರದ ಇಂಡಿಯನ್ ಎಕ್ಸ್‌ಪ್ರೆಸ್ ಅನ್ನೂ ಇದು ಒಳಗೊಂಡಿರುತ್ತದೆ. ಕನ್ನಡ ಪ್ರಭ (ಕನ್ನಡ), ಆಂಧ್ರ ಪ್ರಭ (ತೆಲುಗು), ದಿನಮಣಿ (ತಮಿಳು), ಲೋಕಸತ್ತಾ (ಮರಾಠಿ), ಜನಸತ್ತಾ ಮತ್ತು ಲೋಕಸತ್ತಾ (ಗುಜರಾತಿ)–ಇವು ಭಾರತೀಯ ಭಾಷಾ ಪತ್ರಿಕೆಗಳು. ಆಂಧ್ರಪ್ರಭ ಎಂಬ ಹೆಸರಿನ ವಾರಪತ್ರಿಕೆಯೂ (ತೆಲುಗು) ಇದೆ.

ಭಾರತೀಯ ಪತ್ರಿಕಾ ಮಾಲೀಕರ ಸಂಘವಾದ ಇಂಡಿಯನ್ ಅಂಡ್ ಈಸ್ಟರ್ನ್ ನ್ಯೂಸ್‌ಪೇಪರ್ಸ್ ಸೊಸೈಟಿ ಆರಂಭವಾದಂದಿನಿಂದಲೂ ರಾಮನಾಥ ಗೋಯೆಂಕಾ ಅದರ ಪ್ರಮುಖ ಸದಸ್ಯರಲ್ಲೊಬ್ಬರಾಗಿದ್ದರು. 1957ರಲ್ಲಿ ಈ ಸಂಘದ ಅಧ್ಯಕ್ಷರಾಗಿ ಚುನಾಯಿತರಾಗಿದ್ದರು. ವೃತ್ತಪತ್ರಿಕಾ ಕಾಗದ ಪೂರೈಕೆಯ ಸಂಬಂಧದಲ್ಲಿ 1946ರಲ್ಲಿ ಈ ಸಂಘ ಇಂಗ್ಲೆಂಡ್, ಯುರೋಪ್, ಕೆನಡ ಮತ್ತು ಅಮೆರಿಕ ಸಂಯುಕ್ತಸಂಸ್ಥಾನಗಳಿಗೆ ಕಳಿಸಿದ್ದ ನಿಯೋಗದಲ್ಲಿ ಗೋಯೆಂಕಾ ಅವರೂ ಒಬ್ಬ ಸದಸ್ಯರಾಗಿದ್ದರು. ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ದೇಶದ ಪ್ರಮುಖ ವಾರ್ತಾ ಸಂಸ್ಥೆಯಾಗಿ ಸ್ಥಾಪನೆಯಾದ ಪ್ರೆಸ್ ಟ್ರಸ್ಟ್ ಆಫ್ ಇಂಡಿಯಕ್ಕೆ ಸುದ್ದಿಯ ಪೂರೈಕೆಗಾಗಿ ರಾಯಿಟರ್ಸ್ ಸಂಸ್ಥೆಯೊಂದಿಗೆ ಮಾತುಕತೆ ನಡೆಸಿದ ಇಂಡಿಯನ್ ಅಂಡ್ ಈಸ್ಟರ್ನ್ ನ್ಯೂಸ್‌ಪೇಪರ್ಸ್ ಸೊಸೈಟಿಯ ನಿಯೋಗದಲ್ಲೂ ಇವರು ಸದಸ್ಯರಾಗಿದ್ದರು. ಸ್ವಲ್ಪ ಕಾಲ ಇವರು ಪ್ರೆಸ್ ಟ್ರಸ್ಟ್ ಆಫ್ ಇಂಡಿಯದ ನಿರ್ದೇಶಕರೂ ನಿರ್ದೇಶಕ ಮಂಡಲಿಯ ಅಧ್ಯಕ್ಷರೂ ಆಗಿದ್ದರು. ಭಾರತದ ಪತ್ರಿಕೋದ್ಯಮದಲ್ಲಿ ತಮ್ಮ ಛಾಪು ಮೂಡಿಸಿರುವ ಇವರು 1991ರ ಅಕ್ಟೋಬರ್ 5ರಂದು ನಿಧನ ಹೊಂದಿದರು.

ವಾರಿಯರ್ ಆಫ್ ದಿ ಫೋರ್ತ್ ಎಸ್ಟೇಟ್ (2005) ಎಂಬ ಶೀರ್ಷಿಕೆಯಡಿಯಲ್ಲಿ ಗೋಯೆಂಕಾರ ಜೀವನ ಚರಿತ್ರೆಯನ್ನು ಬಿ.ಜಿ.ವರ್ಗಿಸ್ ಪ್ರಕಟಿಸಿದ್ದಾರೆ. ಇವರ ಸೊಸೆ ಅನನ್ಯಾ ಗೋಯೆಂಕಾ ತಮ್ಮ ಮಾವನ ವೈಯಕ್ತಿಕ ಜೀವನದ ಚಿತ್ರಣವನ್ನು ರಾಮನಾಥ ಗೋಯೆಂಕಾ : ಎ ಲೈಫ್ ಇನ್ ಬ್ಲ್ಯಾಕ್ ಅಂಡ್ ವೈಟ್ (2005) ಎಂಬ ಪುಸ್ತಕ ರೂಪದಲ್ಲಿ ಸಾದರಪಡಿಸಿದ್ದಾರೆ.

ಗೋಯೆಂಕಾ ಅವರ ಜನ್ಮಶತಾಬ್ದಿಯ ಸ್ಮರಣೆಯಾಗಿ 2004ರಿಂದ ಪತ್ರಿಕೋದ್ಯಮ ಕ್ಷೇತ್ರಕ್ಕೆ ಉತ್ಕೃಷ್ಟ ಕೊಡುಗೆಯನ್ನು ನೀಡಿದ ಪತ್ರಿಕಾ ವರದಿಗಾರರಿಗೆ ರಾಮನಾಥ ಗೋಯೆಂಕಾ ಎಕ್ಸಲೆನ್ಸ್ ಇನ್ ಜರ್ನಲಿಸಂ ಅವಾರ್ಡ್ ಎಂಬ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತಿದೆ. (ಎಂ.ಎನ್.ಎಂ.)

**ಗೋರ್, ಕ್ಯಾಥರೀನ್ ಗ್ರೇಸ್, ಫ್ರಾನ್ಸಸ್ :** 1799–1861. ಆಂಗ್ಲ ಕಾದಂಬರಿಗಾರ್ತಿ. ಹುಟ್ಟಿದ್ದು ನಾಟಿಂಗ್‌ಹಂಷೈರಿನ ರೆಟ್‌ಫರ್ಡ್‌ನಲ್ಲಿ. ತಂದೆ ಮದ್ಯ ವ್ಯಾಪಾರಿ. ಗಂಡ ಕ್ಯಾಪ್ಟನ್ ಗೋರ್. ಈಕೆ ತನ್ನ ಬರವಣಿಗೆಯಿಂದಲೇ ಜೀವನವನ್ನು ಸಾಗಿಸಿದಳು. 1824 ರಿಂದ 1861 ರವರೆಗೆ ಈಕೆಯ 70 ಕೃತಿಗಳು ಹೊರಬಿದ್ದವು. ಅವುಗಳಲ್ಲಿ ಬಹುತೇಕ ಕಾದಂಬರಿಗಳು ಆಂಗ್ಲರ ಸೊಗಸು ಜೀವನವನ್ನು ಚಿತ್ರಿಸುತ್ತವೆ. ಮ್ಯಾನರ್ಸ್ ಆಫ್ ದಿ ಡೇ (1830), ಸೆಸಿಲ್ ಆರ್ ದಿ ಅಡ್ವೆಂಚರ್ಸ್ ಆಫ್ ಎ ಕಾಕ್ಸ್‌ಕೂರಾನ್ (1841), ದಿ ಬ್ಯಾಂಕರ್ಸ್ ವೈಫ್ (1843) ಈ ಕಾದಂಬರಿಗಳು ಹೆಸರಿಸತಕ್ಕವು. (ಎಚ್.ವಿ.ಎಸ್.)

**ಗೋರಂಟಿ :** ಲಿತ್ರೇಸೀ ಕುಟುಂಬಕ್ಕೆ ಸೇರಿದ ಒಂದು ಸಸ್ಯ. ಮದರಂಗಿ ಪರ್ಯಾಯನಾಮ. ಇದರ ಶಾಸ್ತ್ರೀಯ ಹೆಸರು ಲಾಸೋನಿಯ ಇನರ್ಮಿಸ್. ಇಂಗ್ಲಿಷಿನಲ್ಲಿ ಇದನ್ನು ಹೆನ ಎಂದು ಕರೆಯಲಾಗುತ್ತದೆ. ಇದು ಉತ್ತರ ಆಫ್ರಿಕ ಹಾಗೂ ನೈರುತ್ಯ ಏಷ್ಯದ ಮೂಲವಾಸಿ. ಇದನ್ನು ಅಲಂಕಾರಕ್ಕಾಗಿಯೂ ಇದರಿಂದ ಪಡೆಯಲಾಗುವ ಬಣ್ಣಕ್ಕಾಗಿಯೂ ಬೆಳೆಸಲಾಗುತ್ತದೆ.



ಗೋರಂಟಿ ವಿಪುಲವಾಗಿ ಕವಲೊಡೆದು ಬೆಳೆಯುವ ಒಂದು ಪೊದೆಸಸ್ಯ. ಬೂದು ಕಂದು ಮಿಶ್ರಿತ ಬಣ್ಣದ ತೊಗಟೆ, ಅಭಿಮುಖ ಮಾದರಿಯಲ್ಲಿ ಜೋಡಣೆಗೊಂಡಿರುವ ಸರಳ, ಅಖಂಡ ಹಾಗೂ ಅಂಡಾಕಾರದ ಎಲೆಗಳು ಇದರ ಮುಖ್ಯ ಲಕ್ಷಣಗಳಲ್ಲಿ ಕೆಲವು. ಹೂಗಳು ಚಿಕ್ಕ ಗಾತ್ರದವು ಮತ್ತು ಬಿಳಿ ಇಲ್ಲವೆ ಗುಲಾಬಿ ಬಣ್ಣದವು; ಸಂಕೀರ್ಣ ಮಾದರಿಯ ಮಧ್ಯಾರಂಭಿ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಇವಕ್ಕೆ ಸುವಾಸನೆಯಿದೆ. ಫಲ ಸಂಪುಟ ಮಾದರಿಯದು. ಹಣ್ಣಿನೊಳಗೆ ನಯವಾದ ಅಸಂಖ್ಯಾತ ಬೀಜಗಳಿವೆ.

ಗೋರಂಟಿ ಗಿಡವನ್ನು ಉಷ್ಣ ಹಾಗೂ ಸಮಶೀತೋಷ್ಣ ವಲಯಗಳ ಅನೇಕ ಪ್ರದೇಶಗಳಲ್ಲಿ ಬೆಳೆಸುತ್ತಾರೆ. ಭಾರತ, ಈಜಿಪ್ಟ್, ಪರ್ಷಿಯ, ಪಾಕಿಸ್ತಾನ, ಸೂಡಾನ್, ಮಡಗಾಸ್ಕರ್‌ಗಳಲ್ಲಿ ಇದರ ಎಲೆಗಳಿಂದ ದೊರೆಯುವ ಬಣ್ಣಕ್ಕಾಗಿ ಗೋರಂಟಿ ಗಿಡವನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಸಲಾಗುತ್ತಿದೆ. ಭಾರತದಲ್ಲಿ ಬಣ್ಣಕ್ಕಾಗಿ ಬೆಳೆಸುವ ಪ್ರದೇಶಗಳಲ್ಲಿ ಮುಖ್ಯವಾದವು ಪಂಜಾಬ್, ಗುಜರಾತ್, ಮಧ್ಯಪ್ರದೇಶ ಮತ್ತು ರಾಜಸ್ತಾನಗಳು. ಅದರಲ್ಲೂ ಪಂಜಾಬಿನ ಫರೀದಾಬಾದ್ ಮತ್ತು ಗುಜರಾತಿನ ಬಾರ್ಡೋಲಿ ಹಾಗೂ ಮಾಧಿಗಳು ಗೋರಂಟಿ ಉತ್ಪಾದನೆಯ ಮುಖ್ಯ ಕೇಂದ್ರಗಳಾಗಿವೆ.

ಗೋರಂಟಿ ಗಿಡ ಯಾವ ರೀತಿಯ ಮಣ್ಣಿನಲ್ಲಾದರೂ ಬೆಳೆಯಬಲ್ಲದು. ಆದರೆ ನೆಲ ಜವುಗಾಗಿರಬಾರದು. ಗೋರಂಟಿಯನ್ನು ಬೀಜಗಳಿಂದ ಅಥವಾ ಕಾಂಡತುಂಡುಗಳಿಂದ ವೃದ್ಧಿಸಬಹುದು. ಗೋರಂಟಿಯ ಎಲೆಗಳನ್ನು ವರ್ಷಕ್ಕೆ ಎರಡು ಸಲ (ಏಪ್ರಿಲ್–ಮೇ ಮತ್ತು ಅಕ್ಟೋಬರ್–ನವೆಂಬರ್) ಕಟಾಯಿಸುತ್ತಾರೆ. ಒಂದು ಎಕರೆಗೆ ಸುಮಾರು 350–750 ಕಿಗ್ರಾಂ ಒಣ ಎಲೆಗಳನ್ನು ಪಡೆಯಬಹುದು. ನೀರಾವರಿ ಭೂಮಿಯಲ್ಲಿ ಇಳುವರಿ 920 ಕಿಗ್ರಾಂನಷ್ಟು ಹೆಚ್ಚಾಗಿರಬಹುದು. ಗೋರಂಟಿಯ ಎಲೆಗಳನ್ನು ಬಹಳ ಹಿಂದಿನ ಕಾಲದಿಂದಲೂ ಭಾರತ ಮತ್ತು ಮಧ್ಯಪ್ರಾಚ್ಯಗಳಲ್ಲಿ ಅಂಗೈ, ಅಂಗಾಲು ಹಾಗೂ ಕೈ ಬೆರಳಿನ ಉಗುರುಗಳಿಗೆ ಬಣ್ಣ ಹಾಕಲು ಉಪಯೋಗಿಸುತ್ತಾರೆ. ತಲೆಗೂದಲು, ಗಡ್ಡ, ಹುಬ್ಬು, ಕುದುರೆಗಳ ಬಾಲ, ಅಯಾಲು, ಚರ್ಮ ಮುಂತಾದವುಗಳಿಗೆ ಬಣ್ಣ ಕೊಡುವುದಕ್ಕೆ ಸಹ ಇದನ್ನು ಬಳಸುವುದುಂಟು. ಹಿಂದಿನ ಕಾಲದಲ್ಲಿ ರೇಷ್ಮೆ ಹಾಗೂ ಉಣ್ಣೆ ಬಟ್ಟೆಗಳಿಗೆ ಬಣ್ಣ ಕೊಡಲು ಗೋರಂಟಿಯನ್ನು ಬಳಸುತ್ತಿದ್ದರು. ಗೋರಂಟಿ ಎಲೆಗಳಿಗೆ ಔಷಧೀಯ ಗುಣಗಳಿವೆ. ಕಷಾಯದ ರೂಪದಲ್ಲಿ ಇಲ್ಲವೆ ಸರಿಯ ರೂಪದಲ್ಲಿ ಇವನ್ನು ಹುಣ್ಣು, ತರಚು ಹಾಗೂ ಸುಟ್ಟಗಾಯಗಳು ಮತ್ತು ಕೆಲವು ಚರ್ಮರೋಗಗಳಿಗೆ ಬಳಸುತ್ತಾರೆ. ಕಷಾಯ ಗಂಟಲುನೋವಿಗೆ ಒಳ್ಳೆಯ ಮದ್ದು. ಗೋರಂಟಿಯ ಹೂವನ್ನು ಆವಿ ಅಸವೀಕರಣಕ್ಕೊಳಪಡಿಸಿ ಒಂದು ಬಗೆಯ ಪರಿಮಳಯುಕ್ತ ಚಂಚಲ ತೈಲವನ್ನು ಪಡೆಯಬಹುದು. ಇದಕ್ಕೆ ಮೆಹಂದಿ ಎಣ್ಣೆ ಎಂದು ಹೆಸರು. ಇದನ್ನು ಸುಗಂಧ ದ್ರವ್ಯಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಗೋರಂಟಿಯ ಚೌಬೀನೆಯನ್ನು ಉಪಕರಣಗಳ ಹಿಡಿ, ಗೂಟ ಮುಂತಾದವುಗಳ ತಯಾರಿಕೆಗೆ ಉಪಯೋಗಿಸುತ್ತಾರೆ. ಎಳೆಯ ಕಡ್ಡಿಗಳನ್ನು ಹಲ್ಲುಜ್ಜಲು ಇಂಡೋನೇಷ್ಯದಲ್ಲಿ ಬಳಸುತ್ತಾರೆ.

ಗೋರಂಟಿಯನ್ನು ವಾಣಿಜ್ಯ ದೃಷ್ಟಿಯಿಂದ ದೆಹಲಿ, ಗುಜರಾತ್ ಮತ್ತು ಮಾಲ್ವ ಎಂಬ ಮೂರು ಬಗೆಗಳಾಗಿ ವಿಂಗಡಿಸಲಾಗಿದೆ. ಇದರಲ್ಲಿ ದೆಹಲಿ ಗೋರಂಟಿ ಅತ್ಯುತ್ತಮವಾದ್ದು. (ಕೆ.ಜಿ.ಎ.)

**ಗೋರಖ್‌ನಾಥ :** ಭಾರತದ ಪ್ರಸಿದ್ಧ ಹಠಯೋಗಿಗಳಲ್ಲೊಬ್ಬ. ಕಾನ್‌ಫಟ ಎಂಬ ಪಂಥದ ಸ್ಥಾಪಕ. ಈತನ ಹೆಸರು ಸಂಸ್ಕೃತದ ಗೋರಕ್ಷನಾಥ ಎಂಬುದರ ಅಪಭ್ರಂಶವಾಗಿದೆ. ಈತನ ಕಾಲ ನಿಷ್ಕರ್ಷೆಯಾಗಿಲ್ಲ. ಏಳನೆಯ ಶತಮಾನದ ನೇಪಾಳಿ ರಾಜಮನೆತನಕ್ಕೆ ಸಂಬಂಧಪಟ್ಟವನೆಂದು ಒಂದು ಪ್ರತೀತಿ ಇದೆ. ಸು. 1120 ಎಂದು ಹೇಳುವವರೂ ಇದ್ದಾರೆ. ಈತ ಮತ್ಸ್ಯೇಂದ್ರನಾಥನ (**ನೋಡಿ**) ಶಿಷ್ಯನೆಂದು ಹೇಳಲಾಗಿದೆ. ಗುರುವಿಗೆ ಒಮ್ಮೆ ಉಂಟಾದ ಅತೀವ ಸ್ತ್ರೀವ್ಯಾಮೋಹವನ್ನು ಈತ ಹೋಗಲಾಡಿಸಿ ಅಧಃಪತನದಿಂದ ಆತನನ್ನು ಪಾರುಮಾಡಿದನಂತೆ. ತನ್ನ ಪಂಥದ ಶಿಷ್ಯರನ್ನು ಗುರುತು ಹಚ್ಚುವ ಸಲುವಾಗಿ ಅವರ ಕಿವಿಗಳನ್ನು ಸೀಳುವ ಪದ್ಧತಿಯನ್ನು ಈತ ಜಾರಿಗೆ ತಂದ. ಕಾನ್‌ಫಟ ಎಂದರೆ ಕಿವಿ ಸೀಳಿದ ಯೋಗಿಗಳು ಎಂದು ಅರ್ಥ. ಸೀಳಿದ ಕಿವಿಗಳಲ್ಲಿವರು ದೊಡ್ಡ ದೊಡ್ಡ ಕುಂಡಲಗಳನ್ನು ಧರಿಸುತ್ತಾರೆ. ಗೋರಖ್‌ನಾಥ ಸಂಸ್ಕೃತದಲ್ಲಿ ರಚಿಸಿರುವ ಹಠಯೋಗ ಮತ್ತು ಗೋರಕ್ಷಕ ಶತಕ ಎಂಬೆರಡು ಕೃತಿಗಳು ಉಪಲಬ್ಧವಿವೆ. ಹಠಯೋಗದಿಂದ ಪಡೆಯಬಹುದಾದ ದೇಹಶುದ್ಧಿಗೆ ಗೋರಖ್‌ನಾಥ ಹೆಚ್ಚು ಗಮನ ಕೊಟ್ಟಿದ್ದಾನೆ. ಆಸನ, ಶೋಧನ, ಪ್ರಾಣಾಯಾಮ, ಮುದ್ರಾ–ಇವುಗಳಿಂದ ಅನೇಕ ಸಿದ್ಧಿಗಳನ್ನು ಪಡೆದು ಕಡೆಗೆ ಸಮಾಧಿಯನ್ನು ಹೊಂದಬಹುದೆಂದು ಈತನ ಅಭಿಮತ. ಈತ ದೇವಾಂಶಸಂಭೂತನೆಂದು ಇವನ ಪಂಥದವರು ನಂಬುತ್ತಾರೆ. ನೇಪಾಳದಲ್ಲಂತೂ ಇವನನ್ನು ಸಂರಕ್ಷಕ ದೇವತೆಯೆಂದು ಆರಾಧಿಸುತ್ತಾರೆ. ಉತ್ತರಭಾರತದಲ್ಲಿ ಇವನ ಹೆಸರಿನಲ್ಲಿ ಅನೇಕ ದೇವಸ್ಥಾನಗಳಿವೆ. ಇವನ ಮುಖ್ಯ ಮಂದಿರ ಗೋರಖ್‌ನಾಥ ಎನ್ನುವ ಸ್ಥಳದಲ್ಲಿದೆ.

ವೀರಶೈವ ವಿಭೂತಿಗಳಾದ ಪ್ರಭುದೇವ, ರೇವಣಸಿದ್ಧ, ಸಿದ್ಧರಾಮರು, ಗೋರಖ್‌ನಾಥನನ್ನು ಜಯಿಸಿದಂತೆ ತತ್ಸಂಬಂಧವಾದ ಪುರಾಣಗಳಲ್ಲಿ ಉಲ್ಲೇಖವಿದೆ.

ಸತಾರ ಜಿಲ್ಲೆಯಲ್ಲಿ ಗೋರಖ್‌ನಾಥ ಹೆಸರಿನ ಒಂದು ವನವಿದೆ. ಅಲ್ಲಿನ ಆರು ಹುಣಸೆಮರಗಳನ್ನು ಬಹು ಪವಿತ್ರವೆಂದು ಪರಿಗಣಿಸಲಾಗಿದೆ.

ಸತ್ತಾಗ ಈ ಪಂಥದ ಯೋಗಿಗಳನ್ನು ಸುಡುವುದಿಲ್ಲ. ಪದ್ಮಾಸನದಲ್ಲಿ ಕೂಡಿಸಿ ಸಮಾಧಿ ಮಾಡುತ್ತಾರೆ.

ಈ ಪಂಥದವರಲ್ಲಿ ಅನೇಕ ವಾಮಾಚಾರಗಳು ಬಳಕೆಯಲ್ಲಿವೆ. (ಎಂ.ವೈ.)

**ಗೋರಖ್‌ಪುರ :** ಉತ್ತರ ಪ್ರದೇಶದ ಒಂದು ಆಡಳಿತ ವಿಭಾಗ, ಜಿಲ್ಲೆ ಮತ್ತು ಅದರ ಮುಖ್ಯ ಪಟ್ಟಣ. ಗೋರಖ್‌ಪುರ ವಿಭಾಗದಲ್ಲಿ ಗೋರಖ್‌ಪುರ, ದೇವರಿಯ, ಬಸ್ತಿ ಮತ್ತು ಅಜಮ್‌ಗಡ್ ಜಿಲ್ಲೆಗಳಿವೆ. ವಿಭಾಗದ ವಿಸ್ತೀರ್ಣ 24,895 ಚ.ಕಿಮೀ. ಜನಸಂಖ್ಯೆ 1,15,49,180 (2001).

ಜಿಲ್ಲೆ : ಗೋರಖ್‌ಪುರ ಜಿಲ್ಲೆಯ ವಿಸ್ತೀರ್ಣ 3,321 ಚ.ಕಿಮೀ. ಜನಸಂಖ್ಯೆ 44,36,275 (2011). ಉತ್ತರ ಪ್ರದೇಶದ ಈಶಾನ್ಯ ದಿಕ್ಕಿನಲ್ಲಿ ಹಿಮಾಲಯದ ದಕ್ಷಿಣದ

ತಪ್ಪಲಿನಲ್ಲಿರುವ ಈ ಜಿಲ್ಲೆ ಬಹುತೇಕ ಸಮಭೂಮಿ. ಅಲ್ಲಲ್ಲಿ ಕೆಲವು ಮರಳುಗುಡ್ಡೆಗಳಿವೆ. ರಾಪ್ತಿ, ಆಮೀ ಮತ್ತು ಘಾಘ್ರ ನದಿಗಳು ಇಲ್ಲಿ ಹರಿಯುತ್ತವೆ. ಉತ್ತರದಲ್ಲಿ ಅಲ್ಲಲ್ಲಿ ಕಾಡುಗಳುಂಟು. ಬೇಸಿಗೆಯಲ್ಲಿ ಹೆಚ್ಚು ಸೆಕೆಯಾಗುವುದಿಲ್ಲ. ವಾರ್ಷಿಕ ಮಳೆ 50". ನೆಲ ಫಲವತ್ತಾಗಿದೆ. ಆದರೆ ಪದೇ ಪದೇ ಸಂಭವಿಸುವ ಪ್ರವಾಹಗಳಿಂದಾಗಿ ಬೇಸಾಯಕ್ಕೆ ಅಡಚಣೆ ಒದಗುವುದುಂಟು. ಬತ್ತ, ಬಾರ್ಲಿ, ಗೋದಿ, ಕಬ್ಬು ಮುಖ್ಯ ಬೆಳೆಗಳು. ಜಿಲ್ಲೆಯಲ್ಲಿ ಹಲವು ಸಕ್ಕರೆ ಕಾರ್ಖಾನೆಗಳಿವೆ. ಬುದ್ಧ ಪರಿನಿರ್ವಾಣ ಹೊಂದಿದ ಸ್ಥಳವಾದ ಕಾಸಿಯಾ ಎಂಬುದು ಗೋರಖ್‍ಪುರ ನಗರದ ಪೂರ್ವಕ್ಕೆ 55 ಕಿಮೀ ದೂರದಲ್ಲಿದೆ.

ಗೋರಖ್‍ಪುರ ನಗರ ವಾರಾಣಸಿಗೆ ಉತ್ತರದಲ್ಲಿ 240 ಕಿಮೀ ದೂರದಲ್ಲಿದೆ. ಘಾಘ್ರಾದ ಉಪನದಿಗಳಲ್ಲಿ ಒಂದಾದ ರಾಪ್ತಿ ನದಿಯ ದಂಡೆಯ ಮೇಲಿದೆ. ಜನಸಂಖ್ಯೆ 6,92,519 (2011). ರಾಪ್ತಿ ನದಿಯ ಪಾತ್ರ ಬದಲಾದಂತೆ ನಗರ ಕೂಡ ಉತ್ತರದಿಂದ ದಕ್ಷಿಣಕ್ಕೆ ಸರಿಯುತ್ತ ಬಂತು. ನದಿಗಳ ದಂಡೆಗಳ ಮೇಲೆ ಪ್ರವಾಹವನ್ನು ತಡೆಯಲು ಕಟ್ಟೆಗಳನ್ನು ಕಟ್ಟಲಾಗಿದೆ. ಈ ನಗರವನ್ನು 1400ರಲ್ಲಿ ನಿರ್ಮಿಸಲಾಯಿತೆಂದು ಹೇಳಲಾಗಿದೆ. ಈ ನಗರಕ್ಕೆ ಗೋರಖ್‍ಪುರ ಎಂಬ ಹೆಸರು ಬರಲೂ ಇದು ಬೆಳೆಯಲೂ ಇಲ್ಲಿಯ ಗೋರಖ್‍ನಾಥ ದೇವಸ್ಥಾನ ಕಾರಣ. ಇದು ರಜಪೂತ ದೊರೆಗಳ ಒಂದು ಭದ್ರಸ್ಥಾನವಾಗಿತ್ತು. ಅನಂತರ ಇದು ಮೊಗಲರ ವಶಕ್ಕೆ ಬಂತು. ಇದು ಅವಧ್ ಸರ್ಕಾರದ ವಿಭಾಗ ಆಡಳಿತಕೇಂದ್ರವಾಯಿತು. ಉರ್ದು ಬಜಾರಿನ ಹತ್ತಿರ ಇರುವ ಜಾಮಿ ಮಸೀದಿಯನ್ನು ಕಟ್ಟಿಸಿದವನು ಔರಂಗಜೇಬ್. ಈ ನಡುವೆ ಸುಮಾರು ಏಳು ದಶಕಗಳ ಕಾಲ ಇದು ರಜಪೂತರ ವಶದಲ್ಲಿತ್ತು. ರಾಜ ವಸಂತಸಿಂಹನಿಂದ ನಿರ್ಮಿತವಾದ್ದು ವಸಂತ ಕಿಲ್ಲೆ. 1680ರಲ್ಲಿ ಈ ನಗರ ಔರಂಗಜೇಬನ ಅಧಿಕಾರಕ್ಕೆ ಒಳಪಟ್ಟಿತು. 1801ರಲ್ಲಿ ಇದು ಬ್ರಿಟಿಷರ ಅಧೀನಕ್ಕೆ ಬಂತು. ಅವರ ಆಡಳಿತಕಾಲದಲ್ಲಿ ಇಲ್ಲಿ ಸಿವಿಲ್ ಲೈನ್, ಪೋಲಿಸ್ ಲೈನ್, ರೈಲ್ವೆ ಕಾಲೊನಿಗಳು ನಿರ್ಮಿತವಾದುವು. ಬಗೆಬಗೆಯ ಜನ ಬಂದು ನೆಲೆಸಲು ಪ್ರಾರಂಭಿಸಿದರು. ಅಂದಿನಿಂದ ವ್ಯಾಪಾರೋದ್ಯೋಗಗಳಲ್ಲೂ ಈ ನಗರ ಉನ್ನತಿ ಸಾಧಿಸಿದೆ. ಇದಕ್ಕೆ 1885ರಲ್ಲಿ ರೈಲ್ವೆ ಸಂಪರ್ಕ ಏರ್ಪಟ್ಟಿತು. ಈಗ ಈ ನಗರ ಈಶಾನ್ಯ ರೈಲ್ವೆಯ ಮುಖ್ಯ ಕೇಂದ್ರ, ಜಂಕ್ಷನ್. ಇಲ್ಲಿ ಅಧಿಕಾರಿಗಳ ವಾಸಗೃಹಗಳು, ಕಾರ್ಯಾಲಯಗಳು, ಶಿಕ್ಷಣ ಕೇಂದ್ರಗಳು, ಆಸ್ಪತ್ರೆಗಳು, ಸೈನಿಕ ಕೇಂದ್ರ ಇವೆಲ್ಲ ಇವೆ. ಈಶಾನ್ಯ ರೈಲ್ವೆಯ ದೊಡ್ಡ ಕಾರ್ಯಾಗಾರವೂ ಇದೆ. ಗೋರಖ್‍ಪುರ ಕೈಮಗ್ಗದ ಬಟ್ಟೆ ತಯಾರಿಕೆಗೆ ತುಂಬ ಹೆಸರಾಗಿದೆ. ಕಬ್ಬಿಣ ಪದಾರ್ಥಗಳು, ಕಾಗದ, ಮುದ್ರಣ ಸಾಮಗ್ರಿ, ಖಾದ್ಯ ಪೇಯಗಳು, ತಂಬಾಕು ಮುಂತಾದ ಕೈಗಾರಿಕೆಗಳಿವೆ. ಗೋರಖ್‍ಪುರ ವಿಶ್ವವಿದ್ಯಾಲಯ (ದೀನ್ ದಯಾಳ್ ಉಪಾಧ್ಯಾಯ ವಿಶ್ವವಿದ್ಯಾಲಯ) ಕೇಂದ್ರ. ಗೋರಖ್‍ಪುರ ವಿಶ್ವವಿದ್ಯಾಲಯಕ್ಕೆ ಆಂಗಿಕ ಕಾಲೇಜುಗಳಿಲ್ಲ. (ಐ.ಎ.)

**ಗೋರಾ ಕುಂಬಾರ :** 1267–1312. ಮಹಾರಾಷ್ಟ್ರದ ಒಬ್ಬ ಪ್ರಸಿದ್ಧ ಸಂತ. ಆ ಕಾಲದ ಸಂತರಲ್ಲಿ ಈತ ಹಿರಿಯನಿದ್ದುದರಿಂದ ಇವನನ್ನು ಎಲ್ಲರೂ ಗೋರಾ ತಾತಾ ಎನ್ನುತ್ತಿದ್ದರು. ಈತನ ಹುಟ್ಟೂರು ತೇರಢೋಕೆ. ಇದು ಪಂಡರಾಪುರಕ್ಕೆ 128 ಕಿಮೀ ದೂರದಲ್ಲಿದೆ. ಇಲ್ಲಿಯೇ ಈ ಸಂತನ ಸಮಾಧಿಯೂ ಇದೆ. ಗೋರಾ ನಾಮದೇವನನ್ನು ಪರೀಕ್ಷಿಸಿ ಅವನನ್ನು ಹಸಿಗಡಿಗೆ ಎಂದನಂತೆ. ನಾಮದೇವ, ಜ್ಞಾನದೇವರ ತೀರ್ಥಯಾತ್ರೆಯ ಕಾಲಕ್ಕೆ ಈತನೂ ಅವರೊಟ್ಟಿಗೆ ಇದ್ದ. ಈತನ ಕೆಲವು ಅಭಂಗಗಳು ಅನುಭವಪೂರ್ಣವಾಗಿವೆ.

ದೇವನ ಆದಿರೂಪ ತನ್ನ ದೇಹದಲ್ಲಿ ಪ್ರವೇಶಿಸಿದಾಗ ಭೂತಬಾಧೆಯಾದಂತೆನಿಸಿತೆಂದು ಗೋರಾ ಹೇಳಿಕೊಂಡಿದ್ದಾನೆ. ಕರ್ಮದ ಹೆಸರಿನಿಂದಲೂ ಪಾಪ ಪುಣ್ಯಗಳ ಮಲದಿಂದಲೂ ಅಲಿಪ್ತನಾಗಿ ಈ ಭಕ್ತ ಜೀವನ್ಮುಕ್ತಿಯನ್ನು ಹೊಂದಿದ. ಅನುಭಾವದ ಸುಖ ಮೇರೆ ಮೀರಿದಾಗ ಮೌನ ಆವರಿಸುತ್ತದೆ. ಇಂಥ ಆಧ್ಯಾತ್ಮಿಕ ಮೌನದಿಂದ ಮಾತ್ರ ಅನುಭಾವದ ದಿವ್ಯಾನಂದವನ್ನು ಸವಿಯಲು ಬರುತ್ತದೆ ಎಂದು ಇವನ ಅಭಿಪ್ರಾಯ. ಮೂಕನಿಗೆ ತಾನುಂಡ ಸಕ್ಕರೆಯ ಸವಿಯನ್ನು ಬಣ್ಣಿಸಲು ಬರುವುದಿಲ್ಲ. ಹಾಗೆ ಅನುಭಾವದಿಂದ ಬರುವ ಆನಂದವನ್ನು ಬಣ್ಣಿಸಲು ಬಾರದು. ತಿಳಿದವರು ಅದನ್ನು ಜಗತ್ತಿಗೆ ಸಾರುತ್ತ ಹೋಗಬಾರದು. ಅನುಭಾವದ ರಹಸ್ಯವನ್ನರಿಯುವ ಯೋಗ್ಯತೆ ಎಲ್ಲರಲ್ಲಿಯೂ ಇರುವುದಿಲ್ಲ ಎಂದು ಇವನ ಅಭಿಪ್ರಾಯ. ಆಕಾಶವನ್ನು ದಿಟ್ಟಿಸಿದಾಗ ಸುಖ ಸುಖವನ್ನಪ್ಪಲು ಹೋದಂತೆ ಇವನಿಗೆ ಅನಿಸಿತಂತೆ. ಜಯ ಜಯ ಝುನತನ್ ಎಂಬ ಅನಾಹತ ಧ್ವನಿ ಕೇಳಿಸಿತಂತೆ. ಇವು ಗೋರಾ ಕುಂಬಾರನ ಅನುಭಾವದ ಮಾತುಗಳು.

ಗೋರಾ ಕುಂಬಾರನ ವಿಷಯದಲ್ಲೊಂದು ಪವಾಡದ ಕತೆ ಇದೆ. ಭಕ್ತಿಯ ಆವೇಶದಲ್ಲಿ ನರ್ತನಮಾಡುತ್ತಿದ್ದ ಗೋರಾ ಅರಿವಿಲ್ಲದೆ ತನ್ನ ಮಗುವನ್ನು ತುಳಿದುಬಿಟ್ಟ. ಮಗು ಸತ್ತಿತು. ಹೆಂಡತಿ ವಿಹ್ವಲೆಯಾಗಿ ಗಂಡನನ್ನು ದೂರಿದಳು. ಗಂಡ ಹೆಂಡತಿಯನ್ನು ಹೊಡೆಯಹೋದ. ಹೆಂಡತಿ ದೇವರ ಮೇಲೆ ಆಣೆ ಇಟ್ಟಳು. ಗಂಡ ಹಿಂದೆ ಸರಿದ. ಯಾವತ್ತಿಗೂ ಹೆಂಡತಿಯನ್ನು ಮುಟ್ಟುವುದಿಲ್ಲವೆಂದು ಪ್ರತಿಜ್ಞೆ ಮಾಡಿದ. ಮನೆತನದ ಅಭಿವೃದ್ಧಿಯಲ್ಲಿ ಆಸಕ್ತಳಾದ ಹೆಂಡತಿ ದೂರೋದ್ದೇಶದಿಂದ ತನ್ನ ತಂಗಿಯನ್ನೇ ಸವತಿಯನ್ನಾಗಿ ಮನೆಗೆ ತಂದಳು. ಗೋರಾ ಅವಳನ್ನೂ ಮುಟ್ಟಲಿಲ್ಲ. ಬೇಸರಗೊಂಡ ಸೋದರಿಯರು ಒಮ್ಮೆ ಮಲಗಿದ್ದ ಗಂಡನ ಕೈಗಳನ್ನು ಹಿಡಿದುಬಿಟ್ಟರು. ತನ್ನ ವ್ರತಕ್ಕೆ ಭಂಗಬಂದಿತೆಂದು ತಿಳಿದ ಗೋರಾ ತನ್ನ ಎರಡೂ ಮುಂಗೈಗಳನ್ನು ಕತ್ತರಿಸಿಕೊಂಡ. ಮುಂದೊಂದು ದಿನ ಪಂಡರಪುರದಲ್ಲಿ ಭಕ್ತರೆಲ್ಲ ತಾಳ ಹಾಕುತ್ತಿರಲಾಗಿ ಉತ್ಸಾಹಗೊಂಡ ಈತ ತನ್ನ ಮೋಟುಗೈಗಳಲ್ಲೆ ತಾಳಹಾಕಲು ಮೊದಲುಮಾಡಿದ. ಹೀಗೆ ಮಾಡುತ್ತಿರುವಾಗ ಇದ್ದಕ್ಕಿದ್ದಂತೆ ಈತನ ಮೋಟುಗೈಗಳು ಮೊದಲಿನಂತೆ ಬೆಳೆದುವು. ಸತ್ತ ಮಗು ಮತ್ತೆ ದಕ್ಕಿತು ಎಂಬ ಕತೆ ಇದೆ. (ಎಂ.ಎ.)

**ಗೋರಿಂಗ್, ಹರ್ಮನ್ ವಿಲ್ಹೆಲ್ಮ್ :** 1893–1946. ನಾಜ಼ಿ ಜರ್ಮನಿಯ ಒಬ್ಬ ರಾಜಕಾರಣಿ, ಸೈನಿಕ ಮತ್ತು ಆರ್ಥಿಕ ಮುಖಂಡ. 1893ರ ಜನವರಿ 12ರಂದು ಬವೇರಿಯದ ರೊಸೆನ್‍ಹೀಂನಲ್ಲಿ ಜನಿಸಿದ. ತಂದೆ ಒಬ್ಬ ವಸಾಹತು ಅಧಿಕಾರಿ. 1914ರಲ್ಲಿ ವಿಮಾನದಳದ ಅಧಿಕಾರಿಯಾಗಿ ಸೇರಿದ. 1918ರಲ್ಲಿ ನಡೆದ ಕಾರ್ಯಾಚರಣೆಯನ್ನು



ಯಶಸ್ವಿಯಾಗಿ ನಿರ್ವಹಿಸಿ ಮೊದಲನೆಯ ದರ್ಜೆಯ ಐರನ್ ಕ್ರಾಸ್ ಪಡೆದ. ಒಂದನೆಯ ಮಹಾಯುದ್ಧದ ಅನಂತರ ಸ್ವೀಡನಿನಲ್ಲಿ ಫಾಕರ್ ವಿಮಾನ ಕಾರ್ಖಾನೆಗಾಗಿಯೂ ಆಮೇಲೆ ಸ್ವೆನ್ಸ್ಕ ಲಫ್ತ್‌ಫಿಕ್‍ಗಾಗಿಯೂ ಕೆಲಸ ಮಾಡಿದ. 1923ರಲ್ಲಿ ರಿನ್ ಫಾನ್ ಕೆಂಟ್‍ಸವಳನ್ನು ವಿವಾಹವಾಗಿ ಮ್ಯೂನಿಕ್‍ನಲ್ಲಿ ವಾಸಿಸತೊಡಗಿದ. ಅಲ್ಲಿ ಸಾರ್ವಜನಿಕ ಸಭೆಯೊಂದರಲ್ಲಿ ಹಿಟ್ಲರನನ್ನು ಕಂಡು, ಅವನ ಜೊತೆಗೂಡಿದ. ಹಿಟ್ಲರ್ ಇವನನ್ನು ಕೂಡಲೆ ಒಬ್ಬ ಅಧಿಕಾರಿಯನ್ನಾಗಿ ನೇಮಿಸಿಕೊಂಡ. ನವೆಂಬರ್ 1923ರಲ್ಲಿ ಮ್ಯೂನಿಕ್‍ನಲ್ಲಿ ನಾಜ಼ಿಗಳು ಅಧಿಕಾರಕ್ಕೆ ಬರಲು ನಡೆಸಿದ ಗಲಭೆಯಲ್ಲಿ ಗಾಯಗೊಂಡು, ದಸ್ತಗಿರಿಯಾದ. ಆದರೆ ಆಸ್ಟ್ರಿಯಕ್ಕೆ ತಪ್ಪಿಸಿಕೊಂಡು ಹೋದ. 1927ರಲ್ಲಿ ಜರ್ಮನಿಗೆ ಹಿಂದಿರುಗಿ, ಹಿಟ್ಲರನೊಡನೆ ಸೇರಿದ. 1928ರಲ್ಲಿ ರೈಕ್‍ಸ್ಟಾಗ್‍ಗೆ ಹಿಟ್ಲರನ ಬೆಂಬಲದಿಂದ ಗೋರಿಂಗನ ಚುನಾವಣೆಯಾಯಿತು.

ಗೋರಿಂಗ್ ಕೈಗಾರಿಕೋದ್ಯಮಿಗಳ ಮತ್ತು ಶ್ರೀಮಂತರ ಸಖ್ಯ ಬೆಳೆಸಿ ಅವರನ್ನು ಹಿಟ್ಲರನ ಅನುಕೂಲಕ್ಕೆ ಬಳಸಿಕೊಂಡ. ನಾಜ಼ಿ ಪಕ್ಷ 1932 ರಲ್ಲಿ ನಡೆದ ಚುನಾವಣೆಯಲ್ಲಿ ಜಯಗಳಿಸಿದ ಮೇಲೆ ಗೋರಿಂಗನಿಗೆ ರೈಕ್‍ಸ್ಟಾಗ್‍ನ ಅಧ್ಯಕ್ಷ ಸ್ಥಾನ ಪ್ರಾಪ್ತವಾಯಿತು. ಹಿಟ್ಲರ್ ಅಧಿಕಾರಕ್ಕೆ ಬಂದಾಗ ಗೋರಿಂಗನನ್ನು ಖಾತಾರಹಿತ ಮಂತ್ರಿಯಾಗಿ ನೇಮಿಸಿದ. ಇವನು ವಾಯುದಳದ ಕಮಿಷನರ್, ಪ್ರಷ್ಯದ ಮುಖ್ಯಮಂತ್ರಿ ಮತ್ತು ಒಳಾಡಳಿತ ಮಂತ್ರಿಯಾಗಿ ಅಧಿಕಾರ ಚಲಾಯಿಸಿದ. ಈತನ ಅಧಿಕಾರದಲ್ಲಿ ಪ್ರಷ್ಯದ ಆಡಳಿತ ಮತ್ತು ಪೋಲೀಸ್ ದಳದಲ್ಲಿ ನಾಜ಼ಿಗಳು ತುಂಬಿಕೊಂಡರು. ಅನಂತರ ಗೋರಿಂಗನಿಗೆ ಜನರಲ್ ಹುದ್ದೆ ದೊರಕಿತು. ಹಿಟ್ಲರ್ ಈತನನ್ನು ರಾಯಭಾರಿಯಾಗಿ ಇಟಲಿ, ಪೂರ್ವ ಯುರೋಪ್‍ಗಳಿಗೆ ಕಳುಹಿಸಿದ. 1933ರ ಫೆಬ್ರುವರಿ 27ರಂದು ರೈಕ್‍ಸ್ಟಾಗ್ ಕಟ್ಟಡವನ್ನು ಸುಡಲು ನಡೆಸಿದ ಪಿತೂರಿಯಲ್ಲಿ ಇವನೂ ಸೇರಿದ್ದನೆಂದು ಮೊದಲು ನಂಬಲಾಗಿತ್ತು. 1935ರಲ್ಲಿ ಈತ ವಿಮಾನ ದಳದ ದಂಡನಾಯಕನಾದ.

ಹಿಟ್ಲರ್ 1936ರಲ್ಲಿ ಈತನನ್ನು ಜರ್ಮನಿಯ ನಾಲ್ಕು ವರ್ಷಗಳ ಆರ್ಥಿಕ ಯೋಜನೆಯ ಅಧಿಕಾರಿಯನ್ನಾಗಿ ನೇಮಿಸಿದ. ಗೋರಿಂಗ್ ಜರ್ಮನಿಯ ಆರ್ಥಿಕ ಸರ್ವಾಧಿಕಾರಿಯಾದ. ಎರಡನೆಯ ಮಹಾಯುದ್ಧ ಆರಂಭವಾದಾಗ ಗೋರಿಂಗ್ ಹಿಟ್ಲರನ ಉತ್ತರಾಧಿಕಾರಿಯಾಗಿ ನೇಮಕ ಹೊಂದಿದ. 1945ರ ಏಪ್ರಿಲ್‍ನಲ್ಲಿ ಹಿಟ್ಲರ್ ಜರ್ಮನಿಗೆ ಮಾರ್ಗದರ್ಶನ ನೀಡುವುದನ್ನು ಬಿಟ್ಟನೆಂದು ಗೋರಿಂಗ್ ಭಾವಿಸಿ ಆತನ ನಿಯೋಗಿಯಾಗಿ ಅಧಿಕಾರ ಚಲಾಯಿಸಲು ಮುಂದಾದ. ಆದರೆ ಹಿಟ್ಲರ್ ಇವನನ್ನು ಎಲ್ಲ ಅಧಿಕಾರಗಳಿಂದ ವಿಮೋಚನೆಗೊಳಿಸಿ ನಾಜ಼ಿ ಪಕ್ಷದಿಂದ ತೆಗೆದುಹಾಕಿದ. ಅಮೆರಿಕನ್ ಪಡೆಗಳು ಇವನನ್ನು ದಸ್ತಗಿರಿ ಮಾಡಿದುವು. ನ್ಯೂರೆಂಬರ್ಗಿನಲ್ಲಿ ಈತನ ವಿಚಾರಣೆ ನಡೆದು ಇವನಿಗೆ ಮರಣದಂಡನೆ ವಿಧಿಸಲಾಯಿತು. 1946ರ ಅಕ್ಟೋಬರ್ 15ರ ಸಂಜೆ, ಇವನನ್ನು ಫಾಸಿಗೆ ಗುರಿಪಡಿಸುವ ಮುನ್ನ, ಈತ ವಿಷ ತೆಗೆದುಕೊಂಡು ಪ್ರಾಣ ಬಿಟ್ಟ. (ಎ.ವಿ.ವಿ.;ಎ.ಎಂ.ಆರ್.)

**ಗೋರಿಕಾಯಿ :** ಲೆಗ್ಯೂಮಿನೋಸೀ ಕುಟುಂಬದ ಪ್ಯಾಪಿಲಿಯೋನೇಸೀ ಉಪಕುಟುಂಬಕ್ಕೆ ಸೇರಿದ ತರಕಾರಿ ಸಸ್ಯ. ಚವಳೀಕಾಯಿ ಪರ್ಯಾಯನಾಮ. ಸಯಮಾಪ್ಸಿಸ್ ಟೆಟ್ರಗೋನೊಲೋಬ ಇದರ ಶಾಸ್ತ್ರೀಯ ಹೆಸರು. ಇಂಗ್ಲಿಷಿನಲ್ಲಿ ಕ್ಲಸ್ಟರ್ ಬೀನ್ಸ್ ಎಂದು ಕರೆಯಲಾಗುತ್ತದೆ. ಗೋರಿಕಾಯಿ ಭಾರತದ ಮೂಲವಾಸಿ ಎಂದು ಹೇಳಲಾಗಿದೆ. ಕಾಡುಗಿಡವಾಗಿ ಇದು ಎಲ್ಲೂ ಬೆಳೆಯದು. ಭಾರತಾದ್ಯಂತ ಇದನ್ನು ಕಾಯಿಗಳಿಗಾಗಿ, ಬೀಜಕ್ಕಾಗಿ ಬೆಳೆಸಲಾಗುತ್ತಿದೆ.



ಗೋರಿಕಾಯಿ ಗಿಡದಲ್ಲಿ ಕುಳ್ಳ ಮತ್ತು ದೈತ್ಯ ಎಂಬ ಎರಡು ಬಗೆಗಳಿವೆ. ಎರಡೂ ನೆಟ್ಟಗೆ ಬೆಳೆಯುವ ಏಕವಾರ್ಷಿಕ ಸಸ್ಯಗಳು. ಕುಳ್ಳ ಬಗೆಯದು 60–90 ಸೆಂಮೀ ಎತ್ತರಕ್ಕೆ ಬೆಳೆದರೆ ದೈತ್ಯಬಗೆಯದು 2.5–3 ಮೀ ಎತ್ತರಕ್ಕೆ ಬೆಳೆಯುತ್ತದೆ. ಕಾಂಡ ಮತ್ತು ಎಲೆಗಳ ಮೇಲೆ ನಸು ಉದಾಬಣ್ಣದ ಕೂದಲುಗಳಿವೆ. ಗಿಡವನ್ನು ಮುಟ್ಟಿದರೆ ನವೆ ಉಂಟಾಗುವುದಕ್ಕೆ ಕಾರಣ ಈ ಕೂದಲುಗಳು. ಎಲೆಗಳು ಸಂಯುಕ್ತ ಬಗೆಯವು; ಇವು ಪರ್ಯಾಯ ಮಾದರಿಯಲ್ಲಿ ಜೋಡಣೆಗೊಂಡಿವೆ; ಪ್ರತಿ ಎಲೆಯಲ್ಲಿ 3 ಕಿರುಎಲೆಗಳಿವೆ. ಹೂಗಳು ಎಲೆಗಳ ಕಂಕುಳುಗಳಲ್ಲಿರುವ ಅಂತ್ಯಾರಂಭಿ ಮಾದರಿಯ ಹೂಗೊಂಚಲುಗಳಲ್ಲಿ ಸಮಾವೇಶಗೊಂಡಿವೆ. ಕಾಯಿಗಳು ಪಾಡ್ ಮಾದರಿಯವು.

ಗಿಡವನ್ನು ಸಾಮಾನ್ಯವಾಗಿ ಎಲ್ಲ ಬಗೆಯ ಮಣ್ಣುಗಳಲ್ಲೂ ಬೆಳೆಸಬಹುದಾದರೂ ಚೆನ್ನಾಗಿ ನೀರು ಬಸಿದು ಹೋಗುವಂಥ ಮರಳು ಮಿಶ್ರಿತ ಗೋಡು ಮಣ್ಣು ಉತ್ತಮವಾದದ್ದು. ಜೂನ್–ಜುಲೈ ಇಲ್ಲವೆ ಜನವರಿ–ಫೆಬ್ರುವರಿ ತಿಂಗಳುಗಳು ಬೇಸಾಯಕ್ಕೆ ಸೂಕ್ತ. ಎಕರೆಗೆ 15–20 ಗಾಡಿ ಕೊಟ್ಟಿಗೆ ಗೊಬ್ಬರ, 125 ಕಿಗ್ರಾಂ ಅಮೋನಿಯಂ ಸಲ್ಫೇಟ್, 250 ಕಿಗ್ರಾಂ ಸೂಪರ್‌ಫಾಸ್ಫೇಟ್, 60 ಕಿಗ್ರಾಂ ಮ್ಯೂರಿಯೇಟ್ ಆಫ್ ಪೊಟ್ಯಾಷ್‌ಗಳನ್ನು ಹಾಕಿ, 5–7 ದಿವಸಗಳಿಗೊಮ್ಮೆ ನೀರನ್ನು ಹಾಯಿಸುತ್ತಿರಬೇಕು. ಬೀಜ ಬಿತ್ತಿದ 2.5 ತಿಂಗಳ ಅನಂತರ ಕಾಯಿಗಳು ಕೊಯ್ಲಿಗೆ ಸಿದ್ಧವಾಗುತ್ತವೆ. ಇಳುವರಿ ಎಕರೆಗೆ 2,500 ರಿಂದ 3,500 ಕಿಗ್ರಾಂಗಳಷ್ಟು ಇರುತ್ತದೆ.

ಗಿಡಕ್ಕೆ ತಗಲುವ ರೋಗಗಳಲ್ಲಿ ಬ್ಯಾಕ್ಟೀರಿಯಲ್ ಬ್ಲೈಟ್ ಎಂಬುದು ಬಹಳ ಮುಖ್ಯವಾದದ್ದು. ಮೊದಲು ಎಲೆಗಳ ಮೇಲೆ ಬಹಳ ಸಣ್ಣ, ಪಾರದರ್ಶಕ, ನೀರುಗೂಡಿದ ಚುಕ್ಕೆಗಳು ಕಾಣಿಸಿಕೊಳ್ಳುತ್ತವೆ. ಅನಂತರ ನಾಳದ ಒಳಗಿರುವ ಕಣ ಸಮೂಹ ಹಳದಿ ಬಣ್ಣಕ್ಕೆ ತಿರುಗಿ ಎಲೆ ಸತ್ತುಹೋಗುತ್ತದೆ. ಕ್ರಮೇಣ ರೋಗ ಮುಂದುವರಿದು ಕಾಂಡಕ್ಕೂ ಅಂಟುತ್ತದೆ. ಕೊನೆಗೆ ಪೂರ್ತಿ ಗಿಡವೇ ಸತ್ತುಹೋಗುತ್ತದೆ. ಈ ರೋಗ ಬೀಜ ಮತ್ತು ಮಣ್ಣಿನಿಂದ ಪ್ರಸಾರವಾಗುತ್ತದೆ. ರೋಗರಹಿತ ಬೀಜಗಳನ್ನು ಉಪಯೋಗಿಸುವುದು, ಸೀರಸಾನ್ ಅಥವಾ ಆಗ್ರಸಾನ್ ಎಂಬ ಔಷಧಿಗಳಿಂದ ಬೀಜಗಳನ್ನು ತೊಳೆಯುವುದು ಮತ್ತು ರೋಗ ನಿರೋಧಕ ಜಾತಿಗಳನ್ನೇ ಬಿತ್ತಲು ಉಪಯೋಗಿಸುವುದು–ಇವು ರೋಗನಿಯಂತ್ರಣದ ಕೆಲವು ಕ್ರಮಗಳು.

ಗೋರಿಕಾಯಿ ತರಕಾರಿ ಮಾತ್ರವಾಗಿ ಅಲ್ಲದೆ ಇನ್ನಿತರ ಕಾರಣಗಳಿಂದಾಗಿಯೂ ಉಪಯುಕ್ತವೆನಿಸಿದೆ. ಇದು ದನಗಳಿಗೆ ಮತ್ತು ಕುದುರೆಗಳಿಗೆ ಒಳ್ಳೆಯ ಮೇವು. ಬೀಜಗಳನ್ನು ಬೇಯಿಸಿ, ಕೊಂಚ ಸಾಸಿವೆ ಎಣ್ಣೆಯೊಂದಿಗೆ ಸೇರಿಸಿ ದನಗಳಿಗೆ ತಿನ್ನಿಸುವುದುಂಟು. ಅಲ್ಲದೆ ಬೀಜಗಳಿಂದ ಒಂದು ರೀತಿಯ ಗೋಂದನ್ನು ತಯಾರಿಸಿ ಕಾಗದ ಮತ್ತು ಬಟ್ಟೆ ಕೈಗಾರಿಕೆಗಳಲ್ಲಿ ಉತ್ಪನ್ನಗಳಿಗೆ ಬಲವನ್ನು ಕೊಡುವ ವಸ್ತುವಾಗಿ ಬಳಸುತ್ತಾರೆ. ಹದವಾಗಿ ಬೆಳೆದ ಕಾಯಿಗಳನ್ನು ಸುಗ್ಗಿಯಲ್ಲಿ ಕಿತ್ತು ಒಣಗಿಸಿಟ್ಟುಕೊಂಡು ಬೇಕಾದಾಗ ತರಕಾರಿಯಾಗಿ ಬಳಸುತ್ತಾರಲ್ಲದೆ ಕರಿದು ಬಾಳಕ ಮಾಡುವುದೂ ಉಂಟು. (ಬಿ.ಎ.ಸಿ.)

**ಗೋರ್ಗಸ್ ವಿಲಿಯಂ ಕ್ರಾಫರ್ಡ್ :** 1854–1920. ಅಮೆರಿಕ ಸಂಯುಕ್ತ ಸಂಸ್ಥಾನಗಳ ಸೈನ್ಯದಲ್ಲಿ ಶಸ್ತ್ರವೈದ್ಯ. ಪನಾಮ ಕಾಲುವೆಯ ಕೆಲಸಗಾರರು ಮಲೇರಿಯ ಮತ್ತು ಹಳದಿಜ್ವರಗಳಿಂದ ಪೀಡಿತರಾಗಿ ಆ ಕಾಲುವೆ ನಿರ್ಮಾಣಕಾರ್ಯ ಸ್ಥಗಿತವಾಗಿದ್ದಾಗ ಈ ರೋಗಗಳನ್ನು ಹರಡುವ ಸೊಳ್ಳೆಗಳ ನಿಯಂತ್ರಣದಿಂದ ನಿರ್ಮಾಣಕಾರ್ಯ ಮುಂದುವರಿಯುವಂತೆ ಮಾಡಿದವನೀತ.

ಗೋರ್ಗಸ್ 1854ರ ಅಕ್ಟೋಬರ್ 3ರಂದು ಅಲಬಾಮ ರಾಜ್ಯದ ಮೊಬೈಲ್ ಎಂಬಲ್ಲಿ ಜನಿಸಿದ. ದಕ್ಷಿಣ ವಿಶ್ವವಿದ್ಯಾಲಯ ಸೆವಾನಿ–ಟೆನಿಸಿಯಲ್ಲಿ ವ್ಯಾಸಂಗ ಮುಗಿಸಿ ನ್ಯೂಯಾರ್ಕಿನ ಬೆಲ್‌ವ್ಯೂ ಆಸ್ಪತ್ರೆ ಪ್ರೌಢ ವಿದ್ಯಾಶಾಲೆಯ ಎಂ.ಡಿ. ಪದವೀಧರನಾದ (1879). ಮರುವರ್ಷ ಅಮೆರಿಕ ಸಂಯುಕ್ತಸಂಸ್ಥಾನಗಳ ಸೈನ್ಯದ ವೈದ್ಯಕೀಯ ಪಡೆಗೆ ಸೇರಿ ಸ್ಪೇನ್ ಮತ್ತು ಅಮೆರಿಕ ನಡುವಣ ಯುದ್ಧದಲ್ಲಿ ಭಾಗವಹಿಸಿ ಮೇಜರ್ ಹುದ್ದೆಗೆ ಬಡ್ತಿ ಪಡೆದ. ಸ್ಯಾನ್‌ಟಿಯಾಗೋ ದಂಡಯಾತ್ರೆಯ ತರುವಾಯ ಈತನನ್ನು ಹವಾನದಲ್ಲಿ ಹಳದಿಜ್ವರ ಪೀಡಿತರಾದವರನ್ನು ನೋಡಿಕೊಳ್ಳಲು ಕಳುಹಿಸಿದರು. 1898ರಿಂದ 1902ರ ವರೆಗೆ ಹವಾನ ದಲ್ಲಿ ಬಾಹ್ಯ ಪರಿಸರ ನಿರ್ಮಲೀಕರಣ ಕಾರ್ಯ ಕ್ರಮದ ಅಧಿಕಾರಿಯಾಗಿದ್ದು ಸೊಳ್ಳೆಗಳು ಹಳದಿಜ್ವರವನ್ನು ಒಬ್ಬನಿಂದ ಇನ್ನೊಬ್ಬನಿಗೆ ಹರಡುವ ವಿಧಾನದ ವಿಚಾರವಾಗಿ ಅನೇಕ ಸಂಶೋಧನೆಗಳನ್ನೂ ಅಧ್ಯಯನಗಳನ್ನೂ ನಡೆಸಿದ. ತತ್ಪರಿಣಾಮವಾಗಿ ಹವಾನದಲ್ಲಿ ನೆಲೆಗೊಂಡಿದ್ದ ಹಳದಿಜ್ವರದ ಮೂಲೋಚ್ಚಾಟನೆ ಸಾಧ್ಯವಾಯಿತು. ಇದನ್ನು ಸರ್ಕಾರ ಮೆಚ್ಚಿ 1903ರಲ್ಲಿ ಗೋರ್ಗಸ್‌ನಿಗೆ ಅಮೆರಿಕ ಸಂಯುಕ್ತ ಸಂಸ್ಥಾನಗಳ ಸೈನ್ಯದಲ್ಲಿ ಸಹಾಯಕ ಸರ್ಜನ್ ಜನರಲ್ ಆಗಿ ನೇಮಿಸಿ ಕರ್ನಲ್ ಪದವಿಗೆ ಬಡ್ತಿ ನೀಡಿತು.



ಅನಂತರ ಈತ ಪನಾಮ ಕಾಲುವೆ ನಿರ್ಮಾಣಕ್ಷೇತ್ರದ ನಿರ್ಮಲೀಕರಣ ಮುಖ್ಯಾಧಿಕಾರಿಯಾಗಿ 1904ರಲ್ಲಿ ನೇಮಿಸಲ್ಪಟ್ಟ. ಕಾಲುವೆಯ ನಿರ್ಮಾಣಕ್ಕೆ ಮಲೇರಿಯ ಹಾಗೂ ಹಳದಿಜ್ವರ ಮುಖ್ಯ ಅಡಚಣೆಗಳಾಗಿದ್ದವು. ಅವನ್ನು ನಿರ್ಮೂಲನೆ ಮಾಡಿ, ಕಾಲುವೆ ಕೆಲಸ ಅವಿಚ್ಛಿನ್ನವಾಗಿ ಮುಂದುವರಿಯುವಂತೆ ಮಾಡಿದ್ದು ಗೋರ್ಗಸನ ಪರಮಸಿದ್ಧಿ. 1907ರಲ್ಲಿ ಈತ ಪನಾಮ ಭೂಸಂಧಿ ಕಾಲುವೆ ನಿಯೋಜಿತ ಮಂಡಲಿಯ ಸದಸ್ಯನಾಗಿ ನೇಮಕಗೊಂಡ. 1908ರಲ್ಲಿ ಮೊತ್ತಮೊದಲು ಕೂಡಿದ ಅಖಿಲ ಅಮೆರಿಕದ ವೈದ್ಯರ ಸಮ್ಮೇಳನದಲ್ಲಿ ಸಂಯುಕ್ತಸಂಸ್ಥಾನಗಳ ಪ್ರತಿನಿಧಿಯಾಗಿ ಭಾಗವಹಿಸಿದ. 1908–1909ರಲ್ಲಿ ಅಮೆರಿಕ ವೈದ್ಯರ ಸಂಘಕ್ಕೆ ಅಧ್ಯಕ್ಷನಾದ.

ದಕ್ಷಿಣ ಆಫ್ರಿಕದ ಚಿನ್ನದ ಗಣಿ ಪ್ರದೇಶಗಳಲ್ಲೊಂದಾದ ರ‍್ಯಾಂಡ್ ಎಂಬಲ್ಲಿ ಆಗಾಗ ತಲೆದೋರುತ್ತಿದ್ದ ಇನ್‌ಫ್ಲುಯೆನ್‌ಜಾ ಪಿಡುಗನ್ನು ಹತೋಟಿಗೆ ತರಲು ಸೂಕ್ತವಾದ ಸಲಹೆ ಕೊಡಬೇಕೆಂದು ಗೋರ್ಗಸನಿಗೆ ಕರೆಬಂತು (1913). ಗಣಿ ಕೂಲಿಗಾರರ ಪಾಳೆಯಗಳಲ್ಲಿ ತುಂಬಿ ತುಳುಕಾಡುತ್ತಿದ್ದ ಹೊಲಸುರಾಡಿಗಳೇ ಈ ಪಿಡುಗುಗಳಿಗೆ ಕಾರಣವೆಂಬುದನ್ನು ಈತ ಕಂಡುಕೊಂಡು ಪಿಡುಗಿನ ವಿರುದ್ಧ ಯಶಸ್ವೀ ಸಮರ ಹೂಡಿದ. 1914ರಲ್ಲಿ ಈತನಿಗೆ ಅಮೆರಿಕದ ಸರ್ಜನ್–ಜನರಲ್ ಪದವಿ ದೊರೆಯಿತು. ಮರುವರ್ಷ ಮೇಜರ್–ಜನರಲ್ ಆಗಿ 1918ರಲ್ಲಿ ಕೆಲಸದಿಂದ ನಿವೃತ್ತನಾದ. ತರುವಾಯ ರಾಕ್‌ಫೆಲರ್ ಸಂಸ್ಥೆಯ ಅಂತಾರಾಷ್ಟ್ರೀಯ ಆರೋಗ್ಯ ಸಮಿತಿಯ ಹಳದಿಜ್ವರ ವಿಚಾರ ಮಂಡಲಿಯ ಖಾಯಂ ನಿರ್ದೇಶಕನಾಗಿ ಸೇವೆ ಸಲ್ಲಿಸಿದ. ಮಧ್ಯ ಅಮೆರಿಕದ ಗ್ವಯಾಕ್ವಿಲ್, ಈಕ್ವಡಾರ್ ಮತ್ತು ಗ್ವಾಟಿಮಾಲಗಳಲ್ಲಿ ಹಳದಿಜ್ವರದ ವಿಚಾರವಾಗಿ ಸಂಶೋಧನೆ ನಡೆಸಿದ. 1919ರಲ್ಲಿ ಪೆರು ದೇಶದಲ್ಲಿ ನಿರ್ಮಲೀಕರಣ ಕಾರ್ಯಕ್ರಮವನ್ನು ನಡೆಸಿಕೊಡಲು ಒಪ್ಪಿಕೊಂಡ.

ಈತ 1920ರ ಜುಲೈ 3ರಂದು ಲಂಡನಿನಲ್ಲಿ ಗತಿಸಿದ. ಈತನ ಸ್ಮರಣಾರ್ಥವಾಗಿ ವಾಷಿಂಗ್‌ಟನ್ನಿನಲ್ಲಿ ಗೋರ್ಗಸ್ ಮೆಮೋರಿಯಲ್ ಇನ್‌ಸ್ಟಿಟ್ಯೂಟ್ ಆಫ್ ಟ್ರಾಪಿಕಲ್ ಮೆಡಿಸಿನ್ ಇನ್ಕ್ ಎಂಬ ಸಂಸ್ಥೆಯನ್ನೂ ಪನಾಮದಲ್ಲಿ ಗೋರ್ಗಸ್ ಮೆಮೋರಿಯಲ್ ಲ್ಯಾಬೊರೇಟರಿ ಆಫ್ ಟ್ರಾಪಿಕಲ್ ರಿಸರ್ಚ್ ಎಂಬ ಸಂಸ್ಥೆಯನ್ನೂ ಸ್ಥಾಪಿಸಲಾಗಿದೆ.

ಸೊಳ್ಳೆಗಳ ಮೇಲೂ ಹಳದಿಜ್ವರದ ಮೇಲೂ ಕೆಲಸ ಮಾಡಿದ ಇನ್ನೊಬ್ಬನೆಂದರೆ ಗೋರ್ಗಸನ ಸಮಕಾಲೀನನಾದ ವಾಲ್ಟರ್ ರೀಡ್ (**ನೋಡಿ– ರೀಡ್, ವಾಲ್ಟರ್**).

(ಆರ್.ಎಸ್.ವಿ.)

**ಗೋರ್ಡನ್, ಆಡಮ್ ಲಿಂಡ್‌ಸೇ :** 1833–70. ಆಸ್ಟ್ರೇಲಿಯನ್ ಕವಿ. ಹುಟ್ಟಿನಿಂದ ಇಂಗ್ಲಿಷಿನವ. ವಿದ್ಯಾಭ್ಯಾಸವಾದುದೂ ಇಂಗ್ಲೆಂಡಿನಲ್ಲಿಯೇ. ನಿರ್ಲಕ್ಷ್ಯದ, ಬೇಜವಾಬ್ದಾರಿಯ ಯುವಕನೆಂಬ ಕಾರಣದಿಂದ ಆಸ್ಟ್ರೇಲಿಯಕ್ಕೆ ಕಳುಹಿಸಲ್ಪಟ್ಟು ಅಲ್ಲಿಯೇ ನೆಲೆಸಿದ. ಅಲ್ಲಿ ಕುದುರೆ ಸವಾರಿಯ ಪೋಲಿಸು ದಳದವನಾಗಿ ಕೆಲಸ ಮಾಡಲಾರಂಭಿಸಿದ. ಹಳ್ಳಿಗಾಡು ಕುದುರೆಜೂಜಿನಲ್ಲಿ ಸವಾರನಾಗಿ (ಸ್ಟೀಪಲ್‌ಚೇಸ್ ರೈಡರ್) ಕೆಲವು ವರ್ಷ ದುಡಿದ ಈತ ಅತ್ಯುತ್ತಮ ಸವಾರನೆಂದು ದಕ್ಷಿಣ ಆಸ್ಟ್ರೇಲಿಯದಲ್ಲೆಲ್ಲ ಖ್ಯಾತಿ ಪಡೆದ. ಇಪ್ಪತ್ತನಾಲ್ಕನೆಯ ವರ್ಷದಲ್ಲಿ ಅತ್ಯಲಂಕಾರಶೈಲಿಯಲ್ಲಿ ಭಾವಗೀತೆಗಳನ್ನು ಬರೆಯತೊಡಗಿದ. ಇಪ್ಪತ್ತೆಂಟನೆಯ ವರ್ಷದಲ್ಲಿ ತಾಯಿಯ ಆಸ್ತಿಗೆ ಉತ್ತರಾಧಿಕಾರಿಯಾಗಿ ಬಾಡಿಗೆ ಕುದುರೆಗಳ ಲಾಯವೊಂದನ್ನು ತೆರೆದ. ಮುವತ್ತನಾಲ್ಕನೆಯ ವರ್ಷದಲ್ಲಿ ಸೀ–ಸ್ಪ್ರೇ ಅಂಡ್ ಸ್ಮೋಕ್ ಡ್ರಿಫ್ಟ್ ಮತ್ತು ಆಶ್ಟರೋತ್ ಎಂಬ ಎರಡು ಕವನಸಂಕಲನಗಳನ್ನು ಪ್ರಕಟಿಸಿದ. ಮೂವತ್ತೇಳನೆಯ ವರ್ಷದಲ್ಲಿ ಬುಷ್ ಬ್ಯಾಲಡ್ಸ್ ಅಂಡ್ ಗ್ಯಾಲಪಿಂಗ್ ರೈಮ್ಸ್ ಎಂಬ ಮೂರನೆಯ ಕವನಸಂಕಲನವನ್ನು ಪ್ರಕಟಿಸಿದ. ಈ ಕೃತಿಗಳು ಈತನಿಗೆ ಹಣಕ್ಕಿಂತ ಹೆಚ್ಚಾಗಿ ಹೊಗಳಿಕೆಯನ್ನು ತಂದುವು. 1870ರಲ್ಲಿ ಕುದುರೆಸವಾರಿ ಮಾಡುವಾಗ ಬಿದ್ದು ಏಟು ತಿಂದ. ಸ್ಕಾಟ್ಲೆಂಡಿನಿಂದ ಬರಬೇಕಾದ ಒಂದು ಆಸ್ತಿ ಗಿಟ್ಟಲಿಲ್ಲ. ತಾನು ಕವಿಯಾಗಿಯೇ ಯಶಸ್ಸನ್ನು ಪಡೆಯುವುದು ಶಕ್ಯವಲ್ಲವೆಂಬ ಭಾವನೆ ಪ್ರಬಲವಾಯಿತು. ಈ ಎಲ್ಲ ಕಾರಣಗಳಿಂದ ಜೀವನದ ಬಗ್ಗೆ ತುಂಬ ಜುಗುಪ್ಸೆ ಪಟ್ಟುಕೊಂಡು ತನ್ನ ತಲೆಗೆ ತಾನೇ ಗುಂಡಿಟ್ಟುಕೊಂಡು ಆತ್ಮಹತ್ಯೆ ಮಾಡಿಕೊಂಡ.

ಆಸ್ಟ್ರೇಲಿಯದ ಮೂಲ ನಿವಾಸಿಗಳ ನಿತ್ಯಜೀವನದ ವಿವಿಧ ನೋಟಗಳನ್ನು ಈತ ತನ್ನ ಕವಿತೆಗಳಲ್ಲಿ ಸೆರೆಹಿಡಿದಿದ್ದಾನೆ. ಆಸ್ಟ್ರೇಲಿಯನ್ ಜನತೆಗೆ ವಿಶಿಷ್ಟವಾದ ನುಡಿಗಟ್ಟನ್ನೇ ಬಳಸಿಕೊಂಡ ಕವಿಗಳಲ್ಲಿ ಈತ ಮೊದಲಿಗ. ಆದರೆ ಇವನ ಕವಿತೆಗಳಲ್ಲಿ ಅತ್ಯುತ್ತಮವಾದವು ಅವುಗಳ ವಸ್ತುಗಳಿಂದಾಗಿ, ಅವುಗಳ ಭಾವನೆಗಳಿಂದಾಗಿ ಆಸ್ಟ್ರೇಲಿಯನ್ ಆಗುವುದಕ್ಕಿಂತ ಹೆಚ್ಚಾಗಿ ಇಂಗ್ಲಿಷ್ ಆಗಿವೆ ಎಂದು ವಿಮರ್ಶಕರ ಅಭಿಪ್ರಾಯ. ಜೋರಾದ ಛಂದೋಗತಿ ಹಾಗೂ ಅಭಿವ್ಯಕ್ತವಾಗಿರುವ ಸರಳವಾದ ಮತ್ತು ಅನಾಡಂಬರದ ಜೀವನದರ್ಶನದಿಂದಾಗಿ ಇವು ಓದುಗರ ಮೆಚ್ಚುಗೆಯನ್ನು ಪಡೆದಿವೆ. ಇವನ ಕವಿತೆಗಳ ಹಲವಾರು ಸಾಲುಗಳು ಆಸ್ಟ್ರೇಲಿಯನ್ ಜನತೆಯ ನಿತ್ಯಜೀವನದ ಮಾತುಕತೆಯಲ್ಲಿ ಹಾಸುಹೊಕ್ಕಾಗಿ ಬಿಟ್ಟಿವೆಯಂತೆ.

(ಪಿ.ಎನ್.ಆರ್.)


**ಗೋರ್ಡನ್, ಚಾರ್ಲ್ಸ್ ಜಾರ್ಜ್ :** 1833–85. ಬ್ರಿಟಿಷ್ ಸೇನಾಧಿಕಾರಿ ಮತ್ತು ಸಮಾಜಸೇವಕ. ಬ್ರಿಟಿಷ್ ಸೈನ್ಯದ ಅಧಿಕಾರಿಯಾಗಿ ಕ್ರಿಮಿಯ, ತುರ್ಕಿ, ಅರ್ಮೇನಿಯ, ಚೀನ, ಭಾರತ, ಆಫ್ರಿಕ ಮುಂತಾದ ದೇಶಗಳಲ್ಲಿ ಉತ್ತಮ ಸೇವೆ ಸಲ್ಲಿಸಿದ. 1859ರಲ್ಲಿ ಚೀನದ ಮೇಲೆ ದಂಡೆತ್ತಿಹೋದ ಸೈನ್ಯದ ನಾಯಕನಾಗಿ ಗಳಿಸಿದ ಜಯದಿಂದ ಈತ ಚೀನಿ ಗೋರ್ಡನ್ ಎಂದು ಕರೆಯಲ್ಪಟ್ಟ. ಆಫ್ರಿಕದಲ್ಲಿ ಈಜಿಪ್ಟಿನ ಖೆಡಿವ್ ಸರ್ಕಾರದ ಪರವಾಗಿ ಸಮಭಾಜಕೀಯ ಪ್ರಾಂತಗಳ ಗವರ್ನರಾಗಿದ್ದಾಗ ಗುಲಾಮರ ವ್ಯಾಪಾರ, ಲಂಚಗುಳಿತನ, ಬಡತನ ಮತ್ತು ಅನಾರೋಗ್ಯಗಳ ನಿರ್ಮೂಲನಕ್ಕಾಗಿ ಶ್ರಮಿಸಿದ. ದಕ್ಷಿಣ ಆಫ್ರಿಕದಲ್ಲಿ ಬಸೂಟೊ ಜನರ ದಂಗೆಯನ್ನು ಸೈನ್ಯವನ್ನು ಉಪಯೋಗಿಸದೆ ಹತ್ತಿಕ್ಕಿದ



ಯಶಸ್ಸು ಈತನದಾಯಿತು. ಸೂಡಾನಿನಲ್ಲಿ ಅಬ್ದುಲ್ಲಾ ಎಲ್ ಮಹ್ದಿ ಅಧಿಕಾರಕ್ಕೆ ಬಂದಾಗ ಅಲ್ಲಿದ್ದ ಐರೋಪ್ಯರನ್ನೂ ಈಜಿಪ್ಟಿನವರನ್ನೂ ಹೊರಗೆ ಸಾಗಿಸುವ ಹೊಣೆಯನ್ನು ಬ್ರಿಟಿಷ್ ಸರ್ಕಾರ ಗೋರ್ಡನನಿಗೆ ವಹಿಸಿತು. ಈ ಕಾರ್ಯದಲ್ಲಿನಿರತನಾಗಿದ್ದಾಗ ಖಾರ್ಟೂಮ್ ನಗರದ ಅರಮನೆಯ ಮೆಟ್ಟಲುಗಳ ಮೇಲೆ ಈತನನ್ನು ಇರಿದು ಕೊಲ್ಲಲಾಯಿತು. ಗೋರ್ಡನ್ ತನ್ನ ಜೀವನಪರ್ಯಂತ ಅನಾಥ ಬಾಲಕರ ಹಿತರಕ್ಷಣೆಗಾಗಿ ಶ್ರಮಿಸಿದ. ಆದ್ದರಿಂದ ಈತನ ಸ್ಮಾರಕವಾಗಿ ಅನಾಥ ಬಾಲಕರಿಗೆ ವೃತ್ತಿಶಿಕ್ಷಣ ಕೊಡಲು ವೋಕಿಂಗ್ ಎಂಬಲ್ಲಿ ಗೋರ್ಡನ್ ಬಾಯ್ಸ್‌ಸ್ಕೂಲ್ ಅನ್ನು ಸ್ಥಾಪಿಸಲಾಗಿದೆ. ಇಂಗ್ಲೆಂಡಿನಲ್ಲಿ ಅನೇಕ ಕಡೆ ಈತನ ಸ್ಮಾರಕಗಳಿವೆ.

(ಎ.ಎಂ.ಆರ್.)

**ಗೋರ್ಡಿಯೇಸಿಯ :** ಆಸ್ಕೆಲ್ಮಿಂಥೀಸ್ ವಿಭಾಗದ ಒಂದು ವರ್ಗ. ನೆಮ್ಯಾಟೋಮಾರ್ಫ ಪರ್ಯಾಯನಾಮ. ಕೂದಲಿನ ಎಳೆಯಂತೆ ಕಾಣುವ ವಿಶಿಷ್ಟ ರೀತಿಯ ಹುಳುಗಳನ್ನು ಒಳಗೊಂಡಿದೆ. ಈ ಹುಳುಗಳು 15–20 ಸೆಂಮೀ ಉದ್ದವಾಗಿಯೂ ತುಂಬ



ಜಲಸಸ್ಯವೊಂದನ್ನು ಸುತ್ತಿಕೊಂಡಿರುವ ಗೋರ್ಡಿಯಸ್ ಪ್ರಾಣಿ

ತೆಳುವಾಗಿಯೂ ಇರುವುದರಿಂದ ಇವಕ್ಕೆ ಕುದುರೆ ಕೂದಲು ಹುಳುಗಳೆಂಬ ರೂಢಿನಾಮವಿದೆ. ಈ ವರ್ಗದಲ್ಲಿಗೋರ್ಡಿಯಾಯ್ಡಿಯ ಮತ್ತು ನೆಕ್ಟೊನೆಮಟಾಯ್ಡಿಯ ಎಂಬ ಎರಡು ಗಣಗಳಿವೆ. ಮೊದಲಿನ ಗಣಕ್ಕೆ ಸೇರಿದ ಹುಳುಗಳು ಸಿಹಿನೀರಿನಲ್ಲೂ ಎರಡನೆಯ ಗಣಕ್ಕೆ ಸೇರಿದವು ಸಾಗರದ ಉಪ್ಪುನೀರಿನಲ್ಲೂ ವಾಸಿಸುತ್ತವೆ. ಎರಡು ಬಗೆಯ ಡಿಂಭಗಳು ಕೀಟಗಳ ಇಲ್ಲವೆ ಇತರ ರೀತಿಯ ಸಂಧಿಪದಿಗಳ ದೇಹದಲ್ಲಿ ಪರಾವಲಂಬಿಗಳಾಗಿ ಜೀವಿಸುತ್ತವೆ. ಪ್ರೌಢ ಜೀವಿಗಳು ಮಾತ್ರ ಸ್ವತಂತ್ರಜೀವನ ನಡೆಸುತ್ತವೆ.

ಮೇಲೆ ಹೇಳಿದಂತೆ ತೆಳುವಾದ ಹಾಗೂ ಕೂದಲಿನಂತೆ ಕಾಣುವ ಉದ್ದವಾದ ದೇಹ, ಹೊರಚರ್ಮವನ್ನು ಸಂಪೂರ್ಣವಾಗಿ ಆವರಿಸಿರುವ ಮತ್ತು ಹೊರಚರ್ಮದಿಂದಲೇ ಉತ್ಪತ್ತಿಯಾಗಿರುವ ದಪ್ಪವಾದ ಕ್ಯೂಟಿಕಲ್ ಪದರ, 3 ಇಲ್ಲವೆ 4 ಪ್ರತ್ಯೇಕ ನಾಲೆಗಳಾಗಿ ವಿಭಾಗವಾಗಿರುವ ದೇಹಾಂತರಾವಕಾಶ, ಡಿಂಭಗಳಲ್ಲಿ ಸಂಪೂರ್ಣವಾಗಿ ರೂಪುಗೊಂಡಿದ್ದು ಪ್ರೌಢ ಜೀವಿಗಳಲ್ಲಿ ಕ್ಷೀಣವಾಗಿರುವ ಜೀರ್ಣಾಂಗ, ಸರಳವಾದ ಕೊಳವೆಯಂತಿರುವ ಜಠರ, ರಕ್ತಪರಿಚಲನೆ, ಉಸಿರಾಟ ಮತ್ತು ವಿಸರ್ಜನೆಯ ಅಂಗಗಳು ಇಲ್ಲದಿರುವುದು, ಅನ್ನನಾಳದ ಸುತ್ತ ಉಂಗುರದಂತಿರುವ ನರಮಂಡಲ–ಇವು ಗೋರ್ಡಿಯೇಸಿಯ ವರ್ಗದ ಜೀವಿಗಳ ಮುಖ್ಯ ಲಕ್ಷಣಗಳು.

ಗೋರ್ಡಿಯೇಸಿಯಕ್ಕೆ ಸೇರಿದ ಜೀವಿಗಳು ಭಿನ್ನಲಿಂಗಿಗಳು. ಜನನಾಂಗಗಳು ದೇಹದುದ್ದಕ್ಕೂ ವ್ಯಾಪಿಸಿವೆ. ನೀರಿನಲ್ಲಿ ಬೆಳೆಯುವ ಜೊಂಡಿನ ಮೇಲೆ ಉದ್ದುದ್ದನೆಯ ಸರಪಳಿಗಳ ರೀತಿಯಲ್ಲಿ ಇವು ಮೊಟ್ಟೆಗಳನ್ನಿಡುತ್ತವೆ. ಮೊಟ್ಟೆಯೊಡೆದು ಹೊರಬರುವ ಡಿಂಭಗಳು ಯಾವುದಾದರೂ ಜಲವಾಸಿ ಕೀಟದ ದೇಹವನ್ನು ಸೇರಿ ತಮ್ಮ ಜೀವನದ ಪ್ರಥಮ ಹಂತವನ್ನು ಕಳೆಯುತ್ತವೆ. ಅನಂತರ ಜೀರುಂಡೆ, ಮಿಡತೆ ಇತ್ಯಾದಿ ಇನ್ನೊಂದು ಬಗೆಯ ಆತಿಥೇಯ ಕೀಟದ ದೇಹದೊಳಕ್ಕೆ ಸಾಗುತ್ತವೆ. ಇಲ್ಲಿ ತಮ್ಮ ಡಿಂಭಾವಸ್ಥೆಯನ್ನು ಪೂರ್ಣಗೊಳಿಸಿ ಪ್ರೌಢಾವಸ್ಥೆ ತಲಪಿ ಜಲಮಾಧ್ಯಮಕ್ಕೆ ಬರುತ್ತವೆ.


(ಪಿ.ಎ.ಆರ್.)

**ಗೋಲಿ :** ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ ಪಾಲ್ನಾಡ್ ತಾಲ್ಲೂಕಿನಲ್ಲಿರುವ, ಬೌದ್ಧಸ್ತೂಪದ ಅವಶೇಷಗಳುಳ್ಳ ಪ್ರಸಿದ್ಧ ಗ್ರಾಮ. ಕೃಷ್ಣಾನದಿಯ ಗೊಲ್ಲಾರು ಎಂಬ ನದಿಯ ದಡದ ಮೇಲಿದೆ. 1822ರಲ್ಲಿ ರಾಬರ್ಟ್ ಸಿವೆಲ್ ಇಲ್ಲಿದ್ದ ಬೌದ್ಧಸ್ತೂಪವನ್ನು

ಪತ್ತೆಹಚ್ಚಿದ. 1926ರಲ್ಲಿ ಪ್ರಸಿದ್ಧ ಚರಿತ್ರಕಾರ ಜಿ.ಜೆ. ಡೂಬ್ರೆ ಈ ಸ್ತೂಪವನ್ನು ಅಗೆಸಿ ಇದರಲ್ಲಿದ್ದ ಶಿಲ್ಪ ಫಲಕಗಳನ್ನೆಲ್ಲ ಮದ್ರಾಸ್ ಸರ್ಕಾರದ ವಸ್ತುಸಂಗ್ರಹಾಲಯಕ್ಕೆ ವರ್ಗಾಯಿಸಿದ. ಇಂದಿಗೂ ಇವು ಅಲ್ಲಿ ಪ್ರದರ್ಶಿತವಾಗಿವೆ. ಗೋಲಿಯ ಸ್ತೂಪ ಪೂರ್ತಿಯಾಗಿ ನಷ್ಟವಾಗಿದೆ. ಈಗ ಉಳಿದಿರುವುದು ಆ ಸ್ತೂಪವನ್ನಲಂಕರಿಸಿದ್ದ ಶಿಲ್ಪಗಳು ಮಾತ್ರ. ಇವು ಆಂಧ್ರದ ಆ ಕಾಲದ ಇತರ ಶಿಲ್ಪಗಳಂತೆ ಬಿಳಿಯ ಸುಣ್ಣಕಲ್ಲಿನಿಂದ ಮಾಡಿದವು. ಅಮರಾವತಿ ಶಿಲ್ಪಶೈಲಿಯ ಕೊನೆಯ, ಎಂದರೆ ನಾಲ್ಕನೆಯ, ಹಂತಕ್ಕೆ ಗೋಲಿಯ ಶಿಲ್ಪಗಳು ಸೇರುತ್ತವೆಂಬುದು ವಿದ್ವಾಂಸರ ಮತ. 3ನೆಯ ಶತಮಾನದ ಹೊತ್ತಿಗೆ ಈ ಶಿಲ್ಪಗಳು ನಿರ್ಮಾಣವಾಗಿದ್ದಿರಬೇಕೆಂದು ತಿಳಿದುಬರುತ್ತದೆ.

ಇಲ್ಲಿಯ ಶಿಲ್ಪ ಫಲಕಗಳಲ್ಲಿ ವೆಸ್ಸಂತರ ಜಾತಕ, ಷಡ್ದಂತಜಾತಕ, ನಳಗಿರಿ ಎಂಬ ಮದಿಸಿದ ಆನೆಯ ಸೊಕ್ಕನ್ನು ಬುದ್ಧ ಮುರಿದು ಸಾಧುವಾಗಿ ಮಾಡುತ್ತಿರುವ ದೃಶ್ಯ, ಯಶೋಧರೆಯನ್ನು ಸಂಧಿಸುತ್ತಿರುವುದು, ಸುಜಾತೆ ಬೋಧಿಸತ್ತ್ವನಿಗೆ ಆಹಾರ ಕೊಡುತ್ತಿರುವುದು, ಬುದ್ಧನ ಧರ್ಮಬೋಧೆ ಮುಂತಾದವು ಬಹು ಮುಖ್ಯವಾದವು. ಅಮರಾವತಿಯ ಶಿಲ್ಪಿಗಳೇ ಇವನ್ನೂ ಕೆತ್ತಿದರೋ ಎನ್ನುವ ಸಂದೇಹ ಬರುವಷ್ಟು ಮಟ್ಟಿಗೆ ಇವು ಅಲ್ಲಿಯ ಶಿಲ್ಪಗಳನ್ನು ಹೋಲುತ್ತವೆ. ಬೌದ್ಧಸ್ತೂಪವೊಂದಕ್ಕೆ ಸ್ತ್ರೀಯರು ನಮಸ್ಕರಿಸುತ್ತಿರುವ ಶಿಲ್ಪ ಬಹು ರಮ್ಯವಾಗಿದೆ. ಇಲ್ಲಿ ದೊರಕಿರುವ ಚೈತ್ಯಫಲಕದಲ್ಲಿ ಐದು ಆಯಕ ಸ್ತಂಭಗಳು ಮತ್ತು ಅಲಂಕಾರಗಳು ಕಾಣಬರುತ್ತವೆ. ಇದರ ಆಧಾರದ ಮೇಲೆ ಊಹಿಸುವುದಾದರೆ ಗೋಲಿಯ ಸ್ತೂಪವೂ ಆಯಕ ಸ್ತಂಭಗಳನ್ನೊಳಗೊಂಡು ಅಲಂಕಾರಯುತವಾಗಿದ್ದಿರಬೇಕೆಂದು ಹೇಳಬಹುದು. ಶಿಲ್ಪ ಫಲಕಗಳಲ್ಲಿ ವಿಶೇಷವಾಗಿ ಆಕರ್ಷಿಸುವುದೆಂದರೆ ಅವುಗಳಲ್ಲಿಯ ಪ್ರಾಣಿಗಳ ಚಿತ್ರಗಳು. ಹಸು, ಕುದುರೆ, ಆನೆ, ಮೊಲ, ಹಂಸ, ಎತ್ತು ಮುಂತಾದ ಪ್ರಾಣಿಗಳು ಚೆನ್ನಾಗಿ ಶಿಲ್ಪಿತವಾಗಿವೆ. (ಎ.ವಿ.ಎನ್.)

**ಗೋಲಿಹೇನು :** ಕ್ರಸ್ಟೇಸಿಯ ವರ್ಗದ ಐಸಾಪೊಡ ಗಣಕ್ಕೆ ಸೇರಿದ ಒಂದು ನೆಲವಾಸಿ ಪ್ರಾಣಿ. ಇದನ್ನು ಮುಟ್ಟಿದಾಗ ಗುಂಡಗೆ ಗೋಲಿಯಂತೆ ಸುತ್ತಿಕೊಳ್ಳುವುದರಿಂದ ಇದಕ್ಕೆ ಈ ಹೆಸರು ಬಂದಿದೆ. ಆರ್ಮಡಿಲಿಡಿಯಂ ವಲ್ಗೇರ್ ಇದರ ಶಾಸ್ತ್ರೀಯ ನಾಮ. ಸಾಮಾನ್ಯ ಬಳಕೆಯ ಇಂಗ್ಲಿಷಿನಲ್ಲಿ ಇದಕ್ಕೆ ವುಡ್ ಲೌಸ್, ಪಿಲ್‌ಬಗ್ ಎಂಬ ಹೆಸರುಗಳಿವೆ.



ಗೋಲಿಹೇನುಗಳು : ಎಡಗಡೆಯದು ಗಂಡು, ಬಲಗಡೆಯದು ಹೆಣ್ಣು

ಇದೇ ಗಣಕ್ಕೆ ಸೇರಿದ ಏಸೆಲಸ್ ಕಮ್ಯೂನಿಸ್, ಪಾರ್ಸೆಲಿಯೋ ಸ್ಕೇಬರ್, ಲಿಮ್ನೋರಿಯ ಲಿಗ್ನೋರಂ ಮುಂತಾದವುಗಳಿಗೂ ಗೋಲಿಹೇನು ಎಂಬ ಹೆಸರೇ ಇದೆ. ಕಪ್ಪುಬಣ್ಣದ ಮತ್ತು ಮೇಲಿನಿಂದ ಕೆಳಕ್ಕೆ ಚಪ್ಪಟೆಯಾಗಿರುವ ದೇಹ, ಮೋಟಾದ ಉದರ ಭಾಗ ಮತ್ತು ಆಂಟೆನೀಗಳು–ಇವು ಗೋಲಿಹೇನಿನ ಮುಖ್ಯ ಲಕ್ಷಣಗಳು. ಇದು ಮನೆಯಲ್ಲಿ ತೇವ ಹೆಚ್ಚಾಗಿರುವ ಸ್ಥಳಗಳಲ್ಲಿ, ಒಟ್ಲುಪಾತಿ ಮತ್ತು ಗಾಜಿನ ಮನೆಗಳಲ್ಲಿ ಬೆಳೆಸುವ ಸಸ್ಯಗಳ ಬಳಿ ವಾಸಿಸುತ್ತದೆ; ಬೇರುಗಳನ್ನು ಮತ್ತು ತುಂಬ ಎಳೆಯ ಸಸಿಗಳ ಕಾಂಡಗಳನ್ನು ತಿಂದು ಬದುಕುತ್ತದೆ. ಇದರಿಂದ ಕೆಲವೊಮ್ಮೆ ಪಿಡುಗಾಗುವುದುಂಟು.

5 ಭಾಗ ಸಕ್ಕರೆ 1 ಭಾಗ ಪ್ಯಾರಿಸ್ ಗ್ರೀನ್ ಇರುವ ಮಿಶ್ರಣವನ್ನು ಅಥವಾ ಶೇ. 2 ಕ್ಲೋರ್ಡೇನ್ ಪುಡಿಯನ್ನು ದೂಳಿಸುವುದರಿಂದ ಇಲ್ಲವೆ ಪ್ಯಾರಥಿಯಾನನ್ನು ಒಂದು ಗ್ಯಾಲನ್ ನೀರಿಗೆ ಒಂದು ಟೀ ಚಮಚದಷ್ಟು ಪ್ರಮಾಣದಲ್ಲಿ ಸೇರಿಸಿ ಸಿಂಪಡಿಸುವುದರಿಂದ ಗೋಲಿಹೇನನ್ನು ನಿಯಂತ್ರಿಸಬಹುದು. (ಪಿ.ಎಂ.)

**ಗೋಲ್ಕೊಂಡ :** ಹೈದರಾಬಾದ್ ನಗರದ ಪಶ್ಚಿಮಕ್ಕೆ 11 ಕಿಮೀ ದೂರದಲ್ಲಿರುವ ಐತಿಹಾಸಿಕ ಸ್ಥಳ. 1518–1687ರ ವರೆಗೆ ಇದು ಕುತುಬ್‌ಶಾಹಿ ಸುಲ್ತಾನರು ಕಟ್ಟಿ ಆಳಿದ ಗೋಲ್ಕೊಂಡ ರಾಜ್ಯದ ರಾಜಧಾನಿಯಾಗಿತ್ತು.

ಗೋದಾವರಿ ನದಿಯ ಕೆಳದಂಡೆಯ ಪ್ರದೇಶದಲ್ಲಿ ಬಂಗಾಳಕೊಲ್ಲಿಯ ವರೆಗೆ ವ್ಯಾಪಿಸಿದ್ದ ರಾಜ್ಯಕ್ಕೆ ಗೋಲ್ಕೊಂಡವೆಂಬ ಹೆಸರಿತ್ತು. ಕಾಕತೀಯರ ರಾಜ್ಯದ ಭಾಗವಾಗಿದ್ದ ಈ ಪ್ರದೇಶವನ್ನು ಅಲ್ಲಾವುದ್ದೀನ್ ಖಿಲ್ಜಿ 1310ರಲ್ಲಿ ಆಕ್ರಮಿಸಿಕೊಂಡಿದ್ದ. ಇದು 1424–25 ರವರೆಗೆ ಸ್ವತಂತ್ರ ಅಸ್ತಿತ್ವ ಹೊಂದಿದ್ದಾಗ ಬಹಮನಿಗಳ ವಶವಾಯಿತು. ಬಹಮನಿ ರಾಜ್ಯದ ಪೂರ್ವ ಪ್ರಾಂತಕ್ಕೆ ವಾರಂಗಲ್ ರಾಜಧಾನಿಯಾಗಿತ್ತು. ಈ ಪ್ರಾಂತದ ಅಧಿಕಾರಿಯಾಗಿದ್ದ ಕುಲಿ ಕುತುಬ್ ಷಾ 1512ರಲ್ಲಿ ಸ್ವತಂತ್ರ ಸುಲ್ತಾನನಾದ. ಗೋಲ್ಕೊಂಡ ಅವನ ರಾಜಧಾನಿಯಾಯಿತು. 1687ರಲ್ಲಿ ಈ ರಾಜ್ಯವನ್ನು ಔರಂಗಜೇಬ್ ಗೆದ್ದುಕೊಂಡ. ಗೋಲ್ಕೊಂಡ ಮೊಗಲ್ ಚಕ್ರಾಧಿಪತ್ಯದ ಭಾಗವಾಯಿತು. ಗೋಲ್ಕೊಂಡದ ಬಳಿ ಸಿಕ್ಕುತ್ತಿದ್ದ ವಜ್ರಗಳಿಂದಾಗಿ ಅದು ಇತಿಹಾಸದಲ್ಲಿ ಪ್ರಸಿದ್ಧವಾಗಿದೆ.



ಅರಸು ಮನೆತನದ ಗೋರಿಗಳನ್ನೊಳಗೊಂಡ ಮಸೀದಿಯ ಒಂದು ಮಿನಾರ್

ಗೋಲ್ಕೊಂಡ ಕೋಟೆ ದಕ್ಷಿಣ ಭಾರತದ ಸುಪ್ರಸಿದ್ಧವಾದ ಹಾಗೂ ಬೃಹತ್ತಾದ ಕೋಟೆಗಳಲ್ಲೊಂದು. 400 ಅಡಿ ಎತ್ತರದ ಗ್ರಾನೈಟ್ ಗುಡ್ಡದ ಮೇಲೆ ಕಟ್ಟಲಾದ, ಸು. 7 ಕಿಮೀ ಸುತ್ತಳತೆಯುಳ್ಳ ಮೂರು ಸುತ್ತಿನ ಈ ಅಭೇದ್ಯ ಕೋಟೆ 8 ದ್ವಾರಗಳಿಂದಲೂ 87 ಕೊತ್ತಳಗಳಿಂದಲೂ ಕೂಡಿದ ಅದ್ಭುತ ನಿರ್ಮಿತಿಯಾಗಿದೆ. ಹೊರಸುತ್ತಿನ ಕೋಟೆಗೋಡೆಯು ಪಟ್ಟಣವನ್ನು ಆವರಿಸಿದ್ದು ಈ ಗೋಡೆಯ ಸುತ್ತಲೂ ಕಂದಕವಿದೆ. ಆಳವಾದ ಕಂದಕದಂಚಿನಲ್ಲಿರುವ ವೃತ್ತ–ಅರೆವೃತ್ತಾಕಾರದ ಎಲ್ಲ ಕೊತ್ತಳಗಳ ಮೇಲೆ ಫಿರಂಗಿಗಳನ್ನು ನೆಲೆಗೊಳಿಸಿದ್ದು, ಅದು ಶತ್ರುಧಾಳಿಗೆ ಕಂಟಕಪ್ರಾಯವಾಗಿತ್ತು. ಮಧ್ಯದ ಸುತ್ತಿನಲ್ಲಿ ಅವಳಿಗೋಡೆಗಳಿದ್ದು ಇವು ಗುಡ್ಡದ



ಕುತುಬ್‌ಶಾಹಿ ಮನೆತನದವರ ಗೋರಿ

ಬುಡಭಾಗವನ್ನು ಸುತ್ತುವರೆದಿವೆ. ಒಳಗಿರುವ ರಾಜ ನಿವಾಸಕ್ಕೆ ಈ ಗೋಡೆಗಳು ಪ್ರಬಲ ರಕ್ಷಣೆಯನ್ನು ಒದಗಿಸಿದ್ದವು. ಒಳಸುತ್ತಿನ ಕೋಟೆಯನ್ನು ಗುಡ್ಡದ ಮೇಲ್ಭಾಗದಲ್ಲಿ, ನೈಸರ್ಗಿಕ ಬಂಡೆಗಳನ್ನು ಬಳಸಿಕೊಂಡು ಅವುಗಳ ರಚನಾಕಾರಗಳಿಗೆ ಅನುಗುಣವಾಗಿ, ಅಲ್ಲಲ್ಲಿ ಕಲ್ಗೋಡೆ ಗಳ ಆಸರೆಯೊಂದಿಗೆ ಕಟ್ಟಲಾಗಿದೆ. 1724ರಲ್ಲಿ ಪಟ್ಟಣದ ವಾಯವ್ಯ ಭಾಗದಲ್ಲಿ

ಹೊರಗೋಡೆಯನ್ನು ವಿಸ್ತರಿಸಿ ನಯಾ ಕಿಲಾವನ್ನು ರಚಿಸ ಲಾಯಿತು. ಗುಡ್ಡದ ಮಧ್ಯಭಾಗದಲ್ಲಿ ಕೆರೆಗಳು, ಮದ್ದಿನ ಮನೆಗಳು, ರಾಜಗೃಹ, ಸಭಾಮಂದಿರ, ಲಾಯ, ಮಸೀದಿ, ಉದ್ಯಾನವನ ಹಾಗೂ ಉಗ್ರಾಣಗಳಿವೆ. ಬುಡಭಾಗದಲ್ಲಿ ರಾಣಿ ನಿವಾಸಗಳೂ ಸೇವಕರ ವಾಸಗೃಹಗಳೂ ಇವೆ. ಕೋಟೆಗೆ ಸ್ವಲ್ಪ ದೂರದಲ್ಲಿ ಕುತುಬ್‌ಶಾಹಿ ದೊರೆಗಳ ಗೋರಿಗಳಿವೆ. ಫತೇಹ್, ಬಹಮನಿ, ಮೆಕ್ಕ, ಪಟನ್‌ಚೆರು, ಬಂಜಾರ, ಜಮಾಲಿ, ನಯಾಕಿಲಾ ಮತ್ತು ಮೋತಿ ಇವು ಎಂಟು ದ್ವಾರಗಳು. ಈ ದ್ವಾರಗಳನ್ನು ಆಯಕಟ್ಟಿನ ಸ್ಥಳಗಳಲ್ಲಿ ಇಡಲಾಗಿದ್ದು ಒಂದು ದ್ವಾರದಲ್ಲಿ ನಿಂತು ಚಪ್ಪಾಳೆ ತಟ್ಟಿದರೆ ಅದರ ಶಬ್ದ ಪ್ರತಿಫಲನಗೊಂಡು ಮತ್ತೊಂದು ದ್ವಾರದ ವರೆಗೆ ತಲುಪುವುದು. ಹೀಗೆ ಸೂಚನೆಗಳನ್ನು ಹೊರದ್ವಾರದಿಂದ ಗುಡ್ಡದ ತುತ್ತತುದಿಯ ವರೆಗೆ ಇತರರಿಗೆ ಕೇಳದ ರೀತಿಯಲ್ಲಿ ವರ್ಗಾಯಿಸುವಂತೆ ಈ ಕೋಟೆಯನ್ನು ನಿರ್ಮಿಸಿರುವುದು ಆ ಕಾಲದ ತಂತ್ರಜ್ಞರ ವಾಸ್ತುಕೌಶಲ್ಯಕ್ಕೆ ಅನುಪಮ ಉದಾಹರಣೆಯಾಗಿದೆ. ಬ್ರಿಟಿಷ್ ಅಧಿಕಾರಿ ಸರ್ ಥಾಮಸ್ ಮನ್ರೋ ಈ ಕೋಟೆಯನ್ನು ವಜ್ರದ ಗಣಿ, ರತ್ನಗರ್ಭವೆಂದು ಕರೆದಿದ್ದಾನೆ.

ಗೋಲ್ಕೊಂಡ ಕೋಟೆ ಈಗ ಜನಪ್ರಿಯ ಪ್ರವಾಸೀ ತಾಣವಾಗಿದ್ದು ಇತ್ತೀಚೆಗೆ ಈ ಕೋಟೆಯಲ್ಲಿ ಬೆಳಕು ಹಾಗೂ ಶ್ರಾವ್ಯ ಪ್ರದರ್ಶನವನ್ನು (ಲೈಟ್ ಅಂಡ್ ಸೌಂಡ್) ಪ್ರವಾಸಿಗರಿಗಾಗಿ ಏರ್ಪಡಿಸಲಾಗಿದೆ. (ಜಿ.ಆರ್.ಆರ್.)

**ಗೋಲ್ಕೊಂಡ ವಜ್ರಗಳು :** ಗೋಲ್ಕೊಂಡದ ವಜ್ರಗಳು ಇತಿಹಾಸದಲ್ಲಿ ಪ್ರಸಿದ್ಧಿ ಪಡೆದಿವೆ. ಗೋಲ್ಕೊಂಡ ನಗರದ ಬಳಿಯಲ್ಲೇ ವಜ್ರಗಳ ಗಣಿಗಳು ಇಲ್ಲದಿದ್ದರೂ ಬಹುಶಃ ಇದು ವಜ್ರಗಳ ಮಾರುಕಟ್ಟೆಯಾಗಿದ್ದು, ಬೆಲೆಬಾಳುವ ಹಲವಾರು ವಜ್ರಗಳು ಇಲ್ಲಿಂದ ಹೊರಕ್ಕೆ ಹೋಗಿದ್ದಿರಬೇಕು. ಗೋಲ್ಕೊಂಡ ಸಂಸ್ಥಾನದಲ್ಲಿ, ಸುತ್ತಮುತ್ತಲ ಹಲವಾರು ಕಡೆಗಳಲ್ಲಿ ವಜ್ರದ ಗಣಿಗಳಿದ್ದುವು.

ಉತ್ತರದಲ್ಲಿ ಗೋದಾವರಿ ನದಿಯಿಂದ ದಕ್ಷಿಣದಲ್ಲಿ ಪೆನ್ನಾರ್ ನದಿಯವರೆಗೆ ಹಬ್ಬಿದ್ದ ಗೋಲ್ಕೊಂಡ ಸಂಸ್ಥಾನದ ದಕ್ಷಿಣ ಜಿಲ್ಲೆಗಳಲ್ಲೇ ಹೆಚ್ಚು ಗಣಿಗಳಿದ್ದವು. ಕೃಷ್ಣಾ ನದಿಯ ಉದ್ದಕ್ಕೂ ಹಲವಾರು ಕಡೆ ಚರಿತ್ರಾರ್ಹವಾದ ಅನೇಕ ವಜ್ರಗಳು ಸಿಕ್ಕಿದ್ದುವು. ಗೋಲ್ಕೊಂಡದ ವಜ್ರಗಣಿಗಳಲ್ಲಿ 60,000 ಜನರನ್ನು ಕೆಲಸಕ್ಕೆ ನೇಮಿಸಿದ್ದರೆಂದು ಭಾರತದಲ್ಲಿ ಸಂಚರಿಸಿದ ಫ್ರೆಂಚ್ ವ್ಯಾಪಾರಿ ಜೆ.ಬಿ.ಟ್ಯಾವರ್ನಿಯರ್ 1665ರಲ್ಲಿ ಬರೆದಿದ್ದಾನೆ.

ಗೋಲ್ಕೊಂಡ ಸಂಸ್ಥಾನದ ಗಣಿಗಳಿಂದ ಬಂದ ಪ್ರಖ್ಯಾತ ವಜ್ರಗಳು ಇವು :

1. ಜಗತ್ಪ್ರಸಿದ್ಧವಾದ ಕೋಹಿನೂರ್ ವಜ್ರ ಕೃಷ್ಣಾ ನದಿಯ ಪಕ್ಕದಲ್ಲಿದ್ದ ಕೊಲ್ಲೂರು ಗಣಿಗಳಿಂದ (ಗುಂಟೂರು ಜಿಲ್ಲೆ) ಬಂದದ್ದು. ಈ ವಜ್ರ 1739ರ ವರೆಗೂ ಮೊಗಲ್ ಚಕ್ರವರ್ತಿಗಳ ಬಳಿ ಇತ್ತು. ಅನಂತರ ಇದು ಬ್ರಿಟಿಷ್ ಈಸ್ಟ್ ಇಂಡಿಯ ಕಂಪನಿಗೆ ಸೇರಿತು. ಆ ಕಂಪನಿ 1849ರಲ್ಲಿ ಇದನ್ನು ವಿಕ್ಟೋರಿಯ ರಾಣಿಗೆ ಒಪ್ಪಿಸಿತು. ಇದರ ತೂಕ ಆಗ ಸುಮಾರು 186 ಕ್ಯಾರಟ್. ಕಟ್ಟಡ ಚೆನ್ನಾಗಿಲ್ಲದಿದ್ದುದರಿಂದ 1852ರಲ್ಲಿ ಆಮ್‌ಸ್ಟರ್‌ಡ್ಯಾಮಿನಲ್ಲಿ ಇದಕ್ಕೆ ಮತ್ತೆ ಸಾಣೆ ಹಿಡಿಸಲಾಯಿತು. ಇದರ ತೂಕ 105.6 ಕ್ಯಾರಟ್‌ಗಳಿಗೆ ಇಳಿಯಿತು. ಈಗ ಇದು ಬ್ರಿಟಿಷ್ ರಾಜ ಮನೆತನದ ಹಕ್ಕಿನಲ್ಲಿದ್ದು ವಿಂಡ್ಸರ್ ಅರಮನೆಯಲ್ಲಿ ಇದನ್ನು ಇಡಲಾಗಿದೆ (**ನೋಡಿ–ಕೋಹಿನೂರ್**).

2. ಪಿಟ್ ಅಥವಾ ರೀಜೆಂಟ್ ಈಗ ಪ್ರಪಂಚದಲ್ಲಿರುವ ಶ್ರೇಷ್ಠ ವಜ್ರಗಳಲ್ಲೊಂದು. ಇದು 1701ರಲ್ಲಿ ಕೃಷ್ಣಾ ನದಿಯ ಉತ್ತರಭಾಗದಲ್ಲಿ ಗೋಲ್ಕೊಂಡಕ್ಕೆ 46 ಕಿಮೀ ದೂರದಲ್ಲಿ ಸಿಕ್ಕಿತು. ಅನಂತರ ಇದು ಜಾನ್‌ಚಂದ್ ಎಂಬ ವರ್ತಕನ ಕೈಸೇರಿತು. ಆಗ ಮದರಾಸಿನ ಗವರ್ನರ್ ಆಗಿದ್ದ ಥಾಮಸ್‌ಪಿಟ್ ಇದನ್ನು 3 ಲಕ್ಷ ರೂಪಾಯಿಗಳಿಗೆ ಕೊಂಡ. ಆಗ ಇದರ ತೂಕ 410 ಕ್ಯಾರಟ್. ಇದನ್ನು ಮತ್ತೆ ಸಾಣೆ ಹಿಡಿಸಿ ಮೆರಗು ಕೊಟ್ಟ ಅನಂತರ ಇದರ ತೂಕ 140.64 ಕ್ಯಾರಟುಗಳಿಗೆ ಇಳಿಯಿತು. 1717 ರಲ್ಲಿ ಫ್ರಾನ್ಸಿನ ರೀಜೆಂಟ್ ಆಗಿದ್ದ ಆರ್‌ಲೀನ್ಸ್‌ನ ಡ್ಯೂಕನಿಗೆ 20 ಲಕ್ಷ ರೂಪಾಯಿಗಳಿಗೆ ಪಿಟ್ ಇದನ್ನು ಮಾರಿದ. ಅನಂತರ ಈ ವಜ್ರಕ್ಕೆ ರೀಜೆಂಟ್ ಎಂಬ ಹೆಸರು ಬಂತು. 1722ರಲ್ಲಿ 15ನೆಯ ಲೂಯಿ ತನ್ನ ಕಿರೀಟಧಾರಣ ಮಹೋತ್ಸವದಲ್ಲಿ ಈ ವಜ್ರವನ್ನು ಧರಿಸಿದ್ದ. ಈಗ ಇದು ಫ್ರೆಂಚ್ ರಾಜರ ಅರಮನೆಯಲ್ಲಿದೆ.

3. ದಿ ಗ್ರೇಟ್ ಮೊಗಲ್ ವಜ್ರ ಭಾರತದಲ್ಲಿ ಸಿಕ್ಕಿರುವ ವಜ್ರಗಳಲ್ಲೆಲ್ಲ ಅತ್ಯಂತ ದೊಡ್ಡದು. ಕೊಲ್ಲೂರು ಗಣಿಗಳಲ್ಲಿ ಸುಮಾರು 1650ರಲ್ಲಿ ಈ ವಜ್ರ ಸಿಕ್ಕಿತು. 1655 ರಲ್ಲಿ ಶಹಜಹಾನ್ ಚಕ್ರವರ್ತಿಯ ಕೈಸೇರಿತು. ಆಗ ಇದರ ತೂಕ 787.5 ಕ್ಯಾರಟ್; ಸಾಣೆ ಹಿಡಿಸಿದ ಅನಂತರ ಇದು 280 ಕ್ಯಾರಟುಗಳಿಗೆ ಇಳಿಯಿತು. ಟ್ಯಾವರ್ನಿಯರ್ 1665ರಲ್ಲಿ ಇದನ್ನು ಔರಂಗಜೇಬನ ಅರಮನೆಯಲ್ಲಿ ನೋಡಿದ್ದುದಾಗಿ ಹೇಳಿದ್ದಾನೆ. ಅನಂತರ ಇದು ಎಲ್ಲಿಗೆ ಹೋಯಿತೆಂಬುದನ್ನು ತಿಳಿಯಲಾಗಿಲ್ಲ. ಇದನ್ನು ನಾದಿರ್ ಷಾ ಪರ್ಷಿಯಕ್ಕೆ ಕೊಂಡೊಯ್ದನೆಂದೂ ಈಗಲೂ ಅಲ್ಲೇ ಇರಬೇಕೆಂದೂ ಕೆಲವರ ಊಹೆ. ಈ ವಜ್ರವನ್ನು ಒಡೆದು ಕೋಹಿನೂರ್ ಮತ್ತು ಓರ್‌ಲಾಫ್ ಎಂಬ ಎರಡು ವಜ್ರಗಳನ್ನು ಪಡೆದರೆಂಬುದು ಇನ್ನು ಕೆಲವರ ಊಹೆ.

4. ನಿಜಾಂ ಎಂಬ ವಜ್ರವೂ ಗೋಲ್ಕೊಂಡ ಗಣಿಗಳಲ್ಲಿ ಸಿಕ್ಕಿದ್ದು. ಇದರ ಈಗಿನ ತೂಕ 277 ಕ್ಯಾರಟ್. ಇದು ಇನ್ನೂ ಹೆಚ್ಚಿತ್ತೆಂದು ಕೆಲವರ ಅಭಿಪ್ರಾಯ. ಈಗ ಈ ವಜ್ರ ಹೈದರಾಬಾದಿನ ನಿಜಾಂ ವಂಶದವರ ವಶದಲ್ಲಿದೆ. ಇದು ಇನ್ನೂ ದೊಡ್ಡದಾಗಿತ್ತೆಂದೂ 1857ರ ಬಂಡಾಯದ ಕಾಲದಲ್ಲಿ ಇದು ಸ್ವಲ್ಪ ಮುರಿಯಿತೆಂದೂ ಹೇಳುತ್ತಾರೆ.

5. ಯೂಜಿನೀ ಒಂದು ಸಣ್ಣ ವಜ್ರವಾದರೂ ಸೊಗಸಾದ್ದು. ಇದರ ತೂಕ 51 ಕ್ಯಾರಟ್. ಈಗ ಇದು ಬರೋಡದ ಗಾಯಕವಾಡರ ವಂಶಸ್ಥರ ಬಳಿ ಇದೆ. ಇದರ ಪೂರ್ವ ವೃತ್ತಾಂತ ಸರಿಯಾಗಿ ಗೊತ್ತಿಲ್ಲ. ವಜ್ರಕರೂರ್ ಪ್ರದೇಶದಲ್ಲಿ ಇದು ಒಬ್ಬ ರೈತನಿಗೆ ಸಿಕ್ಕಿತೆಂಬುದು ಒಂದು ಕಥೆ. ತನ್ನ ನೇಗಿಲನ್ನು ಸರಿಮಾಡಿದ ಕಮ್ಮಾರನಿಗೆ ಅವನು ಇದನ್ನು ಕೊಟ್ಟ. ಆತ ಮದರಾಸಿನಲ್ಲಿ ವರ್ತಕನೊಬ್ಬನಿಗೆ 6000 ರೂಪಾಯಿಗಳಿಗೆ ಮಾರಿದ. ಆ ವರ್ತಕನಿಂದ 3ನೆಯ ನೆಪೋಲಿಯನ್ ಕೊಂಡನೆಂದು ಪ್ರತೀತಿ. ಇದು ಮೊದಲು ರಷ್ಯದಲ್ಲಿ 2ನೆಯ ಕ್ಯಾಥರೀನ್ ಬಳಿ ಇತ್ತೆಂದು ಇನ್ನೊಂದು ಕಥೆಯಿದೆ. ಆಕೆ ತನ್ನ ಆಪ್ತನಾದ ಪೊಟೆಮ್‌ಕಿನನಿಗೆ ಇದನ್ನು ಕೊಟ್ಟಳು. ಕೊನೆಗೆ 3ನೆಯ ನೆಪೋಲಿಯನ್ ಇದನ್ನು ಕೊಂಡು ತನ್ನ ರಾಣಿಯಾದ ಯೂಜಿನೀಗೆ ಅರ್ಪಿಸಿದ. ಆದ್ದರಿಂದ ಇದಕ್ಕೆ ಈ ಹೆಸರು ಬಂದಿದೆ. ಕೊನೆಗೆ ಬರೋಡದ ಗಾಯಕವಾಡರು ಇದನ್ನು ಕೊಂಡರು.

6. ದಿ ಹೋಪ್ ಸೊಗಸಾದ ನೀಲಿಬಣ್ಣದ ಕಮಲ. ತೂಕ 112.25 ಕ್ಯಾರಟ್ ಇತ್ತು. ಬಣ್ಣದ ವಜ್ರಗಳಲ್ಲಿ ಇದೇ ದೊಡ್ಡದು. ಇದು ಕೊಲ್ಲೂರು ಗಣಿಗಳಲ್ಲಿ ಸಿಕ್ಕಿತು. 1642ರಲ್ಲಿ ಟ್ಯಾವರ್ನಿಯರ್ ಇದನ್ನು ಕೊಂಡು, 1668ರಲ್ಲಿ 14ನೆಯ ಲೂಯಿಗೆ ಮಾರಿದ. ಸಾಣೆ ಹಿಡಿಸಿದ ಅನಂತರ ಇದರ ತೂಕ $67^{1}/_{8}$ ಕ್ಯಾರಟಿಗೆ ಇಳಿಯಿತು. 1762ರಿಂದ 1830ರ ವರೆಗೆ ಇದು ಮಾಯವಾಗಿತ್ತು. ಲಂಡನಿನ ಥಾಮಸ್ ಹೋಪ್ ಎಂಬ ಸಾಹುಕಾರ 1830ರಲ್ಲಿ ಇದನ್ನು ಏಲೇಸನ್ ಎಂಬ ವರ್ತಕನಿಂದ 2,70,000 ರೂಪಾಯಿಗಳಿಗೆ ಕೊಂಡ. ಅಂದಿನಿಂದ ಈ ವಜ್ರಕ್ಕೆ ದಿ ಹೋಪ್ ಎಂದು ಹೆಸರು ಬಂತು. ಇದರ ತೂಕ 45.52 ಕ್ಯಾರಟ್ ಇದ್ದುದರಿಂದ ಲೂಯಿಯ ಬಳಿ ಇದ್ದದ್ದು ಈ ವಜ್ರವೋ ಬೇರೆಯೋ ಎಂಬ ಸಂದೇಹ ತಲೆದೋರಿತು. ಇದೇ ಬಣ್ಣದ ಎರಡು ವಜ್ರಗಳು ಸಿಕ್ಕಿವೆ. ಇವುಗಳಲ್ಲಿ ಒಂದು ಹೋಪ್ ವಜ್ರದ ಒಡೆದ ಭಾಗಕ್ಕೆ ಸರಿಯಾಗಿ ಹೊಂದಿಕೊಳ್ಳುತ್ತದೆ. ಈ ಮೂರರ ತೂಕ 67 ಕ್ಯಾರಟ್ ಆಗುವುದರಿಂದ ಯಾರೋ ದೊಡ್ಡ ನೀಲಿವಜ್ರವನ್ನು ತುಂಡು ಮಾಡಿರಬೇಕೆಂದು ಊಹಿಸಲಾಗಿದೆ. ಇದು ಹಲವಾರು ಬಾರಿ ಮಾರಾಟವಾಗಿ, ಹೋದ ಕಡೆಯಲ್ಲೆಲ್ಲ ದುರದೃಷ್ಟಕರವೆಂಬ ಹೆಸರು ಸಂಪಾದಿಸಿದ್ದರೂ ಇದರ ಮೇಲಿನ ವ್ಯಾಮೋಹ ಮಾತ್ರ ಕಡಿಮೆಯಾಗಿಲ್ಲ. ಈಗ ಇದು ವಾಷಿಂಗ್‌ಟನ್ನಿನ ಸ್ಮಿತ್‌ಸೋನಿಯನ್ ನ್ಯಾಚುರಲ್ ಹಿಸ್ಟರಿ ಮ್ಯೂಸಿಯಂನಲ್ಲಿದೆ.

ಇವಲ್ಲದೆ ಇನ್ನೂ ಹಲವು ಉತ್ತಮ ವಜ್ರಗಳು ಗೋಲ್ಕೊಂಡದ ಗಣಿಗಳಲ್ಲಿ ಸಿಕ್ಕಿದ್ದು, ಅವು ರಾಜರಲ್ಲಿ ಮತ್ತು ಶ್ರೀಮಂತರಲ್ಲಿ ಸೇರಿರಬಹುದು. (ಎಂ.ಎನ್.ಎಂ.)

**ಗೋಲ್ಡ್‌ಸ್ಟೈನ್, ಯೂಜೆನ್ :** 1850–1930. ಜರ್ಮನಿಯ ಭೌತವಿಜ್ಞಾನಿ. ಮೊದಲು ಬರ್ಲಿನ್ ವಿಶ್ವವಿದ್ಯಾಲಯದಲ್ಲಿ ಕೆಲಸಮಾಡಿದ. ಹಲವು ವರ್ಷಗಳ ಬಳಿಕ ಆ ಹುದ್ದೆಯನ್ನು ತೊರೆದು ತನ್ನದೇ ಆದ ಒಂದು ಸಂಶೋಧನಾಲಯವನ್ನು ಸ್ಥಾಪಿಸಿ ಅಲ್ಲಿ ಅನಿಲಗಳ ಮೂಲಕವೂ ನಿರ್ವಾತದಲ್ಲಿಯೂ ಆಗುವ ವಿದ್ಯುದ್ವಿಸರ್ಜನೆಯ ಬಗ್ಗೆ ಅಧ್ಯಯನ ನಡೆಸಿದ. ನಿರ್ವಾತ ವಿಸರ್ಜನ ನಳಿಕೆಯಲ್ಲಿ ವಿದ್ಯುತ್ತನ್ನು ವಿಸರ್ಜಿಸಿದಾಗ ಋಣಧ್ರುವದ (ಕ್ಯಾಥೋಡ್) ಬಳಿ ಸಂದೀಪ್ತಿ (ಲ್ಯೂಮಿನಿಸೆನ್ಸ್) ಉಂಟಾಗುವುದನ್ನು ಗಮನಿಸಿದ. ಈ ಪರಿಣಾಮವನ್ನು ಎರಡು ದಶಕಗಳ ಹಿಂದೆಯೇ ಪ್ಲುಕರ್ ಎಂಬ ವಿಜ್ಞಾನಿ ಗಮನಿಸಿದ್ದನಾದರೂ (**ನೋಡಿ– ಪ್ಲುಕರ್, ಜೂಲಿಯಸ್**) ಇದನ್ನು ಋಣವಿದ್ಯುತ್ ಕಿರಣವೆಂದು (ಕ್ಯಾಥೋಡ್ ರೇ) ಹೆಸರಿಸಿದಾತ ಗೋಲ್ಡ್‌ಸ್ಟೈನ್ (1876). ವಿದ್ಯುದ್ವಿಸರ್ಜನ ನಳಿಕೆಯಲ್ಲಿನ ಸರಂಧ್ರಋಣಧ್ರುವಫಲಕದ ರಂಧ್ರಗಳ ಮೂಲಕ ಋಣವಿದ್ಯುತ್ ಕಿರಣಗಳ ವಿರುದ್ಧ ದಿಶೆಯಲ್ಲಿ ಚಲಿಸುವ ಕಿರಣಗಳನ್ನು 1886ರಲ್ಲಿ ಈತ ಗಮನಿಸಿ ಇವನ್ನು ಕೆನಾಲ್‌ಸ್ಟ್ರಹ್ಲನ್ (ಚ್ಯಾನಲ್ ರೇಸ್ ಅಥವಾ ಕೆನಾಲ್ ರೇಸ್) ಎಂದು ಹೆಸರಿಸಿದ. ಇದೇ ಕಿರಣಗಳ ಬಗ್ಗೆ ಜೆ.ಜೆ. ಥಾಮ್ಸನ್ ಅಧ್ಯಯನ ನಡೆಸಿ ಇವುಗಳಿಗೆ ಧನವಿದ್ಯುತ್ ಕಿರಣಗಳೆಂದು (ಪಾಸಿಟಿವ್ ರೇಸ್) ಹೆಸರಿಟ್ಟ. ಈ ಕಿರಣಗಳ ಅಧ್ಯಯನದಿಂದ ರುದರ್ಫರ್ಡ್ ಪ್ರೋಟಾನಿನ ಅಸ್ತಿತ್ವವನ್ನು ಪತ್ತೆಹಚ್ಚಿದ. (ಸಿ.ಟಿ.ಎಸ್.)

**ಗೋಲ್ಡನ್ ಬೋ, ದಿ :** ಇಂಗ್ಲೆಂಡಿನ ಸುಪ್ರಸಿದ್ಧ ಮಾನವವಿಜ್ಞಾನಿ ಸರ್ ಜೇಮ್ಸ್ ಜಾರ್ಜ್ ಫ್ರೇಜರ್‌ನಿಂದ (1854–1941) ಇಪ್ಪತ್ತನೆಯ ಶತಮಾನದ ಆರಂಭದಲ್ಲಿ (1890–1915) ರಚಿತವಾದ ಹನ್ನೆರಡು ಸಂಪುಟಗಳನ್ನುಳ್ಳ ಖ್ಯಾತ ಕೃತಿ (ಫ್ರೇಜರ್ 1936ರಲ್ಲಿ ರಚಿಸಿದ ಆಫ್ಟರ್‌ಮಾತ್ ಎಂಬ ಅನುಬಂಧವೂ ಸೇರಿದರೆ ಹದಿಮೂರು ಸಂಪುಟಗಳಾಗುತ್ತವೆ). ಇದು ಮಾನವವಿಜ್ಞಾನ, ಜಾನಪದ, ಪುರಾಣ, ವಿಜ್ಞಾನ, ಧರ್ಮ

ಇವೆಲ್ಲವನ್ನೂ ಒಳಗೊಂಡಿದ್ದು ಜನಪದ ಜೀವನವನ್ನು ಅರ್ಥವಿಸುವಲ್ಲಿ, ನಂಬಿಕೆಗಳನ್ನು ವಿಶ್ಲೇಷಿಸುವಲ್ಲಿ ಆಚಾರ್ಯ ಕೃತಿ ಎಂಬ ಗೌರವಕ್ಕೆ ಪಾತ್ರವಾಗಿದ್ದು, ಫ್ರೇಜ಼ರನಿಗೆ ವಿಶೇಷವಾದ ಗೌರವ ಹಾಗೂ ಕೀರ್ತಿಯನ್ನು ತಂದುಕೊಟ್ಟಿತು. ಮುಖ್ಯವಾಗಿ ಇದರಲ್ಲಿ ಕುಲದೇವತಾಪದ್ಧತಿಗಳು ವಿಧಿನಿಷೇಧಗಳು ಮೊದಲಾದ ವಿಷಯಗಳ ಆಳವಾದ ವಿಶ್ಲೇಷಣೆಯಿದೆ. ಇಟಲಿ ದೇಶದಲ್ಲಿ ನೆಮಿ ಎಂಬ ಸರೋವರ ದಂಡೆಯ ಮೇಲಿನ ತೋಪಿನಲ್ಲಿನ ಡಯಾನ ದೇವತೆಯ ಪೂಜಾರಿಯ ಸ್ಥಾನವನ್ನು ಗಳಿಸಬೇಕೆಂದು ಬಯಸುವ ವ್ಯಕ್ತಿ ಅಧಿಕಾರದಲ್ಲಿದ್ದ ಪೂಜಾರಿಯನ್ನು ಕೊಲ್ಲಬೇಕಾಗಿತ್ತು. ಕೊಲ್ಲುವ ಮೊದಲು ಅದೇ ತೋಪಿನಲ್ಲಿನ ಮರವೊಂದರ ಮೇಲೆ ಬೆಳೆದಿದ್ದ ಬಂದಳಿಕೆಯಂಥ ಕೊಂಬೆಯನ್ನು ಕತ್ತರಿಸಬೇಕಾಗಿತ್ತು. ಈ ಕೊಂಬೆ ವರ್ಜಿಲನ ಈನಿಯಡ್ ಮಹಾಕಾವ್ಯದಲ್ಲಿ ಬರುವ ಗೋಲ್ಡನ್ ಬೋ ಅಥವಾ ಚಿನ್ನದ ಕೊಂಬೆ ಐತಿಹ್ಯವನ್ನು ನೆನಪಿಗೆ ತರುವಂತಿತ್ತು. ಫ್ರೇಜ಼ರನಿಗೆ ಈ ವಿಲಕ್ಷಣ ಸಂಪ್ರದಾಯದ ರಹಸ್ಯವನ್ನು ಭೇದಿಸುವ ಕುತೂಹಲವುಂಟಾಯಿತು. ಈ ಉದ್ದೇಶದಿಂದ ಈತ ನಡೆಸಿದ ಹದಿನೈದು ವರ್ಷಗಳ ಸಂಶೋಧನೆಯ ಫಲವೇ ಈ ಮಹತ್ಕೃತಿ. ಈ ಕೃತಿಗೆ ಗೋಲ್ಡನ್ ಬೋ ಎಂಬ ಹೆಸರು ಬರಲು ಇದೇ ಕಾರಣ. ಮೊದಲು ಈ ಸಂಬಂಧವಾಗಿ ಒಂದು ಚಿಕ್ಕ ಪ್ರಬಂಧ ಬರೆಯಬೇಕೆಂಬ ಉದ್ದೇಶ ಹೊಂದಿದ್ದ ಫ್ರೇಜ಼ರ್ ಈ ವಿಷಯಕ್ಕೆ ಪೋಷಕವಾಗಿ ಬರುವ ಧರ್ಮ, ಮಾಟ, ಬಲಿ, ರಾಜತ್ವದ ಉಗಮ, ನಿಷಿದ್ಧಗಳು, ಬೆಂಕಿಯ ಹಬ್ಬಗಳು, ಫಲಶಕ್ತಿವಿಧಿಗಳು ಮತ್ತು ಆ ಸಂಬಂಧವಾದ ದೇವತೆಯ ವಿಷಯ–ಈ ಮೊದಲಾದ ಸಂಗತಿಗಳನ್ನು ಪ್ರಪಂಚದ ವಿವಿಧ ಭಾಗಗಳಿಂದ ಆರಿಸಿದ ಹೇರಳವಾದ ಉದಾಹರಣೆಗಳ ಸಮೇತ ನೋಡಬೇಕಾಗಿ ಬಂತು. ಹೀಗಾಗಿ ಒಂದು ಸಣ್ಣ ಪ್ರಬಂಧವಾಗಬೇಕಾಗಿದ್ದ ಕೃತಿ ಹದಿಮೂರು ಸಂಪುಟಗಳ ವಿಸ್ತಾರವಾದ, ವಿದ್ವತ್‍ಪೂರ್ಣ ಕೃತಿಯಾಗಿ ಪರಿಣಮಿಸಿತು.

ಇಂದು ಮಾನವವಿಜ್ಞಾನ, ಜಾನಪದ, ಪುರಾಣವಿಜ್ಞಾನ, ಧರ್ಮ–ಈ ಕ್ಷೇತ್ರಗಳಲ್ಲಿ ಹೆಚ್ಚು ವೈಜ್ಞಾನಿಕವಾದ ಸಂಶೋಧನೆ ನಡೆದಿದೆ. ಫ್ರೇಜ಼ರ್ ಪ್ರತಿಪಾದಿಸಿದ ಒಂದೊಂದು ವಿಷಯವೇ ಇಂದು ಒಂದೊಂದು ಸಂಶೋಧನೆಗಳ ಕ್ಷೇತ್ರವಾಗಿ ಪರಿಣಮಿಸಿದೆ. ಈ ಕ್ಷೇತ್ರಗಳಲ್ಲಿನ ಇಂದಿನ ವಿದ್ವಾಂಸರು ಫ್ರೇಜ಼ರನ ಕ್ರಮವನ್ನಾಗಲೀ ಸಿದ್ಧಾಂತಗಳನ್ನಾಗಲೀ ಒಪ್ಪುವುದಿಲ್ಲ. ಇವನದು ಹಳೆಯ ಕ್ರಮ ಎಂದೂ ಅವರಿಗೆ ಅನಿಸಬಹುದು. ಆದರೆ ಇಂದಿನ ಈ ಸಂಬಂಧವಾದ ಸಂಶೋಧನೆಗಳಿಗೆ ಭದ್ರವಾದ ಬುನಾದಿ ಹಾಕಿದ ಕೀರ್ತಿ ಫ್ರೇಜ಼ರನಿಗೆ ಸಲ್ಲುತ್ತದೆ. ಗೋಲ್ಡನ್ ಬೋ ಕೃತಿಗೆ ಐತಿಹಾಸಿಕ ಮೌಲ್ಯ ಉಂಟು ಎಂಬುದನ್ನು ಮರೆಯಬಾರದು. ಜನಪದ ಸಂಪ್ರದಾಯಗಳ ಮತ್ತು ನಂಬಿಕೆಗಳ ವಿಶ್ವಕೋಶ ಎಂಬ ದೃಷ್ಟಿಯಿಂದಲೂ ಈ ಕೃತಿಗೆ ಮಹತ್ತ್ವದ ಸ್ಥಾನವಿದೆ. ಮಾನವನ ಜ್ಞಾನದ ಪರಿಧಿಯನ್ನು ವಿಸ್ತರಿಸಿದ, ಅಜ್ಞಾತವಾಗಿದ್ದ ಜ್ಞಾನಕ್ಷೇತ್ರಗಳ ಮೇಲೆ ಬೆಳಕು ಚೆಲ್ಲಿ ಜನತೆಯ ಕಣ್ಣು ತೆರೆಯಿಸಿದ ಹಾಗೂ ಒಂದು ವಿಶಿಷ್ಟ ಸಾಂಸ್ಕೃತಿಕ ಪ್ರಪಂಚದ ಪರಿಚಯ ಮಾಡಿಕೊಟ್ಟ ಉತ್ಕೃಷ್ಟ ಕೃತಿ ಎಂಬ ಕಾರಣದಿಂದಲಂತೂ ಗೋಲ್ಡನ್ ಬೋಗೆ ಶಾಶ್ವತ ಮೌಲ್ಯವಿದೆ ಎಂದು ಹೇಳಬಹುದು. ಮಾನವಶಾಸ್ತ್ರ ಮತ್ತು ಜಾನಪದಗಳ ಮೇಲೆ ತನ್ನ ಪ್ರಭಾವವನ್ನು ಉಜ್ವಲವಾಗಿ ಬೀರಿದ ಈ ಕೃತಿ ಸಾಹಿತ್ಯಲೋಕದಲ್ಲಿ ಕಿಪ್ಲಿಂಗ್, ಟೆನಿಸನ್, ಎಲಿಯಟ್, ಎಜ್ರಾಪೌಂಡ್, ಲಾರೆನ್ಸ್ ಮೊದಲಾದ ಕವಿಗಳನ್ನು ತನ್ನತ್ತ ಆಕರ್ಷಿಸಿ ಅವರ ಕಾವ್ಯಸಂಪ್ರದಾಯಗಳ ಮೇಲೂ ತನ್ನ ಪ್ರಭಾವವನ್ನು ಹೊಮ್ಮಿಸಿದೆ.

ಗೋಲ್ಡನ್ ಬೋ ಬೃಹತ್‍ಕೃತಿಯನ್ನು ಇನ್ನಷ್ಟು ಜನಪ್ರಿಯವೂ ಬಾಲಪ್ರಿಯವೂ ಆಗುವಂತೆ ಮಾಡಿದ ಕೀರ್ತಿ ಫ್ರೇಜ಼ರನ ಹೆಂಡತಿಗೆ ಸೇರುತ್ತದೆ. ಮೂಲ ಗ್ರಂಥದಿಂದ ಸೊಗಸಾಗಿರುವ ಭಾಗಗಳನ್ನು ಆಯ್ದು ಬಹುಮಟ್ಟಿಗೆ ಮೂಲದ ಮಾತುಗಳನ್ನೇ ಉಳಿಸಿಕೊಂಡು ಸಂಗ್ರಹಿಸಿ ಲೀವ್ಸ್ ಫ್ರಮ್ ದಿ ಗೋಲ್ಡನ್ ಬೋ ಎಂಬ ಹೆಸರಿನಲ್ಲಿ ಈಕೆ ಒಂದು ಪುಸ್ತಕವನ್ನು ಪ್ರಕಟಿಸಿದ್ದಾಳೆ. ಅದರ ಮುನ್ನುಡಿಯಲ್ಲಿ ಈಕೆ ತನ್ನ ಉದ್ದೇಶ ಉಪದೇಶವಲ್ಲ, ರಂಜನೆಯನ್ನೊದಗಿಸುವುದು–ಎಂದು ಹೇಳಿಕೊಂಡಿದ್ದಾಳೆ.

ಗೋಲ್ಡನ್ ಬೋ ಗ್ರಂಥದ ಪರಿಷ್ಕರಣಕಾರ್ಯವೂ ನಡೆದಿದೆ. ತಿಯೋಡರ್ ಎಚ್. ಗ್ಯಾಸ್ಟರ್ ಎಂಬಾತ ದಿ ನ್ಯೂ ಗೋಲ್ಡನ್ ಬೋ (1959) ಎಂಬ ಪರಿಷ್ಕೃತ ಮುದ್ರಣವನ್ನು ಪ್ರಚುರಪಡಿಸಿದ್ದಾನೆ. ಇಲ್ಲಿ ಹೊಸ ಸಂಶೋಧನೆಯ ಹಿನ್ನೆಲೆಯಲ್ಲಿ ತೀರ ಹಳತು ಎಂದು ತೋರುವ ಭಾಗಗಳನ್ನು ಮೂಲ ಉದ್ದೇಶಕ್ಕೆ ಭಂಗ ತಾರದಂತೆ ಕಿತ್ತು ಹಾಕಲಾಗಿದೆ. ಜೊತೆಗೆ ಸಂಪಾದಕ ಫ್ರೇಜ಼ರನ ಒಂದೊಂದು ಅಭಿಪ್ರಾಯವನ್ನೂ ಹೊಸ ದೃಷ್ಟಿಯಿಂದ ಪರೀಕ್ಷಿಸಿ ಉಪಯುಕ್ತ ಟಿಪ್ಪಣಿಗಳನ್ನು ಬರೆಯಲಾಗಿದೆ.

ಜಾನ್ ಕ್ಯಾನಿಂಗ್ ಎಂಬಾತ ಸಂಪಾದಿಸಿದ (1966) ಹಂಡ್ರಡ್ ಗ್ರೇಟ್ ಬುಕ್ಸ್ ಎಂಬ ಸಂಕಲನದಲ್ಲಿ ಗೋಲ್ಡನ್ ಬೋ ಸೇರಿರುವುದು ಗಮನಾರ್ಹ ಸಂಗತಿ. (ಟಿ.ಎನ್.ಎಸ್.ಎನ್.)

**ಗೋಲ್ಡಿಂಗ್, ಲೂಯಿಸ್ :** 1895–1958. ಇಂಗ್ಲಿಷ್ ಕಾದಂಬರಿಕಾರ. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಅಲ್ಲಿನ ಕ್ವೀನ್ಸ್ ಕಾಲೇಜು ಮಿಸಲೆನಿ ಎಂಬ ಪತ್ರಿಕೆಯ ಸಂಪಾದಕನೂ ಆಕ್ಸ್‌ಫರ್ಡ್ ಬುಕ್ಸ್ ಆಫ್ ವರ್ಸ್ ಎಂಬ ಕವಿತಾ ಸಂಕಲನ ಮಾಲೆಯ ಸಂಪಾದಕರುಗಳಲ್ಲೊಬ್ಬನೂ ಆದ. ವಿದ್ಯಾರ್ಥಿಯಾಗಿದ್ದಾಗಲೇ ಈತನ ಮೊದಲ ಎರಡು ಕವನಸಂಗ್ರಹಗಳು ಪ್ರಕಟವಾದವು. ಆದರೆ ನಿಜಕ್ಕೂ ಇವನ ಮೊದಲ ಕೃತಿ ಒಂದು ಕಾದಂಬರಿಯಾಗಿತ್ತಂತೆ; ತುಂಬ ಎಳೆಯ ವಯಸ್ಸಿನಲ್ಲಿಯೇ ಈತ ಬರೆದ ಈ ಕಾದಂಬರಿಯನ್ನು ಪ್ರಕಟಿಸಲೊಪ್ಪುವ ಪ್ರಕಾಶಕರೇ ದೊರೆಯಲಿಲ್ಲವಾಗಿ ಈತ ಬರೆಯುವ ಹವ್ಯಾಸವನ್ನೇ ಕೈಬಿಡಬೇಕೆಂದು ಯೋಚಿಸಿದ್ದನಂತೆ.

ಆಕ್ಸ್‌ಫರ್ಡಿನಿಂದ ಹೊರಬಂದ ಮೇಲೆ ಗೋಲ್ಡಿಂಗ್ ಒಂದನೆಯ ಮಹಾಯುದ್ಧದಲ್ಲಿ ಸೈನಿಕನಾಗಿ ಸೇರಿದ. ಯುದ್ಧಾನಂತರ ಹಲವಾರು ದೇಶಗಳಲ್ಲಿ ಪ್ರವಾಸ ಮಾಡಿದ. ತನ್ನ ಪ್ರವಾಸಾನುಭವಗಳನ್ನು ಕುರಿತು ಬರೆದ. ಇಪ್ಪತ್ತನೆಯ ಶತಮಾನದ ಪ್ರವಾಸ ಸಾಹಿತ್ಯ ನಿರ್ಮಾಪಕರಲ್ಲಿ ಅತ್ಯಂತ ಅನುಭವಿಗಳೆಂದೂ ತುಂಬ ಸ್ವಾರಸ್ಯವಾಗಿ ಬರೆಯುವವರೆಂದೂ ಖ್ಯಾತಿವೆತ್ತವರಲ್ಲಿ ಈತನೂ ಒಬ್ಬ.

ಯಹೂದ್ಯರ ಹಿತಕ್ಕಾಗಿ ಅತ್ಯುತ್ಸುಕನಾಗಿ ಹೋರಾಡುತ್ತಿದ್ದು ಅವರ ಸಮಸ್ಯೆಯನ್ನು ದಿ ಜ್ಯೂಯಿಷ್ ಪ್ರಾಬ್ಲೆಮ್ ಎಂಬ ಪುಸ್ತಕದಲ್ಲಿ ಈತ ಹೃದಯಂಗಮವಾಗಿ ನಿರೂಪಿಸಿದ್ದಾನೆ. ಪ್ರಪಂಚದ ಹಲವಾರು ದೇಶಗಳಲ್ಲಿ ಈ ಪುಸ್ತಕಕ್ಕೆ ಪ್ರಶಂಸೆ ದೊರೆತಿದೆ.

ಕಾದಂಬರಿಗಳು, ಸಣ್ಣಕಥೆಗಳು, ಕವಿತೆಗಳು, ಪದ್ಯನಾಟಕಗಳು, ಪ್ರವಾಸ ಸಾಹಿತ್ಯ, ವಿಚಾರಸಾಹಿತ್ಯ, ವಿಮರ್ಶೆ–ಹೀಗೆ ವಿವಿಧ ಬಗೆಯ ಸಾಹಿತ್ಯವನ್ನು ಗೋಲ್ಡಿಂಗ್ ನಿರ್ಮಾಣ ಮಾಡಿದ್ದಾನೆ. ರಂಗಭೂಮಿ, ರಜತಪರದೆ ಮತ್ತು ಬಾನುಲಿಗಳಿಗಾಗಿ ಬರೆಯುತ್ತಿದ್ದವರಲ್ಲಿ ಈತ ಬಹಳ ಯಶಸ್ವಿಯೆನ್ನಿಸಿಕೊಂಡ.

1932ರ ಮೊದಲೇ ಸುಮಾರು ಮೂವತ್ತು ಕಾದಂಬರಿಗಳನ್ನು ಈತ ಪ್ರಕಟಿಸಿಯಾಗಿತ್ತಾದರೂ ಇವನಿಗೆ ಮೊದಲಾಗಿ ಖ್ಯಾತಿಯನ್ನು ತಂದುದು 1932ರಲ್ಲಿ ಬೆಳಕುಕಂಡ ಮೆಗ್ನೋಲಿಯ ಸ್ಟ್ರೀಟ್ ಎಂಬ ಕಾದಂಬರಿ. ಒಂದು ಬೀದಿಯಲ್ಲಿ ಯಹೂದ್ಯ ನಿವಾಸಿಗಳಿರುವ, ಮತ್ತೊಂದು ಬೀದಿಯಲ್ಲಿ ಯಹೂದ್ಯೇತರ ನಿವಾಸಿಗಳಿರುವ ವಠಾರವೊಂದರ ಕಥೆಯಿದು. ಇವನ ಹಲವು ಕಾದಂಬರಿಗಳಲ್ಲಿ ಬರುವ ಡೂಮಿಂಗ್‍ಟನ್ ಎಂಬ ಪಾತ್ರ ಲೇಖಕನನ್ನೇ ಪ್ರತಿನಿಧಿಸುವುದೆಂದು ಓದುಗರ ಅಭಿಪ್ರಾಯ.

ಇವನ ಕೆಲವು ಕಾದಂಬರಿಗಳು ಇವು: ಫಾರ್ವರ್ಡ್ ಫ್ರಮ್ ಬ್ಯಾಬಿಲಾನ್ (1920), ಸೀ ಕೋಸ್ಟ್ ಆಫ್ ಬೊಹಿಮಿಯ (1923), ಡೇ ಆಫ್ ಅಟೋನ್‍ಮೆಂಟ್ (1925), ದಿ ಮಿರಕಲ್ ಬಾಯ್ (1927), ಸ್ಟೋರ್ ಆಫ್ ಲೇಡೀಸ್ (1927), ಗಿವ್ ಅಪ್ ಯುವರ್ ಲವರ್ಸ್ (1930), ಫೈವ್ ಸಿಲ್ವರ್ ಡಾಟರ್ಸ್ (1934), ಹನಿ ಫಾರ್ ದಿ ಘೋಸ್ಟ್ (1949), ದಿ ಡೇಂಜರಸ್ ಪ್ಲೇಸಸ್ (1951), ದಿ ಲವಿಂಗ್ ಬ್ರದರ್ಸ್ (1952).

ಇವನ ಕವನ ಸಂಕಲನಗಳು : ದಿ ಸಾರೋ ಆಫ್ ವಾರ್ (1919), ಷಪರ್ಡ್ಸ್ ಸಿಂಗಿಂಗ್ (1921), ಪ್ರಾಫೆಟ್–ಅಂಡ್ ಫೂಲ್ (1923).


ಇವನ ಪ್ರವಾಸ ಸಾಹಿತ್ಯ : ಸನ್‍ವರ್ಡ್ (1924), ಸಿಸಿಲಿಯನ್ ನೂನ್ (1925), ದೋಸ್ ಏನ್ಷಿಯಂಟ್ ಲ್ಯಾಂಡ್ಸ್ (1928), ಅಡ್ವೆಂಚರ್ಸ್ ಇನ್ ಲಿವಿಂಗ್ ಡೇಂಜರಸ್ಲಿ (1930).

ಇವನ ಇತರ ಕೆಲವು ಕೃತಿಗಳು : ಜೇಮ್ಸ್ ಜಾಯ್ಸ್ (1933), ದಿ ಬೇರ್‌ನಕಲ್ ಬ್ರೀಡ್ (1952). (ಪಿ.ಎನ್.ಆರ್.)

**ಗೋಲ್ಡಿಂಗ್, ವಿಲಿಯಮ್ :** 1911–93. ನೊಬೆಲ್ ಪ್ರಶಸ್ತಿ ಪುರಸ್ಕೃತ ಇಂಗ್ಲಿಷ್ ಕಾದಂಬರಿಕಾರ. ತಂದೆ ವಿಚಾರವಾದಿ; ತಾಯಿ ಮಹಿಳೆಯರ ಹಕ್ಕುಬಾಧ್ಯತೆಗಳಿಗಾಗಿ ಹೋರಾಟ ನಡೆಸಿದಾಕೆ. ಈತ 1911ರ ಸೆಪ್ಟೆಂಬರ್ 19ರಂದು ಜನಿಸಿದ. ಆಕ್ಸ್‌ಫರ್ಡಿನಲ್ಲಿ ವಿಜ್ಞಾನ ವಿಭಾಗದಲ್ಲಿ ಕಲಿಯುತ್ತಿದ್ದ ಈತ ಅದನ್ನು ತೊರೆದು ಸಾಹಿತ್ಯದ ಅಧ್ಯಯನಕ್ಕೆ ತೊಡಗಿದ. ಅನಂತರ ಶಾಲಾ ಉಪಾಧ್ಯಾಯನಾಗಿ ದುಡಿದ. ಎರಡನೆಯ ಮಹಾಯುದ್ಧದಲ್ಲಿ ಪಾಲ್ಗೊಂಡ.

ಎರಡನೆಯ ಮಹಾಯುದ್ಧ ಈತನಲ್ಲಿ ಲೋಕಸ್ವಭಾವದ ಅರಿವು ಮೂಡಿಸಿತು. ಒಂದು ದಿನ ಮಕ್ಕಳು ದೇವರೆಂಬುದು ನಿಜವೆ, ನಿಜಕ್ಕೂ ಅವರ ವರ್ತನೆ ಹೇಗೆ ಎಂಬ ಚಿಂತನೆಗೆ ತೊಡಗಿದ. ಇದರ ಫಲವಾಗಿ ಬಂದದ್ದು ನೊಬೆಲ್ ಪ್ರಶಸ್ತಿ ಪುರಸ್ಕೃತ ಕಾದಂಬರಿ ಲಾರ್ಡ್ ಆಫ್ ದಿ ಫ್ಲೈಸ್ (1954). ಇದು ಸಾಹಿತ್ಯ ವಿಮರ್ಶಕರ ಗಮನ ಸೆಳೆದಿರುವ ಆಧುನಿಕ ಮಹಾಕೃತಿ. ಇಲ್ಲಿಯದು ತಲ್ಲೀನಗೊಳಿಸುವ ಬೋಧಪ್ರದ ಕತೆ. ಒಳ್ಳೆಯ ಸುಧಾರಿತ ಮಕ್ಕಳ ಮುಗ್ಧತೆ, ಬೆಂಕಿಮಾಡುವಿಕೆ, ಬೇಟೆ, ಬುಡಕಟ್ಟು ನೃತ್ಯ, ಭೀತಿ, ಕೋಪ, ಕಾಮ – ಇಂಥ ಸಂಕೀರ್ಣ ಚಿತ್ರಣದ ಮೂಲಕ ಮಾನವೇತಿಹಾಸದ ಬೃಹತ್ ಪರಿಚ್ಛೇದವನ್ನೇ ಈತ ರೂಪಿಸಿದಹಾಗಿದೆ ಎಂದು ವಿಮರ್ಶಕರು ಅಭಿಪ್ರಾಯಪಟ್ಟಿದ್ದಾರೆ. ನಿರ್ಜನ ದ್ವೀಪವೊಂದರಲ್ಲಿ ಸಿಕ್ಕಿಬಿದ್ದ ಹುಡುಗರ ಕ್ರೂರ ಹಾಗೂ ವಿನಾಶಕಾರೀ ಪ್ರವೃತ್ತಿಯ ಇಲ್ಲಿನ ನಿರೂಪಣೆಯಲ್ಲಿ ಹುಡುಗರು ಕೇವಲ ಪ್ರತೀಕವಾಗಿದ್ದಾರೆ. ಮಾನವ ಪತನದ ಚಿತ್ರಣ ಇಲ್ಲಿದೆ.

ದಿ ಇನ್‌ಹೆರಿಟರ್ಸ್ (1955) ಐವತ್ತು ಸಾವಿರ ವರ್ಷಗಳಿಗೂ ಹಿಂದೆ ಬದುಕಿದ್ದ ನಿಯಾಂಡರ್ತಾಲ್ ಮಾನವನ ಬದುಕು ಹಾಗೂ ನಿರ್ನಾಮದ ಕತೆ. ಪಿಂಚರ್ ಮಾರ್ಟಿನ್ (1956) ಮಾನವನ ಬದುಕಿನ ಅನಂತರದ ಸ್ಥಿತಿ ಕುರಿತದ್ದು. ದಿ ಸ್ಪೈರ್ (1964) ಮಧ್ಯಯುಗದ ಪೂಜಾರಿಯೊಬ್ಬನ ಹುಚ್ಚು ಕನಸನ್ನು ಕುರಿತದ್ದು. ರೈಟ್ಸ್ ಆಫ್ ಪ್ಯಾಸೇಜ್ (1980) ಸಲಿಂಗರತಿ ಕುರಿತದ್ದು. ದಿ ಪೇಪರ್‌ಮೆನ್ (1984) ವಿಮರ್ಶಕರನ್ನೂ ಪತ್ರಕರ್ತರನ್ನೂ ತರಾಟೆಗೆ ತೆಗೆದು ಕೊಳ್ಳುವಂಥದ್ದು. ಈ ಕಾದಂಬರಿಗಳು ಮಾನವ ಸ್ವಭಾವದ ವಿವಿಧ ಮುಖಗಳ ವಿಶ್ಲೇಷಣೆ ಮಾಡುತ್ತವೆ. ಈತನ ಎಲ್ಲ ಕಾದಂಬರಿಗಳಲ್ಲಿ ಸಾಮಾನ್ಯವಾಗಿ ಬರುವ ಸಮುದ್ರ ಚಿತ್ರಣ ಈತನ ಸಮುದ್ರ ಪ್ರೀತಿಗೆ ಸಂಕೇತವಾಗಿದೆ. ಈತ ನಾವಿಕನೂ ಆಗಿದ್ದ. ಮಾನವನ ಸುಪ್ತ ಮನಸ್ಸಿನ ಸಂಕೇತವಾಗಿ ಸಮುದ್ರ ಈತನ ಕೃತಿಗಳಲ್ಲಿ ಮಹತ್ತ್ವದ ಪಾತ್ರ ವಹಿಸಿದೆ.



ಈತ ಕವನಗಳನ್ನೂ ಬರೆದಿದ್ದಾನೆ. ದಿ ಬ್ರಾಸ್ ಬಟರ್‌ಫ್ಲೈ ಎಂಬ ನಾಟಕವನ್ನೂ ದಿ ಹಾಟ್ ಗೇಟ್ಸ್ ಎಂಬ ಪ್ರಬಂಧ ಸಂಕಲನವನ್ನೂ ಹೊರತಂದಿದ್ದಾನೆ. ರೈಟ್ಸ್ ಆಫ್ ಪ್ಯಾಸೇಜ್ ಪುಸ್ತಕಕ್ಕೆ ಬೂಕರ್ ಬಹುಮಾನ ದೊರೆತಿದೆ. ಲಾರ್ಡ್ ಆಫ್ ದಿ ಫ್ಲೈಸ್ ಕೃತಿಗೆ ನೊಬೆಲ್ ಪ್ರಶಸ್ತಿ ಸಂದಿದೆ (1983). ಈತ 1993ರ ಜೂನ್ 19ರಂದು ನಿಧನನಾದ.

(ಬಿ.ಎಸ್.ಪಿ.ಎಚ್.)

**ಗೋಲ್ಡ್‌ರಿಂಗ್, ಡಗ್ಲಸ್ :** 1887–1960. ಇಂಗ್ಲಿಷ್ ಕಾದಂಬರಿಕಾರ ಮತ್ತು ಪ್ರಬಂಧಕಾರ. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮುಗಿದ ಬಳಿಕ 1907ರಲ್ಲಿ ಕಂಟ್ರಿ ಲೈಫ್ ಎಂಬ ಪತ್ರಿಕೆಯ ಸಂಪಾದಕಮಂಡಲಿಯನ್ನು ಸೇರಿದ. ಮಾರನೆಯ ವರ್ಷ, ಆಗ ತಾನೇ ಸ್ಥಾಪಿತವಾಗಿದ್ದ ಇಂಗ್ಲಿಷ್ ರಿವ್ಯೂ ಎಂಬ ಪತ್ರಿಕೆಯ ಉಪಸಂಪಾದಕನಾದ. ಅಲ್ಲಿ ಸಾಹಿತಿ ಫೋರ್ಡ್ ಮ್ಯಾಡಕ್ಸ್ ಫೋರ್ಡನ ಸ್ನೇಹಗಳಿಸಿದ. 1910ರಲ್ಲಿ ದಿ ಟ್ರ್ಯಾಂಪ್ ಎಂಬ ಸಚಿತ್ರ ಪತ್ರಿಕೆಯೊಂದನ್ನು ಸ್ಥಾಪಿಸಿ ಅದರ ಸಂಪಾದಕನಾದ. ಮುಂದೆ ಅದು ಉತ್ತಮ ಕವನಗಳನ್ನು ಬೆಳಕಿಗೆ ತರುವ ಪತ್ರಿಕೆಯೆಂದು ಪ್ರಸಿದ್ಧಿ ಪಡೆಯಿತು. 1917–20 ರವರೆಗೆ ಗೋಲ್ಡ್‌ರಿಂಗ್ ಇಂಗ್ಲೆಂಡ್ ಮತ್ತು ಐರ್ಲೆಂಡ್‌ಗಳೊಳಗಿನ ಸಂಬಂಧವನ್ನು ಸುಧಾರಿಸುವುದಕ್ಕಾಗಿ ದುಡಿದ. 1925ರಲ್ಲಿ ಗಾಟೆನ್‌ಬರ್ಗ್ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಅಧ್ಯಾಪಕನಾಗಿ ನೇಮಕಗೊಂಡ. 1927ರಲ್ಲಿ ಈ ಉದ್ಯೋಗವನ್ನು ತೊರೆದು ಅಮೆರಿಕ ಪ್ರವಾಸ ಕೈಗೊಂಡ. ಅಲ್ಲಿಂದ ಯುರೋಪಿಗೆ ಮರಳಿ ಮೂರು ವರ್ಷ ಫ್ರಾನ್ಸ್ ದೇಶದಲ್ಲಿ ವಾಸಿಸಿದ. 1930ರ ಅನಂತರ ಇಂಗ್ಲೆಂಡಿನಲ್ಲಿ ನೆಲೆಸಿದ.

ಈತ ಮ್ಯಾಡಕ್ಸ್, ಥಾಮಸ್ ಲಾರೆನ್ಸ್, ಜೇಮ್ಸ್ ಎಲ್‌ರಾಯ್ ಫೇಕರ್ ಇವರ ಜೀವನಚರಿತ್ರೆಗಳನ್ನು ಬರೆದಿದ್ದಾನೆ.

ದಿ ಪರ್ಮನೆಂಟ್ ಅಂಕಲ್ (1912), ದಿ ಫಾರ್‌ಚೂನ್ (1913), ನೋಬಡಿ ನೋಸ್ (1923), ದಿ ಕಕೂ (1926), ದಿ ಫಸಾಡ್ (1927), ಮಾರ್‌ಗಾಟ್ಸ್ ಪ್ರೋಗ್ರೆಸ್ (1929)–ಇವು ಈತನ ಕೆಲವು ಕಾದಂಬರಿಗಳು.

ಆಡ್ ಮ್ಯಾನ್ ಔಟ್ (1935), ಫೇಸಿಂಗ್ ದಿ ಆಡ್ಸ್ (1939), ಸೌತ್ ಲಾಜ್ (1943)– ಇವು ಈತನ ಆತ್ಮಚರಿತ್ರೆಗಳು.

ವೇಸ್ ಆಫ್ ಎಸ್ಕೇಪ್ (1912), ಡ್ರೀಮ್ ಸಿಟೀಸ್ (1913), ಎ ಸ್ಟ್ರೇಂಜರ್ ಇನ್ ಐರ್ಲೆಂಡ್ (1919), ದಿ ಫೈಟ್ ಫಾರ್ ಫ್ರೀಡಮ್ (1920), ನಾರ್ದರ್ನ್ ಲೈಟ್ಸ್ ಆಫ್ ಸದರ್ನ್ ಷೋರ್ಸ್ (1926)–ಇವು ಈತನ ಕೆಲವು ಕೃತಿಗಳು. (ಪಿ.ಎನ್.ಆರ್.)

**ಗೋಲ್ಡ್‌ಸ್ಟಕರ್, ಥಿಯಡೋರ್ :** 1822–72. ಸಂಸ್ಕೃತ ಹಾಗೂ ಭಾರತೀಯ ನ್ಯಾಯಶಾಸ್ತ್ರ ವಿದ್ವಾಂಸ ಮತ್ತು ಘನವೆತ್ತ ವಿಮರ್ಶಕ. ಜರ್ಮನಿಯ ಕೋನಿಷ್‌ಬರ್ಗ್ ನಗರದ ಯಹೂದಿ ಮನೆತನವೊಂದರಲ್ಲಿ ಜನಿಸಿದ ಈತ ವ್ಯಾಕರಣ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಪಡೆದ. ಮುಂದೆ ಪ್ರೌಢಶಾಲಾ ವಿದ್ಯಾಭ್ಯಾಸ ಮುಗಿಸಿ, ಅದೇ ನಗರದ ವಿಶ್ವವಿದ್ಯಾಲಯದಲ್ಲಿ ಭಾಷಾಶಾಸ್ತ್ರ, ಇತಿಹಾಸ, ತತ್ತ್ವಶಾಸ್ತ್ರ ಮತ್ತು ಸಂಸ್ಕೃತ ಭಾಷೆಯನ್ನು ಅಭ್ಯಾಸ ಮಾಡಿ 1838ರಲ್ಲಿ ಪದವೀಧರನಾದ. ಅನಂತರ ಬಾನ್ ವಿಶ್ವವಿದ್ಯಾಲಯದಲ್ಲಿ ಅರಬ್ಬಿ, ಸಂಸ್ಕೃತ ಭಾಷೆ ಮತ್ತು ಸಾಹಿತ್ಯ ವಿಷಯಗಳನ್ನು ತೆಗೆದುಕೊಂಡು ಎ.ಡಬ್ಲ್ಯು. ಫಾನ್ ಶ್ಲೆಗಲ್ ಮತ್ತು ಲ್ಯಾಸೆನ್‌ರವರಂಥ ಪ್ರಸಿದ್ಧ ವಿದ್ವಾಂಸರುಗಳ ಮಾರ್ಗದರ್ಶನದಲ್ಲಿ ಕೇವಲ ಹತ್ತೊಂಬತ್ತನೆಯ ವಯಸ್ಸಿನಲ್ಲಿ ಡಾಕ್ಟರೇಟ್ ಪದವಿಯನ್ನು (1840) ಪಡೆದ. 1842ರಿಂದ ಮೂರು ವರ್ಷಗಳ ಕಾಲ ಪ್ಯಾರಿಸಿನ ಪ್ರಸಿದ್ಧ ಸಂಸ್ಕೃತಜ್ಞ ಯೂಜಿನ್ ಬರ್ನೌಫ್‌ನಲ್ಲಿ ಸಂಸ್ಕೃತ ವ್ಯಾಕರಣ, ವೇದಾಂತ, ವೈದಿಕ ಸಾಹಿತ್ಯ ಮುಂತಾದ ವಿಷಯಗಳನ್ನು ಅಭ್ಯಸಿಸಿ ಪಾಂಡಿತ್ಯ ಸಂಪಾದಿಸಿದ. ಬರ್ನೌಫ್ ಸಂಪಾದಿಸುತ್ತಿದ್ದ ಬುದ್ಧಿಸಮ್ ಇನ್ ನೇಪಾಳ್ ಎಂಬ ಗ್ರಂಥಸಂಪಾದನೆಗೆ ಈತ ನೆರವಾದ.

ಈತ ತನ್ನ ಇಪ್ಪತ್ತನೆಯ ವಯಸ್ಸಿನಲ್ಲೇ ಪ್ರಬೋಧಚಂದ್ರೋದಯ (1841) ಎಂಬ ದರ್ಶನ ಪ್ರಧಾನ ಸಂಸ್ಕೃತ ನಾಟಕವನ್ನು ಭಾಷಾಂತರಿಸಿದ. ಪ್ಯಾರಿಸಿನಲ್ಲಿದ್ದಾಗಲೇ ಮಹಾಭಾರತದ ವಿಮರ್ಶಾತ್ಮಕ ಮುದ್ರಣವೊಂದನ್ನು ಸಿದ್ಧಪಡಿಸಿದ (1842–45). ತನ್ನ ತಾಯ್ನಾಡಿನಲ್ಲಿ ಅಲೆಗ್ಸಾಂಡರ್ ಫಾನ್ ಹಂಬಾಲ್ಟ್ ಮುಂತಾದ ವಿದ್ವಾಂಸರ ಮೆಚ್ಚುಗೆಗೆ ಪಾತ್ರನಾದ. ಈತ ಯಹೂದಿಯಾದುದರಿಂದ ಆಗಿನ ಪ್ರಷ್ಯ ಸರ್ಕಾರದ ವರ್ಣವಿದ್ವೇಷ ನೀತಿಯಿಂದಾಗಿ 1850ರಲ್ಲಿ ತಾಯ್ನಾಡು ಬಿಟ್ಟು ಹೊರಡಬೇಕಾಯಿತು.

ಆ ವೇಳೆಗೆ ಎಚ್.ಎಚ್. ವಿಲ್ಸನ್ ತಾನು ಪುನರ್ಮುದ್ರಣಕ್ಕೆ ಅನುಗೊಳಿಸುತ್ತಿದ್ದ ಸಂಸ್ಕೃತ–ಇಂಗ್ಲಿಷ್ ನಿಘಂಟನ್ನು ಸಿದ್ಧಪಡಿಸಲು ಈತನನ್ನು ಲಂಡನಿಗೆ ಆಹ್ವಾನಿಸಿದ. ಅಲ್ಲಿಂದ ಮುಂದೆ ಲಂಡನ್ ನಗರವೇ ಈತನ ಕಾರ್ಯಕ್ಷೇತ್ರವಾಯಿತು. 1852–72 ರವರೆಗೆ ಲಂಡನ್ ವಿಶ್ವವಿದ್ಯಾಲಯದಲ್ಲಿ ಗೌರವ ಸಂಸ್ಕೃತ ಪ್ರಾಧ್ಯಾಪಕನಾಗಿ ಸೇವೆ ಸಲ್ಲಿಸಿದ. 1861ರಲ್ಲಿ ಮಾನವಕಲ್ಪ ಸೂತ್ರವನ್ನು ಸಂಪಾದಿಸಿ ಅದರ ಮುನ್ನುಡಿಯಲ್ಲಿ ಪಾಣಿನಿ ಮತ್ತು ಸಂಸ್ಕೃತದಲ್ಲಿ ಅವನ ಸ್ಥಾನ ಎಂಬ ವಿದ್ವಲ್ಲೇಖನವೊಂದನ್ನು ಬರೆದ. ಇದೇ ಸಮಯದಲ್ಲಿ ಇನ್‌ಸ್ಪೈರ್ಡ್ ರೈಟಿಂಗ್ಸ್ ಆಫ್ ಹಿಂದೂಯಿಸಮ್ ಅಂಡ್ ಹಿಂದೂ ಎಪಿಕ್ ಪೊಯೆಟ್ರಿ–ದಿ ಮಹಾಭಾರತ–ಎಂಬ ಗ್ರಂಥವನ್ನು ಪ್ರಕಾಶಪಡಿಸಿದ. 1865ರಲ್ಲಿ ಮಾಧವಾಚಾರ್ಯರ ಜೈಮಿನೀಯ ನ್ಯಾಯಮಾಲಾವಿಸ್ತರ ಎಂಬ ಗ್ರಂಥದ ವಿಮರ್ಶಾತ್ಮಕ ಮುದ್ರಣವನ್ನು ಹೊರತಂದ. ಪಾಣಿನಿಯ ಅಷ್ಟಾಧ್ಯಾಯೀ, ಪಾತಂಜಲ ಮಹಾಭಾಷ್ಯ, ಕೈಯಟನ ವೃತ್ತಿ ಮತ್ತು ಭಟ್ಟೋಜಿ ದೀಕ್ಷಿತನ ಕೌಮುದೀ ಗ್ರಂಥಗಳ ಹಸ್ತಪ್ರತಿಗಳನ್ನೆಲ್ಲ ಕ್ರೋಡೀಕರಿಸಿ ಈಸ್ಟ್ ಇಂಡಿಯ ಕೌನ್ಸಿಲಿನ ಅನುಮತಿ ಪಡೆದು ಅವುಗಳ ಕಲ್ಲಚ್ಚಿನ ಪ್ರತಿಗಳನ್ನು ಸಿದ್ಧಪಡಿಸಿದ. ಅಲ್ಲದೆ ನೈಟ್ಸ್ ವಿಶ್ವಕೋಶ, ಛೇಂಬರ್ಸ್ ವಿಶ್ವಕೋಶಗಳಿಗೆ ಸಂಸ್ಕೃತ ಮತ್ತು ಭಾರತೀಯ ಸಾಹಿತ್ಯ ತತ್ತ್ವಶಾಸ್ತ್ರಗಳಿಗೆ ಸಂಬಂಧಿಸಿದಂತೆ ಅನೇಕ ಲೇಖನಗಳನ್ನು ಬರೆದುಕೊಟ್ಟ.

ಆಗಿನ ಕಾಲಕ್ಕೆ ಲಂಡನಿನಲ್ಲಿ ಭಾರತೀಯ ನ್ಯಾಯಶಾಸ್ತ್ರದಲ್ಲಿ ಅಧಿಕೃತ ವಿಮರ್ಶಕನೆಂಬ ಖ್ಯಾತಿ ಗಳಿಸಿದ್ದ. ಚಕ್ರವರ್ತಿಯವರ ಪ್ರಿವಿ ಕೌನ್ಸಿಲಿನಲ್ಲಿ ಭಾರತೀಯ ನ್ಯಾಯದ ವಿಷಯಗಳನ್ನು ಅರ್ಥವಿಸುವುದರಲ್ಲಿ ತಲೆದೋರುತ್ತಿದ್ದ ಕ್ಲಿಷ್ಟತೆಗಳ ಪರಿಹಾರಕ್ಕೆ ಈತನ ಕೊಡುಗೆ ಮೆಚ್ಚುವಂತಹುದು. ಈತ ಭಾಷಾಶಾಸ್ತ್ರ ಸಂಘ, ರಾಯಲ್ ಏಷ್ಯಾಟಿಕ್ ಸೊಸೈಟಿಗಳಂಥ ವಿದ್ವತ್ ಸಂಘಗಳಲ್ಲಿ ಪ್ರತಿಷ್ಠಿತ ವ್ಯಕ್ತಿಯಾಗಿದ್ದ. ಲಂಡನಿನಲ್ಲಿ ಈತನ ಮನೆ ಭಾರತೀಯ ಸಂಸ್ಕೃತಜ್ಞರಿಗೆ ಒಂದು ಯಾತ್ರಾಸ್ಥಳವಾಗಿತ್ತು. (ಸಿ.ಜಿ.ಪಿ.)

**ಗೋಲ್ಡ್‌ಸ್ಮಿತ್, ಆಲಿವರ್ :** 1728–74. ಆಂಗ್ಲಕವಿ, ನಾಟಕಕಾರ, ಪ್ರಬಂಧಕಾರ, ಕಾದಂಬರಿಕಾರ. ಐರ್ಲೆಂಡಿನ ಲಾಂಗ್‌ಫರ್ಡಿನಲ್ಲಿ ಪ್ರಾಟೆಸ್ಟಂಟ್ ಕುಟುಂಬದಲ್ಲಿ ಜನಿಸಿದ. ತಂದೆ ಚಾರ್ಲ್ಸ್ ಗೋಲ್ಡ್‌ಸ್ಮಿತ್ ಕ್ರೈಸ್ತ ಪುರೋಹಿತ ಹಾಗೂ ಕೃಷಿಕ. ಮಕ್ಕಳಲ್ಲಿ ಆಲಿವರ್ ಐದನೆಯವ. ಈತನ ಪ್ರಾಥಮಿಕ ವಿದ್ಯಾಭ್ಯಾಸ ಎಲ್ಫಿನ್, ಅಥ್ಲೋನ್ ಮತ್ತು ಎಜ್‌ವರ್ತ್‌ಟೌನುಗಳಲ್ಲಿ ನಡೆಯಿತು. ಎಂಟನೆಯ ವಯಸ್ಸಿನಲ್ಲಿ ಸಿಡುಬು ಅಂಟಿತಾಗಿ ದೇಹವೆಲ್ಲ ಕುರೂಪವಾಯಿತು. ಡಬ್ಲಿನಿನ ಟ್ರಿನಿಟಿ ಕಾಲೇಜು ಸೇರಿ ಬಡತನದಿಂದಾಗಿ ಪಡಚಾಕರಿಗಳನ್ನು ಮಾಡಿ ವ್ಯಾಸಂಗವನ್ನು ಮುಂದುವರಿಸಿದ. ವರ್ಗದಲ್ಲಿ ಕೊನೆಯವನಾಗಿ ತುಂಟತನದಲ್ಲಿ ಮೊದಲಿಗನಾಗಿ ವಿದ್ಯಾರ್ಥಿಜೀವನದ ಸದುಪಯೋಗ ಪಡೆಯಲಿಲ್ಲ. ಉಪಾಧ್ಯಾಯರೊಂದಿಗೆ ಜಗಳ ಮಾಡಿಕೊಂಡು ಕಾಲೇಜಿನಿಂದ ಪರಾರಿಯಾದ (1746). ಮತ್ತೆ ಹಿಂತಿರುಗಿ 1749ರಲ್ಲಿ ಬಿ.ಎ. ಪದವಿ ಗಳಿಸಿದ. ಅನಿವಾರ್ಯವಾಗಿ ವೃತ್ತಿಯನ್ನು ಹುಡುಕುವ ಪ್ರಸಂಗ ಬಂದಾಗ ವಿಚಿತ್ರವಾದ ಉಡುಗೆಗಳ ಹವ್ಯಾಸ, ದೆವ್ವದ ಕಥೆಗಳಲ್ಲಿ ಪ್ರಾವೀಣ್ಯ, ವೇಣುವಾದನದ ವ್ಯಾಮೋಹ ಗಳನ್ನು ಬೆಳೆಸಿಕೊಂಡಿದ್ದ ಗೋಲ್ಡ್‌ಸ್ಮಿತ್‌ನಿಗೆ ಅಪಾಯಕಾದಿತ್ತು. ಚರ್ಚು, ಶಾಲೆ, ನ್ಯಾಯಾಲಯಗಳಲ್ಲಿ ಜೀವನೋಪಾಯವನ್ನು ಕಾಣಲು ಯತ್ನಿಸಿ ವಿಫಲನಾದ. ಎಡಿನ್‌ಬರೋ ವಿಶ್ವವಿದ್ಯಾಲಯದಲ್ಲಿ ವೈದ್ಯಕೀಯ ಶಿಕ್ಷಣ ಪಡೆಯಲು ಸೇರಿದನಾದರೂ (1752–54) ಹೆಚ್ಚಿನ ಜ್ಞಾನ ಗಳಿಸದೆ ಹಿಂತಿರುಗಿದ. ಅನಂತರ ಪ್ರವಾಸಪ್ರಿಯನಾದ ಈತ ವೇಣುವಾದನ ಕೌಶಲ ಮತ್ತು ವಾಗ್ಮಿತೆಗಳ ಸಂದಾಯದಿಂದಲೇ ಸಂಚಾರದ ವೆಚ್ಚವನ್ನು ಹೊಂದಿಸಿಕೊಳ್ಳುತ್ತ ಕಾಲ್ನಡಿಗೆಯಲ್ಲಿ



ಯುರೋಪಿನ ಬಹುಭಾಗದಲ್ಲಿ–ಅಂದರೆ ಫ್ರಾನ್ಸ್, ಜರ್ಮನಿ, ಸ್ವಿಟ್ಜರ್ಲೆಂಡ್ ಮತ್ತು ಇಟಲಿಗಳಲ್ಲಿ ಸುತ್ತಾಡಿದ. 1756ರಲ್ಲಿ ಸ್ವದೇಶಕ್ಕೆ ಹಿಂದಿರುಗಿದಾಗ ರಿಕ್ತಹಸ್ತನೂ ವೃತ್ತಿವಿಹೀನನೂ ಆದ ಇವನಿಗೆ ಮುಂದೇನು ಎನ್ನುವ ಸಮಸ್ಯೆ ಒದಗಿತು.

ಜೀವನದ ವಿವಿಧ ರಂಗಗಳಲ್ಲಿ ಸೋಲನ್ನು ಅಪ್ಪಿದ ಗೋಲ್ಡ್‌ಸ್ಮಿತ್ ಕೊನೆಗೆ ಸಾಹಿತ್ಯ ಕೃಷಿಯಿಂದ ಜೀವನ ನಡೆಸಲು ನಿರ್ಧರಿಸಿದ. ತನ್ನ ಮೂವತ್ತರ ಪ್ರಾಯದಲ್ಲಿ ಗುಡ್‌ಗೇಟ್ ಬೀದಿಯಲ್ಲಿ ಅಸ್ತವ್ಯಸ್ತ ವಾಸ್ತವ್ಯವನ್ನು ಹೊಂದಿದ್ದ ಈತ ಪತ್ರಿಕೆಗಳ ಆದೇಶದಂತೆ ಧಾರ್ಮಿಕ, ಐತಿಹಾಸಿಕ, ರಾಜಕೀಯ ಹಾಗೂ ಶಿಶುಸಾಹಿತ್ಯಕ್ಕೆ ಸಂಬಂಧಿಸಿದ ಲೇಖನಗಳನ್ನೂ ಅನುವಾದಗಳನ್ನೂ ಒಂದೇ ಸಮನೆ ಬರೆಯತೊಡಗಿದ. 1757ರ ಸುಮಾರಿಗೆ ಈತನ ಲೇಖನಗಳು ಮಂತ್ಲಿರಿವ್ಯೂ ಎಂಬ ಪತ್ರಿಕೆಯಲ್ಲಿ ಪ್ರಕಟವಾಗತೊಡಗಿದವು. ಮಾರನೆಯ ವರ್ಷ ಭಾರತದಲ್ಲಿ ವೈದ್ಯವೃತ್ತಿಯೊಂದನ್ನು ಪಡೆಯಲು ಪ್ರಯತ್ನಿಸಿ ವಿಫಲನಾದ. 1759ರಲ್ಲಿ ಈತನ ಮೊದಲ ಸಾಹಿತ್ಯಕೃತಿ– ಎನ್ ಇನ್‌ಕ್ವಯರಿ ಇನ್ ಟು ದಿ ಸ್ಟೇಟ್ ಆಫ್ ಪೊಲಿಟಿಕಲ್ ಲರ್ನಿಂಗ್ ಇನ್ ಯುರೋಪ್ ಪ್ರಕಟವಾಯಿತು. ಅದೇ ವರ್ಷ ಈತನ ಪ್ರಬಂಧ ಸಂಕಲನ ದಿ ಬೀ ಎಂಬುದು ಬೆಳಕು ಕಂಡಿತು. 1761ರಲ್ಲಿ ಗೋಲ್ಡ್‌ಸ್ಮಿತ್‌ನಿಗೆ ಜಾನ್ಸನ್ನನ ಸ್ನೇಹವಾಯಿತಲ್ಲದೆ ಲಿಟರರಿ ಕ್ಲಬ್ಬಿನ ಸದಸ್ಯತ್ವವೂ ದೊರೆಯಿತು. ದಿ ಸಿಟಿಜನ್ ಆಫ್ ದಿ ವರ್ಲ್ಡ್ ಎಂಬ ಹೆಸರಿನಲ್ಲಿ ಪುಸ್ತಕರೂಪದಲ್ಲಿ ಪ್ರಕಟವಾದ ಪತ್ರಗಳ ಮಾಲೆ ದಿ ಪಬ್ಲಿಕ್ ಲೆಡ್ಜರ್ ಎಂಬ ಪತ್ರಿಕೆಯಲ್ಲಿ ಮೊದಲು ಪ್ರಕಟವಾದದ್ದು 1762ರಲ್ಲಿ. ಬಾಲ್ಯದಿಂದಲೇ ಕವಿತೆಗಳನ್ನು ಬರೆಯಲು ಯತ್ನಿಸಿದ್ದ ಗೋಲ್ಡ್‌ಸ್ಮಿತ್ ಆ ಕೆಲವು ವರ್ಷ ಪತ್ರಿಕೆಗಳಲ್ಲಿ ಕಾವ್ಯನಾಮದಿಂದ ಹಲವಾರು ಕವನಗಳನ್ನು ಪ್ರಕಟಿಸಿದ. ಈತನ ನೀಳ್ಗವನಗಳಲ್ಲಿ ಮುಖ್ಯವೆನಿಸಿರುವ ದಿ ಟ್ರ್ಯಾವಲರ್ ಎಂಬುದು ಪ್ರಸಿದ್ಧವಾದ್ದು 1764ರಲ್ಲಿ. ಕೂಡಲೆ ಜನಮನವನ್ನು ಸೆಳೆದ ಈ ಕವಿತೆ ಗೋಲ್ಡ್‌ಸ್ಮಿತನ ಜನಪ್ರಿಯತೆ ಹಾಗೂ ಯಶಸ್ಸಿಗೆ ನಾಂದಿಯಾಯಿತು. ಈ ಕವಿತೆಯ ಕಲ್ಪನೆ ಹಾಗೂ ರಚನಾಕ್ರಮ ತುಂಬ ಸರಳ ಹಾಗೂ ಉದಾತ್ತವಾಗಿದೆ. ಆಂಗ್ಲಪ್ರವಾಸಿಯೊಬ್ಬ ಆಲ್ಪ್ಸ್ ಪರ್ವತದ ಶಿಲೆಯೊಂದರ ಮೇಲೆ ಕುಳಿತು ಅದರ ತಳದಲ್ಲಿ ಕೂಡುತ್ತಿರುವ ಮೂರು ದೇಶಗಳ ಸಂಸ್ಕೃತಿಯನ್ನು ವೀಕ್ಷಿಸುತ್ತ ತನ್ನ ಪ್ರಯಾಣದ ಗುಂಟ ನೋಡಿದ ರಾಜಕೀಯ, ಧಾರ್ಮಿಕ ಹಾಗೂ ಸಾಮಾಜಿಕ ವೈವಿಧ್ಯಗಳನ್ನು ಮೆಲಕುಹಾಕುತ್ತ ಮಾನವನ ಸುಖ ಬಹಿಃಸ್ಥಿತವಲ್ಲ, ಅಂತಃಸ್ಥಿತ– ಎನ್ನುವ ನಿರ್ಧಾರಕ್ಕೆ ಬರುವುದನ್ನು ಚಿತ್ರಿಸುವುದು ಈ ಕಾವ್ಯದ ಮುಖ್ಯೋದ್ದೇಶ. ಇದರಲ್ಲಿ ಬರುವ ವರ್ಣನೆಗಳು ಸೊಗಸಾಗಿವೆಯಲ್ಲದೆ ಶೈಲಿ ಸರಳವಾಗಿದೆ.

ದಿ ವಿಕಾರ್ ಆಫ್ ವೇಕ್‌ಫೀಲ್ಡ್ ಎನ್ನುವ ಪ್ರಸಿದ್ಧ ಕಾದಂಬರಿ 1766ರಲ್ಲಿ ಪ್ರಕಟವಾಯಿತು. ಸಂವಿಧಾನದಲ್ಲಿ ಶೈಥಿಲ್ಯವಿದ್ದು ಅಸಂಭಾವ್ಯ ಹಾಗೂ ಅಸಂಬದ್ಧ ಘಟನೆಗಳಿಂದ ಕೂಡಿದ್ದರೂ ಇದು ಪ್ರಕಟವಾದಂದಿನಿಂದ ಇಲ್ಲಿಯವರೆಗೆ ತನ್ನ ಜನಪ್ರಿಯತೆಯನ್ನು ಉಳಿಸಿಕೊಂಡಿದೆ. ಗೋಲ್ಡ್‌ಸ್ಮಿತನ ಜೀವನದ ಹಲವಾರು ಘಟನೆ, ಅನುಭವಗಳನ್ನು ಚಿತ್ರಿಸುವ ಇದು ಒಂದು ಕೌಟುಂಬಿಕ ಕತೆ. ಹಳ್ಳಿಯ ಜೀವನದ ಮಾಧುರ್ಯ ಹಾಗೂ ರಸಮಯ ಸನ್ನಿವೇಶಗಳ ಚಿತ್ರದಿಂದ ಪರಿಪ್ಲುತವಾಗಿರುವ ಇದರ ಪೂರ್ವಾರ್ಧ ತುಂಬ ಆಕರ್ಷಣೀಯವಾಗಿದೆ. ಕನ್ನಡಕದ ವ್ಯಾಪಾರದಲ್ಲಿ ಮೋಸಗೊಂಡ ಮೋಸೆಸ್, ಏಕಪತ್ನಿತ್ವದ ಬಗೆಗೆ ವ್ಯಾಖ್ಯಾನ ಮಾಡುವ ಪ್ರಿಮ್‌ರೋಸ್, ಅರಿಸ್ಟಾಟಲನ ಸಹಾಯದಿಂದ ಸಂಬಂಧಿಕರ ನಡುವೆ ಸಂಬಂಧವಿದೆಯೆಂದು ತೋರಿಸುವ ಜಮೀನುದಾರ, ತನ್ನ ಪೋಕರಿ ಪ್ರಿಯನನ್ನು ಬದಲಾಯಿಸಲು ಹವಣಿಸುವ ಅಲಿವೀಯ, ದೊಡ್ಡಸ್ತಿಕೆಯನ್ನು ಅವಹೇಳನ ಮಾಡುವ ಮಹಿಳೆಯರು–ಇಂಥ ಪಾತ್ರಚಿತ್ರಣಗಳು ಈ ಕಾದಂಬರಿಯ ರಸದ ಮಡುವುಗಳಾಗಿವೆ. ಕೊನೆಕೊನೆಯಲ್ಲಿ ನಿಸ್ಸತ್ವವೆನಿಸಿದರೂ ಹಾಸ್ಯಮಯ ಶೈಲಿ, ಕುತೂಹಲಕಾರಿ ಘಟನೆಗಳ ಸಂಕಲನ ಹಾಗೂ ಸುಂದರವರ್ಣನೆಗಳಿಂದಾಗಿ ಈ ಕೃತಿ ಬಹು ಆಕರ್ಷಕವಾಗಿದೆ.

ದಿ ಗುಡ್ ನೇಚರ್ಡ್ ಮ್ಯಾನ್ ಎಂಬ ತನ್ನ ನಾಟಕದಲ್ಲಿ (1768) ಗೋಲ್ಡ್‌ಸ್ಮಿತ್ ಸ್ವಾಭಾವಿಕ ಹಾಸ್ಯವನ್ನು ರಂಗದ ಮೇಲೆ ತರಲು ಮಾಡಿದ ಮೊದಲ ಪ್ರಯತ್ನವನ್ನು ಕಾಣಬಹುದು. ತಾರತಮ್ಯವಿಲ್ಲದ ಅತಿ ಔದಾರ್ಯವನ್ನು ಗೇಲಿ ಮಾಡುವುದು ಈ ರೂಪಕದ ಉದ್ದೇಶ. ಅತಿಭಾವುಕತೆ ಹಾಗೂ ಅದರ ಖಂಡನೆ ಎರಡನ್ನೂ ಇದರಲ್ಲಿ ಕಾಣಬಹುದು. ಕಥಾನಾಯಕ ಹನಿವುಡ್‌ನ ಸುಸ್ವಭಾವ ಹಾಗೂ ಮುಗ್ಧತೆಯೇ ಅವನನ್ನು ನಗೆಪಾಟಲಿಗೆ ಈಡುಮಾಡಿ ಕೊನೆಗೆ ಹೇಗೆ ಅವನ ಕಣ್ಣು ತೆರೆಸುತ್ತದೆಂಬುದನ್ನು ಚಿತ್ರಿಸುವ ಈ ನಾಟಕ ಅಂದಿನ ಭಾವುಕತೆಯ ರಂಗಭೂಮಿಯಲ್ಲಿ ಹೊಸಗಾಳಿಯಂತೆ ಸುಳಿಯಿತು.

1770ರಲ್ಲಿ ಗೋಲ್ಡ್‌ಸ್ಮಿತನ ದಿ ಡೆಸರ್ಟೆಡ್ ವಿಲೆಜ್ ಎನ್ನುವ ಕವನ ಪ್ರಕಟವಾಯಿತು. ಪ್ರಯೋಗ ಹಾಗೂ ತಾಂತ್ರಿಕ ದೃಷ್ಟಿಯಿಂದ ಇದೊಂದು ಸಫಲಕಾವ್ಯ. ಮಾನವೀಯ ವ್ಯಕ್ತಿಚಿತ್ರಣ, ಗ್ರಾಮಜೀವನದ ಸೌಂದರ್ಯ ನಿರೂಪಣೆ, ಕವಿತೆಯುದ್ದಕ್ಕೂ ಹಾಸುಹೊಕ್ಕಾದ ಶೋಕರಸ–ಇವು ಈ ಕೃತಿಯ ಜೀವಾಳ. ಆದರೆ ಕಾವ್ಯದಲ್ಲಿ ಸಮಗ್ರ ಕಂಡುಬರುವ ನ್ಯೂನತೆಯೊಂದನ್ನು ವಿಮರ್ಶಕರು ಎತ್ತಿ ತೋರಿಸಿದ್ದಾರೆ. ತನ್ನ ವೈಭವದ ಕಾಲದಲ್ಲಿ ಆಂಗ್ಲ ಹಳ್ಳಿಯಂತೆ ತೋರುತ್ತಿದ್ದ ಇದು ತನ್ನ ವಿನಾಶ ಕಾಲದ ಚಿತ್ರಣದಲ್ಲಿ ಐರ್ಲೆಂಡಿನ ಹಳ್ಳಿಯಂತೆ ಇದೆ. ಹೀಗೆ ಎರಡು ಭಿನ್ನ ಸಂಸ್ಕೃತಿಗಳನ್ನು ಒಂದೆಡೆ ತೋರಿಸಿರುವುದರಿಂದ ಅನೌಚಿತ್ಯ ಉಂಟಾಗಿದೆ. 1773ರಲ್ಲಿ ಷಿ ಸ್ಟೂಪ್ಸ್ ಟು ಕಾನ್‌ಕರ್ ಎನ್ನುವ ಪ್ರಥಮ ನಾಟಕ ಪ್ರಕಟವಾಯಿತು. ಆಂಗ್ಲ ಪ್ರೇಕ್ಷಕರನ್ನು ನಗೆಗಡಲಿನಲ್ಲಿ ತೇಲಿಸಿದ ಇದು ಪ್ರಥಮ ಪ್ರದರ್ಶನದಿಂದಲೇ ಜನಪ್ರಿಯವಾಯಿತು. ಮಾವನ ಮನೆಯನ್ನೇ ಹೋಟೆಲೆಂದು ಭಾವಿಸಿದ ಭಾವೀ ಅಳಿಯ ಹಾಗೂ ಅವನ ಸ್ನೇಹಿತರ ರಾದ್ಧಾಂತವನ್ನು ಹಾಸ್ಯದ ನೇಯ್ಗೆಯಲ್ಲಿ ಹೆಣೆದ ಈ ನಾಟಕ ಅಸಂಭಾವ್ಯ ಘಟನೆ ಹಾಗೂ ಅವಾಸ್ತವಿಕತೆಯಿಂದ ತುಂಬಿದ್ದರೂ ರಂಗಭೂಮಿಯಲ್ಲಿ ಅದ್ಭುತ ಯಶಸ್ಸನ್ನು ಪಡೆಯಿತು. ತಿಳಿಯಾದ ಭಾಷೆಯಲ್ಲಿ ನಿರೂಪಿತವಾದ ಸಂಭಾಷಣೆ ಹಾಗೂ ಜೀವಂತ ಪಾತ್ರಚಿತ್ರಣ ಇವು ಇದರ ಎದ್ದು ಕಾಣುವ ಅಂಶಗಳು.

ಗೋಲ್ಡ್‌ಸ್ಮಿತ್ ಕಷ್ಟಕಾರ್ಪಣ್ಯಗಳಲ್ಲಿ ಜೀವನವನ್ನು ನೂಕಬೇಕಾಯಿತು. ಮೃದು ಮನಸ್ಸು, ದುಂದುಗಾರಿಕೆ ಮತ್ತು ಔದಾರ್ಯಗಳ ಮೂಲಕ ಕೊನೆಯವರೆಗೂ ಆರ್ಥಿಕ ಮುಗ್ಗಟ್ಟಿನಲ್ಲಿದ್ದು ಅಧಿಕ ಶ್ರಮದಿಂದ ಆರೋಗ್ಯವನ್ನು ಕೆಡಿಸಿಕೊಂಡು ಸಾವನ್ನಪ್ಪಿದನಾದರೂ ತನ್ನ ವಿಚಿತ್ರ ಕಲ್ಪನೆ, ಮೃದು ಮಾನವೀಯತೆ, ಕಣ್ಣನ್ನು ಅರಳಿಸುವ ಹಾಸ್ಯ, ಸುಂದರ ಶೈಲಿ–ಇವುಗಳಿಂದಾಗಿ ಗೋಲ್ಡ್‌ಸ್ಮಿತ್ ಚಿರಸ್ಮರಣೀಯನಾಗಿದ್ದಾನೆ. ಈತನ ಸುಹೃತ್‌ಪರಂಪರೆಯಲ್ಲಿ ಜಾನ್‌ಸನ್, ಬರ್ಕ್ ಮತ್ತು ಕಲಾವಿದ ರೇನಲ್ಡ್ಸ್ ಮೊದಲಾದವರು ಬರುತ್ತಾರೆ. ಅವರೆಲ್ಲ ಇವನನ್ನು ಕಂಡು ಗೇಲಿ ಮಾಡಿದರಾದರೂ ಎಲ್ಲರೂ ಮನಸಾರೆ ಮೆಚ್ಚಿದ್ದರು. ಆಂತರ್ಯದಲ್ಲಿ ಅಪಾರವಾಗಿ ಪ್ರೀತಿಸಿದರು. ಈತನ ಸಾವಿನ ಸುದ್ದಿ ಮುಟ್ಟಿದೊಡನೆ ಬರ್ಕ್ ಬಿಕ್ಕಿಬಿಕ್ಕಿ ಅತ್ತನಂತೆ. ರೇನಲ್ಡ್ಸ್ ಆ ದಿನವೆಲ್ಲ ತನ್ನ ಕುಂಚವನ್ನು ಎತ್ತಲಿಲ್ಲವಂತೆ. ಜಾನ್‌ಸನ್ 'ಈತ ಮುಟ್ಟಿದ್ದನ್ನೆಲ್ಲ ಚಿನ್ನವಾಗಿಸಿದ' ಎಂಬ ಅರ್ಥಬರುವ ಚರಮ ವಾಕ್ಯವೊಂದನ್ನು ಲ್ಯಾಟಿನಿನಲ್ಲಿ ಬರೆದನಂತೆ. ಬಡವರು, ರೋಗಗ್ರಸ್ತರು, ದೀನದಲಿತರು ಇವನ ಮನೆಯ ಮುಂದೆ ನೆರೆದು, ತನ್ನ ಬಡತನದಲ್ಲೂ ತಮ್ಮನ್ನು ಕೈಬಿಡದೆ ನಡೆಸಿದ ಅನ್ನದಾತ ಸತ್ತುದಕ್ಕಾಗಿ ಕಣ್ಣೀರಿಟ್ಟರಂತೆ. ಬಡತನವನ್ನು ನೀಗಿಸಿಕೊಳ್ಳಲೆಂದು ಗೋಲ್ಡ್‌ಸ್ಮಿತ್ ಬರೆದ ಎಲ್ಲ ಬರಹಗಳೂ ಶಾಶ್ವತ ಮೌಲ್ಯವನ್ನು ಪಡೆಯಲಿಲ್ಲವಾದರೂ ದಿ ಟ್ರ್ಯಾವಲರ್, ದಿ ಡೆಸರ್ಟೆಡ್ ವಿಲೆಜ್, ಷಿ ಸ್ಟೂಪ್ಸ್ ಟು ಕಾನ್‌ಕರ್, ಎಲ್ಲಕ್ಕಿಂತ ಮಿಗಿಲಾಗಿ ದಿ ವಿಕಾರ್ ಆಫ್ ವೇಕ್‌ಫೀಲ್ಡ್ ಕಾದಂಬರಿ–ಇವು ಇಂಗ್ಲಿಷ್ ಸಾಹಿತ್ಯದಲ್ಲಿ ಅಮರವಾಗಿ ನಿಂತಿವೆ. (ಎನ್.ಎನ್.ಎಸ್.)

**ಗೋಲ್ಡ್‌ಸ್ಟೀನ್, ಕೆನ್ನೆತ್ :** 1927–95. ಅಮೆರಿಕದ ಜಾನಪದ ತಜ್ಞ, ಸಂಗ್ರಹಕಾರ ಮತ್ತು ಲೇಖಕ. ತಂದೆ ಇರ್ವಿಂಗ್ ಮಾರ್ಟಿನ್ ಗೋಲ್ಡ್‌ಸ್ಟೀನ್ ಕೆನ್ನೆತ್ ಇಂಗ್ಲೆಂಡ್ ದೇಶದವನು. ತಾಯಿ ಲಾತ್ವಿಯ ದೇಶದವಳು. ಈತ 1927ರಲ್ಲಿ ಅಮೆರಿಕದ ನ್ಯೂಯಾರ್ಕ್ ನಗರದ ಬ್ರೂಕ್‌ಲೈನ್‌ನಲ್ಲಿ ಜನಿಸಿದ. ಅಲ್ಲಿನ ಸಿಟಿ ಕಾಲೇಜಿನಿಂದ ಬಿ.ಎ. ಮತ್ತು ಎಂ.ಎ. ಪದವಿಗಳನ್ನು ಬಿಝಿನೆಸ್ ಅಡ್ಮಿನಿಸ್ಟ್ರೇಶನ್‌ನಲ್ಲಿ (ವ್ಯವಹಾರ ಕಾರ್ಯನಿರ್ವಹಣೆ) ಪಡೆದ. 1940ರ ದಶಕದಲ್ಲಿ ಸೈನ್ಯದಲ್ಲಿ ಸೇವೆ ಸಲ್ಲಿಸಿದ. 1949ರಲ್ಲಿ ರೊಚೆಲ್ಲೆ ಜೂಡಿತ್ ಕೊರ್ನ್‌ಳನ್ನು ವಿವಾಹವಾದ.

ಈತ 1950ರ ದಶಕದ ಪ್ರಾರಂಭಿಕ ವರ್ಷಗಳಲ್ಲಿ ಅಲ್ಪಾವಧಿಯ ಕ್ಷೇತ್ರಾಧ್ಯಯನವನ್ನು ಕುರಿತು ಅನೇಕ ಶಿಬಿರಗಳನ್ನು ನಡೆಸಿ ಯಶಸ್ವಿಯಾದ. ಇದರಿಂದ ಈತನಿಗೆ ಅಪಾರ ಮನ್ನಣೆ ಮತ್ತು ಅನುಭವ ಲಭಿಸಿತು. 1951ರಲ್ಲಿ ನ್ಯೂಯಾರ್ಕ್‌ನಲ್ಲಿ, 1952 ರಿಂದ 1957ರ ವರೆಗೆ ಉತ್ತರ ಕರೋಲಿನದಲ್ಲಿ, 1953ರಲ್ಲಿ ಮೆಸಾಚುಸೆಟ್ಸ್‌ನಲ್ಲಿ, 1959–60ರಲ್ಲಿ ಉತ್ತರ, ಈಶಾನ್ಯ ಸ್ಕಾಟ್ಲೆಂಡಿನಲ್ಲಿ ಪ್ರಸಿದ್ಧ ಧ್ವನಿಮುದ್ರಣ ಸಂಸ್ಥೆಗಳಿಗಾಗಿ ಜನಪದ ಸಂಗೀತವನ್ನು ನಿರ್ದೇಶಿಸಿದ. ಈತನ ಲಕ್ಷ್ಯ ಸ್ಕಾಟ್ಲೆಂಡ್, ಐರ್ಲೆಂಡ್, ಇಂಗ್ಲೆಂಡ್, ಆಸ್ಟ್ರೇಲಿಯ ಪ್ರದೇಶದ ಜಾನಪದದ ಕಡೆಗೆ ಇತ್ತು. ಈತನಿಗೆ ಕೆನಡಕ್ಕೆ ಸೇರಿದ ಪ್ರದೇಶಗಳಾದ ಲ್ಯಾಬ್ರಡಾರ್ ಮತ್ತು ನ್ಯೂಫೌಂಡ್ಲೆಂಡ್ ಮೇಲೆ ಅಧಿಕವಾದ ಆಸಕ್ತಿ.

1958ರಲ್ಲಿ ಈತ ಪೆನ್ಸಿಲ್ವೇನಿಯ ವಿಶ್ವವಿದ್ಯಾಲಯದ ಪದವಿ ಕಾಲೇಜಿಗೆ ಸೇರಿದ. ಅಲ್ಲಿ ಮಾನವ ವಿಜ್ಞಾನದಲ್ಲಿ ಆಸಕ್ತಿಯಿಂದ ಭಾಗವಹಿಸಿ ಜಾನಪದ ವಿದ್ವಾಂಸನಾದ. ಜಾನಪದವು ಮಾನವವಿಜ್ಞಾನ ವಿಭಾಗದಿಂದ ಬೇರ್ಪಟ್ಟು ಪ್ರತ್ಯೇಕ ವಿಭಾಗವಾಯಿತು. ಅಲ್ಲಿ ಪ್ರಪ್ರಥಮ ಸಂಶೋಧಕನಾಗಿ ಪಿಎಚ್.ಡಿ. ಪದವಿಯನ್ನು ಪಡೆದ. ಎ ಗೈಡ್ ಫಾರ್ ಫೀಲ್ಡ್ ವರ್ಕರ್ಸ್ ಇನ್ ಫೋಕ್‌ಲೋರ್ ಈತನ ಪಿಎಚ್.ಡಿ. ಮಹಾಪ್ರಬಂಧ. ಅನಂತರ ಅಲ್ಲಿಯೇ ಗುತ್ತಿಗೆ ಆಧಾರದ ಮೇಲೆ ಪ್ರಾಧ್ಯಾಪಕನಾಗಿ ನೇಮಕವಾದ; ಅಮೆರಿಕದ ಜಾನಪದ ವಿದ್ವಾಂಸರಲ್ಲಿ ಪ್ರಥಮಸ್ಥಾನ ಪಡೆದ. ಅಲ್ಲಿ ಬ್ರಿಟನ್, ಐರ್ಲೆಂಡ್ ಮತ್ತು ಅಮೆರಿಕದ ಜನಪದ ಗೀತೆ, ಲಾವಣಿ ಮತ್ತು ಜನಪದ ಕಥನಗಳನ್ನು ಬೋಧಿಸುತ್ತಿದ್ದ.


ಈತ ಅನೇಕ ಸಂಘ ಸಂಸ್ಥೆಗಳಲ್ಲಿ ಗೌರವಾನ್ವಿತ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ. ನ್ಯೂಫೌಂಡ್ಲೆಂಡ್‌ನ ಮೆಮೋರಿಯಲ್ ವಿಶ್ವವಿದ್ಯಾಲಯದ ಜಾನಪದ ವಿಭಾಗದ ಮುಖ್ಯಸ್ಥನಾಗಿ ಸೇವೆ ಸಲ್ಲಿಸಿದ. 1960ರಲ್ಲಿ ಪ್ರಕಾಶನ ಸಂಸ್ಥೆಯೊಂದನ್ನು ಪ್ರಾರಂಭಿಸಿ ಜಾನಪದ ವಿಷಯದ ಕೃತಿಗಳನ್ನು ಪ್ರಕಟಿಸಿದ್ದಾನೆ. ಈತ ಜಾನಪದ ಕುರಿತು ಕೃತಿಗಳನ್ನೂ 30 ಪಾಂಡಿತ್ಯಪೂರ್ಣ ಲೇಖನಗಳನ್ನೂ ಪ್ರಕಟಿಸಿದ್ದಾನೆ. ಈತ ತನ್ನ 68ನೆಯ ವಯಸ್ಸಿನಲ್ಲಿ 1995ರ ನವೆಂಬರ್ 11 ರಂದು ನಿಧನನಾದ. (ಕೆ.ಆರ್.)

**ಗೋಲ್ಪಾರಾ :** ಅಸ್ಸಾಂ ರಾಜ್ಯದ ಒಂದು ಜಿಲ್ಲೆ; ಅದೇ ಹೆಸರಿನ ಒಂದು ಪಟ್ಟಣ. ಬ್ರಹ್ಮಪುತ್ರಾ ನದಿಯ ಎಡಬಲ ದಂಡೆಗಳ ಮೇಲೆ ಹಬ್ಬಿದೆ. ವಿಸ್ತೀರ್ಣ 1.824 ಚ.ಕಿಮೀ. ಜನಸಂಖ್ಯೆ 10,80,959 (2011). ಈ ಪ್ರದೇಶದಲ್ಲಿ ಉಸುಕು ಭೂಮಿ ಇರುವುದರಿಂದ

ಅಸ್ಸಾಮಿನ ಉಳಿದ ಭಾಗಗಳಿಗಿಂತ ಇಲ್ಲಿ ಚಳಿ ಕಡಿಮೆ, ಸೆಕೆ ಹೆಚ್ಚು. ಪೂರ್ವದ್ವಾರ ಮತ್ತು ತರಾಯೀ ಭಾಗಗಳು ಮಲೇರಿಯಭೂಯಿಷ್ಠ. ಉಳಿದ ಕಡೆಗಳಲ್ಲಿ 80"–90" ಮಳೆಯಾಗುತ್ತದೆ. ರಾಜ್ಯದ ಉಳಿದ ಎಲ್ಲ ಭಾಗಗಳಿಗಿಂತ ಇಲ್ಲಿ ಭೂಕಂಪನಗಳ ಸಂಭವ ಹೆಚ್ಚು. ಈ ಭಯದಿಂದಾಗಿ ಇಲ್ಲಿ ಬಿದಿರಿನ ಬೊಂಬುಗಳಿಂದ ಕಟ್ಟಿದ ಮನೆಗಳೇ ಹೆಚ್ಚು. ಶೇ. 84 ರಷ್ಟು ಜನರ ಉದ್ಯೋಗ ಕೃಷಿ.

ಗೋಲ್ಪಾರಾ ಪಟ್ಟಣ ಹಿಂದೆ ಈಸ್ಟ್ ಇಂಡಿಯ ಕಂಪೆನಿಯ ಅಧಿಕಾರ ಕಕ್ಷೆಯಲ್ಲಿತ್ತು. ಇಲ್ಲಿ ನೆಲೆಯೂರಿದ ಇಂಗ್ಲಿಷರು ಬಂಗಾಲದ ಬಹುತೇಕ ವ್ಯಾಪಾರವನ್ನು ಬಲವಂತದಿಂದ ತಮ್ಮ ಕಡೆಗೆ ಸೆಳೆದುಕೊಂಡರು. 1878ರಲ್ಲಿ ಇಲ್ಲಿ ಪೌರ ಸಮಿತಿಯ ಸ್ಥಾಪನೆಯಾಯಿತು. ಇಲ್ಲಿ ಟೀ, ರಬ್ಬರ್, ಹತ್ತಿ, ಎಳ್ಳು, ಮರ, ಸೆಣಬು ಮುಂತಾದವುಗಳ ವ್ಯಾಪಾರ ಹೆಚ್ಚಾಗಿ ನಡೆಯುತ್ತದೆ. ಇಲ್ಲಿಯ ವರೆಗೆ ಸಣ್ಣ ಹಡಗುಗಳು ಬಂದುಹೋಗುತ್ತವೆ. 2006ರಲ್ಲಿ ಭಾರತ ಸರ್ಕಾರ ಈ ಜಿಲ್ಲೆಯನ್ನು ದೇಶದಲ್ಲಿ ಅತ್ಯಂತ ಹಿಂದುಳಿದ ಜಿಲ್ಲೆಗಳಲ್ಲೊಂದೆಂದು ಪರಿಗಣಿಸಿ ಅನುದಾನ ನೀಡುತ್ತಿದೆ. (ಎಸ್.ಎನ್‌ಎಆರ್‌ಇ.)

**ಗೋವ** : ಭಾರತದ ಅತಿ ಚಿಕ್ಕ ರಾಜ್ಯ. ಉತ್ತರದಲ್ಲಿ ಮಹಾರಾಷ್ಟ್ರ, ಪೂರ್ವ ಮತ್ತು ದಕ್ಷಿಣದಲ್ಲಿ ಕರ್ನಾಟಕ ರಾಜ್ಯಗಳೂ ಪಶ್ಚಿಮದಲ್ಲಿ ಅರಬ್ಬೀ ಸಮುದ್ರವೂ ಇದನ್ನು ಸುತ್ತುವರೆದಿವೆ. ಇದರ ವಿಸ್ತೀರ್ಣ 3,702. ಚ.ಕಿಮೀ. ಜನಸಂಖ್ಯೆ 14,57,723 (2011). ಆಡಳಿತ ಕೇಂದ್ರ ಪಣಜಿ.




ಗೋವ ಉತ್ತರದಲ್ಲಿ ತೇರೇಖೋಲ್ ನದಿಯಿಂದಾಗಿ ಮಹಾರಾಷ್ಟ್ರದಿಂದ ಪ್ರತ್ಯೇಕಿಸಲ್ಪಟ್ಟಿದೆ. ಸಹ್ಯಾದ್ರಿಯ ಸೆರಗಿನಲ್ಲಿರುವ ಗೋವದ ಪೂರ್ವಭಾಗ ಮಲೆನಾಡು. ಪೂರ್ವದಿಂದ ಪಶ್ಚಿಮಕ್ಕೆ ಹಲವಾರು ನದಿ ತೊರೆಗಳು ಹರಿದು ಅರಬ್ಬೀ ಸಮುದ್ರವನ್ನು ಸೇರುತ್ತವೆ. ಇವುಗಳಲ್ಲಿ ಮುಖ್ಯವಾದವು ಮಾಂಡವೀ, ಝುವಾರೀ (ಅಘನಾಶಿನೀ), ತೇರೇಖೋಲ್, ಚಪೋರ್ ಮತ್ತು ಬೆತುಲ್. ಇವುಗಳಿಂದ ಒಟ್ಟು ಸು. 270 ಕಿಮೀಗಳಷ್ಟು ಜಲಮಾರ್ಗಗಳೇರ್ಪಟ್ಟಿವೆ. ಮಾಂಡವೀ ಗೋವದ ಈಶಾನ್ಯ ಭಾಗದಲ್ಲಿರುವ ಪರ್ವತ ಭೀಮಗಡದಲ್ಲಿ ಹುಟ್ಟಿ ಅಗ್ವಾದ ಕಿಲ್ಲೆಯ ಹತ್ತಿರ ಅರಬ್ಬೀ ಸಮುದ್ರವನ್ನು ಸೇರುತ್ತದೆ. ಝುವಾರೀ ನದಿ ಹೇಮಾಡ್ ಬಾರ್ಸೆ ಮತ್ತು ಅಷ್ಟಾಗ್ರಹಾರ ಎಂಬ ಭಾಗದಲ್ಲಿ ಹುಟ್ಟಿ ಮುರ್‌ಗಾಂವ್ ಕೊಲ್ಲಿಯಲ್ಲಿ ಸಮುದ್ರವನ್ನು ಸೇರುತ್ತದೆ. ತೇರೇಖೋಲ್ ಮೂರನೆಯ ದೊಡ್ಡ ನದಿ. ಮಣೇರಿಯ ಹತ್ತಿರ ಹುಟ್ಟಿ ತೇರೇಖೋಲ್ ಕಿಲ್ಲೆಯ ಹತ್ತಿರ ಸಮುದ್ರವನ್ನು ಸೇರುತ್ತದೆ. ಈ ನದಿಯ ದಡಗಳಲ್ಲಿ ತೆಂಗು ಅಡಿಕೆಗಳ ತೋಟಗಳನ್ನು ವಿಶೇಷವಾಗಿ ಕಾಣಬಹುದು.

ಸಹ್ಯಾದ್ರಿಯ ಕವಲುಗಳು ಗೋವದಲ್ಲಿವೆ. ಇವುಗಳಲ್ಲಿ ಪೂರ್ವಕ್ಕಿರುವ ಸೊಂಸೋಗಡ ಬೆಟ್ಟ ಪ್ರಸಿದ್ಧವಾಗಿದೆ. ಅದರ ಉತ್ತರಕ್ಕೆ ಸತ್ತರೀ ಮಹಾಲದಲ್ಲಿ ವಾಘೇರಿ ಬೆಟ್ಟವಿದೆ. ಇನ್ನೊಂದು ಬೆಟ್ಟ ಮೋರ್ಲೆಗಡ. ಸಮಪಾತಳಿಯ ಮೇಲೆ ಇರುವ ಚಂದ್ರನಾಥ ಬೆಟ್ಟ ಸೃಷ್ಟಿಸೌಂದರ್ಯ ವೀಕ್ಷಣೆಗೆ ಪ್ರಸಿದ್ಧವೆನಿಸಿದೆ.

ಗೋವದ ವಾಯುಗುಣ ತೇವೋಷ್ಣಮಯ. ಉಷ್ಣತೆಯಲ್ಲಿ ಹೆಚ್ಚು ವಾರ್ಷಿಕ ಅಂತರಗಳಿಲ್ಲ. 100 ಮೀಗಿಂತ ಹೆಚ್ಚು ಎತ್ತರವಿಲ್ಲದ ಪೂರ್ವಾರ್ಧ ಭಾಗದಲ್ಲಿ 90"–120" (2,800–3,500ಮಿಮೀ) ಮಳೆಯಾಗುತ್ತದೆ. ಉಷ್ಣತೆ 70° ಫ್ಯಾ. – 90° ಫ್ಯಾ. (22° ಸೆಂ–32° ಸೆಂ). ಹೆಚ್ಚು ಎತ್ತರದ ಪ್ರದೇಶವಾದ (ಗರಿಷ್ಠ ಎತ್ತರ 1,200 ಮೀ) ಪೂರ್ವಭಾಗದಲ್ಲಿ ಹೆಚ್ಚು ಮಳೆಯಾಗುತ್ತದೆ (ಗರಿಷ್ಠ 300"). ಇಲ್ಲಿ ಉಷ್ಣತೆಯ ಅಂತರವೂ ಅಧಿಕ.

ಗೋವದ ಶೇ.29 ಪ್ರದೇಶ ಅರಣ್ಯಾವೃತ. ವೈಜ್ಞಾನಿಕವಾಗಿ ಅರಣ್ಯವನ್ನು ರಕ್ಷಿಸುವ ಕಾರ್ಯ ಇತ್ತೀಚಿನ ವರೆಗೂ ನಡೆದಿರಲಿಲ್ಲ. 1963 ರಿಂದೀಚೆಗೆ ಈ ನಿಟ್ಟಿನಲ್ಲಿ ಪ್ರಯತ್ನಗಳು ಸಾಗಿವೆ. ನೀಲಗಿರಿ, ತೇಗ, ಗೋಡಂಬಿ, ರಬ್ಬರ್, ಬಿದಿರು, ಕ್ಯಾಸುವರೈನ, ಸವಾರ್, ಮಾವು–ಈ ಮರಗಳನ್ನು ಈಗ ಬೆಳೆಸಲಾಗುತ್ತಿದೆ.

ಗೋವದಲ್ಲಿ 1.4 ಲಕ್ಷ ಹೆಕ್ಟೇರು ಪ್ರದೇಶದಲ್ಲಿ ಸಾಗುವಳಿ ಮಾಡಲಾಗುತ್ತಿದೆ. ಬತ್ತ ಇಲ್ಲಿಯ ಮುಖ್ಯ ಬೆಳೆ. ಇತರ ಮುಖ್ಯ ಬೆಳೆಗಳು ಬೇಳೆ ಮತ್ತು ಇತರ ಧಾನ್ಯಗಳು, ಕಬ್ಬು, ತರಕಾರಿ, ತೆಂಗು, ಅಡಿಕೆ, ಗೋಡಂಬಿ ಮತ್ತು ಹಣ್ಣುಗಳು.

ಗೋವದ ಮುಖ್ಯ ನೀರಾವರಿ ಯೋಜನೆಗಳು ಇವು : 1 ಸಾಂಗೆ ತಾಲ್ಲೂಕಿನ ಸಾತಾಲಿ ಮತ್ತು ದೂದ್ ಸಾಗರ್. 2 ಬಾರ್ದೇಜ್ ತಾಲ್ಲೂಕಿನಲ್ಲಿ ಅಂಜುನಾ, ಮಹಾರಾಷ್ಟ್ರದೊಂದಿಗೆ ಕೂಡಿ ತಿಲಾರಿ ಯೋಜನೆಯನ್ನು ಹಮ್ಮಿಕೊಂಡಿದ್ದು ಇದರ ಅಂಗವಾಗಿ ತಿಲಾರಿ ಅಣೆಕಟ್ಟನ್ನು ನಿರ್ಮಿಸಲಾಗುತ್ತಿದೆ. 2013ರ ಹೊತ್ತಿಗೆ ಈ ಯೋಜನೆ ಪೂರ್ಣಪ್ರಮಾಣದಲ್ಲಿ ಕಾರ್ಯರೂಪಕ್ಕೆ ಬರುವ ನಿರೀಕ್ಷೆಯಿದೆ. ವ್ಯವಸಾಯದ ಜೊತೆಗೆ ಮೀನುಗಾರಿಕೆಯೂ ಇಲ್ಲಿಯ ಜನರ ಒಂದು ಮುಖ್ಯ ಕಸಬು. ಇಲ್ಲಿ 250 ಕಿಮೀ ಉದ್ದದ ಕರಾವಳಿಯೂ ಸು 100 ಹೆಕ್ಟೇರುಗಳಷ್ಟು ವಿಸ್ತಾರವಾದ ಸಿಹಿನೀರಿನ ಸರೋವರಗಳೂ ಇವೆ. ಕಡಲತೀರದ ಮತ್ತು ಒಳನಾಡಿನ ಜಲದಲ್ಲಿ ಮತ್ಸ್ಯಸಂಪತ್ತು ಸಮೃದ್ಧವಾಗಿದೆ. ಬಂಗಡೆ, ಬೈಗೆ, ಕೊರ್ಸ್ಲ, ಅರ್ಕುಲ್ಯೆ ಮುಖ್ಯವಾದವು. ಕರಾವಳಿಯಲ್ಲಿ ಮೀನು ಹಿಡಿಯುವ ದೋಣಿಗಳಿಗೆ ರಕ್ಷಣೆಯಾಗಿ ಹಲವಾರು ಕಡಲ ಚಾಚುಗಳೂ ಅಳಿವೆಗಳೂ ಇವೆ. ಮತ್ಸ್ಯೋದ್ಯಮ ರಾಜ್ಯದ ಆರ್ಥಿಕ ಸಂಪನ್ಮೂಲಗಳಲ್ಲೊಂದು.


ಗೋವದಲ್ಲಿ ಒಟ್ಟು 60 ಮೆವಾ. ಸ್ಥಾಪಿತ ಸಾಮರ್ಥ್ಯದ ಜಲವಿದ್ಯುತ್ ಮತ್ತು ಉಷ್ಣವಿದ್ಯುತ್ ಕೇಂದ್ರಗಳಿವೆ. ನೆರೆಯ ಕರ್ನಾಟಕ, ಮಹಾರಾಷ್ಟ್ರಗಳಿಂದ ಗೋವಕ್ಕೆ ವಿದ್ಯುತ್ ಸರಬರಾಜು ಆಗುತ್ತದೆ.

ಗೋವದಲ್ಲಿ ಖನಿಜಸಂಪತ್ತು ಧಾರಾಳವಾಗಿದೆ. ಕಬ್ಬಿಣದ ಅದಿರು, ಕೆಳಶ್ರೇಣಿಯ ಮ್ಯಾಂಗನೀಸ್ ಅದಿರು, ಬಾಕ್ಸೈಟ್ ಇವು ವಿಶೇಷವಾಗಿ ನಿರ್ಯಾತವಾಗುತ್ತವೆ. ಭಾರತದಿಂದ ರಫ್ತಾಗುವ ಕಬ್ಬಿಣ ಅದಿರಿನಲ್ಲಿ ಸುಮಾರು ಅರ್ಧಭಾಗ ಗೋವದಿಂದ ನಿರ್ಯಾತವಾಗುತ್ತದೆ. ಬಿಚೋಲಿ, ಕುದ್ನೇಮ್, ಪಾಲಿ, ಪೈಲ್‌ಗಾಂವ್ ಮತ್ತು ಸಿರಿಗಾಂವ್‌ಗಳಲ್ಲಿ ಕಬ್ಬಿಣ ಅದಿರನ್ನೂ ಸಾಂಗೆ

# ಗೋವ

ತಾಲ್ಲೂಕಿನಲ್ಲಿ ಮ್ಯಾಂಗನೀಸನ್ನೂ ಕೆಪೆ ತಾಲ್ಲೂಕಿನಲ್ಲಿ ಬಾಕ್ಸೈಟನ್ನೂ ತೆಗೆಯಲಾಗುತ್ತಿದೆ. ಕಬ್ಬಿಣ ಅದಿರಿನ ಕಬ್ಬಿಣ ಅಂಶ ಶೇ.57–ಶೇ.62. ಗೋವದಲ್ಲಿ ದೊರಕುವ ಮ್ಯಾಂಗನೀಸ್ ಅದಿರು ಪೈರೊಲುಸೈಟ್ ಮತ್ತು ಪ್ಸಿಲೊಮಿಲೇನ್. ಭಾರತದ ಇತರೆಡೆಗಳಲ್ಲಿ ದೊರಕುವ ಬಾಕ್ಸೈಟ್ ಅದಿರುಗಳಿಗಿಂತ ಗೋವದ್ದು ಭಿನ್ನವಾದ್ದು. ಇದೊಂದು ಟ್ರೈ ಹೈಡ್ರೇಟ್. ಇದರಲ್ಲಿ ನಾನಾ ದರ್ಜೆಗಳುಂಟು. ಮಧ್ಯಮ ದರ್ಜೆಯ ಅದಿರಿಗೆ ವಿದೇಶಗಳಲ್ಲಿ ಹೆಚ್ಚು ಬೇಡಿಕೆಯಿದೆ.

ಪೋರ್ಚುಗೀಸ್ ಆಡಳಿತದಿಂದ ಗೋವದ ವಿಮೋಚನೆಯಾಗುವವರೆಗೂ ಅದರ ಕೈಗಾರಿಕಾಭಿವೃದ್ಧಿಗೆ ಹೆಚ್ಚಿನ ಗಮನ ಸಂದಿರಲಿಲ್ಲ. ಅಕ್ಕಿ, ಹಿಟ್ಟು ಮತ್ತು ಎಣ್ಣೆ ಗಿರಣಿಗಳು, ಮರ ಕೊಯ್ಯುವ ಕಾರ್ಖಾನೆಗಳು, ಗೋಡಂಬಿ ಕಾರ್ಖಾನೆಗಳು ಮತ್ತು ಇಟ್ಟಿಗೆ ತಯಾರಿಕೆ–



ಇವು ಅಲ್ಲಿದ್ದ ಕೆಲವು ಸಣ್ಣ ಉದ್ಯಮಗಳು. ದೋಣಿಯ ನಿರ್ಮಾಣ ಮತ್ತು ದುರಸ್ತಿ, ಮಾಂಸ, ಹಣ್ಣು ಮತ್ತು ಮೀನಿನ ರಕ್ಷಣೆ, ಕೈಮಗ್ಗ, ತೆಂಗಿನ ಎಣ್ಣೆ ತಯಾರಿಕೆ–ಇವು ಹಲವರಿಗೆ ಉದ್ಯೋಗ ದೊರಕಿಸಿಕೊಟ್ಟಿವೆ. ಮರಗೆಲಸ, ತೆಂಗಿನ ನಾರಿನ ವಸ್ತುಗಳ ತಯಾರಿಕೆ, ಬಿದಿರಿನ ಕೆಲಸ, ಪಾದರಕ್ಷೆ ತಯಾರಿಕೆ, ಕುಂಬಾರಿಕೆ, ಕುಶಲ ವಸ್ತುಗಳ ತಯಾರಿಕೆ–ಇವು ಹಿಂದಿನಿಂದ ಬಂದಿರುವ ಕೆಲವು ಮುಖ್ಯ ಉದ್ಯೋಗಗಳು.

ಗೋವದಲ್ಲಿ ರಸ್ತೆ ಮಾರ್ಗವಿದೆ. ರಾಷ್ಟ್ರೀಯ ಹೆದ್ದಾರಿ 224 ಕಿಮೀ, ರಾಜ್ಯ ಹೆದ್ದಾರಿ 232 ಕಿಮೀ, ಜಿಲ್ಲಾ ರಸ್ತೆಗಳು 815 ಕಿಮೀ ಇವೆ. ಇಂದು ಗೋವ ರೈಲು ಮಾರ್ಗ ಬಹಳಷ್ಟು ಸುಧಾರಿಸಿದ್ದು ಮುಂಬಯಿ, ಮಂಗಳೂರು, ತಿರುವನಂತಪುರಗಳಿಗೆ ಕೊಂಕಣ ರೈಲು ಸಂಪರ್ಕ ಕಲ್ಪಿಸಿದೆ. ಮುಂಬಯಿ, ದೆಹಲಿ, ಕೊಚ್ಚಿನ್, ಚೆನ್ನೈ, ಬೆಂಗಳೂರು ನಗರಗಳಿಗೆ ವಿಮಾನ ಸಂಪರ್ಕವಿದೆ.

ಗೋವದ ನದಿಗಳು ದೋಣಿಗಳ ಸಂಚಾರಕ್ಕೆ ಅನುಕೂಲವಾಗಿವೆ. ಮಾಂಡವೀ ಮತ್ತು ಝುವಾರೀ ನದಿಗಳು ಈ ದೃಷ್ಟಿಯಿಂದ ಉಪಯುಕ್ತ. ಕಬ್ಬಿಣ ಅದಿರನ್ನು ರಫ್ತು ಮಾಡುವ ಸಲುವಾಗಿ ಮಾರ್ಮಗೋವ ಬಂದರಿಗೆ ಸಾಗಿಸಲು ಇವು ಬಹು ಅನುಕೂಲವಾಗಿವೆ.

100 ಕಿಮೀ ಉದ್ದದ ಕರಾವಳಿಯಿರುವ ಗೋವದ ಮುಖ್ಯ ಬಂದರು ಮಾರ್ಮಗೋವ. ಮುಂಬಯಿ, ಕೊಚ್ಚಿಗಳ ನಡುವಣ ದೊಡ್ಡ ರೇವು ಇದು. ಗೋವದ ಆಯಾತ–ನಿರ್ಯಾತಗಳಲ್ಲಿ ಶೇ. 90ಕ್ಕಿಂತಲೂ ಹೆಚ್ಚು ಭಾಗ ಈ ಬಂದರಿನ ಮೂಲಕ ಸಾಗುತ್ತದೆ. ಸೆಪ್ಟೆಂಬರಿನಿಂದ ಮೇ ವರೆಗೆ ಮುಂಬಯಿಯಿಂದ ಮಾರ್ಮಗೋವಕ್ಕೆ ಪ್ರಯಾಣಿಕ ನೌಕೆಗಳು ಸಂಚರಿಸುತ್ತವೆ. ಚಪೋರ, ಪಣಜಿ, ಬೇತುಲ್, ತಲ್ಪೋರ ಇವು ಇತರ ಬಂದರುಗಳು.

ಗೋವದ ರಾಜಧಾನಿ ಪಣಜಿ. ಮಾಂಡವೀ ನದಿಯ ಎಡದಂಡೆಯ ಮೇಲೆ ಇರುವ ಪಣಜಿಯ ವಿಸ್ತೀರ್ಣ 36 ಚ.ಕಿಮೀ. ಜನಸಂಖ್ಯೆ 1,14,405 (2011). ಹಿಂದೆ ಇದು ಮೀನು ಹಿಡಿಯುವವರ ಹಳ್ಳಿಯಾಗಿತ್ತು. ಈಗ ಇದೊಂದು ಸುಂದರ ನಗರ. ಎಲ್ಲೆಲ್ಲೂ ಹಸುರು ತುಂಬಿದೆ. ಹಳೆಯ ಗೋವ ಬಹುಮಟ್ಟಿಗೆ ಪಾಳುಬಿದ್ದ ನಗರ. ಗತಕಾಲದ ಸ್ಮಾರಕಗಳಾಗಿ ಕೆಲವು ಕಟ್ಟಡಗಳು ಅಲ್ಲಿ ಉಳಿದಿವೆ. 1511ರಲ್ಲಿ ಕಟ್ಟಿ 1623ರಲ್ಲಿ ಜೀರ್ಣೋದ್ಧಾರವಾದ ಕ್ರೈಸ್ತ ಆರಾಧನ ಮಂದಿರ, ಸೇಂಟ್ ಫ್ರಾನ್ಸಿಸ್ ಕ್ರೈಸ್ತ ಸನ್ಯಾಸಿನಿಯರ ಮಠ, ಪ್ರಸಿದ್ಧವೂ ಸುಂದರವೂ ಆದ ಸೇಂಟ್ ಫ್ರಾನ್ಸಿಸನ ಬಾಮ್ ಜೀಸಸ್ ಎಂಬ ಸಮಾಧಿ ಭವನ, 17ನೆಯ ಶತಮಾನದ ಸೇಂಟ್ ಲೋನಿಕಾ ಕ್ರೈಸ್ತ ಸನ್ಯಾಸಿನಿಯರ ಮಠ, ಶಿಥಿಲಾವಸ್ಥೆಯಲ್ಲಿರುವ ಸೇಂಟ್ ಪಾಲ್ ಕಾಲೇಜು–ಇವು ಮುಖ್ಯವಾದವು. ಮಾರ್ಗೋವ ಎರಡನೆಯ ಮುಖ್ಯ ನಗರ. ಇದರ ಜನಸಂಖ್ಯೆ 1,06,528 (2011). ಇದು ದಕ್ಷಿಣ ಗೋವದ ಮುಖ್ಯ ವಾಣಿಜ್ಯ ಕೇಂದ್ರ. ಮಾಪುಕ 40,487 (2011) ಉತ್ತರ ಗೋವದಲ್ಲಿದೆ.

ಪ್ರಪಂಚದಲ್ಲೇ ಅತ್ಯಂತ ಸುಂದರವಾದ ಕೆಲವು ಬೀಚುಗಳು ಗೋವದಲ್ಲಿವೆ. ಕಲಾಂಗೂಟೆ, ಕೋಲ್ವ, ದೋನಾ ಪಾಲಾ, ಸಿರಿದಾವೊ, ವಾಗತೋರ, ಮಾಂದ್ರೇ ಮತ್ತು ಮೋರ್ಜಿ ಬೀಚುಗಳಿಗೆ ಪ್ರವಾಸಿಗಳು ಅಧಿಕ ಸಂಖ್ಯೆಯಲ್ಲಿ ಬರುತ್ತಾರೆ. ಹಳೆಯ ಗೋವದಲ್ಲಿ ಕ್ರೈಸ್ತರು ಹೆಚ್ಚು; ಹೊಸ ಗೋವದಲ್ಲಿ (ನೊವ ಗೋವ) ಹಿಂದುಗಳು ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಪೋರ್ಚುಗೀಸರ ಅಂತರ ವಿವಾಹಗಳಿಂದ ಸ್ವಲ್ಪಮಟ್ಟಿಗೆ ಸಂಮಿಶ್ರ ಜನಾಂಗದವರಿದ್ದಾರೆ. ಇಲ್ಲಿಯ ಜನರ ಮಾತೃಭಾಷೆ ಕೊಂಕಣಿ. ಸಾಮಾನ್ಯವಾಗಿ ಕ್ರಿಶ್ಚಿಯನರು ಪೋರ್ಚುಗೀಸ್ ಭಾಷೆಯನ್ನೂ ಹಿಂದುಗಳು ಕೊಂಕಣಿ ಭಾಷೆಯನ್ನೂ ಆಡುತ್ತಾರೆ. ಜನಸಾಂದ್ರತೆ ಹಾಗೂ ಪೋರ್ಚುಗೀಸರ ಮಿತಿಮೀರಿದ ತೆರಿಗೆಯಿಂದಾಗಿ ಜನರು ಅನೇಕ ಕಡೆಗಳಿಗೆ ವಲಸೆ ಹೋದರು. ಅನೇಕರು ಆಫ್ರಿಕದತ್ತ ಸಾಗಿ ಮೊಜಾಂಬಿಕ್ ಹಾಗೂ ನೇಟಾಲ್‌ಗಳಲ್ಲಿ ನೆಲೆಸಿದರು. ಮುಂಬಯಿಗೆ ತೆರಳಿದ ಗೋವನರೇ ಹೆಚ್ಚು.

ಗೋವ ರಾಜ್ಯವನ್ನು ಉತ್ತರ ಗೋವ (ವಿಸ್ತೀರ್ಣ 1736 ಚಕಿಮೀ. ದಕ್ಷಿಣ ಗೋವ (ವಿಸ್ತೀರ್ಣ 1,966 ಚ.ಕಿಮೀ) ಎಂದು ಎರಡು ಜಿಲ್ಲೆಗಳಾಗಿ ವಿಂಗಡಿಸಲಾಗಿದೆ. ಪಣಜಿ ಉತ್ತರ ಗೋವದ ಆಡಳಿತ ಕೇಂದ್ರ. ಮಾರ್ಗೋವ ದಕ್ಷಿಣ ಗೋವದ ಆಡಳಿತ ಕೇಂದ್ರ. ಗೋವಾ ಭೂದಾಖಲೆಯನ್ನು ಗಣಕೀಕೃತಗೊಳಿಸಿದ ಭಾರತದ ಪ್ರಥಮ ರಾಜ್ಯವಾಗಿದೆ.

ಗೋವದಲ್ಲಿ ಹಿಂದೂ ಕ್ರೈಸ್ತ ಧರ್ಮಗಳು ಪ್ರಚಾರದಲ್ಲಿವೆ. ಕದಂಬರ ಕಾಲದ ಸಪ್ತಕೋಟೀಶ್ವರ ದೇವಾಲಯ, ಸೇಂಟ್ ಫ್ರಾನ್ಸಿಸ್ ಜ಼ೇವಿಯರನ ಸಮಾಧಿಭವನ ಪ್ರಸಿದ್ಧವಾದವು. ಸಂತ ಜ಼ೇವಿಯರನ ಪಾರ್ಥಿವ ಶರೀರವನ್ನು ಭಕ್ತರಿಗೆ ಹತ್ತು ವರ್ಷಗಳಿಗೊಮ್ಮೆ ಪ್ರದರ್ಶಿಸುತ್ತಾರೆ. ಹಳೆಯ ಗೋವದಲ್ಲಿ ಲೆಂಟ್ ಉಪವಾಸ ದಿನಗಳಲ್ಲಿ ಸಂತರ ವಿಗ್ರಹಗಳನ್ನು ಮೆರವಣಿಗೆ ಮಾಡುತ್ತಾರೆ.



ಒಳನಾಡ ಒಂದು ರಸ್ತೆ

ಪೋರ್ಚುಗೀಸರು ಬಂದಮೇಲೆ ಗೋವದಲ್ಲಿ ಕ್ರೈಸ್ತಮತ ಪ್ರಚಾರವಾಯಿತು. ಡಾಮಿನಿಕ್ ಪಂಥದ ಕ್ರೈಸ್ತ ಸನ್ಯಾಸಿಗಳು ಗೋವಕ್ಕೆ ಬಂದದ್ದು 1510ರಲ್ಲಿ. 1517ರಲ್ಲಿ ಬಂದ ಫ್ರಾನ್ಸಿಸ್ಕನ್ ಪಾದ್ರಿಗಳು ಕ್ರೈಸ್ತಮತ ಪ್ರಚಾರವನ್ನು ಆರಂಭಿಸಿದರು. ಫ್ರಾನ್ಸಿಸ್ಕನ್ ಪಂಥದ ಸನ್ಯಾಸಿ ಜೊವಾನ್ ದ ಆಲ್ಬುಕರ್ಕ್ 1538ರಲ್ಲಿ ಗೋವದ ಪ್ರಥಮ ಬಿಷಪ್ ಆಗಿ ನೇಮಕವಾದ. 1542ರಲ್ಲಿ ಫ್ರಾನ್ಸಿಸ್ಕೊ ಜ಼ೇವಿಯರ್ ಸ್ಥಳೀಯ ಮತಪ್ರಚಾರಕರಿಗೆ ತರಬೇತು ನೀಡುವ ಸಾಂತಾಫಿ ಕಾಲೇಜಿನ ಮೇಲ್ವಿಚಾರಕನಾದ. ತರುವಾಯ ಈ ಕಾಲೇಜಿಗೆ ಸೇಂಟ್ ಪಾಲ್ ಕಾಲೇಜು ಎಂದು ಹೆಸರಾಯಿತು. 1557ರ ಫೆಬ್ರವರಿ 4 ಪೋಪ್ ಹೊರಡಿಸಿದ ಆಜ್ಞೆಯ ಪ್ರಕಾರ ಗೋವವೂ ಆರ್ಚ್‌ಬಿಷಪನ ಅಧಿಕಾರವ್ಯಾಪ್ತಿಯ ಕೇಂದ್ರವೂ ಪ್ರಾಚ್ಯ ಪ್ರಾಂತಗಳ ರೋಮನ್ ಕೆಥೊಲಿಕ್ ಪಾದ್ರಿಗಳ ಕೇಂದ್ರವೂ ಆಯಿತು. 20ನೆಯ ಶತಮಾನದಲ್ಲಿ ಪೋಪ್ ಹೊರಡಿಸಿದ ಅಧಿಕೃತ ನಿಯಮಗಳ ಪ್ರಕಾರ ಗೋವದ ಆರ್ಚ್‌ಬಿಷಪ್ ಅಧಿಕಾರ ಇಡೀ ಪೋರ್ಚುಗೀಸ್ ಭಾರತಕ್ಕೆ ಅನ್ವಯಿಸಿತು (1953).

(ವಿ.ಜಿ.ಕೆ.;ಐ.ಎ.)

**ಇತಿಹಾಸ:** ಗೋವದ ಇತಿಹಾಸ ಪ್ರಾಚೀನವಾದ್ದು. ಹಲವು ಪುರಾಣಗಳಲ್ಲೂ ಶಾಸನಗಳಲ್ಲೂ ಗೋವದ ಉಲ್ಲೇಖಗಳಿವೆ. ಪರಶುರಾಮ ಮಿಥಿಲೆಯಿಂದ ಬ್ರಾಹ್ಮಣ ಕುಟುಂಬಗಳನ್ನು ಕರೆತಂದು ಇಲ್ಲಿ ನೆಲೆಗೊಳಿಸಿದನೆಂದು ಪ್ರತೀತಿಯಿದೆ. ಇತಿಹಾಸಕಾಲದಲ್ಲಿ ಗೋವ ಮೌರ್ಯ ಸಾಮ್ರಾಜ್ಯದ ಭಾಗವಾಗಿತ್ತು. ದಖನಿನಲ್ಲಿ ಸಾಮ್ರಾಜ್ಯ ಸ್ಥಾಪಿಸಿ ದೀರ್ಘಕಾಲ ರಾಜ್ಯವಾಳಿದ ಸಾತವಾಹನರು ತಮ್ಮ ಸಾರ್ವಭೌಮತ್ವವನ್ನು ಗೋವದ ಮೇಲೂ ಸ್ಥಾಪಿಸಿದ್ದರು.



ಪಣಜಿಯ ಒಂದು ಚರ್ಚು

ರೋಮನ್ ಸಾಮ್ರಾಜ್ಯಕ್ಕೂ ದಖನ್ ಪ್ರದೇಶಕ್ಕೂ ವ್ಯಾಪಾರ ಸಂಪರ್ಕವಿತ್ತು. ಗೋವ ಪಟ್ಟಣ ಮುಖ್ಯ ವ್ಯಾಪಾರ ಕೇಂದ್ರ ಹಾಗೂ ಪ್ರಮುಖ ಬಂದರು ಆಗಿತ್ತೆಂದು ತಿಳಿದುಬರುತ್ತದೆ. ಸಾತವಾಹನರ ಸಾಮ್ರಾಜ್ಯ ಅವನತಿ ಹೊಂದಿದ ಅನಂತರ ತಲೆಯೆತ್ತಿದ ಬನವಾಸಿ ಕದಂಬ ಮನೆತನ ಗೋವದ ಬಹುಭಾಗದಲ್ಲಿ ತನ್ನ ಅಧಿಕಾರವನ್ನು ಸ್ಥಾಪಿಸಿತ್ತು. ಆರನೆಯ ಶತಮಾನದ ಕೊನೆಯಲ್ಲಿ ಬಾದಾಮಿ ಚಳುಕ್ಯ ಮನೆತನ ಪ್ರಬಲವಾಗಿ ಕದಂಬರನ್ನು ಸೋಲಿಸಿತು. ಒಂದನೆಯ ಕೀರ್ತಿವರ್ಮ ಕೊಂಕಣದ ಹಲವು ಪ್ರದೇಶಗಳ ಮೇಲೆ ಚಳುಕ್ಯರ ಅಧಿಕಾರವನ್ನು ಸ್ಥಾಪಿಸಿದ. ಇಮ್ಮಡಿ ಪುಲಕೇಶಿ ತನ್ನ ದಿಗ್ವಿಜಯ ಕಾಲದಲ್ಲಿ ಕೊಂಕಣ ಪ್ರದೇಶವನ್ನು ಪೂರ್ಣವಾಗಿ ಜಯಿಸಿ ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡ. ಇವನು ಗೋವದ ಉತ್ತರ ಪ್ರದೇಶದಲ್ಲಿ ಆಳುತ್ತಿದ್ದ ಮೌರ್ಯ ಶಾಖೆಯ ರಾಜನನ್ನು ಸೋಲಿಸಿದ ಸಂಗತಿ ಐಹೊಳೆಯ ಶಾಸನದಿಂದ ತಿಳಿದುಬರುತ್ತದೆ. ಬಾದಾಮಿ ಚಳುಕ್ಯ ಸಾಮ್ರಾಜ್ಯ 757ರಲ್ಲಿ ಕೊನೆಗೊಂಡ ಅನಂತರ ಗೋವ ಪ್ರದೇಶ ರಾಷ್ಟ್ರಕೂಟ ಸಾಮ್ರಾಜ್ಯದ ಭಾಗವಾಯಿತು. ಚಳುಕ್ಯ ಮತ್ತು ರಾಷ್ಟ್ರಕೂಟ ಸಾಮ್ರಾಟರ ಕಾಲದಲ್ಲಿ ಅರೇಬಿಯ, ಪರ್ಷಿಯ ಮತ್ತು ದಖನ್‌ಗಳ ನಡುವೆ ವ್ಯಾಪಾರ ಸಂಪರ್ಕ ವಿಶೇಷವಾಗಿ ಅಭಿವೃದ್ಧಿ ಹೊಂದಿತ್ತು. ವಿದೇಶೀ ಹಡಗುಗಳು ಗೋವ ಬಂದರಿಗೆ ಬರುತ್ತಿದ್ದುವು. ಗೋವ ಪಟ್ಟಣ ಪಶ್ಚಿಮ ತೀರದ ಮುಖ್ಯ ವ್ಯಾಪಾರ ಕೇಂದ್ರಗಳಲ್ಲೊಂದಾಗಿತ್ತು.



ಗೋವದಲ್ಲಿ ತೆಂಗು ಸಮೃದ್ಧ

ರಾಷ್ಟ್ರಕೂಟರ ಕೊನೆಗಾಲದಲ್ಲಿ ಗೋವ ಪ್ರದೇಶದಲ್ಲಿ ಕದಂಬರು ರಾಜ್ಯ ಸ್ಥಾಪಿಸಿದರು. ಇವರಿಗೆ ಗೋವೆಯ ಕದಂಬರೆಂದೇ ಹೆಸರಾಗಿದೆ. ಗೋವದ ಕದಂಬ ಮನೆತನ ಕದಂಬ ಮನೆತನದ ಉಪಶಾಖೆಗಳಲ್ಲೊಂದಾಗಿತ್ತು. ಗೋವದ ಸಮೀಪದ ಚಂದ್ರಪುರ (ಇಂದಿನ ಚಂದೂರು) ಇವರ ರಾಜಧಾನಿಯಾಗಿತ್ತು. ಈ ಶಾಖೆಯ ಆರಂಭ ಕಾಲದ ಕಂಟಕಾಚಾರ್ಯ, ನಾಗವರ್ಮ, 1ನೆಯ ಗುಹಲದೇವ ಮೊದಲಾದವರು ಅಷ್ಟು ಪ್ರಬಲರಾಗಿರಲಿಲ್ಲ. ಒಂದನೆಯ ಷಷ್ಠದೇವ ಅಥವಾ ಚತುರ್ಭುಜನೆಂಬ ರಾಜ 970ರ ಸುಮಾರಿನಲ್ಲಿ ಪ್ರಬಲನಾಗಿದ್ದುದಲ್ಲದೆ ರಾಷ್ಟ್ರಕೂಟ ಸಾಮ್ರಾಜ್ಯವನ್ನು ಕೊನೆಗಾಣಿಸುವಲ್ಲಿ ಕಲ್ಯಾಣಿ ಚಾಳುಕ್ಯ ತೈಲಪನಿಗೆ ಸಹಾಯ ಮಾಡಿದನೆಂದು ತಿಳಿದುಬಂದಿದೆ. 11ನೆಯ ಶತಮಾನದ ಪ್ರಾರಂಭದಲ್ಲಿ ಆಳುತ್ತಿದ್ದ 2ನೆಯ ಗುಹಿಲದೇವನ ಕಾಲದಲ್ಲಿ ಗೋವ ಪ್ರಸಿದ್ಧವಾದ ವಾಣಿಜ್ಯ ಕೇಂದ್ರವೂ ರೇವು ಪಟ್ಟಣವೂ ಆಗಿತ್ತೆಂದೂ ಆ ವೇಳೆಗೆ ಅರಬ್ ವರ್ತಕರು ಗೋವೆಯಲ್ಲಿ ನೆಲಸಿದ್ದರೆಂದೂ ತಿಳಿದುಬರುತ್ತದೆ. ಅನಂತರ ಆಳಿದ 2ನೆಯ ಷಷ್ಠದೇವ ಇಡೀ ಕೊಂಕಣ ಪ್ರದೇಶದ ಮೇಲೆ ತನ್ನ ಆಳಿಕೆ ಸ್ಥಾಪಿಸಿದ. ಇವನಿಗೆ ಚಟ್ಟಲ ಮತ್ತು ಚಟ್ಟಯ್ಯ ಎಂಬ ಹೆಸರುಗಳಿದ್ದುವು. ಚಾಳುಕ್ಯ ಜಯಸಿಂಹನ ಆಶ್ರಿತನಾಗಿದ್ದ ಇವನ ಆಳಿಕೆಯಲ್ಲಿ ಗೋವ ಪಟ್ಟಣ ವಾಣಿಜ್ಯ ಕೇಂದ್ರವಾಗಿ ವಿಶೇಷ ಪ್ರಸಿದ್ಧಿ ಪಡೆದಿತ್ತು. ಗೋವ ರೇವು ಪಟ್ಟಣ ಭವ್ಯ ಭವನಗಳಿಂದಲೂ ಇಬ್ಬದಿಯ ದೊಡ್ಡ ದೊಡ್ಡ ಮಳಿಗೆಗಳಿಂದ ಕೂಡಿದ ವಿಶಾಲ ಬೀದಿಗಳಿಂದಲೂ ಉದ್ಯಾನಗಳಿಂದಲೂ ಕಂಗೊಳಿಸುತ್ತಿತ್ತೆಂದು ಆ ಕಾಲದ ಶಾಸನಗಳಲ್ಲಿ ವರ್ಣಿಸಲಾಗಿದೆ.

ಷಷ್ಠದೇವನ ಅನಂತರ ಅವನ ಮಗನಾದ 1ನೆಯ ಜಯಕೇಶಿ ಗೋವದ ರಾಜನಾದ. ಗೋವ ರಾಜ್ಯ ಇವನ ಆಳಿಕೆಯ ಕಾಲದಲ್ಲಿ ಕಪಾರ್ಡಿಕ ದ್ವೀಪ, ಕೊಂಕಣ, ಹೈವೆ, ಹಲಸೀಗೆ ಮೊದಲಾದ ಪ್ರದೇಶಗಳನ್ನೊಳಗೊಂಡಿತ್ತು. ಪರಾಕ್ರಮಿಯೂ ದೂರದರ್ಶಿಯೂ ಆದ ಈತ ಕಲ್ಯಾಣಿ ಚಾಳುಕ್ಯ ವಿಕ್ರಮಾದಿತ್ಯನಿಗೆ ತನ್ನ ಒಬ್ಬ ಮಗಳನ್ನೂ ಅನಿಲ್‌ವಾಡದ ಚಾಳುಕ್ಯ ಕರ್ಣನಿಗೆ ತನ್ನ ಮತ್ತೊಬ್ಬ ಮಗಳನ್ನೂ ಕೊಟ್ಟು ವಿವಾಹ ಮಾಡಿ ಗೋವ ಕದಂಬ ಸಂತತಿಯ ಪ್ರಭಾವವನ್ನು ವಿಸ್ತರಿಸಿದ. ಈತ ಗೋವ ಪಟ್ಟಣವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ. ಅನೇಕ ಸಮಕಾಲೀನ ಶಾಸನಗಳಲ್ಲಿ ಅಂದಿನ ಗೋವ ನಗರದ ಸೌಂದರ್ಯವೂ ಐಶ್ವರ್ಯವೂ ವರ್ಣಿಸಲ್ಪಟ್ಟಿವೆ. ರಾಜಮಾರ್ಗಗಳಲ್ಲಿ ಪಂಡಿತರೂ ಶ್ರೀಮಂತರೂ ಧನಕನಕ ಐಶ್ವರ್ಯಾದಿಗಳೂ ಕಣ್ಮನಗಳಿಗೆ ಹಬ್ಬವನ್ನುಂಟು ಮಾಡುತ್ತ ನಗರ ಅಮರಪುರಿಯಂತೆ ಕಂಗೊಳಿಸುತ್ತದೆ ಎಂಬುದಾಗಿ ಹಲವು ಶಾಸನಗಳಲ್ಲಿ

ವರ್ಣಿಸಲಾಗಿದೆ. ಒಂದನೆಯ ಜಯಕೇಶಿಯ ಪ್ರಧಾನಮಂತ್ರಿಯಾಗಿದ್ದ, ಅರಬ್ ಮೂಲದ ಸದನ್ನೋ ಎಂಬವನು ಗೋವ ನಗರದ ಮತ್ತು ಪ್ರಜೆಗಳ ಸರ್ವತೋಮುಖ ಅಭಿವೃದ್ಧಿಗೆ ವಿಶೇಷವಾಗಿ ಶ್ರಮಿಸಿದ. ಗೋವ ಬಂದರನ್ನು ಅಭಿವೃದ್ಧಿಪಡಿಸಿ ಸಾಗರೋತ್ತರ ವ್ಯಾಪಾರವನ್ನು ಪ್ರೋತ್ಸಾಹಿಸಿದ. ಗೋವದ ಜನರು ಐಶ್ವರ್ಯ ಮತ್ತು ನೆಮ್ಮದಿಯಿಂದ ಜೀವನ ನಡೆಸುತ್ತಿದ್ದರು.



ಮಾರ್ಗೋವ ಬೀಚ್

1053ರಲ್ಲಿ ಈ ಮಂತ್ರಿ ಬಡಬಗ್ಗರ ಸಹಾಯಕ್ಕಾಗಿ ಒಂದು ಸಂಸ್ಥೆಯನ್ನು ಸ್ಥಾಪಿಸಿದ. ನಿರ್ಗತಿಕರಿಗೂ ಅಂಗವಿಕಲರಿಗೂ ಉಚಿತ ಊಟ ವಸತಿಯನ್ನು ಒದಗಿಸಿದ. ಈ ಸಂಸ್ಥೆಯ ವೆಚ್ಚಕ್ಕಾಗಿ ಹೊರಗಿನಿಂದ ಗೋವ ಬಂದರಿಗೆ ಬರುತ್ತಿದ್ದ ವ್ಯಾಪಾರಿ ಹಡಗುಗಳ ಮೇಲೆ ನಿಗದಿಯಾದ ಸುಂಕ ವಿಧಿಸಿದ. ಅಲ್ಲದೆ ಗೋವ ರಾಜ್ಯದಲ್ಲಿ ಸಂತಾನವಿಲ್ಲದೆ ಮರಣ ಹೊಂದಿದ ಶ್ರೀಮಂತರ ಆಸ್ತಿ ಈ ಸಂಸ್ಥೆಗೆ ಸೇರತಕ್ಕದ್ದೆಂದು ಕಾನೂನು ಜಾರಿಗೆ ಬಂತು. ಈ ಸಂಸ್ಥೆಯ ಆದಾಯ ಹೇರಳವಾಗಿತ್ತು. ಒಂದನೆಯ ಜಯಕೇಶಿಯ ಆಳಿಕೆಯಲ್ಲಿ ಗೋವ ರಾಜ್ಯ ಸರ್ವತೋಮುಖ ಅಭಿವೃದ್ಧಿ ಹೊಂದಿ ನೆಮ್ಮದಿಯ ಬೀಡಾಗಿತ್ತು. ಇವನ ಅನಂತರ 3ನೆಯ ಗುಹಿಲದೇವ ಮತ್ತು ವಿಜಯಾದಿತ್ಯ ಎಂಬುವರು ಅನುಕ್ರಮವಾಗಿ ಗೋವ ರಾಜ್ಯವನ್ನಾಳಿದರು.


ವಿಜಯಾದಿತ್ಯನ ಮರಣಾನಂತರ ಅವನ ಮಗನಾದ 2ನೆಯ ಜಯಕೇಶಿ ರಾಜನಾಗಿ 1104ರಿಂದ 1148ರ ವರೆಗೆ ಆಳಿದ. ಎರಡನೆಯ ಜಯಕೇಶಿಯ ಆಳಿಕೆಯಲ್ಲಿ ಗೋವ ರಾಜ್ಯ ಉನ್ನತಿಯ ಶಿಖರ ಮುಟ್ಟಿತು. ವಿವೇಕಿಯೂ ಪರಾಕ್ರಮಿಯೂ ಆದ ಜಯಕೇಶಿ



ಪಣಜಿಯ ಒಂದು ನೋಟ

ಕಲ್ಯಾಣಿ ಚಾಳುಕ್ಯರ ಅಧೀನತೆಯಿಂದ ಸ್ವತಂತ್ರನಾಗಲು ಹವಣಿಸಿ ಕೊಂಕಣ ಚಕ್ರವರ್ತಿ ಎಂಬ ಬಿರುದನ್ನು ಧರಿಸಿದ. ದೂರದರ್ಶಿಯಾದ ಚಾಳುಕ್ಯ ಸಾರ್ವಭೌಮ 6ನೆಯ ವಿಕ್ರಮಾದಿತ್ಯ ತನ್ನ ಮಗಳನ್ನು ಜಯಕೇಶಿಗೆ ಕೊಟ್ಟು ವಿವಾಹ ಮಾಡಿ ಗೋವ ಮತ್ತು ಕಲ್ಯಾಣಿ ಮನೆತನಗಳ ಮಧ್ಯೆ ಮಧುರ ಬಾಂಧವ್ಯವನ್ನು ಏರ್ಪಡಿಸಿದ. ವಿಕ್ರಮಾದಿತ್ಯನ ಮರಣಾನಂತರ ದೋರಸಮುದ್ರದ ಹೊಯ್ಸಳ ವಿಷ್ಣುವರ್ಧನ ಚಾಳುಕ್ಯ ಮಾಂಡಲಿಕರನ್ನು ಸೋಲಿಸಿ ಕೃಷ್ಣಾ ನದಿಯವರೆಗೂ ದಂಡೆತ್ತಿ ಹೋದ. ಅವನು ಜಯಕೇಶಿಯನ್ನು ಸೋಲಿಸಿ ಹಾನಗಲ್, ಹಲಸೀಗೆ ಮೊದಲಾದ ಪ್ರದೇಶಗಳನ್ನು ವಹಿಸಿಕೊಂಡ. ಆದರೆ 1142ರಲ್ಲಿ ವಿಷ್ಣುವರ್ಧನ ಮರಣ ಹೊಂದಿದ ಅನಂತರ ಜಯಕೇಶಿ ತಾನು ಕಳೆದುಕೊಂಡಿದ್ದ ಪ್ರದೇಶವನ್ನು ಪುನಃ ವಶಪಡಿಸಿಕೊಂಡ. ಜಯಕೇಶಿಯ ಆಳಿಕೆಯಲ್ಲಿ ಗೋವ ರಾಜ್ಯದಲ್ಲಿ ವ್ಯವಸ್ಥಿತ ಆಡಳಿತವಿದ್ದು ಜನರು ನೆಮ್ಮದಿಯಿಂದಿದ್ದರು. ಇವನ ಅನೇಕ ಶಾಸನಗಳಲ್ಲಿ ಆಡಳಿತ, ಸಾಮಾಜಿಕ ಜೀವನ ಮತ್ತು ಆರ್ಥಿಕ ಪುರೋಭಿವೃದ್ಧಿಗೆ ಸಂಬಂಧಿಸಿದ ಮಾಹಿತಿಗಳು ದೊರೆಯುತ್ತವೆ. ಎರಡನೆಯ ಜಯಕೇಶಿಯ ಮರಣಾನಂತರ ಅವನ ಮಗ ಪೆರ್ಮಾಡಿದೇವ ರಾಜನಾದ. ಇವನಿಗೆ ಶಿವಚಿತ್ತ, ವಿಷ್ಣುಚಿತ್ತ ಎಂಬ ಹೆಸರುಗಳೂ ಇದ್ದುವು. ಇವನ ರಾಣಿಯಾದ ಕಮಲಾದೇವಿ ಗೋವದಲ್ಲಿ ಅನೇಕ ಅಗ್ರಹಾರಗಳನ್ನು ಸ್ಥಾಪಿಸಿ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡಿದಳಲ್ಲದೆ ದೇಗಾಂವೆ ಎಂಬಲ್ಲಿ ಶ್ರೀ ಕಮಲನಾರಾಯಣ ಮತ್ತು ಶ್ರೀ ಮಹಾಲಕ್ಷ್ಮಿ ದೇವಾಲಯಗಳನ್ನು ಕಟ್ಟಿಸಿದಳು.

ಗೋವದ ಕದಂಬ ರಾಜರು 1156ರ ವರೆಗೂ ಕಲ್ಯಾಣಿ ಚಾಳುಕ್ಯರ ಸಾಮಂತರಾಗಿದ್ದರು. ಕಲ್ಯಾಣಿಯಲ್ಲಿ ರಾಜ್ಯ ವಿಪ್ಲವ ನಡೆದು ಕಳಚುರಿ ಬಿಜ್ಜಳ ಚಕ್ರವರ್ತಿಯಾದ ಅನಂತರ ಗೋವದ ರಾಜ ಸ್ವತಂತ್ರನಾದ. ಕಳಚುರಿಗಳ ಮತ್ತು ಹೊಯ್ಸಳರ ನಡುವೆ ಅನೇಕ ಯುದ್ಧಗಳು ನಡೆದು ಕಳಚುರಿಗಳ ಪ್ರಭಾವ ಕುಂದಿತು. ಹೊಯ್ಸಳ ವೀರಬಲ್ಲಾಳ 1182ರಲ್ಲಿ ಗೋವದ ರಾಜನನ್ನು ಸೋಲಿಸಿ ಕಪ್ಪಕಾಣಿಕೆ ಸ್ವೀಕರಿಸಿ ಆಶ್ರಿತ ರಾಜನನ್ನಾಗಿ ಮಾಡಿಕೊಂಡ. ಅನಂತರ ಸೇವುಣರಿಗೂ ಹೊಯ್ಸಳರಿಗೂ ದಖನಿನ ಸಾರ್ವಭೌಮತ್ವಕ್ಕಾಗಿ ಹೋರಾಟ ನಡೆಯಿತು. 1214ರ ಅನಂತರ ಗೋವದ ರಾಜನಾದ 3ನೆಯ ಜಯಕೇಶಿ ದೇವಗಿರಿಯ ಸಿಂಗಣನ ಆಶ್ರಿತ ರಾಜನಾದ. 1310ರಲ್ಲಿ ಮಲಿಕ್ ಕಾಫೂರನ ದಂಡಯಾತ್ರೆಯಿಂದ ದೇವಗಿರಿ ಸೇವುಣರ ಆಡಳಿತ ಕೊನೆಗೊಂಡಿತು. ಗೋವದ ರಾಜ ಸ್ವತಂತ್ರವಾಗಿ ಆಳಲು ಪ್ರಾರಂಭಿಸಿದ. ಆದರೆ ಮಲಿಕ್ ಕಾಫೂರನು ಗೋವ ರಾಜ್ಯವನ್ನು ಸೂರೆಮಾಡಿ ರಾಜಧಾನಿಯನ್ನು ಆಕ್ರಮಿಸಿದ. ಅವನು ಹಿಂದಿರುಗಿದ ಅನಂತರ ಗೋವದ ರಾಜ ಚಂದ್ರಪುರವನ್ನು ರಾಜಧಾನಿಯಾಗಿ ಮಾಡಿಕೊಂಡು ಆಳಲುಪಕ್ರಮಿಸಿದ. 1350ರ ವೇಳೆಗೆ ಮಹಮದ್ ಬಿನ್ ತುಗಲಕನ ದಳಪತಿಯೊಬ್ಬ ಚಂದ್ರಪುರವನ್ನು ಮುತ್ತಿ ನಾಶಮಾಡಿದ. ಸಹಸ್ರಾರು ಮಂದಿ ಹಿಂದೂ ಸೈನಿಕರೂ ಗೋವದ ರಾಜಪರಿವಾರದವರೂ ಮರಣ ಹೊಂದಿದ್ದಾಗಿ ಇಬ್ನ್ ಬತೂತನ ಬರವಣಿಗೆಯಿಂದ ತಿಳಿದುಬರುತ್ತದೆ. ಸುಮಾರು 350 ವರ್ಷಗಳ ಗೋವ ಕದಂಬ ಮನೆತನ ಕೊನೆಗೊಂಡಿತು.



ದೋಣಿಯ ಮೂಲಕ ನದಿ ದಾಟುವುದು, ಗೋವದ ಒಂದು ಸಾಮಾನ್ಯ ದೃಶ್ಯ

ಗೋವ ರಾಜ್ಯ ಬಹುಕಾಲ ಮಹಮ್ಮದೀಯರ ಆಳಿಕೆಯಲ್ಲಿ ಉಳಿಯಲಿಲ್ಲ. ವಿಜಯನಗರದ ಹರಿಹರ ಮತ್ತು ಬುಕ್ಕರು ಗೋವ ಪ್ರಾಂತವನ್ನು ಮಹಮ್ಮದೀಯರ ಆಳಿಕೆಯಿಂದ ವಿಮೋಚನೆಗೊಳಿಸಿ ತಮ್ಮ ರಾಜ್ಯಕ್ಕೆ ಸೇರಿಸಿಕೊಂಡರು. 1470ರ ವರೆಗೂ ಗೋವ ವಿಜಯನಗರ ಸಾಮ್ರಾಜ್ಯದ ಭಾಗವಾಗಿತ್ತು. ಅನಂತರ ಬಿಜಾಪುರದ 2ನೆಯ ಮಹಮ್ಮದನ ಮಂತ್ರಿಯಾದ ಮಹಮದ್ ಗವಾನ ಗೋವವನ್ನು ಗೆದ್ದು ಬಿಜಾಪುರ ರಾಜ್ಯಕ್ಕೆ ಸೇರಿಸಿಕೊಂಡ. ಸ್ವಲ್ಪ ಕಾಲ ಆದಿಲ್‌ಷಾಹಿ ಆಡಳಿತ ಮುಂದುವರಿಯಿತು. ಅನಂತರ ಅದು ಪೋರ್ಚುಗೀಸರ ವಶವಾಯಿತು. ಆಲ್ಬುಕರ್ಕ್ 1510ರಲ್ಲಿ ಗೋವವನ್ನು ಪೋರ್ಚುಗೀಸರ ವಸಾಹತಾಗಿ ಮಾರ್ಪಡಿಸಿದ. ಆದರೆ ಅದೇ ವರ್ಷ ಆಗಸ್ಟ್ 15ರ ಸಮಯಕ್ಕೆ ಬಿಜಾಪುರದ ಯೂಸುಫ್ ಆದಿಲ್‌ಷಹ ಅವನನ್ನು ಸೋಲಿಸಿದ. ಪುನಃ ಆಲ್ಬುಕರ್ಕ್ ಸ್ವಲ್ಪ ಕಾಲದಲ್ಲೇ ಗೋವವನ್ನು ವಶಪಡಿಸಿಕೊಂಡು ಪೋರ್ಚುಗೀಸರ ಆಡಳಿತವನ್ನು ಸ್ಥಾಪಿಸಿದ. ಅಂದಿನಿಂದ ಗೋವ ಪೋರ್ಚುಗೀಸರ ವಸಾಹತಾಯಿತು. ಕ್ರಮೇಣ ದೀವ್ ಮತ್ತು ದಮನ್‌ಗಳ ಮೇಲೂ ಪೋರ್ಚುಗೀಸರು ಅಧಿಕಾರ ಸ್ಥಾಪಿಸಿದರು.

ಮರಾಠರು ಹಲವು ಸಾರಿ ಗೋವವನ್ನು ಮುತ್ತಿದರು. ಆದರೂ ಗೋವದ ಮೇಲೆ ಪೋರ್ಚುಗೀಸರ ಆಡಳಿತ 450 ವರ್ಷಗಳ ಕಾಲ ಮುಂದುವರಿಯಿತು. ಗೋವದಲ್ಲಿ ಕ್ರೈಸ್ತಮತ ವಿಶೇಷವಾಗಿ ಪ್ರಚಾರವಾಯಿತು. 17ನೆಯ ಶತಮಾನದಲ್ಲಿ ಗೋವವನ್ನು ಸಂದರ್ಶಿಸಿದ್ದ ಪಾಶ್ಚಾತ್ಯ ಪ್ರವಾಸಿಯೊಬ್ಬ ಗೋವ ಪಟ್ಟಣ ಕ್ರೈಸ್ತ ದೇವಾಲಯಗಳಿಂದಲೂ ಮಠಗಳಿಂದಲೂ ಸುಂದರವಾದ ಭವನಗಳಿಂದಲೂ ಐಶ್ವರ್ಯದಿಂದಲೂ ತುಂಬಿತುಳುಕುವ ನಗರಗಳಲ್ಲೊಂದಾಗಿದೆಯೆಂದು ಪ್ರಶಂಸಿಸಿದ್ದ.

ಪೋರ್ಚುಗೀಸರ ದಬ್ಬಾಳಿಕೆಯ ವಿರುದ್ಧವಾಗಿ ಅಲ್ಲಿಯ ಜನ ಸುಮಾರು 20 ಸಂದರ್ಭಗಳಲ್ಲಿ ದಂಗೆಯೆದ್ದಿದ್ದರು. ಆದರೆ ಪೋರ್ಚುಗೀಸ್ ಸರ್ಕಾರ ದಂಗೆಯನ್ನು ಉಗ್ರವಾಗಿ ಹತ್ತಿಕ್ಕಿತು. ಹತ್ತೊಂಬತ್ತನೆಯ ಶತಮಾನದಲ್ಲಿ ಪ್ರಾರಂಭವಾದ ರಾಷ್ಟ್ರೀಯ ಚಳವಳಿ ಗೋವವನ್ನೂ ಕ್ರಮೇಣ ಪ್ರವೇಶಿಸಿತು. ಮಹಾತ್ಮ ಗಾಂಧಿ ಭಾರತ ರಾಷ್ಟ್ರೀಯ ಚಳವಳಿಯ ನಾಯಕತ್ವವನ್ನು ವಹಿಸಿದ ಕೂಡಲೇ ಗೋವದಲ್ಲೂ ಚಳವಳಿಗೆ ಕರೆಕೊಟ್ಟರು. 1928ರಲ್ಲಿ ಗೋವದಲ್ಲಿ ಸ್ವಾತಂತ್ರ್ಯ ಚಳವಳಿಗಾಗಿ ಸಮಿತಿಯೊಂದು ಸ್ಥಾಪಿತವಾಯಿತು. 1930ರಲ್ಲಿ ಗೋವ ಕಾಂಗ್ರೆಸ್ ಸಮಿತಿಯನ್ನು ಸ್ಥಾಪಿಸಲಾಯಿತು. ಪೋರ್ಚುಗೀಸ್ ಸರ್ಕಾರ ಗೋವದಲ್ಲಿ ಚಳವಳಿಗಳನ್ನು ಉಗ್ರವಾಗಿ ಹತ್ತಿಕ್ಕಿತು.

1947ರಲ್ಲಿ ಭಾರತ ಸ್ವತಂತ್ರವಾದ ಅನಂತರ ಭಾರತ ಸರ್ಕಾರ ಗೋವ ಪ್ರದೇಶದಿಂದ ಪೋರ್ಚುಗಲ್ ತನ್ನ ಆಡಳಿತವನ್ನು ತೆರವು ಮಾಡಬೇಕೆಂದು ಸೂಚಿಸಿತು. ಆದರೂ ಪೋರ್ಚುಗೀಸ್ ಸರ್ಕಾರ ಬಿಗಿಮುಷ್ಟಿಯ ವಸಾಹತು ನೀತಿಯನ್ನು ಮುಂದುವರಿಸಿತು. ದೆಹಲಿ ಮತ್ತು ಲಿಸ್ಬನ್‌ಗಳ ನಡುವೆ ಅನೇಕ ಸುತ್ತಿನ ಮಾತುಕತೆಗಳು ನಡೆದರೂ ಪ್ರಯೋಜನವಾಗಲಿಲ್ಲ. 1947ರಿಂದ 1954ರ ವರೆಗೆ ನಡೆದ ವಿಮೋಚನಾ ಹೋರಾಟದ ಮುಖಂಡರನ್ನು ಪೋರ್ಚುಗೀಸ್ ಸರ್ಕಾರ ವರ್ಣನಾತೀತ ಶಿಕ್ಷೆಗಳಿಗೆ ಗುರಿ ಮಾಡಿತು. ಪೋರ್ಚುಗಲ್ ಮತ್ತು ಭಾರತದ ಮಧ್ಯೆ ರಾಜತಾಂತ್ರಿಕ ಸಂಬಂಧ 1955ರಲ್ಲಿ ಕಡಿದುಬಿತ್ತು. ಅದೇ ವರ್ಷ ಗೋವ ವಿಮೋಚನೆಗಾಗಿ ಶಾಂತಿಯುತ ಚಳವಳಿ ಪ್ರಾರಂಭವಾಯಿತು. ಚಳವಳಿ 1961ರ ವರೆಗೂ ಸತತವಾಗಿ ಮುಂದುವರಿಯಿತು. ಪೋರ್ಚುಗಲ್ ಸರ್ಕಾರ ಅನೇಕ ಸತ್ಯಾಗ್ರಹಿಗಳನ್ನು ಗುಂಡಿಟ್ಟು ಕೊಂದಿತು. ಮುಖಂಡರನ್ನು ನಾನಾಬಗೆಯ ಚಿತ್ರಹಿಂಸೆಗಳಿಗೆ ಗುರಿಪಡಿಸಿತು. ಸರ್ಕಾರದ ಉಗ್ರನೀತಿ ಮತ್ತು ದಂಡನೆಗಳು ಮುಂದುವರಿದುವು. ಭಾರತ ಸರ್ಕಾರದ ಸಂಯಮವನ್ನು ಪೋರ್ಚುಗಲ್ಲಿನ ವಸಾಹತು ನೀತಿ ಅಲುಗಿಸಿತು. ಪೋರ್ಚುಗೀಸ್ ಸೈನಿಕರು ಗೋವದ ಗಡಿಯಲ್ಲಿ ಭಾರತದ ಹಳ್ಳಿಗಳನ್ನು ಲೂಟಿ ಮಾಡಲುಪಕ್ರಮಿಸಿದರು. ಕೊನೆಗೆ 1961ರ ಡಿಸೆಂಬರ್ 17–18ರ ಮಧ್ಯರಾತ್ರಿಯ ವೇಳೆಗೆ ಪೋರ್ಚುಗೀಸರ ಆಡಳಿತಕೇಂದ್ರವಾದ ಪಣಜಿಯನ್ನು ಭಾರತ ಸೈನ್ಯ ಸುತ್ತುಗಟ್ಟಿತು. ಅಲ್ಲಿದ್ದ ಪೋರ್ಚುಗೀಸ್ ದಳಗಳು ಭಾರತೀಯ ಸೈನ್ಯಕ್ಕೆ ಶರಣಾಗತವಾದುವು. ಕೇವಲ 36 ಗಂಟೆಗಳಲ್ಲಿ ಹೋರಾಟ ಕೊನೆಗೊಂಡಿತು. ಪೋರ್ಚುಗೀಸ್ ಆಳಿಕೆಯಿಂದ ಗೋವ ವಿಮೋಚನೆಗೊಂಡಿತು. ಡಿಸೆಂಬರ್ 20ರಂದು ಗೋವ ಭಾರತದಲ್ಲಿ ವಿಲೀನವಾಯಿತು. (ಜಿ.ಆರ್.ಆರ್.)

**ವಾಸ್ತುಶಿಲ್ಪ:** ಪಶ್ಚಿಮ ಕರಾವಳಿಯಲ್ಲಿದ್ದು ಭೌಗೋಳಿಕವಾಗಿಯೂ ಚಾರಿತ್ರಿಕವಾಗಿಯೂ ವಿಶಿಷ್ಟ ಸ್ಥಾನವನ್ನು ಪಡೆದಿರುವ ಗೋವದ ವಾಸ್ತುಶಿಲ್ಪ ದೇಶೀಯ ಮತ್ತು ವಿದೇಶೀಯ ಪ್ರಭಾವಗಳಿಗೆ ಒಳಗಾಗಿರುವುದು ಸ್ವಾಭಾವಿಕ. ಇಲ್ಲಿಯ ವಾಸ್ತುಶಿಲ್ಪ ಬೆಳವಣಿಗೆಯ ಕುರುಹುಗಳು ಅತಿ ಪ್ರಾಚೀನಕಾಲದಿಂದಲೂ ಕಂಡುಬರುತ್ತವೆ. ಆದರೆ 16ನೆಯ ಶತಮಾನದಲ್ಲಿ ಈ ಪ್ರಾಂತವನ್ನಾಕ್ರಮಿಸಿಕೊಂಡ ಪೋರ್ಚುಗೀಸರ ಕಾಲದಲ್ಲಿ ನಡೆದ ಕ್ರೈಸ್ತಮತ ಪ್ರಚಾರದ ಫಲವಾಗಿ ನೂರಾರು ದೇವಾಲಯಗಳು ನೆಲಸಮವಾದವು. ಈ ಸ್ಥಳಗಳಲ್ಲಿ ಚರ್ಚುಗಳು ನಿರ್ಮಿತವಾದವು. ಆದ್ದರಿಂದ ಗೋವದಲ್ಲಿ ಪುರಾತನ ವಾಸ್ತುಶಿಲ್ಪ ಮಾದರಿಗಳು ಕೆಲವೇ ಉಳಿದಿವೆ. ಅಲ್ಲಲ್ಲಿ ಮುರಿದುಬಿದ್ದಿರುವ ಮೂರ್ತಿಗಳು ಮತ್ತು ಇತರ ಶಿಲ್ಪಗಳಿಂದ ಮಾತ್ರ ಅವನ್ನು ತಿಳಿದುಕೊಳ್ಳಲು ಸಾಧ್ಯ. ಪೋರ್ಚುಗೀಸರಿಂದ ನಾಶಗೊಂಡ ಕೆಲವು ದೇವಾಲಯಗಳ ಮೂಲಮೂರ್ತಿಗಳನ್ನು ಬೇರೆಡೆಗೆ ಕೊಂಡೊಯ್ದು ಅವುಗಳಿಗಾಗಿ ಕಟ್ಟಿಸಿದ ದೇವಾಲಯಗಳು ಕೆಲವು ಗೋವದಲ್ಲಿ ಈಚೆಗೆ ಬೆಳೆದುಬಂದ ವಾಸ್ತು ಮಾದರಿಯನ್ನು ಸೂಚಿಸುತ್ತವೆ. ಮುಸ್ಲಿಂ ಶೈಲಿಯ ಕೆಲವು ಕಟ್ಟಡಗಳನ್ನು ಗೋವವನ್ನು ಗೆದ್ದ ಆದಿಲ್‌ಷಾಹಿ ಮನೆತನದವರು ಕಟ್ಟಿಸಿದರೂ ಪೋರ್ಚುಗೀಸರು ಹಲವು ಕಟ್ಟಡಗಳನ್ನು ನಾಶಮಾಡಿ ಮತ್ತೆ ಕೆಲವನ್ನು ಮಾರ್ಪಡಿಸಿ ಸಚಿವಾಲಯಗಳನ್ನಾಗಿ, ಕಚೇರಿಗಳನ್ನಾಗಿ ಮಾಡಿಕೊಂಡರು. ಪೋರ್ಚುಗೀಸರು ಕಟ್ಟಿಸಿದ ಕೆಲವು ಚರ್ಚುಗಳು ಮತ್ತು ಇತರ ಕಟ್ಟಡಗಳು ಸುಂದರವಾಗಿವೆ; ಗೋವದಲ್ಲಿ ಪ್ರೇಕ್ಷಣೀಯ ಸ್ಮಾರಕಗಳಾಗಿ ನಿಂತಿವೆ.

ಪ್ರಸಕ್ತಶಕದ ಆದಿಕಾಲದಲ್ಲೇ ಗೋವದಲ್ಲಿ ವಾಸ್ತುಶಿಲ್ಪ ಆರಂಭವಾದ್ದನ್ನು ಕಾಣಬಹುದು. ಹರವಳೆ ಎಂಬಲ್ಲಿ ಗುಡ್ಡವನ್ನು ಕೊರೆದು ನಿರ್ಮಿಸಿರುವ ಗುಹೆಗಳಿವೆ. ಇವುಗಳಲ್ಲಿ ದೊರೆತ ಬ್ರಾಹ್ಮಿಲಿಪಿಯ ಶಾಸನ 1ನೆಯ ಶತಮಾನಕ್ಕೆ ಸೇರಿದ್ದು. ಇದೇ ಗೋವದ ಅತ್ಯಂತ ಪ್ರಾಚೀನ ಶಾಸನ. ಕೋಲ್ವಲೆಯ ಬಳಿ ಬೌದ್ಧಮೂರ್ತಿಯೊಂದು ದೊರೆತಿದೆ. ಈ ಪ್ರಾಂತದಲ್ಲಿ ಬೌದ್ಧಶಿಲ್ಪ ಇದ್ದದ್ದಕ್ಕೆ ಕುರುಹಾಗಿ ಉಳಿದಿದೆ. ಚಂದ್ರವರ್ಮನೆಂಬ ರಾಜ ಶಿವಪುರದಲ್ಲಿಯ ಬೌದ್ಧ ಮಹಾವಿಹಾರವೊಂದಕ್ಕೆ ದತ್ತಿ ಬಿಟ್ಟುದಾಗಿ 5ನೆಯ ಶತಮಾನದ ಶಾಸನವೊಂದು ತಿಳಿಸುತ್ತದೆ. ರಾಷ್ಟ್ರಕೂಟರ ಸಾಮಂತರಾಗಿ ವಲಿಪುರದಿಂದ ಆಳುತ್ತಿದ್ದ ಶಿಲಹಾರರು ನೆತರ್ಲೆ ಎಂಬಲ್ಲಿ ಮಹಾಲಕ್ಷ್ಮಿಯ ದೇವಾಲಯವೊಂದನ್ನು ನಿರ್ಮಿಸಿದ್ದರು. ಕಲ್ಯಾಣಿ ಚಾಳುಕ್ಯರ ಸಾಮಂತರಾಗಿ ಮೊದಲು ಚಂದ್ರಪುರದಿಂದಲೂ ಅನಂತರ ಗೋವ



ಬಾಮ್ ಜೀಸಸ್ ಬೆಸಿಲಿಕ, ಹಳೆಯ ಗೋವ

ಪಟ್ಟಣ ಅಥವಾ ಗೋವಪುರಿಯಿಂದಲೂ ಆಳುತ್ತಿದ್ದ ಗೋವೆ ಕದಂಬರು ಅನೇಕ ದೇವಾಲಯಗಳನ್ನು ಕಟ್ಟಿಸಿದ್ದರು. ಸವಾಯ್‌ವೆರೆ ಎಂಬಲ್ಲಿ ಮೂರ್ತಿನಾರಾಯಣನ ದೇವಾಲಯ, ಗೋವಪುರಿಯಲ್ಲಿ ಸರಸ್ವತಿ ದೇವಾಲಯ, ದೇಗಾಂವೆಯಲ್ಲಿ ಕಮಲನಾರಾಯಣ ಮತ್ತು ಮಹಾಲಕ್ಷ್ಮಿ ದೇವಾಲಯಗಳು–ಇವೇ ಮೊದಲಾದವು ಇವರ ಕಾಲದಲ್ಲಿ ನಿರ್ಮಿತವಾದುವು. ಆದರೆ ಬೆಳಗಾಂವಿ ಜಿಲ್ಲೆಯ ದೇಗಾಂವೆಯಲ್ಲಿರುವ



ಮಂಗೇಶ ದೇವಾಲಯ

ಸುಂದರವಾದ ಕಮಲನಾರಾಯಣ ದೇವಾಲಯವನ್ನು ಬಿಟ್ಟರೆ ಬೇರೆ ದೇವಾಲಯಗಳು ಉಳಿದುಬಂದಿಲ್ಲ. ಸಪ್ತಕೋಟೀಶ್ವರ ಈ ರಾಜರ ಆರಾಧ್ಯದೇವತೆ. ಶ್ರೀಸಪ್ತಕೋಟೀಶಲಬ್ಧವರವೀರ ಎಂಬುದು ಇವರ ಬಿರುದುಗಳಲ್ಲೊಂದು. ದೀವರ್ ದ್ವೀಪದ ಬಳಿ ನಾರ್ವೆಯಲ್ಲಿ ಇವರು ಸಪ್ತಕೋಟೀಶ್ವರ ದೇವಾಲಯವನ್ನು ಕಟ್ಟಿಸಿದ್ದರು. ವಿಜಯನಗರದ ಮಾಧವ ಮಂತ್ರಿ ಈ ದೇವಾಲಯವನ್ನು ಜೀರ್ಣೋದ್ಧಾರ ಮಾಡಿದ್ದ. ಪೋರ್ಚುಗೀಸರಿಂದ ಇದು ನಾಶವಾದ ಮೇಲೆ ಸಪ್ತಕೋಟೀಶ್ವರಲಿಂಗವನ್ನು ಬಿಳಿಚೊಂಡಲ್ಲಿಯ ನಾರ್ವೆಯಲ್ಲಿ ಪ್ರತಿಷ್ಠಾಪಿಸಿದ್ದರು. ಮುಂದೆ ಶಿವಾಜಿ ಈಗ ಇರುವ ದೇವಾಲಯವನ್ನು ನಿರ್ಮಿಸಲು ಕಾರಣನಾದ. ಕದಂಬ ಜಯಕೇಶಿಯ ಆಳಿಕೆಯಲ್ಲಿ ಮಂತ್ರಿಯಾಗಿದ್ದ ಛದಮ ಎಂಬ ಅರಬ್ ವ್ಯಾಪಾರಿ ಗೋವಪುರಿಯಲ್ಲಿ ಒಂದು ಮಸೀದಿಯನ್ನು ಕಟ್ಟಿಸಿದ್ದ.

ಯಾದವರ ಕಾಲದಲ್ಲಿ ಹೇಮಾಡ್‌ಪಂಥ್ ಶೈಲಿಯ ಹಲವು ದೇವಾಲಯಗಳನ್ನು ಗೋವದಲ್ಲಿಯೂ ಕಟ್ಟಿದ್ದಿರಬೇಕು. ಬಹುಶಃ ಈ ಕಾಲದಲ್ಲಿ ನಿರ್ಮಿತವಾಗಿದ್ದು ಇನ್ನೂ

ಉಳಿದುಬಂದಿರುವ ಪ್ರಾಚೀನ ದೇವಾಲಯವೆಂದರೆ ತಾಂಬಡಿ–ಸುರ್ಲ ಎಂಬಲ್ಲಿ ದಟ್ಟ ಕಾಡಿನ ನಡುವೆ ನಿಂತಿರುವ ಮಹದೇವ ದೇವಾಲಯ ಒಂದೇ. ಚಾಳುಕ್ಯಶೈಲಿಯಲ್ಲಿ ಸರಳವಾಗಿ ಕಟ್ಟಿರುವ ಈ ದೇವಾಲಯಕ್ಕೆ ಗರ್ಭಗೃಹ, ಅರ್ಧಮಂಟಪ ಮತ್ತು ಭೋಗಮಂಟಪಗಳೂ ಎರಡು ಅಂತಸ್ತುಗಳ ಕಲ್ಲುಗೋಪುರವೂ ಇವೆ. ಇದನ್ನು ಬಿಟ್ಟರೆ ಕೇರಿ ಎಂಬಲ್ಲಿ ಬೇತಾಳ ದೇವಾಲಯದಲ್ಲಿರುವ ಗಜಲಕ್ಷ್ಮೀ, ಪರ್ಸೆಯಲ್ಲಿರುವ ಬ್ರಹ್ಮನ ಮೂರ್ತಿ, ಕೇರಿವೆರೆ ಕಾಡಿನಲ್ಲಿ ಬಿದ್ದಿರುವ ನಾರಾಯಣನ ವಿಗ್ರಹ, ಕುಡ್ನೆಯಲ್ಲಿರುವ ಸೂರ್ಯಬಿಂಬ, ಉಮಾಸಹಿತ ಶಿವ, ಸೇಂಟ್ ಫ್ರಾನ್ಸಿಸ್ ಕತೀಡ್ರಲಿನ ವಸ್ತುಸಂಗ್ರಹಾಲಯದಲ್ಲಿರುವ ಕೆಲವು ಮೂರ್ತಿಗಳು ಮುಂತಾದವು ಆ ಕಾಲದ ಶಿಲ್ಪದ ಮಾದರಿಗಳಾಗಿ ಉಳಿದುಬಂದಿವೆ.

ಪೋರ್ಚುಗೀಸರು ನಾಶಮಾಡಿದ ದೇವಾಲಯಗಳಿಂದ ಮೂರ್ತಿಗಳನ್ನು ಬೇರೆ ಕಡೆಗೆ ಸಾಗಿಸಿ ಕಟ್ಟಿರುವ 16 ನೆಯ ಶತಮಾನದಿಂದೀಚಿನ ಕಟ್ಟಡಗಳಲ್ಲಿ ಕುಶಸ್ಥಲಿಯಲ್ಲಿದ್ದು ಪ್ರಿಯೋಲಿಗೆ ವರ್ಗಾಯಿಸಿದ ಮಂಗೇಶದೇವಾಲಯ, ಕದಲಿವನದಿಂದ ಕವಲೆಗೆ ಬದಲಾಯಿಸಿದ ಶಾಂತದುರ್ಗ ದೇವಾಲಯ, ನಾರ್ವೆಯಲ್ಲಿರುವ ಸಪ್ತಕೋಟೀಶ್ವರ, ಮರ್ದೋಲಿನ ಮಹಾಲಸ ದೇವಿಯ ಆಲಯ, ಕೊಲ್ವದಲ್ಲಿದ್ದು ಬಾಂದೋರಕ್ಕೆ ಬದಲಾಯಿಸಿದ ಮಹಾಲಕ್ಷ್ಮೀ ದೇವಾಲಯ, ಚಂದ್ರನಾಥ ಬೆಟ್ಟದ ಮೇಲಿರುವ ಚಂದ್ರನಾಥ ದೇವಾಲಯ– ಇವನ್ನು ಹೆಸರಿಸಬಹುದು. ಹಲವು ಶೈಲಿಗಳ ಸಂಮಿಶ್ರಣವನ್ನು ಈ ಕಟ್ಟಡಗಳಲ್ಲಿ ಕಾಣಬಹುದು. ಒಳಭಾಗದಲ್ಲಿ ಹಲವು ಕಂಬಗಳಿರುವ ಭೋಗಮಂಟಪ, ಜಗತಿಗಳು, ದೇವಾಲಯದ ಒಳಗೂ ಸುತ್ತಲೂ ಹಾಸುಗಲ್ಲುಗಳನ್ನು ಹಾಕಿಸುವುದು ಮುಂತಾದವುಗಳಲ್ಲಿ ವಿಜಯನಗರದ ಶೈಲಿಯ ಪ್ರಭಾವ ಕಂಡುಬಂದರೆ, ಹಲವು ದೇವಾಲಯಗಳ ಹೊರನೋಟದಲ್ಲಿ ಮುಸ್ಲಿಂ ಶೈಲಿಯ ಪ್ರಭಾವ ಎದ್ದುಕಾಣುತ್ತದೆ. ಈ ಕೆಲವು ದೇವಾಲಯಗಳನ್ನು ಅವುಗಳ ಮೇಲಿನ ಕಲಶಗಳಿಂದ ಮಾತ್ರ ದೇವಾಲಯಗಳೆಂದು ಗುರುತಿಸಬೇಕಾಗುತ್ತದೆ. ಇವೆಲ್ಲಕ್ಕಿಂತ ಹೆಚ್ಚಾಗಿ ಗೋವದ ದೇವಾಲಯಗಳಲ್ಲಿ ಲ್ಯಾಟಿನ್ ಶೈಲಿಯ ಪ್ರಭಾವವನ್ನೂ ವಿಶೇಷವಾಗಿ ಕಾಣಬಹುದು. ದೇವಸ್ಥಾನಗಳ ಮುಂದೆ ಹಲವು ಅಂತಸ್ತುಗಳಲ್ಲಿ ನೇರವಾಗಿ ಮೇಲೆದ್ದಿರುವ ಭವ್ಯವಾದ ಗೋಪುರಗಳಿರುವುದು ಇಲ್ಲಿಯ ದೇವಾಲಯಗಳ ಒಂದು ವಿಶೇಷ. ಮರಾಠಾ ರಾಜನಾದ, ಸಾತಾರೆಯ ಸಾಹು ರಾಜ ಕಟ್ಟಿಸಿದ ಶಾಂತದುರ್ಗ ದೇವಾಲಯದ ಕಂಬಗಳು ಮತ್ತು ಒಳಭಾಗದ ಅಲಂಕರಣಗಳು ಸುಂದರವಾಗಿವೆ. 17 ನೆಯ ಶತಮಾನದ ಆದಿಭಾಗದಲ್ಲಿ ಮರ್ದೋಲಿನಲ್ಲಿ ಕಟ್ಟಿರುವ ಮಹಾಲಸದೇವಿಯ ಆಲಯದಲ್ಲಿರುವ, ಮರದಲ್ಲಿ ಕೆತ್ತಿರುವ ಶಿಲ್ಪ ಅತ್ಯಂತ ಸುಂದರವಾಗಿದೆ.



ಕವಲೆಯ ಶಾಂತದುರ್ಗಾ ದೇವಾಲಯ

ಮುಸ್ಲಿಂ ಶೈಲಿಯ ಕಟ್ಟಡಗಳಲ್ಲಿ ಅತ್ಯಂತ ಭವ್ಯವಾಗಿದ್ದದ್ದು ಗೋವೆಯ ಆದಿಲ್‌ಷಹ ಕಟ್ಟಿಸಿದ ರಾಜವಾಡೆ. ಕೆಲವು ಮಾರ್ಪಾಟುಗಳನ್ನು ಹೊಂದಿ ಡಿ–ಪಲೇಶಿಯೊ–ಇದಾಲ್ಗಿಯೊ ಎಂಬ ಹೆಸರಿಂದ ಇಂದಿಗೂ ಅದು ಉಪಯೋಗದಲ್ಲಿದೆ. ಮಸೀದಿಗಳು ಕೆಲವು ಚರ್ಚುಗಳಾಗಿ ಮಾರ್ಪಟ್ಟಿವೆ. ಉಳಿದ ಕಟ್ಟಡಗಳು ನಾಶವಾಗಿವೆ.

ಸೆ ಪ್ರಿಮೇಶಿಯಲ್ ಡಿ ಗೋವಾ ಅಥವಾ ಸೆ ಕತೀಡ್ರಲ್ ಎಂಬುದು ಗೋವದ ಚರ್ಚುಗಳಲ್ಲಿ ಪುರಾತನವೂ ಭವ್ಯವೂ ಆದದ್ದು. ಆಲ್ಬುಕರ್ಕ್ ಹಳೆಯ ಗೋವೆಯನ್ನು ಗೆದ್ದಾಗ ಸೇಂಟ್ ಕ್ಯಾದರಿನ್ ನೆನಪಿಗಾಗಿ ಕಟ್ಟಲು ಆಲೋಚಿಸಿದ್ದ ಚರ್ಚು ಇದು. ಇದನ್ನು ಕಟ್ಟಿ ಪೂರೈಸಲು 75 ವರ್ಷಗಳಿಗೂ ಹೆಚ್ಚು ಕಾಲವಾಯಿತು. ಭವ್ಯತೆಯಲ್ಲಿ ಇದನ್ನು ಮೀರಿಸಿದ ಕಟ್ಟಡ ಗ್ರೇಟ್ ಬ್ರಿಟನಿನಲ್ಲಿ ಕೂಡ ಇಲ್ಲವೆನ್ನಲಾಗಿದೆ. ಹೊರಭಾಗ ಟಸ್ಕನ್ ಮತ್ತು ಡೋರಿಕ್ ಶೈಲಿಗಳಲ್ಲೂ ಒಳಭಾಗ ಕಾರಿಂತಿಯನ್ ಶೈಲಿಯಲ್ಲೂ ನಿರ್ಮಿತವಾಗಿರುವ ಈ ಕಟ್ಟಡ ಅದರ ಗಾತ್ರ ಮತ್ತು ಅಳತೆಗೆ ಹೆಸರಾದ್ದು. ಇದರ ಒಂದು ಭಾಗದ ಗೋಪುರ ಈಗ ಬಿದ್ದುಹೋಗಿದೆ. ಈ ಚರ್ಚಿನ ಒಳಭಾಗ ಅತ್ಯಂತ ರಮಣೀಯವಾಗಿದೆ. ಇಷ್ಟೇ ರಮಣೀಯವೂ ಭವ್ಯವೂ ಆಗಿರುವ ಸೇಂಟ್ ಕೆಸರನ್ ಚರ್ಚು ರೋಮಿನಲ್ಲಿರುವ ಸೇಂಟ್ ಪೀಟರನ ಬೆಸಿಲಿಕದಂತಿದೆ ; ಇದು ಕಾರಿಂತಿಯನ್ ಶೈಲಿಯಲ್ಲಿದೆ. ಹಳೆಯ ಗೋವದಲ್ಲಿರುವ ಬಾಮ್ ಜೀಸಸ್ ಚರ್ಚು ಅತ್ಯಂತ ಪ್ರಸಿದ್ಧವಾದ್ದು. ಇಲ್ಲೇ ಸೇಂಟ್ ಜೇವಿಯರನ ಸಮಾಧಿಯಿದೆ. ಇಲ್ಲಿಯ ಕಂಚಿನ ಕೆತ್ತನೆ ಆಕರ್ಷಕವಾದ್ದು. ಇದರ ಭಿತ್ತಿಯ ಮೇಲೆ ಜೇವಿಯರನ ಜೀವನಕ್ಕೆ ಸಂಬಂಧಿಸಿದ ಹಲವು ಚಿತ್ರಗಳಿವೆ. ಗೋವದಲ್ಲಿ ಗಾತಿಕ್ ಶೈಲಿಯಲ್ಲಿ ಕಟ್ಟಿರುವ ಅದ್ಭುತವಾದ ವಾಸ್ತು ಇದು. 1517 ರಲ್ಲಿ ಫ್ರಾನ್ಸಿಸ್ಕನರು ಕಟ್ಟಿಸಿದ ಸೇಂಟ್ ಫ್ರಾನ್ಸಿಸ್ ಕತೀಡ್ರಲ್ ಮೆನುಲಿನ್ ಶೈಲಿಯ ಉತ್ಕೃಷ್ಟ ಶಿಲ್ಪವನ್ನೊಳಗೊಂಡಿದೆ. ಹಿಂದೆ ಪೋರ್ಚುಗೀಸರು ಭಗ್ನಗೊಳಿಸಿದ್ದ ದೇವಾಲಯಗಳಿಂದ ತಂದಿಟ್ಟಿರುವ ಮೂರ್ತಿಗಳು ಇರುವುದು ಈ ಕಟ್ಟಡದಲ್ಲೇ. ಇದು ಒಂದು ವಸ್ತುಸಂಗ್ರಹಾಲಯವಾಗಿ ಮಾರ್ಪಟ್ಟಿದೆ. ಗೋವದಲ್ಲಿ ಅತ್ಯಂತ ಎತ್ತರವಾದ ಕಟ್ಟಡ ಸೇಂಟ್ ಮೋನಿಕ ಕಾನ್ವೆಂಟ್. ಮೂರು ಅಂತಸ್ತುಗಳಿರುವ ಇದರ ಗೋಡೆಗಳ ಮೇಲೆ ಬೈಬಲಿನ ಅನೇಕ ಪ್ರಸಂಗಗಳನ್ನು ಭಿನ್ನಭಿನ್ನ ವರ್ಣಗಳಲ್ಲಿ ಚಿತ್ರಿಸಲಾಗಿದೆ. ಗೋವ ವೆಲ್ಹಾದ ಗುಡ್ಡವೊಂದರ ಮೇಲೆ ಪಿಲಾಡ್ ಮೊನಾಸ್ಟರಿ ಇದೆ. ಇದರ ವಿಶಾಲವಾದ ಒಳ ಅಂಗಳದಲ್ಲಿ ಅತಿ ಸುಂದರವಾಗಿ ಕಂಡರಿಸಿರುವ ಕಂಬವೊಂದು ನಿಂತಿದೆ. 1541 ರಲ್ಲಿ ನಿರ್ಮಿಸಿದ ಉನ್ನತವಾದ ಸೇಂಟ್ ಪಾಲ್ಸ್ ಕಾಲೇಜಿನ ಒಂದು ಭಾಗ ಮಾತ್ರ ಬೀಳದೆ ನಿಂತಿದೆ.

ಗೋವದ ಮನೆಗಳಲ್ಲೂ ಲ್ಯಾಟಿನ್ ಶೈಲಿಯ ಪ್ರಭಾವವನ್ನು ಗುರುತಿಸಬಹುದು. ಆ ಪಟ್ಟಣವನ್ನು ನೋಡಿದರೆ ಲ್ಯಾಟಿನ್ ನಗರದಂತೆಯೇ ಕಾಣುತ್ತದೆ. (ಎಂ.ಎಚ್.)

**ಗೋವರ್ಧನ :** ಒಂದು ಪರ್ವತ. ಯಮುನಾ ನದೀತೀರದಲ್ಲಿ ಬೃಂದಾವನದ ಹತ್ತಿರವಿದೆ. ಒಮ್ಮೆ ನಂದಗೋಕುಲದ ಗೊಲ್ಲರು ಇಂದ್ರನಿಗಾಗಿ ಒಂದು ಯಾಗವನ್ನು ಏರ್ಪಡಿಸಬೇಕೆಂದು ಸಂಕಲ್ಪಿಸಿದ್ದರು. ಯಾಗದ ಬದಲು ಗೋವರ್ಧನ ಗಿರಿಯನ್ನೇ ಪೂಜಿಸಬೇಕೆಂದು ಶ್ರೀಕೃಷ್ಣ ಗೊಲ್ಲರಿಗೆ ಸೂಚಿಸಿದ. ಅವರು ಕೃಷ್ಣನ ಸೂಚನೆಯಂತೆ ಗಿರಿಯನ್ನು ಪೂಜಿಸಲು ಅಣಿಯಾದರು. ಆಗ ಇಂದ್ರ ಕ್ರುದ್ಧನಾಗಿ ಗೋಕುಲ ಮುಳುಗಿಹೋಗುವಂತೆ ಮಳೆ ಸುರಿಸಲಾರಂಭಿಸಿದ. ಆಗ ಕೃಷ್ಣ ತನ್ನ ಕಿರಿಬೆರಳಿನಿಂದ ಆ ಪರ್ವತವನ್ನು ಎತ್ತಿ ಕೊಡೆಯಂತೆ ಹಿಡಿದು ಅದರ ಕೆಳಗೆ ಗೊಲ್ಲರು ಮತ್ತು ಅವರ ದನಕರುಗಳು ರಕ್ಷಣೆ ಪಡೆವಂತೆ ಮಾಡಿದ. ಇದು ಕೃಷ್ಣ ಎಸಗಿದ ಪವಾಡಗಳಲ್ಲಿ ಒಂದು. ಇದರಿಂದಾಗಿ ಕೃಷ್ಣನನ್ನು ಗೋವರ್ಧನ ಗಿರಿಧಾರಿ, ಗಿರಿಧರ ಮುಂತಾಗಿ ಭಕ್ತರು ಸ್ತುತಿಸಿದ್ದಾರೆ. ಈ ವಿಚಾರವಾಗಿ ಹರಿವಂಶ, ವಿಷ್ಣು ಪುರಾಣ, ಭಾಗವತ ಮತ್ತು ಭಾರತಗಳಲ್ಲಿ ಪ್ರಸ್ತಾಪಿಸಲಾಗಿದೆ. (ಜಿ.ಎಚ್.)

**ಗೋವರ್, ಜಾನ್ :** ಸು. 1330–1408. ಐರೋಪ್ಯ ಮಧ್ಯಯುಗದ ನಾಲ್ಕು ಪ್ರಸಿದ್ಧ ಆಂಗ್ಲ ಕವಿಗಳಲ್ಲೊಬ್ಬ, ಉಳಿದವರು ಚಾಸರ್, ಲಿಡ್ಗೇಟ್ ಮತ್ತು ಲ್ಯಾಂಗ್ಲೆಂಡ್.

ಗೋವರನ ಜೀವನದ ಬಗ್ಗೆ ಖಚಿತವಾಗಿ ಗೊತ್ತಿರುವ ವಿವರಗಳು ಹೆಚ್ಚಿಲ್ಲ. ಈತ ಕೆಂಟ್ ಎಂಬಲ್ಲಿ ಹುಟ್ಟಿದ. ಹಳ್ಳಿಯ ವತನದಾರನೋ ವರ್ತಕನೋ ಆಗಿ ಬದುಕು ನಡೆಸಿದ್ದಿರಬೇಕೆಂಬುದು ಈಚಿನ ಅಭಿಪ್ರಾಯ. ಸಾಕಷ್ಟು ಅನುಕೂಲ ಸ್ಥಿತಿಯಲ್ಲಿಯೇ ಬಾಳಿದ್ದಿರಬೇಕು. ಧರ್ಮಸಂಸ್ಥೆಗಳಿಗೆ ಉದಾರವಾಗಿ ದಾನ ಮಾಡುತ್ತಿದ್ದ. ವಿರಾಗಿಯಾಗಬೇಕಿದ್ದ ಎಪ್ಪತ್ತರ ಮುಪ್ಪಿನಲ್ಲಿ ಆಗ್ನೆಸ್ ಗ್ರೌಂಡೊಲ್ಫ್ ಎಂಬುವಳನ್ನು ಮದುವೆಯಾದ. ಅನಂತರ ಮೂರು ವರ್ಷಗಳಲ್ಲಿಯೇ ಕುರುಡನಾಗಿ, ಅದಾದ ಏಳು ವರ್ಷಗಳಿಗೆ ಗತಿಸಿದ. ಮುಂಚೆಯೇ ಒಂದು ಮದುವೆಯಾಗಿದ್ದ, ಮುಪ್ಪಿನಲ್ಲಾದದ್ದು ಎರಡನೆಯ ಮದುವೆ ಎಂಬ ಊಹೆಯೂ ಇದೆ.

ಚಾಸರ್ ಮತ್ತು ಗೋವರ್ ತುಂಬ ಸ್ನೇಹದಿಂದಿದ್ದುದು ಕಂಡುಬರುತ್ತದೆ. ಚಾಸರ್ ಒಮ್ಮೆ ಪರದೇಶಕ್ಕೆ ಹೋಗಬೇಕಾದ ಸಂದರ್ಭದಲ್ಲಿ ಇವನನ್ನು ತನ್ನ ಆಸ್ತಿಗೆ ಅಧಿಕಾರಿಯನ್ನಾಗಿ ನಿಯಮಿಸಿದ್ದುಂಟು. ಚಾಸರ್ ತನ್ನ ಟ್ರಾಯಿಲಸ್ ಮತ್ತು ಕ್ರಿಸಿಡೆ ಎಂಬ ಕಥೆಯ ಮುಮ್ಮಾತಿನಲ್ಲಿ ಗೋವರ್‌ನನ್ನು ನೀತಿಶಾಲಿ ಗೋವರ್ ಎಂದು ಶ್ಲಾಘಿಸಿದ್ದಾನೆ. ವರ್ತಕನ ಕಥೆಯ ಮುದುಕ ಜನವರಿ ಗೋವರ್‌ನ ವ್ಯಂಗ್ಯ ಚಿತ್ರವೆಂತಲೂ ಕೊಂಚ ಕಾಲ ಇವರಿಬ್ಬರಿಗೂ ಮನಸ್ತಾಪ ಉಂಟಾಗಿದ್ದಿತೆಂಬುದಕ್ಕೆ ಇದೇ ಸಾಕ್ಷಿಯೆಂತಲೂ ಒಂದು ಹೇಳಿಕೆ ಇದೆ. ಇದು ಪಾಕ್ಷಿಕ ಕಲ್ಪನೆ. ಸಲಿಗೆಯ ವಿನೋದ ಒಂದುಂಟೆಂಬುದನ್ನು ನೆನಪಿನಲ್ಲಿಡಬೇಕು.

ನೀತಿಶಾಲಿ ಎಂಬ ಪದ ಗೋವರನ ಕೃತಿಗಳಿಗೂ ಸಲ್ಲುತ್ತದೆ. ಈತನ ಮುಖ್ಯ ಕೃತಿಗಳು ಮೂರು – ಲ್ಯಾಟಿನ್ ಭಾಷೆಯ ವಾಕ್ಸ್ ಕ್ಲೆಮ್ಯಾಂಟಿಸ್ (10,000 ಸಾಲು), ಫ್ರೆಂಚ್‌ನ ಸ್ಪೆಕ್ಯುಲಂ ಮೆಡಿಟ್ಯಾಂಟಿಸ್ (20,000 ಸಾಲು) ಮತ್ತು ಇಂಗ್ಲಿಷ್‌ನ ಕನ್‌ಫೆಸಿಯೋ ಅಮ್ಯಾಂಟಿಸ್ (34,000 ಸಾಲು). ಅನೇಕ ಶತಮಾನಗಳು ಅನುಪಲಬ್ಧವಾಗಿದ್ದ ಈತನ ಫ್ರೆಂಚ್ ಕೃತಿ 1895 ರಲ್ಲಿ ಕೇಂಬ್ರಿಜ್‌ನಲ್ಲಿ ಸಿಕ್ಕಿತು. ಮತಧರ್ಮದ ಭಾಷೆ, ನಾಗರಿಕ

ಆಡಳಿತ ಭಾಷೆ ಮತ್ತು ದೇಶೀಯ ಭಾಷೆ–ಮೂರರಲ್ಲೂ ಈತ ಕೃತಿರಚನೆ ಮಾಡಿರುವುದು ಗಮನಾರ್ಹ ಸಂಗತಿ. ಆಗ ದೇಶೀಯ ಭಾಷೆಯಾದ ಇಂಗ್ಲಿಷ್‌ಗೆ ಆದ್ಯ ಸ್ಥಾನವಿರಲಿಲ್ಲ. ಮೂರರಲ್ಲೂ ಈತ ನೀತಿಬೋಧಕ ಕಿರುಗವನಗಳನ್ನೂ ರಚಿಸಿದ್ದಾನೆ. ಲ್ಯಾಟಿನಿನ ರಚನೆಗಳು ಬಹಳಮಟ್ಟಿಗೆ, ಎರಡನೆಯ ರಿಚರ್ಡನ ಆಳಿಕೆಯ ಅಸಂತುಷ್ಟಿ, 1381ರ ರೈತ ಚಳವಳಿ ಮತ್ತು ಮುಂದೆ ಬರಲಿದೆಯೆಂದು ನಿರೀಕ್ಷಿಸಲಾಗಿದ್ದ, ನಾಲ್ಕನೆಯ ಹೆನ್ರಿಯ ಕಾಲದ, ಸುಖದಿನದ ವರ್ಣನೆಗಳಾಗಿವೆ. ಫ್ರೆಂಚ್‌ನಲ್ಲಿ ರೂಪುಗೊಂಡ ಕೃತಿ ವೈವಾಹಿಕ ಜೀವನದ ಹಿರಿಮೆಯನ್ನು ಹೊಗಳುವ ಗಂಭೀರ ರಚನೆಯಾಗಿದೆ.



ಜಾನ್ ಗೋವರ್, ವಾಕ್ಸ್ ಕ್ಲೆಮ್ಯಾಂಟಿಸ್ ಎಂಬ ಲ್ಯಾಟಿನ್ ಕಾವ್ಯದ ಹಸ್ತಪ್ರತಿಯೊಂದರಲ್ಲಿನ ಕಿರುಚಿತ್ರ, ಲಂಡನ್ನಿನ ಬ್ರಿಟಿಷ್ ಮ್ಯೂಸಿಯಮಿನಲ್ಲಿದೆ

ಇವನ ಕನ್‌ಫೆಸಿಯೊ ನಿಜಕ್ಕೂ ಬೃಹತ್ಕೃತಿ ಕೂಡ. ಇವನ ಪಾಲಿಗೆ ಮಹತ್ಕೃತಿ ಕೂಡ. ದೊರೆ ಎರಡನೆಯ ರಿಚರ್ಡನ ಅಪೇಕ್ಷೆಯಂತೆ ಇದನ್ನು ರಚಿಸಿದುದಾಗಿ ತಿಳಿಯಬರುತ್ತದೆ. ಕಾವ್ಯದ ಮುಮ್ಮಾತಿನಲ್ಲಿ, ಎಂದಿನಂತೆ ಕಾಲ ಕೆಟ್ಟಿತು, ಎಲ್ಲೆಲ್ಲೂ ಪಾಪ ತುಂಬಿತು, ಮುಂತಾಗಿ ಗೋಳಾಡಿ, ಸದ್ಯಕ್ಕಾದರೂ ಆ ವಿಷಯವನ್ನು ಬಿಟ್ಟು ಹೆಚ್ಚು ಆಹ್ಲಾದಕರವಾದ ಪ್ರೇಮದ ವಿಷಯಕ್ಕೆ ಬರೋಣವೆಂದು ಸಾರಿ ಕವಿ ಕಥೆಯನ್ನು ಪ್ರಾರಂಭಿಸುತ್ತಾನೆ. ಒಂದು ವಸಂತ ಪ್ರಾತಃಕಾಲದಲ್ಲಿ ಕವಿ ಯಾವುದೋ ವನಕ್ಕೆ ಹೋದಾಗ ಪ್ರೇಮದೇವತೆಗಳಾದ ಕ್ಯುಪಿಡ್ ಮತ್ತು ವೀನಸ್ ಎದುರಾದರಂತೆ. ಕ್ಯುಪಿಡ್ ಸುಮ್ಮನೆ ಹೊರಟು ಹೋಗಬೇಕೆಂದಿದ್ದರೂ ತನ್ನ ಆರಾಧಕನನ್ನು ಉಪೇಕ್ಷಿಸುವುದಕ್ಕೆ ಮನಸ್ಸಾಗದ ವೀನಸ್ ಇವನನ್ನು ಮಾತಾಡಿಸಿ ಆತ್ಮನಿವೇದನೆ ಮತ್ತು ಕ್ಷಮಾರ್ಜನೆಗೋಸ್ಕರ ಇವನನ್ನು ಜೀನಿಯಸ್ ಬಳಿಗೆ ಕಳಿಸಿದಳಂತೆ. ಆಗ ಜೀನಿಯಸ್ ಇವನಿಗೆ ಕೊಟ್ಟ ಉಪದೇಶದ ದೃಷ್ಟಾಂತ ಕಥೆಗಳೇ ಇದರ ತಿರುಳು. ಕೆಲವಕ್ಕೆ ಪ್ರಾಚೀನ ರೋಮನ್ ಕವಿ ಓವಿಡ್ ಆಧಾರ. ಉಳಿದವು ಆಗಿನ ಕಾಲದಲ್ಲಿ ಜನಜನಿತವಾಗಿದ್ದಂಥವು. ದಿ ಟೇಲ್ ಆಫ್ ಕಾನ್ಸ್ಟನ್ಸ್ ಮತ್ತು ದಿ ಟೇಲ್ ಆಫ್ ಫ್ಲಾರೆಂಟ್ ಚಾಸರನಲ್ಲಿ ಕ್ರಮಶಃ ದಿ ಟೇಲ್ ಆಫ್ ಸಮನರ್ (ನ್ಯಾಯಗಾರನ ಕಥೆ) ಮತ್ತು ದಿ ವೈಫ್ ಆಫ್ ಬಾತ್ಸ್ ಟೇಲ್ ಎಂದಾಗುತ್ತದೆ. ಆದರೆ ಇವನು ಕಥನ ಕಲೆಯಲ್ಲಿ ಚಾಸರನ ಸಮಕ್ಕೆ ಹಾಗಿರಲಿ ಹತ್ತಿರಕ್ಕೂ ಬರಲಾರ. ಇಲ್ಲಿನ ಟೈರ್ ನಗರದ ಅಪೋಲೋನಿಯಸ್ ಮುಂದೆ ಷೇಕ್ಸ್‌ಪಿಯರನ ಪೆರಿಕ್ಲೀಸ್‌ಗೆ ವಸ್ತುವನ್ನೊದಗಿಸಿತೆಂದು ಹೇಳಲಾಗಿದೆ.

ಗೋವರ್ ಬೃಹತ್ಸಾಹಿತಿ ಹೌದು; ಆದರೆ ಇಂದಿನ ರುಚಿಗೆ ಒಗ್ಗುವುದು ಕಷ್ಟ; ತೀರ ನೀರಸ, ಮಂದ, ಭಾರ.
(ಆರ್.ಎನ್.ಎ.ಜೆ.)

**ಗೋವಿಂದ (ಒರಿಸ್ಸದ) :** ಒರಿಸ್ಸದಲ್ಲಿ ಆಳಿದ ಸೂರ್ಯವಂಶದ ಗಜಪತಿ ಅರಸನಾದ ಪ್ರತಾಪರುದ್ರದೇವನ ಸೇನಾಪತಿ. ಸು. 1540 ರಲ್ಲಿ ಅರಸ ಮರಣ ಹೊಂದಿದ ಬಳಿಕ ಆತನ ಇಬ್ಬರು ಮಕ್ಕಳಾದ ಕಲುವದೇವ ಮತ್ತು ಕಖರವದೇವರನ್ನು ಕೊಲ್ಲಿಸಿ ಗಜಪತಿ ರಾಜ್ಯವನ್ನು ಗೋವಿಂದ ಆಕ್ರಮಿಸಿದ. ಇದು ನಡೆದದ್ದು 1541ರ ಸೆಪ್ಟೆಂಬರ್ ಮತ್ತು 1542ರ ಸೆಪ್ಟೆಂಬರ್ ನಡುವೆ ಎಂಬುದು ಪುರಿಯ ಜಗನ್ನಾಥ ದೇವಾಲಯದಲ್ಲಿಯ ಶಾಸನವೊಂದರಿಂದ ತಿಳಿದುಬರುತ್ತದೆ.

ಬಂಗಾಳದಲ್ಲಿ ಸುಲ್ತಾನನಾದ ಅಲಾವುದೀನ್ ಹುಸೇನ್ ಷಹ ಆಳುತ್ತಿದ್ದಾಗ, ಸು. 1508–09 ರಲ್ಲಿ ಶಾಹ ಇಸ್ಮಾಯಿಲ್ ಘಾಜಿ ಒರಿಸ್ಸದ ಮೇಲೆ ದಂಡೆತ್ತಿ, ಪುರಿಯ ಜಗನ್ನಾಥ ಮತ್ತು ಇತರ ದೇವಾಲಯಗಳನ್ನು ಭಗ್ನಗೊಳಿಸಿ ಅಲ್ಲಿಯ ಸಂಪತ್ತನ್ನು ದೋಚಿದ. ಇದೇ ಸಮಯದಲ್ಲಿ ಪ್ರತಾಪರುದ್ರ ವಿಜಯನಗರದ ಕೃಷ್ಣದೇವರಾಯನ ವಿರುದ್ಧ ದಂಡೆತ್ತಿದ. ಆದರೆ ಈ ವಿಷಯವನ್ನರಿತ ಕೂಡಲೇ ರಾಜಧಾನಿಗೆ ಹಿಂದಿರುಗಿದ. ಹಿಮ್ಮೆಟ್ಟಿದ್ದ ಶತ್ರುಸೇನೆಯನ್ನು ಬೆನ್ನಟ್ಟಿ ಹೂಗ್ಲಿ ಜಿಲ್ಲೆಯ ಮಾಂದಾರನ್ ಕೋಟೆಯನ್ನು ಮುತ್ತಿದನಾದರೂ ಈತನ ಸೇನಾನಿಯಾದ ಗೋವಿಂದನ ಮೋಸಕ್ಕೆ ಸಿಲುಕಿ ಶಾಹನೊಡನೆ ಒಪ್ಪಂದ ಮಾಡಿಕೊಂಡು ಹಿಂದಿರುಗಬೇಕಾಯಿತು.

ಇದೇ ಗೋವಿಂದನೇ ಅನಂತರ ಪ್ರತಾಪರುದ್ರನ ಮಕ್ಕಳನ್ನು ಕೊಲೆಮಾಡಿ ತಾನೇ ಒರಿಸ್ಸದಲ್ಲಿ ಆಳತೊಡಗಿದ. ಈ ಹೆಚ್ಚಿನ ವಿವರಗಳು ನಮಗೆ ತಿಳಿದಿರುವುದು ಜಗನ್ನಾಥ ದೇವಾಲಯದ ವೃತ್ತಾಂತವೆನಿಸಿದ ಮಾದಲಾಪಾಂಜಿಯಿಂದ ಮಾತ್ರ. ಈತ ಸುಮಾರು 7 ವರ್ಷಗಳ ಕಾಲ ಆಳಿದ. ಈತನ ಬಳಿಕ ಈತನ ಮಗನೂ ಇವನ ಇಬ್ಬರು ಮಕ್ಕಳೂ ಅನುಕ್ರಮವಾಗಿ 1559 ರವರೆಗೆ ಆಳಿದರು. ಈತ ಭೋಯಿ ಮನೆತನಕ್ಕೆ ಸೇರಿದವನು.
(ಜಿ.ಬಿ.ಆರ್.)

**ಗೋವಿಂದ (ರಾಷ್ಟ್ರಕೂಟ) :** ಕರ್ನಾಟಕವನ್ನಾಳಿದ ರಾಷ್ಟ್ರಕೂಟ ಅರಸರಲ್ಲಿ ಗೋವಿಂದ ಎಂಬ ಹೆಸರಿನ ದೊರೆಗಳು ನಾಲ್ವರು. ಒಂದನೆಯ ಗೋವಿಂದನ ಆಳಿಕೆಯ ಕಾಲ ಮತ್ತು ಇತರ ವಿವರಗಳು ತಿಳಿದಿಲ್ಲ. ರಾಷ್ಟ್ರಕೂಟ ರಾಜವಂಶವನ್ನು ಸ್ಥಾಪಿಸಿದ ದಂತಿದುರ್ಗನ ಎಲ್ಲೋರ ಶಾಸನದಲ್ಲಿ ಅವನ ಪೂರ್ವಿಕರ ಹೆಸರುಗಳನ್ನು ಕೊಟ್ಟಿದೆ. ಅವರಲ್ಲಿ ಮೊದಲಿಗ ದಂತಿವರ್ಮ. ಅವನ ಮಗ 1ನೆಯ ಇಂದ್ರ. ಇಂದ್ರನ ಮಗ ಗೋವಿಂದರಾಜ. ಇವನೇ 1ನೆಯ ಗೋವಿಂದನೆಂದು ಪರಿಗಣಿಸಲಾಗಿದೆ. ಗೋವಿಂದನ ಮಗ, ಮೊಮ್ಮಗ, ಮರಿಮಗ ಅನುಕ್ರಮವಾಗಿ 1ನೆಯ ಕರ್ಕ, 2ನೆಯ ಇಂದ್ರ ಮತ್ತು ದಂತಿದುರ್ಗ. ಅನಂತರ ಆಳಿದ ಅರಸರಲ್ಲಿ ಗೋವಿಂದ ಎಂಬ ಹೆಸರಿನವರು ಮೂವರು. ಇವರು ಅನುಕ್ರಮವಾಗಿ 2ನೆಯ, 3ನೆಯ ಮತ್ತು 4ನೆಯ ಗೋವಿಂದ ಎನಿಸಿಕೊಂಡಿದ್ದಾರೆ. ಇವರನ್ನು ಕುರಿತ ಮುಖ್ಯ ಅಂಶಗಳನ್ನು ಮುಂದೆ ಕೊಡಲಾಗಿದೆ. *

**ಗೋವಿಂದ II:** ರಾಷ್ಟ್ರಕೂಟ ವಂಶದ ದೊರೆ (ಸು.774–80). ಒಂದನೆಯ ಕೃಷ್ಣರಾಜನ ಜ್ಯೇಷ್ಠ ಪುತ್ರ. ಈತನಿಗೆ ಪ್ರಭೂತವರ್ಷ, ವಿಕ್ರಮಾವಲೋಕ, ಪ್ರತಾಪಾವಲೋಕ ಎಂಬ ಬಿರುದುಗಳಿದ್ದುವು.

ಗೋವಿಂದ ತನ್ನ ತಂದೆ ಕೃಷ್ಣರಾಜನ ಕಾಲದಲ್ಲೇ ಗಂಗರು ಮತ್ತು ವೆಂಗಿ ಚಾಳುಕ್ಯರ ಮೇಲೆ ಹೋರಾಡಿ ವೀರಯೋಧನೆಂದು ಖ್ಯಾತಿ ಹೊಂದಿದ್ದ. ತಾನೇ ರಾಜನಾದ ಮೇಲೆ ಗೋವರ್ಧನ ಪ್ರಾಂತವನ್ನು (ನಾಸಿಕ ಜಿಲ್ಲೆ) ವಶಪಡಿಸಿಕೊಂಡನೆಂದೂ ಪಾರಿಜಾತ ರಾಜನನ್ನು ಸೋಲಿಸಿದನೆಂದೂ ಶಾಸನಗಳಿಂದ ತಿಳಿದುಬರುತ್ತದೆ. ಆದರೆ ಹಿಂದೆ ರಾಷ್ಟ್ರಕೂಟ ರಾಜ್ಯದ ಒಳಗೆ ಇದ್ದ ಗೋವರ್ಧನ ಪ್ರಾಂತವನ್ನೇಕೆ ಇವನು ವಶಪಡಿಸಿಕೊಳ್ಳಬೇಕಾಯಿತು ಮತ್ತು ಪಾರಿಜಾತ ಯಾರು ಎಂಬುದು ತಿಳಿಯದು. ಗೋವಿಂದ ಚಕ್ರಾಧಿಪತ್ಯವನ್ನು ವಹಿಸಿಕೊಂಡ ಪ್ರಾರಂಭದಲ್ಲಿ ರಾಜ್ಯ ಸಂಘಟನಾಕಾರ್ಯದಲ್ಲಿ ಉತ್ಸಾಹ ತೋರಿಸಿದರೂ ಕ್ರಮೇಣ ರಾಜ್ಯ ಪರಿಪಾಲನೆಯಲ್ಲಿ ಅನಾಸಕ್ತನಾಗಿ, ಸುಖಲೋಲುಪನಾಗಿದ್ದ. ಅಷ್ಟೇ ಅಲ್ಲದೆ ಇವನ ಆಳಿಕೆಯ ಬಹುಕಾಲ ಪೂರ್ತ ಅಧಿಕಾರವನ್ನು ಭದ್ರಪಡಿಸಿಕೊಳ್ಳುವುದರಲ್ಲೇ ಕಳೆಯಿತು. ಅಧಿಕಾರ ಮದದಿಂದ ದುಶ್ಚಟಗಳಿಗೆ ಬಲಿಯಾದ ಗೋವಿಂದ ಪ್ರಜೆಗಳ ಹಾಗೂ ಸಾಮಂತರ ಕೋಪಕ್ಕೆ ಬೇಗನೆ ಗುರಿಯಾದ. ನಾಸಿಕ ಪ್ರಾಂತದಲ್ಲಿ ಇವನ ಅಧೀನನಾಗಿ ಆಳುತ್ತಿದ್ದ ಇವನ ತಮ್ಮ ಧ್ರುವ ಈ ಅವಕಾಶವನ್ನು ಉಪಯೋಗಿಸಿಕೊಂಡು ರಾಜ್ಯಾಡಳಿತದ ಸೂತ್ರವನ್ನು ಕಸಿದುಕೊಳ್ಳಲು ಹವಣಿಸಿದ. ಅಣ್ಣನನ್ನು ಧಿಕ್ಕರಿಸಿ ತನ್ನ ಹೆಸರಿನಲ್ಲಿಯೇ ಶಾಸನವನ್ನು ಹೊರಡಿಸಲು ಪ್ರಾರಂಭಿಸಿದ. ಇದನ್ನರಿತ ಗೋವಿಂದ ಧ್ರುವನನ್ನು ಅಧಿಕಾರ ಸ್ಥಾನದಿಂದ ತಳ್ಳಿ ತಾನೇ ಅಧಿಕಾರವನ್ನು ವಹಿಸಿಕೊಂಡ. ಧ್ರುವ ಅಣ್ಣನ ವಿರುದ್ಧ ದಂಗೆ ಎದ್ದ. ಗೋವಿಂದ ಕಂಚಿ, ಗಂಗವಾಡಿ, ವೆಂಗಿ, ಮಾಳವ ಮೊದಲಾದ ರಾಜರುಗಳ ನೆರವನ್ನು ಯಾಚಿಸಿ ಧ್ರುವನೊಡನೆ ಯುದ್ಧಕ್ಕೆ ಸಿದ್ಧನಾದ. ಆದರೆ ರಾಷ್ಟ್ರಕೂಟ ವೈರಿಗಳತ್ತ ಇವನು ನೆರವಿಗೆ ಕೈಚಾಚಿದ್ದರಿಂದ ಇವನ

ಮಂತ್ರಿ ಸಾಮಂತರೂ ಧ್ರುವನ ಪಕ್ಷ ವಹಿಸಿದರು. ವೆಂಗಿಯ ವಿಷ್ಣುವರ್ಧನ ಧ್ರುವನ ಮಾವನಾದುದರಿಂದ ಗೋವಿಂದನ ನೆರವಿಗೆ ಬರಲಿಲ್ಲ. ಉಳಿದ ರಾಜರ ಸಹಾಯ ಬರುವುದಕ್ಕೆ ಮೊದಲೇ ಧ್ರುವ ಗೋವಿಂದನನ್ನು ಸೋಲಿಸಿ ರಾಜ್ಯಾಧಿಕಾರವನ್ನು ಕಿತ್ತುಕೊಂಡು ರಾಷ್ಟ್ರಕೂಟ ಸಾಮ್ರಾಜ್ಯದ ಅಧಿಪತಿಯಾದ. ಗೋವಿಂದ 780ರಲ್ಲಿ ಯುದ್ಧರಂಗದಲ್ಲೇ ಅಸುನೀಗಿರಬೇಕೆಂದು ತೋರುವುದು. (ಎಸ್.)

**ಗೋವಿಂದ III:** ರಾಷ್ಟ್ರಕೂಟ ವಂಶದ ಪ್ರಖ್ಯಾತ ರಾಜ (ಸು.793–814). ಧ್ರುವನ ಮೂರನೆಯ ಮಗ. ಪ್ರಭೂತವರ್ಷ, ಜಗತ್ತುಂಗ, ಜನವಲ್ಲಭ, ಕೀರ್ತಿನಾರಾಯಣ, ಜಗತ್‌ರುದ್ರ, ತ್ರಿಭುವನಧವಳ ಎಂಬ ಬಿರುದುಗಳನ್ನು ಹೊಂದಿದ್ದ. ತನ್ನ ತಂದೆ ಧ್ರುವನ ಇಚ್ಛೆಯಂತೆ ಅವನ ಅನಂತರ ರಾಷ್ಟ್ರಕೂಟ ಸಿಂಹಾಸನವನ್ನೇರಿದ. ಇವನು ರಾಜನಾದ ಮೇಲೆ ಇವನ ಅಣ್ಣ ರಣಾವಲೋಕ ಸ್ತಂಭ ಸ್ವಲ್ಪಕಾಲ ತೆಪ್ಪಗಿದ್ದರೂ ತಮ್ಮನ ಏಳಿಗೆಯನ್ನು ಸಹಿಸಲಿಲ್ಲ. ತನ್ನನ್ನು ಬಿಟ್ಟು ತಮ್ಮನಿಗೆ ತಂದೆ ಪಟ್ಟಗಟ್ಟಿದುದರಿಂದ ಮೊಳೆತ ಅಸೂಯೆ ಹೆಮ್ಮರವಾಗಿ ಬೆಳೆಯತೊಡಗಿತು. ತಮ್ಮನಿಂದ ಅಧಿಕಾರವನ್ನು ಕಸಿದುಕೊಳ್ಳಲು ಕಂಚಿಯವರೆಗಿನ ಹನ್ನೆರಡು ಮಂದಿ ಸಾಮಂತರನ್ನು ಒಂದುಗೂಡಿಸಿ ಗೋವಿಂದನ ವಿರೋಧವಾಗಿ ಒಂದು ಮಹತ್ತರ ಕೂಟವನ್ನು ರಚಿಸಿದ. ಅವರಲ್ಲಿ ಕಂಚಿಯ ದಂತಿಗ, ನೊಳಂಬವಾಡಿಯ ಚಾರುಪೊನ್ನೇರ ಮತ್ತು ಬನವಾಸಿಯ ಕತ್ತಿಯರ ಮುಖ್ಯರು. ಅಲ್ಲದೆ ಗೋವಿಂದನ ಕೆಲವರು ಮಂತ್ರಿಗಳೂ ಸ್ತಂಭನ ಪರವಾಗಿದ್ದರು. 788ರಲ್ಲಿ ಗಂಗರಾಜ ಶ್ರೀಪುರುಷ ಮರಣಹೊಂದಿದಾಗ ಅವನ ಅನಂತರ ಪಟ್ಟಕ್ಕೆ ಬರಬೇಕಾಗಿದ್ದ ಶಿವಮಾರ ರಾಷ್ಟ್ರಕೂಟ ಕಾರಾಗೃಹದಲ್ಲಿ ಬಂದಿಯಾಗಿದ್ದ. ಗೋವಿಂದ ರಣಾವಲೋಕನನ್ನು ಸದೆಬಡಿಯುವುದಕ್ಕೆ ಅನುಕೂಲವಾಗಲೆಂದು ಶಿವಮಾರನನ್ನು ಬಿಡುಗಡೆಮಾಡಿ ಅವನ ರಾಜ್ಯಕ್ಕೆ ಕಳುಹಿಸಿಕೊಟ್ಟ. ಆದರೆ ಶಿವಮಾರ ರಣಾವಲೋಕ ಸ್ತಂಭನ ಪಕ್ಷಕ್ಕೆ ಸೇರಿಕೊಂಡ. ಗೋವಿಂದ ಸ್ತಂಭನ ದಂಗೆಯನ್ನಡಗಿಸಲು ನಿರತನಾದ. ಸ್ತಂಭನಿಗೆ ಮಿತ್ರರಾಜರಿಂದ ಸಹಾಯ ಬರುವುದಕ್ಕೆ ಮೊದಲೇ ಅವನನ್ನು ಸೆರೆಹಿಡಿದ. ಆದರೆ ಅವನ ತಪ್ಪನ್ನು ಕ್ಷಮಿಸಿ ಪುನಃ ಗಂಗವಾಡಿಯ ಮಾಂಡಲಿಕನನ್ನಾಗಿ ನೇಮಿಸಿದ. ಶಿವಮಾರನನ್ನು ಪುನಃ ಕಾರಾಗೃಹಕ್ಕೆ ತಳ್ಳಿದ. ಅನಂತರ ಗೋವಿಂದ ಕಂಚಿಯ ದಂತಿಗನ ಮೇಲೆ ದಂಡೆತ್ತಿಹೋಗಿ ಅವನನ್ನು ಸೋಲಿಸಿದ; ನೊಳಂಬವಾಡಿಯ ಚಾರುಪೊನ್ನೇರ ಶರಣಾಗತನಾದ. 796ರ ಹೊತ್ತಿಗೆ ಗೋವಿಂದ ಇವೆಲ್ಲ ದಿಗ್ವಿಜಯಗಳನ್ನು ನಿರ್ವಹಿಸಿ ದಕ್ಷಿಣಾಪಥದ ಏಕೈಕ ಪ್ರಭುವಾದ.

ಇತ್ತ ತನ್ನ ಅಧಿಕಾರ ನಿರ್ಬಾಧಿತವಾದ ಮೇಲೆ ಗೋವಿಂದ ತನ್ನ ದೃಷ್ಟಿಯನ್ನು ಉತ್ತರ ಭಾರತಕ್ಕೆ ಹರಿಸಿದ (ಸು.798–800). ಗೋವಿಂದನ ತಂದೆ ಧ್ರುವ ಉತ್ತರ ಭಾರತದ ದಂಡಯಾತ್ರೆಯಿಂದ ಹಿಂತಿರುಗಿ ಬಂದಮೇಲೆ ಬಂಗಾಲದ ಧರ್ಮಪಾಲ ಕನೂಜನ್ನು ಗೆದ್ದುಕೊಂಡು ಚಕ್ರಾಯುಧನನ್ನು ಕನೂಜಿನ ರಾಜನನ್ನಾಗಿ ಮಾಡಿ ತಾನು ಉಚ್ಛ್ರಾಯಸ್ಥಿತಿಗೆ ಏರಿದ್ದ. ಆದರೆ ಸ್ವಲ್ಪಕಾಲದಲ್ಲಿಯೇ ಗೂರ್ಜರ ಪ್ರತೀಹಾರ ರಾಜ ಇಮ್ಮಡಿ ನಾಗಭಟ ಪುನಃ ಕನೂಜನ್ನು ಗೆದ್ದುಕೊಂಡು ಚಕ್ರಾಯುಧನನ್ನು ಓಡಿಸಿದನಲ್ಲದೆ, ಆತನ ಸಹಾಯಕ್ಕೆ ಬಂದ ಧರ್ಮಪಾಲನನ್ನೂ ಹಿಮ್ಮೆಟ್ಟಿಸಿದ್ದ. ಈ ಸಮಯದಲ್ಲಿ ಗೋವಿಂದ ಕನೂಜಿನ ಮೇಲೆ ದಂಡೆತ್ತಿಹೋದ. ನಾಗಭಟನಿಗೂ ಮತ್ತು ಗೋವಿಂದನಿಗೂ ಪ್ರಾಯಶಃ ಝಾನ್ಸಿ, ಗ್ವಾಲಿಯರ್ ಪ್ರಾಂತಗಳ ನಡುವೆ ಯುದ್ಧವಾಯಿತು. ಚಕ್ರಾಯುಧ, ಧರ್ಮಪಾಲ ಇಬ್ಬರೂ ಗೋವಿಂದನಿಗೆ ಶರಣಾದರು. ಅನಂತರ ಗೋವಿಂದನ ಸೈನ್ಯ ಹಿಮಾಲಯದ ತಪ್ಪಲಿನವರೆಗೂ ದಂಡೆತ್ತಿ ಹೋಗಿ ನಾನಾ ರಾಜವಂಶಗಳ ರಾಜರನ್ನು ಸದೆಬಡಿದು, ಕರ್ನಾಟಕದ ಕೀರ್ತಿ ಪ್ರತಾಪಗಳನ್ನು ಹಿಮಾಲಯಪರ್ಯಂತ ಹರಡಿತು. ಗೋವಿಂದ ಕೈಗೊಂಡ ಉತ್ತರ ಭಾರತದ ದಂಡಯಾತ್ರೆ ಕೇವಲ ದಿಗ್ವಿಜಯ ರೂಪವಾಗಿತ್ತು. ಕೀರ್ತಿ ಮತ್ತು ಕೋಶವೃದ್ಧಿಯಾಯಿತೆ ವಿನಾ ರಾಜ್ಯವಿಸ್ತಾರವೇನೂ ಆದಂತೆ ತೋರುವುದಿಲ್ಲ. ಈ ಹಿಂದಿನಿಂದಲೂ ರಾಷ್ಟ್ರಕೂಟಾಧೀನದಲ್ಲಿದ್ದ ಮಾಳವ ಗುಜರಾತ್ ಪ್ರದೇಶಗಳನ್ನು ಭದ್ರಪಡಿಸಿಕೊಳ್ಳಲೋಸುಗ ಸಮರ್ಥ ಯೋಧನಾಗಿದ್ದ ತನ್ನ ತಮ್ಮ ಇಂದ್ರನಿಗೆ ಆ ಪ್ರಾಂತಗಳ ಅಧಿಕಾರವನ್ನು ವಹಿಸಿದ. ಈ ದಂಡಯಾತ್ರೆಯಿಂದ ಹಿಂದಿರುಗುತ್ತಿದ್ದಾಗ ಮಾಳವದೇಶದ ಶ್ರೀಭವನ ಎಂಬಲ್ಲಿ ತಂಗಿದ್ದ. ಆಗ ಮಗ ಅಮೋಘವರ್ಷ (ನೃಪತುಂಗ) ಜನಿಸಿದ.

ಗೋವಿಂದ ದೀರ್ಘಕಾಲ ರಾಜಧಾನಿಯಿಂದ ಹೊರಗೆ ಇದ್ದ ಅವಕಾಶವನ್ನು ಉಪಯೋಗಿಸಿಕೊಂಡು ದಕ್ಷಿಣದ ಪಲ್ಲವ, ಪಾಂಡ್ಯ, ಕೇರಳ, ಗಂಗರಾಜರು ಗೋವಿಂದನ ಪ್ರಭುತ್ವವನ್ನು ಮುರಿಯಲು ಸಿದ್ಧತೆ ಮಾಡತೊಡಗಿ ರಾಷ್ಟ್ರಕೂಟರ ಕೆಲವು ಪ್ರಾಂತಗಳನ್ನು ಆಕ್ರಮಿಸಿದರು. ಈ ವಾರ್ತೆಯನ್ನು ಕೇಳಿದೊಡನೆಯೇ ಈತ ತುಂಗಭದ್ರಾ ತಟಕ್ಕೆ ಧಾವಿಸಿ (ಸು.802) ಅಲ್ಲಿ ಬೀಡುಬಿಟ್ಟಿದ್ದ ದಕ್ಷಿಣ ರಾಜರ ಸೈನ್ಯಗಳನ್ನು ಪರಾಭವಗೊಳಿಸಿದ. ಅನೇಕ ಗಂಗಸೇನಾಧಿಕಾರಿಗಳನ್ನು ಮರುಕ ತೋರಿಸದೆ ಬಲಿ ತೆಗೆದುಕೊಂಡ. ಈ ವಿಜಯದ ಅನಂತರ ಪಲ್ಲವರ ರಾಜಧಾನಿಯಾದ ಕಂಚಿಯನ್ನು ಸೂರೆಮಾಡಿ ಸ್ವಾಧೀನಪಡಿಸಿಕೊಂಡ. ಅನಂತರ ಪಾಂಡ್ಯ, ಕೇರಳ ರಾಜರುಗಳನ್ನು ಸೋಲಿಸಿದ. ಗೋವಿಂದ ಕಂಚಿಯ ರಾಜ್ಯವನ್ನು ಜಯಿಸಿದನೆಂಬ ಸುದ್ದಿಯನ್ನು ಕೇಳಿದೊಡನೆಯೆ ಸಿಂಹಳದ ರಾಜ ತಾನಾಗಿಯೇ ವಿನಮ್ರನಾಗಿ ಬಂದು ಗೋವಿಂದನಿಗೆ ತನ್ನ ಹಾಗೂ ತನ್ನ ಅಮಾತ್ಯನ ಪ್ರತಿಮೆಗಳನ್ನು ಕಪ್ಪವಾಗಿ ಸಲ್ಲಿಸಿದ.

ನಾಲ್ವಡಿ ವಿಷ್ಣುವರ್ಧನ ಜೀವಿಸಿರುವವರೆಗೂ ಪೂರ್ವ ಚಾಳುಕ್ಯ ಮತ್ತು ರಾಷ್ಟ್ರಕೂಟರ ಸಂಬಂಧ ಸ್ನೇಹದಿಂದ ಕೂಡಿತ್ತು. ಅವನ ಅನಂತರ ಪಟ್ಟಕೆ ಬಂದ ಇಮ್ಮಡಿ ವಿಜಯಾದಿತ್ಯ ಸಾಮಂತನಾಗಿರಲು ಒಪ್ಪದೆ ಪ್ರತ್ಯಕ್ಷವಾಗಿ ಗೋವಿಂದನನ್ನು ವಿರೋಧಿಸತೊಡಗಿದ. ಈ ನಡುವೆ ವಿಜಯಾದಿತ್ಯನಿಗೂ ಅವನ ತಮ್ಮ ಭೀಮನಿಗೂ ಪಟ್ಟಕ್ಕಾಗಿ ಹೋರಾಟ ಪ್ರಾರಂಭವಾಯಿತು. ಭೀಮ ಗೋವಿಂದನ ಮೊರೆಹೊಕ್ಕ. ಗೋವಿಂದ ಸೇನಾಸಮೇತನಾಗಿ ವೆಂಗಿಗೆ ನಡೆದು ವಿಜಯಾದಿತ್ಯನನ್ನು ಸೋಲಿಸಿ ವೆಂಗಿ ರಾಜ್ಯವನ್ನು ಗಳಿಸಿಕೊಟ್ಟ.

ಸು.810ರಲ್ಲಿ ಗಂಗರಾಜ್ಯದ ಮಾಂಡಲಿಕನಾಗಿದ್ದ ರಣಾವಲೋಕಸ್ತಂಭ ಸತ್ತ. ಗೋವಿಂದ ತನ್ನ ತಮ್ಮ ಇಂದ್ರನ ಜ್ಯೇಷ್ಠ ಪುತ್ರನಾದ ದಂತಿವರ್ಮನನ್ನು ಗಂಗರಾಜ್ಯದ ಮಾಂಡಲಿಕನಾಗಿ ನೇಮಿಸಿದ. ಆದರೆ ದಂತಿವರ್ಮ ಅಕಾಲ ಮರಣಕ್ಕೆ ತುತ್ತಾದ್ದರಿಂದ ಕೊನೆಗೆ ಗೋವಿಂದ ಅದುವರೆಗೆ ಸೆರೆಯಲ್ಲಿದ್ದ ಶಿವಮಾರನನ್ನು ಬಿಡುಗಡೆಮಾಡಿ ಗಂಗರಾಜ್ಯವನ್ನು ಅವನಿಗೇ ಮರಳಿ ನೀಡಿದ.

ಭಾರತದ ಇತಿಹಾಸದ ಪುಟಗಳಲ್ಲಿ ಗಣ್ಯಸ್ಥಾನ ಪಡೆದಿರುವ ರಾಜರುಗಳಲ್ಲಿ ಗೋವಿಂದನೂ ಒಬ್ಬ. ಇವನ ರಾಜಕೀಯ ಪ್ರಭಾವ ಕನೂಜಿನಿಂದ ಕನ್ಯಾಕುಮಾರಿಯ ವರೆಗೂ ವ್ಯಾಪಿಸಿದ್ದಿತು. ಇವನ ಕೊನೆಗಾಲ ಶಾಂತಿ, ಸಮೃದ್ಧಿಯ ಕಾಲ. ಆ ದಿನಗಳಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯ ಪ್ರಾಬಲ್ಯ, ಘನತೆ, ಗೌರವಗಳ ಉತ್ತುಂಗ ಶಿಖರವನ್ನು ಮುಟ್ಟಿತ್ತು.

ಸು.814ರಲ್ಲಿ ಇವನ ಅವಸಾನವಾಯಿತು. ಗಾಮುಂಡಬ್ಬೆ ಈತನ ಪತ್ನಿ. ಅಮೋಘವರ್ಷ ನೃಪತುಂಗ ಈತನ ಮಗ. (ಎಸ್.)

**ಗೋವಿಂದ IV:** ರಾಷ್ಟ್ರಕೂಟ ದೊರೆ (930–35). 3ನೆಯ ಇಂದ್ರನ ಕಿರಿಯ ಮಗ. ಪ್ರಭೂತವರ್ಷ, ಸುವರ್ಣವರ್ಷ, ನೃಪತುಂಗ, ನೃಪತಿತ್ರಿಣೇತ್ರ, ಸಾಹಸಾಂಕ, ರಟ್ಟಕಂದರ್ಪ ಎಂಬುವು ಇವನ ಬಿರುದುಗಳು. ನಾಲ್ವಡಿ ಗೋವಿಂದ ಅಣ್ಣನಾದ ಇಮ್ಮಡಿ ಅಮೋಘವರ್ಷನನ್ನು ಪ್ರಾಯಶಃ ಕೊಲ್ಲಿಸಿ ಪಟ್ಟಕ್ಕೆ ಬಂದ. ಚಿಕ್ಕ ವಯಸ್ಸಿನಲ್ಲಿಯೇ ದೊಡ್ಡ ಸಾಮ್ರಾಜ್ಯದ ಚಕ್ರವರ್ತಿಯಾದ. ಆದರೂ ಯೌವನಮದ ಮತ್ತು ರಾಜ್ಯಮದದಿಂದ ಜನಾನುರಾಗಿಯಾಗದೆ ತನ್ನನ್ನು ತಾನೇ ನಾಶಪಡಿಸಿಕೊಂಡ.

ರಾಷ್ಟ್ರಕೂಟರ ಬೆಂಬಲದಿಂದ ವೆಂಗಿ ಸಿಂಹಾಸನಾಧಿಕಾರಿಯಾಗಿದ್ದ ಇಮ್ಮಡಿ ಯುದ್ಧಮಲ್ಲನನ್ನು 934ರಲ್ಲಿ ಇಮ್ಮಡಿ ಭೀಮ ಓಡಿಸಿ ತಾನೇ ರಾಜನಾದ. ಆದರೂ ಈ ಸಮಯದಲ್ಲಿ ನಾಲ್ಕನೆಯ ಗೋವಿಂದ ವೆಂಗಿಯ ಮೇಲೆ ರಾಷ್ಟ್ರಕೂಟರ ಪ್ರಭಾವವನ್ನು ಉಳಿಸಿಕೊಳ್ಳುವ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ. ರಾಜ್ಯದ ಹೊರಗೆ ತನ್ನ ಪರಾಕ್ರಮವನ್ನು ತೋರಿಸಲು ಅಸಮರ್ಥನಾದ ಗೋವಿಂದ ವೆಂಗಿಯ ಸಿಂಹಾಸನದ ಹಕ್ಕುದಾರರಲ್ಲೊಬ್ಬ ನಾಗಿದ್ದ ಐದನೆಯ ವಿಜಯಾದಿತ್ಯನಿಗೆ ತನ್ನ ಚಾಳುಕ್ಯ ಸಾಮಂತ ಇಮ್ಮಡಿ ಅರಿಕೇಸರಿ ಆಶ್ರಯವನ್ನಿತ್ತನೆಂಬ ನೆಪದಲ್ಲಿ ಅರಿಕೇಸರಿಯನ್ನು ಕೆಣಕಿದ. ಅವನು ವಿಜಯಾದಿತ್ಯನನ್ನು ಒಪ್ಪಿಸಲು ನಿರಾಕರಿಸಿದ. ಇಮ್ಮಡಿ ಅರಿಕೇಸರಿ ಸಮರ್ಥ ವೀರನಾಗಿದ್ದುದೇನೋ ನಿಜ. ಆದರೆ ದೊಡ್ಡ ಸೈನ್ಯದಿಂದ ಕೂಡಿದ್ದ ಚಕ್ರವರ್ತಿಯನ್ನು ಒಬ್ಬ ಸಾಮಂತ ಎದುರಿಸುವುದು ಅಸಾಮಾನ್ಯ ಕೆಲಸವೆಂದು ಅವನು ತಿಳಿದಿದ್ದ. ಇದೇ ಸಮಯಕ್ಕೆ ಸರಿಯಾಗಿ ಗೋವಿಂದನ ಉಚ್ಚಾಟನೆಗೆ ಗೋವಿಂದನ ಅತ್ಯಾಚಾರ ಮತ್ತು ದುರಾಚಾರಗಳಿಂದ ಕೋಪಗೊಂಡಿದ್ದ ಸಾಮಂತರು ಒಟ್ಟಾಗಿ ಸೇರಿ ಮೂರನೆಯ ಅಮೋಘವರ್ಷನ ಬಳಿಗೆ ಓಡಿ ಗೋವಿಂದನ ದುರಾಡಳಿತದಿಂದ ವಿಮುಕ್ತಗೊಳಿಸುವಂತೆ ಬೇಡಿಕೊಂಡರು. ಒಳ್ಳೆಯ ನಡೆನುಡಿಗಳಿಗೂ ಸಂಸ್ಕೃತಿಗೂ ಮತ್ತು ಪ್ರಜಾವಾತ್ಸಲ್ಯಕ್ಕೂ ಹೆಸರಾಗಿದ್ದ ಅಮೋಘವರ್ಷ ಈ ಸಮಯದಲ್ಲಿ ತ್ರಿಪುರಿಯಲ್ಲಿದ್ದ. ಇಮ್ಮಡಿ ಅರಿಕೇಸರಿ ಗೋವಿಂದನ ಮೇಲೆ ಯುದ್ಧಕ್ಕೆ ಸಿದ್ಧನಾದಾಗ, ಅಮೋಘವರ್ಷನ ಪರವಾಗಿದ್ದ ಅವನ ಅಳಿಯ ಗಂಗ 2ನೆಯ ಬೂತುಗ ಮುಂತಾದ ಉಳಿದ ಸಾಮಂತರಾಜರು ಅರಿಕೇಸರಿಗೆ ತಮ್ಮ ಬೆಂಬಲವನ್ನು ನೀಡಿದರು. ಗೋವಿಂದ ಚೋಳ 1ನೆಯ ಪರಾಂತಕನಿಂದ ನೆರವನ್ನು ಬಯಸಿದರೂ ಸಕಾಲಕ್ಕೆ ಸಿಗಲಿಲ್ಲ. 935ರಲ್ಲಿ ಸಂಭವಿಸಿದ ಯುದ್ಧದಲ್ಲಿ ಅರಿಕೇಸರಿ ಗೋವಿಂದನನ್ನು ಸೋಲಿಸಿದ. ಗೋವಿಂದ ರಣರಂಗದಲ್ಲೇ ಪ್ರಾಣ ಕಳೆದುಕೊಂಡ. ಅನಂತರ ಮೂರನೆಯ ಅಮೋಘವರ್ಷ ಪಟ್ಟಕ್ಕೆ ಬಂದ. ಈ ವಿಚಾರ ಪಂಪನ ವಿಕ್ರಮಾರ್ಜುನವಿಜಯದಲ್ಲಿ ಸ್ಪಷ್ಟವಾಗಿ ವರ್ಣಿತವಾಗಿದೆ. (ಎಸ್.)

**ಗೋವಿಂದ ಕವಿ :** 16ನೆಯ ಶತಮಾನದ ಉತ್ತರಾರ್ಧದಲ್ಲಿ ಜೀವಿಸಿದ್ದ ಭಾಗವತ ಸಂಪ್ರದಾಯದ ಒಬ್ಬ ಕನ್ನಡ ಕವಿ. ಈತನನ್ನು ಗೋಪ ಕವಿ ಎಂದೂ ಕರೆಯುವುದಿದೆ. ತಾನು ಭೀಮರಥೀ ತೀರದ ಬುಯ್ಯರ ಗ್ರಾಮದ ಜ್ಯೋತಿ ಎಂಬ ಕರಣಿಕನ ಮಗನೆಂದೂ ಶ್ರೀಕೃಷ್ಣ ಮದನಗೋಪಾಲ ತನ್ನ ಆರಾಧ್ಯ ದೈವವೆಂದೂ ಹೇಳಿಕೊಂಡಿದ್ದಾನೆ. ಈತ ರಚಿಸಿದ ಕಾವ್ಯಗಳು ಚಿತ್ರಭಾರತ ಮತ್ತು ನಂದಿಮಹಾತ್ಮೆ. ಕಾವ್ಯಾರಂಭದಲ್ಲಿ ಕುಮಾರವ್ಯಾಸ, ಲಕ್ಷ್ಮೀಶರನ್ನು ಸ್ತುತಿಸಿದ್ದಾನೆ.

ಚಿತ್ರಭಾರತದ ಕಾವ್ಯವಸ್ತು ಮಹಾಭಾರತದ್ದೇ ಆಗಿದೆ. ಮೂವತ್ತು ಸಂಧಿಗಳಿಂದ ಕೂಡಿದ ಈ ಕೃತಿ ಭಕ್ತಿಪ್ರಧಾನವಾದುದು. ಕಾವ್ಯದ ಮೊದಲರ್ಧದಲ್ಲಿ ರಾಜಸೂಯಯಾಗ, ದ್ಯೂತಪ್ರಸಂಗ, ವನವಾಸಗಳ ಕಥಾನಿರೂಪಣೆಯಿದೆ. ಉಳಿದರ್ಧ ವತ್ಸಲಾಹರಣಕ್ಕೆ ಮೀಸಲಾಗಿದೆ. ಮರಾಠಿಭಾಷೆಯಲ್ಲಿ ಈ ಕಥೆ ಜನಪ್ರಿಯವಾಗಿರುವುದನ್ನು ಗಮನಿಸಿ ಕನ್ನಡದಲ್ಲಿ ತಾನು ರಚಿಸಿರುವುದಾಗಿ ಕವಿ ಹೇಳುತ್ತಾನೆ. ಸಾರಮಿದು ಹರಿಕಥಾಮೃತಂ ಎಂಬ ಮಾತು ಈತನ ಕುಮಾರವ್ಯಾಸ ಪರಂಪರೆಯನ್ನು ಎತ್ತಿ ತೋರಿಸುತ್ತದೆ. ಚಿತ್ರಕವಿತ್ವದ ಚಮತ್ಕಾರ ಇದರಲ್ಲಿ ವಿಶೇಷವಾಗಿ ಕಂಡುಬರುವುದರಿಂದ ಈ ಕೃತಿಗೆ ಚಿತ್ರಭಾರತವೆಂಬ ಹೆಸರು ಸೂಕ್ತವಾಗಿದೆ.

ನಂದಿಮಹಾತ್ಮೆ ಈತನ ಪರಿಪಕ್ವ ಕೃತಿ. ವಾರ್ಧಕ ಷಟ್ಪದಿಯಲ್ಲಿ ರಚಿತವಾಗಿರುವ ಈ ಕೃತಿ 50 ಸಂಧಿಗಳಷ್ಟು ದೀರ್ಘವಾಗಿದೆ. ಇದರ ಕಥಾವಸ್ತುವನ್ನು ಸೂತಪುರಾಣದಿಂದ ಆಯ್ದುಕೊಳ್ಳಲಾಗಿದೆ. ಪಾರ್ವತಿಯನ್ನು ಒಡ್ಡೋಲಗಕ್ಕೆ ಕರೆತರುವಂತೆ ಶಿವನಿಂದ ನಂದಿಗೆ ಅಪ್ಪಣೆಯಾಗುತ್ತದೆ. ನಂದಿ ಇಂದುಧರನ ರೂಪದಿಂದ ಪಾರ್ವತಿಯನ್ನು ಕರೆತರಲು ಹೋಗುತ್ತಾನೆ. ನಂದಿಯನ್ನು ಪಾರ್ವತಿ ಪರಶಿವನೆಂದೇ ಬಗೆದು ಸನ್ಮಾನಿಸುತ್ತಾಳೆ. ಈ ಅಚಾತುರ್ಯಕ್ಕಾಗಿ ಪಶ್ಚಾತ್ತಾಪಗೊಂಡ ನಂದಿ ಪ್ರಾಯಶ್ಚಿತ್ತಕ್ಕಾಗಿ ತಪಸ್ಸು ಮಾಡಲು ತೀರ್ಮಾನಿಸುತ್ತಾನೆ. ತನ್ನ ತಪಸ್ಸಿಗೆ ತಕ್ಕ ಸ್ಥಳವಾವುದೆಂದು ಗಣನಾಥ ಕೂಷ್ಮಾಂಡನನ್ನು ಕೇಳಲು ಆತ ಶ್ರೀಶೈಲ, ಕೇದಾರ, ವಾರಾಣಸಿ, ಕಂಚಿ ಮೊದಲಾದ ಶೈವಕ್ಷೇತ್ರಗಳ ಮಹಿಮೆಯನ್ನು ನಿರೂಪಿಸುತ್ತಾನೆ.

ಈ ಕವಿ ತನ್ನ ಕಾವ್ಯದ ಬಗ್ಗೆ 'ಎಳೆ ನೀರೊಳೆಯ್ದೆ ತವರಾಜ ಬೆರೆದಂದದಿಂ', 'ಸುಳಿದ ರಸಗಂಧಿವಾಳೆಯೊಳು ಜೇನ್ದಳೆದಂತೆ', 'ಆನೆ ಹೋದುದೇ ಬೀದಿಯಲ್ಲವೆ ಜಗದೊಳು'– ಎಂದು ಹೇಳಿಕೊಂಡಿದ್ದರೂ ಆ ಮಾತುಗಳು ಕೇವಲ ಆತ್ಮಪ್ರಶಂಸೆಯಾಗಿ ಮಾತ್ರ ಉಳಿಯುತ್ತವೆ. ಕುಮಾರವ್ಯಾಸ ಲಕ್ಷ್ಮೀಶರ ಆದರ್ಶ ಈತನ ಕಾವ್ಯದಲ್ಲಿ ಕಂಡುಬಂದರೂ ಅವರ ಪ್ರತಿಭೆಯ ವೈಶಾಲ್ಯವಾಗಲೀ ಔನ್ನತ್ಯವಾಗಲೀ ಇಲ್ಲಿಲ್ಲ. (ಬಿ.ವಿ.ವಿ.ಬಿ.)

**ಗೋವಿಂದಚಂದ್ರ :** ಗಾಹದ್ವಾಲ ಮನೆತನದ ಒಬ್ಬ ಪ್ರಮುಖ ದೊರೆ. ಈತ 1114–54 ರವರೆಗೆ ಆಳಿದನೆಂದು ಹೇಳಬಹುದಾಗಿದೆ. ತನ್ನ ತಂದೆಯ ಕಾಲದಲ್ಲೇ ವಾರಾಣಸಿಯಲ್ಲಿ ಈತ ಯುವರಾಜನಾಗಿ ಆಳುತ್ತಿದ್ದ. ಮುಮ್ಮಡಿ ಅಲಾ–ಉದ್–ದೌಲ ಮಸೂದ್ ಹಿಂದುಸ್ಥಾನದ ಮೇಲೆ ದಂಡೆತ್ತಿ ಬಂದಾಗ ಕನೌಜಿನಲ್ಲಿ ಆಳುತ್ತಿದ್ದ ಗಾಹದ್ವಾಲ ರಾಜನಾದ ಮದನಚಂದ್ರನನ್ನು ಸೆರೆಹಿಡಿದನೆಂದು ಮಹಮ್ಮದೀಯರ ಗ್ರಂಥಗಳು ವರ್ಣಿಸುತ್ತವೆ. ಅನಂತರ ಆ ಸೈನ್ಯ ವಾರಾಣಸಿಯ ಕಡೆಗೆ ಹೊರಟಿತು. ಅಲ್ಲಿ ಆಳುತ್ತಿದ್ದ ಗಾಹದ್ವಾಲ ಯುವರಾಜ ಗೋವಿಂದಚಂದ್ರ ಮುಸ್ಲಿಂ ಸೈನ್ಯದ ವಿರುದ್ಧ ಹೋರಾಡಿ, ತನ್ನ ತಂದೆಯನ್ನು ಸೆರೆಯಿಂದ ಬಿಡಿಸಿ, ಮಹಮ್ಮದೀಯರ ಸೈನ್ಯವನ್ನು ಹೊಡೆದೋಡಿಸಿದ. ಗೋವಿಂದಚಂದ್ರ ಹರಿಯ ಅವತಾರವೆಂದೂ ವಾರಾಣಸಿಯನ್ನು ಮಹಮ್ಮದೀಯರ ದಾಳಿಯಿಂದ ರಕ್ಷಿಸಲು ಅವನು ಬಂದನೆಂದೂ ಗೋವಿಂದಚಂದ್ರನ ರಾಣಿ ಕುಮಾರದೇವಿಯ ಸಾರನಾಥ ಶಾಸನದಿಂದ ತಿಳಿದುಬರುತ್ತದೆ.

ಗೋವಿಂದಚಂದ್ರ ತ್ರಿಪುರಿಯ ಕಳಚುರಿಗಳನ್ನು ಸೋಲಿಸಿ ಅವರ ಅಧೀನದಲ್ಲಿದ್ದ ರಾಜ್ಯವನ್ನೆಲ್ಲ ತನ್ನ ವಶಪಡಿಸಿಕೊಂಡ. ಕಳಚುರಿ ರಾಜ ಯಶಃಕರ್ಣ ಶೈವಗುರುವಾದ ರುದ್ರಶಿವನಿಗೆ ನೀಡಿದ್ದ ದತ್ತಿಯನ್ನು ಗೋವಿಂದಚಂದ್ರ ಪುನಃ ಖಾಯಂಗೊಳಿಸಿದ. ಅಲ್ಲಿಯವರೆಗೆ ಕಳಚುರಿ ರಾಜಮನೆತನ ಉತ್ತರ ಭಾರತದ ಸಾರ್ವಭೌಮತ್ವವನ್ನು ಪಡೆದಿತ್ತು. ಆಗ ಈ ಅಧಿಕಾರ ಗೋವಿಂದಚಂದ್ರನಿಗೆ ವರ್ಗವಾಯಿತು. ಗೋವಿಂದಚಂದ್ರ ಅಶ್ವಪತಿ– ಗಜಪತಿ– ನರಪತಿ– ರಾಜತ್ರಯಾಧಿಪತಿ ಎಂಬ ಬಿರುದು ಧರಿಸಿದ. ಇದನ್ನು ಮೊತ್ತಮೊದಲಿಗೆ ಕಳಚುರಿ ರಾಜ ಲಕ್ಷ್ಮೀಕರ್ಣ ಹೊಂದಿದ್ದ. ವಿ. ವಿ. ಮಿರಾಶಿಯವರ ಪ್ರಕಾರ ಈ ಬಿರುದು ಗೂರ್ಜರ ಪ್ರತೀಹಾರ ಕಳಿಂಗ ಗಂಗ ಮತ್ತು ಬಂಗಾಲದ ಮೇಲೆ ಗೋವಿಂದಚಂದ್ರನ ಪರಮಾಧಿಕಾರವನ್ನು ಸಾರುತ್ತದೆ.

ಕಳಚುರಿಗಳೇ ಅಲ್ಲದೆ ಗೋವಿಂದಚಂದ್ರ ಇತರ ರಾಜ್ಯಗಳ ವಿರುದ್ಧವಾಗಿಯೂ ಅನೇಕ ಯುದ್ಧಗಳನ್ನು ಮಾಡಿದ. 1143 ರಲ್ಲಿ ಬಂಗಾಲದ ರಾಜನಾದ ಮದನಪಾಲನಿಂದ ಬಿಹಾರದ ಮಾಂಘೀರ್ ವರೆಗೆ ಎಲ್ಲ ಪ್ರಾಂತಗಳನ್ನೂ ಗೆದ್ದುಕೊಂಡ. ಆದರೆ ತನ್ನ ಕೊನೆಯ ದಿನಗಳಲ್ಲಿ ಮಾಂಘೀರನ್ನು ಪಾಲರಾಜನಿಗೆ ಬಿಟ್ಟುಕೊಡಬೇಕಾಯಿತು. ಗೋವಿಂದಚಂದ್ರ ಪೂರ್ವಮಾಳವವನ್ನೂ ಗೆದ್ದುಕೊಂಡನೆಂದು ತಿಳಿದುಬರುತ್ತದೆ. ಪ್ರಾಕೃತ – ಪೈಂಗಾಲಮ್ ಗ್ರಂಥ ಗೋವಿಂದಚಂದ್ರನ ಅನೇಕ ಯುದ್ಧಗಳನ್ನು ವಿವರಿಸುತ್ತದೆ. ಈತ ಕಳಿಂಗದ ರಾಜನಾದ ಅನಂತವರ್ಮನ ಮೇಲೂ ಮಿಥಿಲೆಯ ನಾನ್ಯದೇವನ ಮೇಲೂ ಯುದ್ಧ ಮಾಡಿದನೆಂದು ಈ ಗ್ರಂಥ ವಿವರಿಸುತ್ತದೆ. ಅಲ್ಲದೆ ಕಾಕತೀಯ, ಚಾಳುಕ್ಯ ಮತ್ತು ಚೌಳುಕ್ಯರ ಮೇಲೂ ಯುದ್ಧ ಮಾಡಿದನೆಂದು ತಿಳಿದುಬರುತ್ತದೆ.

ಗೋವಿಂದಚಂದ್ರ ಕಾಶ್ಮೀರದ ರಾಜನಾದ ಜಯಸಿಂಹನ ಆಸ್ಥಾನಕ್ಕೆ ರಾಯಭಾರಿಯನ್ನಾಗಿ ಸುಹಲನನ್ನು ಕಳುಹಿಸಿಕೊಟ್ಟ. ಚೋಳರ ರಾಜಧಾನಿಯಾಗಿದ್ದ ಗಂಗೈಕೊಂಡ ಚೋಳಪುರದಲ್ಲಿ ಸಿಕ್ಕಿರುವ ಒಂದು ಅಪೂರ್ಣ ಮತ್ತು ಅಪೂರ್ವ ಶಾಸನ ಚೋಳರಿಗೂ ಗಾಹದ್ವಾಲರಿಗೂ ಇದ್ದ ಸಂಬಂಧವನ್ನು ವಿವರಿಸುತ್ತದೆ. ಇದು ಸು. 1111ರ ಶಾಸನ. ಇದರಲ್ಲಿ ಗಾಹದ್ವಾಲ ವಂಶಾವಳಿ ಯಶೋವಿಗ್ರಹನಿಂದ ಹಿಡಿದು ಗೋವಿಂದಚಂದ್ರನವರೆಗೆ ತಿಳಿದುಬರುತ್ತದೆ. ಈ ಶಾಸನವನ್ನು ಚೋಳ ರಾಜನನ್ನು ವಿವಾಹವಾಗಿದ್ದ ಗಾಹದ್ವಾಲ ರಾಜಕುಮಾರಿ ಹೊರಡಿಸಿರಬಹುದೆಂದೂ ಯಾವುದೋ ಒಂದು ದತ್ತಿಯನ್ನು ಕೊಡುವ ಸಮಯದಲ್ಲಿ ತನ್ನ ಮನೆತನದ ವಂಶಾವಳಿಯನ್ನು ಕೆತ್ತಿಸಿರಬಹುದೆಂದೂ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ಗೋವಿಂದಚಂದ್ರ ಕಳಚುರಿ ನಾಣ್ಯಗಳ ಮಾದರಿಯ ಹೊಸ ಚಿನ್ನ, ಬೆಳ್ಳಿ ಮತ್ತು ತಾಮ್ರ ನಾಣ್ಯಗಳನ್ನು ಅಚ್ಚು ಹಾಕಿಸಿದ. ಈತ ಯುದ್ಧಕುಶಲಿ ಮತ್ತು ರಾಜ ತಂತ್ರನಿಪುಣ ಮಾತ್ರವೇ ಅಲ್ಲ ; ಸಾಹಿತ್ಯದಲ್ಲೂ ಅಭಿರುಚಿ ಹೊಂದಿದ್ದ. ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿದ ಗೋವಿಂದಚಂದ್ರನನ್ನು ವಿವಿಧ ವಿದ್ಯಾವಿಚಾರವಾಚಸ್ಪತಿ ಎಂದು ಶಾಸನಗಳಲ್ಲಿ ವರ್ಣಿಸಲಾಗಿದೆ. ಈತನ ಮಂತ್ರಿಯಾಗಿದ್ದ ಲಕ್ಷ್ಮೀಧರ, ಕೃತ್ಯಕಲ್ಪತರು ಎಂಬ ಗ್ರಂಥವನ್ನು ಗೋವಿಂದಚಂದ್ರನ ಆಜ್ಞೆಯ ಮೇರೆಗೆ ರಚಿಸಿದ. (ಎಸ್‌ಎಚ್‌ಐ.)

**ಗೋವಿಂದ ದೀಕ್ಷಿತ :** 1554–1626. ಪ್ರಸಿದ್ಧ ಸಂಗೀತಗಾರ ಮತ್ತು ಕವಿ. ಅಯ್ಯನ ಎಂಬ ಇನ್ನೊಂದು ಹೆಸರೂ ಉಂಟು. ತಂಜಾವೂರಿನ ಅಚ್ಯುತಯ್ಯ ಮತ್ತು ರಘುನಾಥನಾಯಕ ಅರಸರ ಕಾಲದಲ್ಲಿ ಪ್ರಧಾನಿಯಾಗಿದ್ದ. ಕಾವೇರೀ ತೀರದ ಪಟ್ಟೀಶ್ವರಮ್ ಈತನ ಮೂಲಸ್ಥಾನ. ಜಾತಿಯಿಂದ ಈತ ಕರ್ನಾಟಕ ಬ್ರಾಹ್ಮಣ. ಹೆಂಡತಿ ನಾಗಂಬಾ. ಈ ದಂಪತಿಗಳ ಶಿಲಾಪ್ರತಿಮೆಯನ್ನು ಪಟ್ಟೀಶ್ವರಮ್ ದೇವಸ್ಥಾನದಲ್ಲಿ ಈಗಲೂ ಕಾಣಬಹುದು.

ಗೋವಿಂದ ದೀಕ್ಷಿತನ ಹರಿವಂಶಸಾರಚರಿತ್ರಮ್ ಎಂಬ ಸಂಸ್ಕೃತ ಕೃತಿ ಮೂರು ಸಂಪುಟಗಳಲ್ಲಿದೆ. ಈತನ ಸನ್ಮಿತ್ರ ಅಪ್ಪಯ್ಯದೀಕ್ಷಿತ ಈ ಗ್ರಂಥಕ್ಕೆ ಟೀಕೆ ಬರೆದಿದ್ದಾನೆ. ಸಂಗೀತಸುಧಾನಿಧಿ ಈತನ ಪದ್ಯಗಳ ಸಂಕಲನ. ಇದಲ್ಲದೆ ಈತ ವೇದಾಂತ, ಧರ್ಮ, ಶಿಲ್ಪ, ಸಂಗೀತಶಾಸ್ತ್ರಗಳನ್ನು ಕುರಿತು ಅನೇಕ ಗ್ರಂಥಗಳನ್ನು ಬರೆದಿದ್ದಾನೆ.

ಇಪ್ಪತ್ತು ನಾಲ್ಕು ಪಟ್ಟಿಗಳುಳ್ಳ ಸುಪ್ರಸಿದ್ಧ ತಂಜಾವೂರು ವೀಣೆಯನ್ನು ತಯಾರಿಸಿದವನೀತ. ಚೂಡಾಮಣಿ ಈತನಿಗೆ ಅದ್ವೈತ ವಿದ್ಯೆ ನೀಡಿದ ಗುರು. ಧಾರ್ಮಿಕ ಮನೋಧರ್ಮದ ಪರೋಪಕಾರಿ ಬ್ರಾಹ್ಮಣನಾದ್ದರಿಂದ ಈತ ಅನೇಕ ಯಜ್ಞ ಮಾಡಿದನಲ್ಲದೆ ವಿಪುಲವಾಗಿ ದಾನಧರ್ಮ ಮಾಡಿದ. ಕೆರೆಕಟ್ಟೆ ಕಟ್ಟಿಸಿದ, ತಿರುವಾಯೂರಿನಲ್ಲಿ ಸಂಸ್ಕೃತ ವಿದ್ಯಾಲಯ ತೆರೆದ, ಕುಂಭಕೋಣದ ಮಹಾಮಖಂ ಕೆರೆ ದಂಡೆಯ ಸುತ್ತ ಹದಿನಾರು ಲಿಂಗಗಳನ್ನು ಸ್ಥಾಪಿಸಿದ. ಈತ ಕಟ್ಟಿಸಿದ ತಂಜಾವೂರಿನ ಏಕಾದಶೀ ಅಗ್ರಹಾರ ಈಗಲೂ ಪ್ರಸಿದ್ಧವಾಗಿದೆ. *

**ಗೋವಿಂದನಹಳ್ಳಿ :** ಕರ್ನಾಟಕ ರಾಜ್ಯದ ಮಂಡ್ಯ ಜಿಲ್ಲೆಯಲ್ಲಿರುವ ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ, ಕಿಕ್ಕೇರಿಯ ಈಶಾನ್ಯಕ್ಕೆ, ಅದರಿಂದ 6.5 ಕಿಮೀ ದೂರದಲ್ಲಿರುವ ಒಂದು ಹಳ್ಳಿ. ಇಲ್ಲಿರುವ ಹೊಯ್ಸಳ ಶೈಲಿಯ ಪಂಚಲಿಂಗ ದೇವಾಲಯದಿಂದಾಗಿ ಇದು ಪ್ರಸಿದ್ಧವಾಗಿದೆ. 42 ಮೀ ಉದ್ದ, 13.5 ಮೀ ಅಗಲ ಇರುವ ದೇವಾಲಯವಿದು. ಪೂರ್ವ ದಿಕ್ಕಿನಲ್ಲಿರುವ ಮುಖಮಂಟಪ ಮತ್ತು ನಂದಿಮಂಟಪವನ್ನೂ ಸೇರಿಸಿಕೊಂಡರೆ ಇದರ



ಪಂಚಲಿಂಗೇಶ್ವರ ದೇವಾಲಯ, ಗೋವಿಂದನಹಳ್ಳಿ

ಅಗಲ 19 ಮೀ. ಪೂರ್ವದಿಕ್ಕಿಗೆ ಮುಖ ಮಾಡಿರುವ ಈ ದೇವಾಲಯದಲ್ಲಿ ಕಲ್ಲಿನ ಗೋಪುರಗಳಿರುವ ಐದು ಒಳಗೋಡೆಗಳು ಸಾಲಾಗಿವೆ. ಪೂರ್ವದಲ್ಲಿ ದ್ವಾರಪಾಲಕರಿಂದ ಕೂಡಿದ ಎರಡು ದ್ವಾರಗಳುಂಟು. ಇವು ದಕ್ಷಿಣದ ಕಡೆಯಿಂದ 2 ಮತ್ತು 3ನೆಯ ಒಳ ಗುಡಿಗಳ ಎದುರಿಗೆ ಇವೆ. ಇವುಗಳ ಮುಂದೆ ಚಾವಣಿಯಿಂದ ಕೂಡಿದ ಮುಖಮಂಟಪವೂ

ಇದಕ್ಕೆ ಸೇರಿದಂತೆ ನಂದಿಮಂಟಪವೂ ಇವೆ. ಈ ಮಂಟಪಗಳಿಗೆ ಉತ್ತರದಲ್ಲೂ ದಕ್ಷಿಣದಲ್ಲೂ ದ್ವಾರಗಳುಂಟು. ಪ್ರತಿಯೊಂದು ಗುಡಿಗೂ ಸುಕನಾಸಿ ಮತ್ತು ಗರ್ಭಗೃಹ ಇವೆ. ಸುಕನಾಸಿಯ ಬಾಗಿಲುಗಳ ಕೆತ್ತನೆ ಬಹು ಸುಂದರವಾಗಿದೆ. ಬಾಗಿಲುವಾಡದ ಮೇಲೆ ಉಮಾಮಹೇಶ್ವರನ ಚಿತ್ರ ಕೆತ್ತಲಾಗಿದೆ. 36 ಮೀ ಉದ್ದ, 6 ಮೀ ಅಗಲ ಇರುವ, 18 ಅಂಕಣಗಳ, 17 ಕಂಬಗಳ, ಮೂರು ಸಾಲುಗಳಿಂದ ಕೂಡಿದ ಆಯಕಾರದ ವಿಶಾಲ ಅಂಗಳವೊಂದಿದೆ. ಇದರ ಮಧ್ಯೆ ಹೆಚ್ಚಿನ ಕಂಬವೊಂದಿದೆ. ಮುಂದೆ ಚಾಚಿರುವ ತೊಲೆಯೊಂದಕ್ಕೆ ಆಸರೆಯಾಗಿ ಇದನ್ನು ನಿಲ್ಲಿಸಲಾಗಿದೆ. ಈ ಅಂಗಳದ ಪೂರ್ವದ ಗೋಡೆ ಮತ್ತು ಅದಕ್ಕಂಟಿದಂತಿರುವ ಗೋಡೆಗಳಲ್ಲಿ ಹೊರಾಂಗಣದ ವರೆಗೆ ರಂಧ್ರಗಳನ್ನು ಕೊರೆಯಲಾಗಿದೆ.

ಒಳಗಿನ ಚಿಕ್ಕ ಗುಡಿಗಳ ಎರಡೂ ಪಕ್ಕಗಳಲ್ಲಿಯೂ ಸುಂದರವಾಗಿ ಕೆತ್ತಲಾಗಿರುವ ಗೂಡುಗಳಿದ್ದು ಒಂದರಲ್ಲಿ ಗಣಪತಿಯ ವಿಗ್ರಹವನ್ನೂ ಮತ್ತೊಂದರಲ್ಲಿ ಮಹಿಷಾಸುರಮರ್ದಿನಿಯ ವಿಗ್ರಹವನ್ನೂ ಇಡಲಾಗಿದೆ. ದಕ್ಷಿಣದ ಕಡೆಯಿಂದ ಐದನೆಯ ಗುಡಿಯ ಗೋಡೆಯ ಮೇಲಿನ ಗೂಡೊಂದರಲ್ಲಿದ್ದ ವಿಗ್ರಹ ಬದಲಾಗಿರುವುದಾಗಿ ತಿಳಿದುಬರುತ್ತದೆ. ಈಗ ಅದರ ಜಾಗದಲ್ಲಿ ಕುಳಿತ ಭಂಗಿಯ ಸರಸ್ವತಿಯ ವಿಗ್ರಹವನ್ನಿಡಲಾಗಿದೆ. ಅಲ್ಲಿದ್ದ ಮಹಿಷಾಸುರಮರ್ದಿನಿಯ ವಿಗ್ರಹವನ್ನು ಬೇರೆ ಕಡೆಗೆ ಸಾಗಿಸಲಾಗಿದೆಯೆಂದು ತಿಳಿದುಬರುತ್ತದೆ. ಇವಲ್ಲದೆ ಸುಬ್ರಹ್ಮಣ್ಯ, ಭೈರವ ಮುಂತಾದ ವಿಗ್ರಹಗಳು ಇಲ್ಲಿಯ ಗೂಡುಗಳಲ್ಲಿವೆ. ದಕ್ಷಿಣದ ಗೋಡೆಗೆ ಅಂಟಿದಂತಿರುವ ಒಂದು ಗೂಡಿನಲ್ಲಿ ವೀರಭದ್ರ ಮತ್ತು ಸಪ್ತಮಾತೃಕಾ ವಿಗ್ರಹಗಳಿವೆ. ಗುಡಿಗಳ ಮಧ್ಯದಲ್ಲಿ ಸರಸ್ವತಿ ಮತ್ತು ಸಪ್ತಮಾತೃಕೆಯರ ಎರಡು ಸುಂದರವಾದ ವಿಗ್ರಹಗಳೂ ಉಮಾಮಹೇಶ್ವರ ವಿಗ್ರಹವೂ ಇವೆ. ಎರಡು ಒಳಗುಡಿಗಳನ್ನುಳಿದು ಮಿಕ್ಕೆಲ್ಲ ಗುಡಿಗಳ ಮುಂದೆ ಮೂರನೆಯ ಅಂಕಣದಲ್ಲಿ ನಂದಿ ವಿಗ್ರಹಗಳಿವೆ. ಎರಡರಲ್ಲಿ ಮಾತ್ರ ಇವು ಗುಡಿಯ ಮುಂದಿನ ನಂದಿಮಂಟಪಗಳಲ್ಲಿವೆ. ಅಂಗಳದ ಮೇಲ್ಛಾವಣಿಯಲ್ಲಿ ತಾವರೆ ಮೊಗ್ಗುಗಳನ್ನೂ ಅರಳಿದ ತಾವರೆಗಳನ್ನೂ ಕೆತ್ತಲಾಗಿದೆ. ದೇವಾಲಯದ ಮುಖಮಂಟಪ ಮತ್ತು ನಂದಿಮಂಟಪಗಳ ಮೇಲ್ಛಾವಣಿಯಲ್ಲೂ ತಾವರೆಯ ಮೊಗ್ಗುಗಳನ್ನು ಕೊರೆಯಲಾಗಿದೆ. ಹೊರಗೋಡೆಯ ಮೇಲಿನ ಶಿಲ್ಪ ಕಿಕ್ಕೇರಿಯ ಬ್ರಹ್ಮೇಶ್ವರ ದೇವಾಲಯವನ್ನೇ ಹೋಲುತ್ತದೆ.

ಈ ದೇವಾಲಯದ ಅನೇಕ ವಿಗ್ರಹಗಳು ಒಡೆದುಹೋಗಿವೆ. ಗೋಡೆಯ ಮೇಲಿನ ಶಿಲ್ಪಗಳಿಗೆ ಸುಣ್ಣ ಬಳಿದು ಅವುಗಳ ಅಂದವೇ ಹಾಳಾಗಿದೆ. ಈ ಶಿಲ್ಪಗಳನ್ನು ಬಹು ಸುಂದರವಾಗಿ ಕೆತ್ತಲಾಗಿದೆಯಾದರೂ ಹಳೇಬೀಡು ಮತ್ತಿತರ ಹೊಯ್ಸಳ ದೇವಾಲಯಗಳಲ್ಲಿರುವಂತೆ ಸಾಲುಸಾಲಾಗಿ ಅವನ್ನು ಕಡೆದಿಲ್ಲ. ಆದರೆ ಕಿಕ್ಕೇರಿಯಲ್ಲಿರುವಂತೆ ಅಳತೆಗೆ ಸರಿಯಾಗಿ ಸ್ಥಳ ಬಿಟ್ಟು ಕೆತ್ತಲಾಗಿದೆ. ಪೂರ್ವದಿಕ್ಕಿನ ಹೊರಗೋಡೆಯ ದಕ್ಷಿಣದ ತುದಿಯಲ್ಲಿ ಒಂದು ಸುಂದರವಾದ ಗಣಪತಿಯ ವಿಗ್ರಹವಿದೆ. ಉತ್ತರದ ಕೊನೆಯಲ್ಲಿ ಅಂಥದೇ ಮಹಿಷಾಸುರಮರ್ದಿನಿಯ ಶಿಲ್ಪವಿದೆ. ಗಣಪತಿಗೂ ಮೊದಲನೆಯ ಮುಖಮಂಟಪಕ್ಕೂ ಮಧ್ಯೆ 12 ವಿಷ್ಣುವಿನ ಶಿಲ್ಪಗಳಿವೆ. ಇಲ್ಲಿರುವ ಪ್ರತಿಯೊಂದು ಶಿಲ್ಪದ ಕೆಳಗೂ ಆಯಾ ಶಿಲ್ಪದ ಹೆಸರು ಬರೆಯಲಾಗಿದೆ. ಪ್ರತಿ ಎರಡು ವಿಷ್ಣು ವಿಗ್ರಹಗಳ ಮಧ್ಯೆ ಕೈ ಮುಗಿದು ನಿಂತಿರುವ ಗರುಡ ಶಿಲ್ಪವುಂಟು. ಅದರ ಹಿಂದೆ ಅನೇಕ ಸ್ತ್ರೀ ಶಿಲ್ಪಗಳನ್ನು ಕೆತ್ತಲಾಗಿದೆ. ಮೊದಲನೆಯ ಮತ್ತು ಎರಡನೆಯ ಮುಖಮಂಟಪದ ಮಧ್ಯೆ ವಿಷ್ಣುವಿನ ಹತ್ತು ಅವತಾರಗಳನ್ನು ಕೆತ್ತಲಾಗಿದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಈ ಭಾಗದ ಗೋಡೆ ಮತ್ತು ಪಶ್ಚಿಮದ ಗೋಡೆಯ ಅನೇಕ ಭಾಗಗಳ ಕೆತ್ತನೆ ಪೂರ್ಣವಾಗದಿರುವುದು. ಮೊದಲನೆಯ ಗುಡಿಯ ದಕ್ಷಿಣ ಗೋಡೆಯೂ ಸೇರಿದಂತೆ, ದಕ್ಷಿಣ ಗೋಡೆಯ ಪೂರ್ವದ ಕೊನೆಯಿಂದ ಪರವಾಸುದೇವ, ಚತುರ್ಬಾಹುಗಳುಳ್ಳ ನಿಂತ ಭಂಗಿಯಲ್ಲಿರುವ ಸರಸ್ವತಿ, ಐರಾವತರೂಢರಾದ ಇಂದ್ರ ಮತ್ತು ಶಚಿ, ಲಕ್ಷ್ಮೀನಾರಾಯಣರನ್ನು ಹೊತ್ತ ಗರುಡ, ವಾಮನನಿಗೆ ದಾನ ಕೊಡುತ್ತಿರುವ ಬಲಿ ಮುಂತಾದ ಶಿಲ್ಪಗಳಿವೆ. ಅರ್ಜುನ ಮತ್ಸ್ಯಕ್ಕೆ ಗುರಿಯಿಡುತ್ತಿರುವ ಕೆತ್ತನೆ ಇಲ್ಲಿದೆ.

ಕೃಷ್ಣರಾಜಪೇಟೆ 63ನೆಯ ಶಾಸನ ಈ ದೇವಾಲಯದಲ್ಲಿದೆ. ಇದು ದೇವಾಲಯದ ನಿರ್ಮಾಣದ ಬಗ್ಗೆ ಯಾವ ಸುಳಿವನ್ನೂ ನೀಡುವುದಿಲ್ಲವಾದರೂ ಇದು ನಿರ್ಮಾಣವಾದ ಕಾಲವನ್ನು ಊಹಿಸಲು ಅನುವು ಮಾಡಿಕೊಡುತ್ತದೆ. ಇದರಲ್ಲಿ ಹೊಯ್ಸಳ ದೊರೆಯ ದಂಡನಾಯಕರಿಬ್ಬರು, 1237ರಲ್ಲಿ ಬ್ರಾಹ್ಮಣರಿಗೆ ದತ್ತಿ ಬಿಟ್ಟ ವಿಷಯ ಹೇಳಲಾಗಿದೆ. ಈ ದೇವಾಲಯದ ಮುಖಮಂಟಪಗಳಲ್ಲಿರುವ ಎರಡು ದ್ವಾರಪಾಲಕ ಶಿಲ್ಪಗಳ ಪೀಠಗಳ ಮೇಲೆ ಅವನ್ನು ಕೆತ್ತಿದವನು ಮಲ್ಲಿತಮ್ಮ ಎಂದು ಬರೆಯಲಾಗಿದೆ. 1249ರಲ್ಲಿ ನುಗ್ಗೇಹಳ್ಳಿಯಲ್ಲಿ ಮತ್ತು 1268ರಲ್ಲಿ ಸೋಮನಾಥಪುರದಲ್ಲಿ ದೇವಾಲಯಗಳ ನಿರ್ಮಾಣಕಾರ್ಯದಲ್ಲಿ ನಿರತನಾಗಿದ್ದವನೀತ. ಆದ್ದರಿಂದ ಈ ದೇವಾಲಯ 13ನೆಯ ಶತಮಾನದ ಮಧ್ಯಭಾಗದಲ್ಲಿ ನಿರ್ಮಾಣವಾಗಿರಬೇಕು. ಮೇಲಿನ ಶಾಸನ ಸೋಮೇಶ್ವರನ ಆಳ್ವಿಕೆಯ ಕಾಲದ್ದು ಎಂಬುದರಲ್ಲಿ ಸಂದೇಹವಿಲ್ಲ. ಗೋವಿಂದನಹಳ್ಳಿಯ ಈ ದೇವಾಲಯ ಹೊಯ್ಸಳ ಕಲಾಮಾದರಿಯ ಒಂದು ಅತ್ಯಪೂರ್ವ ಕುರುಹಾಗಿ ಉಳಿದಿದೆ. ಇದರಂಥದೆ ಮತ್ತೊಂದು ದೇವಾಲಯ ಇದೇ ತಾಲ್ಲೂಕಿನ ಅಘಲಯದ ಮಲ್ಲೇಶ್ವರ ದೇವಾಲಯ ಎಂದು ತಿಳಿದುಬರುತ್ತದೆ. ಗೋವಿಂದನಹಳ್ಳಿಯಲ್ಲಿ ಪಂಚಲಿಂಗ ದೇವಾಲಯವಲ್ಲದೆ ಹೊಯ್ಸಳ ಶೈಲಿಯ ಇನ್ನೆರಡು ದೇವಾಲಯಗಳಿವೆ. ಒಂದು ಶಿವಾಲಯ, ಇನ್ನೊಂದು ಗೋಪಾಲಕೃಷ್ಣನದು. ಸರಿಯಾದ ರಕ್ಷಣೆಯಿಲ್ಲದೆ ಇವೆರಡೂ ಹಾಳಾಗಿವೆ. ಈ ಎಲ್ಲ ದೇವಾಲಯಗಳನ್ನೂ ಸಮೀಕ್ಷಿಸಿದಾಗ, ಗೋವಿಂದನಹಳ್ಳಿ ಒಂದು ಕಾಲಕ್ಕೆ ಉಚ್ಛ್ರಾಯ ಸ್ಥಿತಿಯಲ್ಲಿದ್ದು ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರವಾಗಿತ್ತೆನಿಸುತ್ತದೆ. (ಎಚ್.ಕೆ.ಆರ್.ಜಿ)

**ಗೋವಿಂದ ಪಂತ :** ಸು. 1710–61. ಮಹಾರಾಷ್ಟ್ರದ ಪೇಷ್ವೆ ರಾಜ್ಯದ ಒಬ್ಬ ಸರ್ದಾರ. ಈತನ ಮೂಲಸ್ಥಳ ರತ್ನಗಿರಿ ಜಿಲ್ಲೆಯ ನೇವರೆ. ಗೋವಿಂದ ಪಂತ ಆ ಊರಿನ ಕುಲಕರ್ಣಿ; ಜಾತಿಯಿಂದ ಕರ್ಹಾಡ ಬ್ರಾಹ್ಮಣ. ಈತನ ಪೂರ್ಣ ಹೆಸರು ಗೋವಿಂದ ಬಲ್ಲಾಳ ಖರೆ. ಪಂತನಿಗೆ ಸಂಸಾರದಲ್ಲಿ ವಿಪತ್ತುಗಳೂ ಜಾತಿಯ ಜನರಿಂದ ಕಿರುಕುಳಗಳೂ ಉಂಟಾಗಲು ಈತ ತನ್ನ ಊರನ್ನು ಬಿಟ್ಟು ಪುಣೆಗೆ ಹೋದ. ಅಲ್ಲಿ ಈತ ಪೇಷ್ವೆ ಬಾಜಿರಾಯನ ಮನೆಯಲ್ಲಿ ನೌಕರಿಯಲ್ಲಿದ್ದ. ಪಂತನ ಉತ್ತಮ ಗುಣಗಳಿಗೆ ಮೆಚ್ಚಿದ ಬಾಜಿರಾಯ ಅದೇ ತಾನೆ ತನ್ನ ರಾಜ್ಯಕ್ಕೆ ಸೇರಿದ ಬುಂದೇಲ್‌ಖಂಡ ಪ್ರಾಂತಕ್ಕೆ ಇವನನ್ನು ಕಾರಭಾರಿಯನ್ನಾಗಿ ನೇಮಿಸಿದ (1733). ಆಗ ಇವನಿಗೆ ಗೋವಿಂದ ಪಂತ ಬುಂದೇಲ್ ಎಂಬ ಹೆಸರು ಪ್ರಾಪ್ತವಾಯಿತು. ಈತ ತನ್ನ ಶೌರ್ಯ ಧೈರ್ಯಗಳಿಂದ, ಧೂರ್ತತೆಯಿಂದ ರಜಪೂತ ರಾಜರ ಮೇಲೆ ಮರಾಠರ ವರ್ಚಸ್ಸನ್ನು ಬೆಳೆಸಿದ. ಇದರಿಂದಾಗಿ ಈತ ಒಬ್ಬ ಪ್ರಬಲ ಹಾಗೂ ಪ್ರಮುಖ ಸರ್ದಾರನೆಂದೂ ಗಣಿಸಲ್ಪಟ್ಟ. ಕುರಇ ನವಾಬನಿಂದ ಈತ ಗೆದ್ದ ಪ್ರಾಂತದಲ್ಲಿ ಸಾಗರ ಎಂಬ ದೊಡ್ಡ ಕೆರೆಯಿತ್ತು. ಅದರ ಹತ್ತಿರದಲ್ಲಿ ಅದೇ ಹೆಸರಿನ ಒಂದು ನಗರವನ್ನು ಕಟ್ಟಿ ಅದನ್ನು ತನ್ನ ಆಡಳಿತಕೇಂದ್ರವನ್ನಾಗಿ ಮಾಡಿಕೊಂಡ (1736–37).

1751ರಲ್ಲಿ ನಡೆದ ಫರೂಕಾಬಾದ್ ಸಮರದಲ್ಲಿ ರೋಹಿಲರನ್ನು ಸೋಲಿಸಿ ದಿಲ್ಲಿಯ ಮೊಗಲ್ ಬಾದಶಹನ ಮೇಲೆ ತಮ್ಮ ಪ್ರತಿಷ್ಠೆಯನ್ನು ಪ್ರಕಟಿಸಿದ ಮರಾಠಾ ಸರದಾರರಲ್ಲಿ ಗೋವಿಂದ ಪಂತನೂ ಒಬ್ಬ. ಪಂತ ಬಕ್ರುಲ್ಲಾಖಾನ್‌ನನ್ನು ಸೋಲಿಸಿ ಸ್ಥಾನಭ್ರಷ್ಟನನ್ನಾಗಿ ಮಾಡಿ ಆತನ ಪ್ರಾಂತವನ್ನು ತನ್ನ ಸೀಮೆಗೆ ಸೇರಿಸಿದ. ಅನಂತರ ಅಂತರವೇದಿ ಪ್ರಾಂತವನ್ನು ಗೆದ್ದು ಇಟಾವಾ ಬಳಿಯಲ್ಲಿ ಘೋರ ಕದನ ನಡೆಸಿ 1756ರಲ್ಲಿ ಅಸ್ಗರ್ ಅಲಿ ಎಂಬ ಸರ್ದಾರನನ್ನು ಕೊಂದ (1756). 1760–61ರಲ್ಲಿ ನಡೆದ 3ನೆಯ ಪಾಣಿಪತ್ ಯುದ್ಧದಲ್ಲಿ ಈತ ಮಹಾನ್ ಶೌರ್ಯವನ್ನು ಪ್ರದರ್ಶಿಸಿದ. ಈತ ಅಹ್ಮದ್ ಷಾ ಅಬ್ದಾಲಿಯನ್ನು ಎದುರಿಸಿ ಅವನ ಸೈನ್ಯಕ್ಕೆ ಹೋಗುತ್ತಿದ್ದ ಸರಕುಗಳನ್ನು ದಾರಿಯಲ್ಲೇ ತಡೆಹಿಡಿದ. ಆದರೆ ಅಬ್ದಾಲಿ ಹೋಳ್ಕರನ ಬಾವುಟವೇ ಮುಂತಾದ ರಾಜ ಚಿಹ್ನೆಗಳನ್ನು ಬಳಸಿ ಬೇಟೆಯ ನಿಮಿತ್ತ ಹೊರಟಹಾಗೆ ಮಾಡಿ ಮೋಸದಿಂದ ಪಂತನನ್ನು ಕೊಂದ. ಈತನ ಸಾವಿನಿಂದ ಅಬ್ದಾಲಿಗೆ ಮುಂದಿನ ಯುದ್ಧ ಸುಗಮವಾಯಿತು. (ಎಸ್.ಎಸ್.ಜಿ.ಎ.)


**ಗೋವಿಂದ ಪಿಳ್ಳೆ, ಪಿ. :** 1849–97. ಮಲಯಾಳ ಭಾಷಾಚರಿತ್ರಂ ಎನ್ನುವ ಗ್ರಂಥದ ಕರ್ತೃ. ತಿರುವನಂತಪುರದ ಶ್ರೀಕಂಠೇಶ್ವರ ಪ್ರದೇಶದ ಪಪ್ಪುಪಿಳ್ಳೆ ಈತನ ತಂದೆ. 1873ರಲ್ಲಿ ಬಿ.ಎ. ಪದವಿ ಪಡೆದು ತಿರುವನಂತಪುರದ ಒಂದು ಪ್ರೌಢಶಾಲೆಗೆ ಮುಖ್ಯೋಪಾಧ್ಯಾಯನಾಗಿ ನೇಮಕಗೊಂಡ. ಒಂದು ವರ್ಷ ಕಳೆಯುವಷ್ಟರಲ್ಲಿ ಆಗಿನ ತಿರುವಾಂಕೂರು ಮಹಾರಾಜರಾಗಿದ್ದ ಆಯಿಲ್ಯ ತಿರುನಾಳರು ಈತನನ್ನು ತಮ್ಮ ಅರಮನೆಯ ಪ್ರಧಾನ ಕರಣಿಕನನ್ನಾಗಿ ನೇಮಿಸಿಕೊಂಡರು. ಹೀಗೆ ಅರಮನೆಯ ಪ್ರಧಾನಾಧಿಕಾರಿಯಾಗಿ ಪಿಳ್ಳೆ ಸ್ವಲ್ಪಕಾಲ ರಾಜರ ವಿಶೇಷ ಪ್ರೀತಿಗೆ ಪಾತ್ರನಾಗಿ ಸರ್ವಾಧಿಕಾರ್ಯಕ್ಕಾರ್ ಎಂದು ಸಾಕಷ್ಟು ಪ್ರಸಿದ್ಧನಾದ.

ಆಯಿಲ್ಯ ತಿರುನಾಳ್ ಮಹಾರಾಜರು ದಿವಂಗತರಾದ (1880) ಬಳಿಕ ರಾಜ ಗದ್ದುಗೆಯನ್ನೇರಿದ ವಿಶಾಖ ತಿರುನಾಳ್ ಅದುವರೆಗೆ ರಾಜಾಶ್ರಿತರಾಗಿದ್ದ ಅಧಿಕಾರಿಗಳನ್ನೆಲ್ಲ ಕೆಲಸದಿಂದ ತೆಗೆದುಹಾಕಿದರು. ಆ ಸಮೂಹದಲ್ಲಿ ಗೋವಿಂದ ಪಿಳ್ಳೆಯೂ ಒಬ್ಬ. ಆ ಘಟನೆಯ ಅನಂತರ ಪಿಳ್ಳೆಯ ಆಸಕ್ತಿ ಮಲಯಾಳಂ ಸಾಹಿತ್ಯ ರಚನೆಯ ಕಡೆಗೆ ತಿರುಗಿತು. ವಿದ್ಯಾರ್ಥಿಯಾಗಿದ್ದಾಗಿನಿಂದಲೂ ಮಲಯಾಳಂ ಭಾಷೆ ಮತ್ತು ಸಾಹಿತ್ಯಕ್ಕೆ ಒಂದು ಸಮಗ್ರ ಚರಿತ್ರೆಯನ್ನು ರಚಿಸಬೇಕೆಂದು ಯೋಚಿಸುತ್ತಿದ್ದ ಪಿಳ್ಳೆ ಆ ಯೋಜನೆಯ ಅಂಗವಾಗಿ 1881ರಲ್ಲಿ ಮಲಯಾಳ ಭಾಷಾಚರಿತ್ರಂ ಎನ್ನುವ 168 ಪುಟಗಳ ಮೊದಲ ಸಂಪುಟವನ್ನು ಸಿದ್ಧಮಾಡಿ ಪ್ರಕಟಿಸಿದ. 1889–90 ರ ಅವಧಿಯಲ್ಲಿ ಐನೂರು ಪುಟಗಳ ಮತ್ತೆರಡು ಸಂಪುಟಗಳು ಬೆಳಕು ಕಂಡವು. ಮಾಸಿಕಗಳು, ಸಾಪ್ತಾಹಿಕಗಳು, ಮುದ್ರಣಾಲಯಗಳು– ಮುಂತಾದವುಗಳ ಸೌಲಭ್ಯಗಳಿಲ್ಲದಿದ್ದ ಕಾಲದಲ್ಲಿ, ಮಲಯಾಳದ ಪ್ರಸಿದ್ಧ ಗ್ರಂಥಗಳು ಪ್ರಕಟಗೊಂಡಿರದಿದ್ದ ಕಾಲದಲ್ಲಿ ಓಲೆಯ ಗ್ರಂಥಗಳು, ಐತಿಹ್ಯಗಳು – ಮುಂತಾದವನ್ನು ಕಾಪಾಡಿಕೊಂಡು ಬಂದಿದ್ದ ಪ್ರಾಚೀನ ಗೃಹಗಳಿಗೆ ಅಲೆದು, ಹುಡುಕಿ, ಸಂಗ್ರಹಿಸಿ ಸಾಹಿತ್ಯ ಚರಿತ್ರೆಯೊಂದನ್ನು ಮೊದಲ ಬಾರಿಗೆ ರಚಿಸಿದ ಕೀರ್ತಿ ಗೋವಿಂದ ಪಿಳ್ಳೆಯದು.

ಅರಮನೆಯ ಅಧಿಕಾರವನ್ನು ಬಿಟ್ಟಮೇಲೆ ಪಿಳ್ಳೆ ತಿರುವನಂತಪುರದಲ್ಲಿ ವಕೀಲನಾದ. ಅದೇ ಸಂದರ್ಭದಲ್ಲಿ ಒಂದು ಇಂಗ್ಲಿಷ್ ಪತ್ರಿಕೆಯ ಸಂಪಾದಕನಾಗಿ ಕೆಲಸ ಮಾಡಿದ್ದಲ್ಲದೆ ಅದುವರೆಗೆ ಬೆಳಕು ಕಾಣದೆ ಇದ್ದ ಭಾಷಾ ನೈಷಧ ಚಂಪು, ದಕ್ಷಯಾಗ ಕಿಳಿಪ್ಪಾಟ್ಟು – ಮುಂತಾದುವನ್ನು ಪ್ರಕಟಿಸಿ ಬೆಳಕಿಗೆ ತಂದ. ರೋಮನ್ ಚರಿತ್ರೆ ಮತ್ತು ಎ ಹ್ಯಾಂಡ್ ಬುಕ್ ಆಫ್ ಟ್ರ್ಯಾವಂಕೂರ್ ಎನ್ನುವ ಎರಡು ಸ್ವಂತ ಕೃತಿಗಳನ್ನು ರಚಿಸಿ ಪ್ರಕಟಿಸಿದ.

ಒಂದು ಇಂಗ್ಲಿಷ್–ಮಲಯಾಳಂ ನಿಘಂಟನ್ನು ಸಿದ್ಧಪಡಿಸಿ ಪ್ರಕಟಿಸುವ ಯೋಜನೆ ಹಾಕಿಕೊಂಡು ಪಿಳ್ಳೆ ಅದಕ್ಕಾಗಿ ಶ್ರಮಿಸಿದ್ದುಂಟು. ಆದರೆ ಅದು ಈತನ ಜೀವಮಾನದಲ್ಲಿ ಸಿದ್ಧಿಸಲಿಲ್ಲ. (ಬಿ.ಕೆ.ಟಿ.)

**ಗೋವಿಂದ ಪೈ :** 1883–1963. ಕನ್ನಡದ ಹೆಸರಾಂತ ವಿಮರ್ಶಕ, ಕವಿ. ರಾಷ್ಟ್ರಕವಿ ಪ್ರಶಸ್ತಿಗೆ ಭಾಜನರಾದವರು. ಅನೇಕ ವಿಧದಲ್ಲಿ ಕನ್ನಡ ನಾಡು ನುಡಿಗಳ ಏಳಿಗೆಗೆ, ಏಕೀಕರಣಕ್ಕೆ ಕೆಲಸ ಮಾಡಿದವರಲ್ಲಿ ಮುಖ್ಯರು. ಆಸ್ತಿ ಮನೆ ಎಲ್ಲ ಮಂಜೇಶ್ವರದಲ್ಲಿದ್ದು ಅಲ್ಲಿಯೇ ಇವರು ನೆಲೆ ನಿಂತರಾದರೂ ಇವರ ಹೆಸರಿನ ಮೊದಲಿಗೆ ಬರುವ ಎಂ. ಎಂಬುದು ಮಂಗಳೂರಿನ ಪ್ರತೀಕವೇ ಹೊರತು ಮಂಜೇಶ್ವರದ್ದಲ್ಲ. ಹುಟ್ಟಿದ್ದು ಮಂಗಳೂರಿನಲ್ಲಿ. ಬೆಳೆದದ್ದು ಕಡಲಕರೆಯ ನಾಡಾದ ಮಂಜೇಶ್ವರದಲ್ಲಿ. ಇವರು ಗೌಡ ಸಾರಸ್ವತ ಸಮಾಜದ ಮಂಗಳೂರಿನ ಬಾಪೈ ಮನೆತನಕ್ಕೆ ಸೇರಿದವರು.




ಪೈ ಅವರ ಆರಂಭದ ವಿದ್ಯಾಭ್ಯಾಸ ಹುಟ್ಟೂರಾದ ಮಂಗಳೂರಿನಲ್ಲಿಯೇ ನಡೆಯಿತು. ಮಂಗಳೂರು ಆಗಿನ ಕಾಲಕ್ಕೆ ತುಂಬ ಎಚ್ಚೆತ್ತ ಪಟ್ಟಣವಾಗಿತ್ತು. ಬಾಸೆಲ್ ಮಿಷನಿನ ಪಾದ್ರಿಗಳೂ ಸೇರಿದಂತೆ ದಕ್ಷರೂ ಜಾಣರೂ ಆದ ಹಲವರ ದುಡಿಮೆಯ ಫಲವಾಗಿ ಮಂಗಳೂರು ಆಗ ವಿದ್ಯೆ, ಸಂಸ್ಕೃತಿಗಳ ಒಂದು ಹಿರಿಯ ಕೇಂದ್ರವಾಗಿತ್ತು. ಅಲ್ಲದೆ ಹೊಸಗನ್ನಡದ ಮಾಸಪತ್ರಿಕೆ ಸುವಾಸಿನಿ ಇಲ್ಲಿಂದಲೇ ಪ್ರಕಟವಾಗುತ್ತಿತ್ತು. ಬೋಳಾರ ವಿಠಲರಾಯರು, ಬೆನಗಲ್ ರಾಮರಾಯರು, ಪಂಜೆ ಮಂಗೇಶರಾಯರು ಮುಂತಾದ ಹಲವಾರು ಭಾಷಾ ಸೇವಕರು ಈ ಕೇಂದ್ರದಲ್ಲಿ ಇದ್ದುಕೊಂಡು ನಾಡು, ನುಡಿಗಳಿಗೆ ಸೇವೆ ಸಲ್ಲಿಸುತ್ತಿದ್ದರು.

ತರುಣ ಗೋವಿಂದ ಪೈಗಳು ಇಂಥ ಸುಸಂಸ್ಕೃತ ಆವರಣದಲ್ಲಿ ಬೆಳೆದರು. ಪಂಜೆ ಮಂಗೇಶರಾಯರಿಂದ ನೇರವಾಗಿ ಶಾಲೆಯಲ್ಲಿ ಪಾಠ ಕಲಿತರು. ಚುರುಕು ಬುದ್ಧಿಯ ಭಾವುಕ ಮನೋಧರ್ಮದ ತರುಣನ ಮೇಲೆ ಈ ಪವಿತ್ರ ವಾತಾವರಣದ ಪ್ರಭಾವ ಬಲವಾಗಿ ಬಿತ್ತು. ಅನಂತರ ಪೈ ಪ್ರೌಢ ವಿದ್ಯಾಭ್ಯಾಸಕ್ಕೆಂದು ಮದ್ರಾಸಿಗೆ ಹೋಗಿ ಜಾಣ ಎನಿಸಿಕೊಂಡರು. ತಂದೆಯ ತೀವ್ರ ಕಾಯಿಲೆಯಿಂದಾಗಿ, ಅನಂತರ ಹಠಾತ್ತನೆ ಒದಗಿದ ಅವರ ಮರಣದಿಂದಾಗಿ ಬಿ.ಎ. ಪದವಿಯನ್ನು ಪಡೆಯಲಾಗಲಿಲ್ಲ.

ಅಪ್ಪ ತೀರಿಕೊಂಡ ಮೇಲೆ ಸಂಸಾರದ ಹೊಣೆ ಹೊತ್ತು ಊರಿನಲ್ಲಿಯೇ ನಿಂತರು. ಆದರೆ ಇವರ ಸಾಂಸಾರಿಕ ಜೀವನವೂ ಅಂಥ ಸುಖಮಯವೇನೂ ಆಗಲಿಲ್ಲ. ದಾಂಪತ್ಯ ಜೀವನದ ಹರೆಯದಲ್ಲಿಯೇ ಪತ್ನಿಯನ್ನು ಕಳೆದುಕೊಂಡರು. ಮತ್ತೆ ಮದುವೆಯಾಗಲಿಲ್ಲ. ಮಕ್ಕಳಿಲ್ಲವೆಂದು ವ್ಯಥೆಪಡಲಿಲ್ಲ. ತಮ್ಮ ಕುಟುಂಬದಲ್ಲಿಯೇ ಬೆಳೆಯುತ್ತಿದ್ದ ತಮ್ಮನ ಮಕ್ಕಳಲ್ಲಿಯೇ ಆ ಅಕ್ಕರೆಯನ್ನು ತೋರಿಸುತ್ತ ಅವರನ್ನು ಬೆಳೆಸಿದರು. ಕಿರಿಯ ಸೋದರ ಸುಬ್ಬರಾಯ ಪೈಗಳು ಅಣ್ಣನಿಗೆ ನೆರವಾಗುತ್ತ ಮನೆಗೆ ಬಂದ ಅತಿಥಿಗಳ ಸತ್ಕಾರಾದಿ ಕಾರ್ಯಗಳನ್ನು ನೋಡಿಕೊಳ್ಳುತ್ತಿದ್ದರು.

ಗೋವಿಂದ ಪೈಗಳು ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯಾಚಾರ್ಯರುಗಳಲ್ಲಿ ಅಗ್ರಪಂಕ್ತಿಗೆ ಸೇರಿದವರು. ಪಾಂಡಿತ್ಯದಿಂದ, ಸಂಶೋಧನೆಯಿಂದ, ನಯ ವಿನಯಗಳಿಂದ, ಸರಳತೆಯಿಂದ ಜನತೆಯ ಸ್ನೇಹ ಗೌರವಗಳನ್ನಿವರು ಸಂಪಾದಿಸಿದರು. ತನು ಕನ್ನಡ, ಮನ ಕನ್ನಡ, ನುಡಿ ಕನ್ನಡ ಎಂದು ಹಾಡಿದ ರಾಷ್ಟ್ರಕವಿ ಗೋವಿಂದ ಪೈಗಳ ವ್ಯಕ್ತಿತ್ವ ಘನವಾದುದು.

ಗೋವಿಂದ ಪೈಗಳ ಮೊತ್ತಮೊದಲಿನ ಲೇಖನ 1900ರಲ್ಲಿ ಸುವಾಸಿನಿ ಪತ್ರಿಕೆಯಲ್ಲಿ ಪ್ರಕಟವಾಯಿತು. 1962ರಲ್ಲಿ ಪ್ರಕಟಗೊಂಡ ಮಂಜೇಶ್ವರ ದೇವಸ್ಥಾನದ ಮೇಲಿನ ಲೇಖನ ಇವರ ಕೊನೆಯ ಬರವಣಿಗೆಯಾಯಿತು. ಹೀಗೆ ಸುಮಾರು 62 ವರ್ಷಗಳ ವರೆಗೆ ಸತತವಾಗಿ ವಾಙ್ಮಯ ಸೇವೆಯಲ್ಲಿ ತೊಡಗಿದ್ದು ಕನ್ನಡ ಸಾಹಿತ್ಯವನ್ನಿವರು ಶ್ರೀಮಂತಗೊಳಿಸಿದರು. ಇವರು ಬರೆದದ್ದು ಗಾತ್ರದಲ್ಲಿ ಸ್ವಲ್ಪವೇ ಆದರೂ ಇವರ ಬರವಣಿಗೆ ಪ್ರೌಢವೂ ವಿದ್ವತ್ಪೂರ್ಣವೂ ಮೌಲಿಕವೂ ಆಗಿದೆ.



ಗೋವಿಂದ ಪೈಯವರ ಕೈಬರೆಹ

ಸಂಶೋಧನೆ, ಪ್ರಬಂಧ, ಕವಿತೆ ಮತ್ತು ನಾಟಕ – ಈ ಮೂರು ಮಾರ್ಗಗಳಲ್ಲಿ ಪೈಗಳ ಸಾಹಿತ್ಯವಾಹಿನಿ ಪ್ರವಹಿಸಿದೆ. ಸುವಾಸಿನಿ ಎಂಬವರ ಕವನ ಅದೇ ಹೆಸರಿನ ಪತ್ರಿಕೆಯಲ್ಲಿ ಪ್ರಕಟವಾಗಿ (1900) ಆ ಪತ್ರಿಕೆ ಏರ್ಪಡಿಸಿದ್ದ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಗಿಟ್ಟಿಸಿತು. ಅನಂತರ ನವೀನ ಚಂದ್ರಸೇನರ ಬಂಗಾಳಿ ಕೃಷ್ಣಚರಿತೆಯ ಗದ್ಯಾನುವಾದ (1909) ; ಮತ್ತು ಸಿಗಾಲ ಸುತ್ತ ಎಂಬ ಬೌದ್ಧ ಸೂತ್ರಗಳ (1911) ಕನ್ನಡ ಅನುವಾದಗಳು ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ಪ್ರಕಟವಾದುವು. ಇವರ ಕವನ ಸೃಷ್ಟಿಯೂ ಧರ್ಮ ಮತ್ತು ಚರಿತ್ರೆಗೆ ಸಂಬಂಧಿಸಿದ ವ್ಯಾಸಂಗವೂ ಒಟ್ಟೊಟ್ಟಿಗೆ ಸಾಗಿದವು. ಇದೇ ಕಾಲಕ್ಕೆ (1911), ಪ್ರಾಸವನ್ನು ಇಟ್ಟು, ಬಿಟ್ಟು ಪದ್ಯಗಳನ್ನು ರಚಿಸುವ ಹಲವು ಪ್ರಯೋಗಗಳನ್ನಿವರು ಕೈಕೊಂಡರು. ಆ ಮುಂದೆ, ಮಂಜೇಶ್ವರಕ್ಕೆ ಬರುತ್ತಿದ್ದ ಬುದ್ಧಿಜೀವಿಗಳೊಡನೆ ಪ್ರಾಕ್ತನ ವಿಷಯಗಳನ್ನು ಚರ್ಚಿಸುವುದರಲ್ಲಾಗಲಿ, ಕವಿಚರಿತ್ರಕಾರರೇ ಮೊದಲಾದವರೊಡನೆ ಪತ್ರವ್ಯವಹಾರದಲ್ಲಾಗಲಿ ತೊಡಗಿದ್ದರಾದರೂ ಸಂಶೋಧನಾತ್ಮಕ ಬರವಣಿಗೆಯಲ್ಲಿ ಇನ್ನೂ ತೊಡಗಿರಲಿಲ್ಲ. 1924ರ ಬೆಳಗಾಂವಿ ಸಾಹಿತ್ಯ ಸಮ್ಮೇಳನದ ಕಾಲಕ್ಕೆ ಇವರು ಒಬ್ಬ ಉದಯೋನ್ಮುಖ ಕವಿ ಎಂಬ ಹೆಸರನ್ನು ಮಾತ್ರ ಗಳಿಸಿದ್ದರು.

ಪೈಗಳ ಸಂಶೋಧನಾತ್ಮಕ ಬರವಣಿಗೆ ಪ್ರಾರಂಭವಾದದ್ದು 1924ರಲ್ಲಿ. ಮುಂದಣ ಒಂದೊಂದು ವರ್ಷಕ್ಕೆ ಸುಮಾರು ಏಳೆಂಟು ಸಂಶೋಧನ ವಿಷಯಗಳನ್ನು ಆರಿಸಿಕೊಂಡು ಬರೆಯುತ್ತ ಹೋದರು. ಭಾರತೀಯ ಇತಿಹಾಸಕಾರರಿಗೆ ಹೆಚ್ಚು ಹಿಡಿಸಬಹುದಾದ ಲೇಖನಗಳನ್ನು ಇಂಗ್ಲಿಷಿನಲ್ಲಿ ಬರೆದರು. ಅರಸುಮನೆತನಗಳ ವಂಶಾವಳಿ, ಕವಿಕಾವ್ಯಗಳ ಕಾಲನಿರ್ಣಯ, ಈ ಕೆಲಸದ ಮಧ್ಯೆ ಕವಿತಾ ರಚನೆ – ಈ ಪರಿಪಾಠ 1945 ರ ವರೆಗೆ ನಡೆಯಿತು. ಕವಿತೆ ಮತ್ತು ಸಂಶೋಧನೆ ಇವೆರಡರಲ್ಲಿ ನಿಶ್ಚಿತವಾದ ಯಾವ ಕ್ರಮವನ್ನೂ ತಾವು ಅನುಸರಿಸಿದವರಲ್ಲ ಎಂಬ ಮಾತನ್ನು ಪೈಯವರೇ ತಮ್ಮ ಆತ್ಮಕಥನದಲ್ಲಿ ಹೇಳಿಕೊಂಡಿದ್ದಾರೆ. ಗಿಳಿವಿಂಡು ಕವನಸಂಗ್ರಹ 1930 ರಲ್ಲಿ ಪ್ರಕಟವಾಯಿತು. ಪೈ ಅವರು ನಾಟಕ ಕ್ಷೇತ್ರದಲ್ಲಿ ವ್ಯವಸಾಯ ಮಾಡಲು ಮನಸ್ಸನ್ನು ತೊಡಗಿಸಿದ್ದು 1946 – 47 ರಲ್ಲಿ. ಹೀಗೆ 1927ರಿಂದ 1947ರ ವರೆಗಿನ 20 ವರ್ಷಗಳ ಅವಧಿ ಪೈಗಳ ಬರವಣಿಗೆಯ ಉಚ್ಛ್ರಾಯಕಾಲ ಎಂದು ಹೇಳಬಹುದು. ಅನಂತರವೂ ಬರವಣಿಗೆ ಮುಂದೆ ಸಾಗಿತಾದರೂ ಅದರ ಗತಿ ಮಂದವಾಯಿತು. 1953ರ ಹೊತ್ತಿಗೆ, ಎಂದರೆ ಪೈ ಅವರ 70ನೆಯ ವಯಸ್ಸಿನ ಸುಮಾರಿಗೆ ಲೇಖನ ವ್ಯವಸಾಯ ತೀರ ಕುಂಠಿತವಾಯಿತು. ಕೊನೆಯದಾದ ಮಂಜೇಶ್ವರ ದೇವಸ್ಥಾನ ಲೇಖನ ಬಹುಪ್ರಯಾಸದಿಂದಲೇ ಸಿದ್ಧವಾಯಿತಲ್ಲದೆ ಅದರ ಪ್ರಕಟಣೆಯೂ ಕವಿಯ ಮರಣಾನಂತರವೇ ಆಯಿತು.

ಪೈಗಳ ಸಂಶೋಧನ ಕ್ಷೇತ್ರ ಇತಿಹಾಸ, ಹಳಗನ್ನಡ ಕವಿಕಾವ್ಯ, ಹೊಸಗನ್ನಡ ಸಾಹಿತ್ಯ – ಇವಕ್ಕೆ ಸಂಬಂಧಿಸಿದೆ. ಇತಿಹಾಸಕ್ಕೆ ಸಂಬಂಧಿಸಿದ ಲೇಖನಗಳಲ್ಲಿ ತಮ್ಮ

ಪೂರ್ವಜರಾದ ಗೌಡ ಸಾರಸ್ವತರ ಮೂಲಕ್ಕೆ ಸಂಬಂಧಿಸಿದ ಸಂಶೋಧನೆ ಅತ್ಯಂತ ಮಹತ್ತ್ವಪೂರ್ಣವಾದುದು. ಹಲವು ಪುರಾಣಗಳನ್ನೂ ಶಾಸನಗಳನ್ನೂ ಕೂಲಂಕಷವಾಗಿ ಪರಿಶೀಲಿಸಿ ಸಾರಸ್ವತರ ಉಲ್ಲೇಖ ಎಲ್ಲೆಲ್ಲಿ ಬಂದಿದೆ ಎಂಬುದನ್ನು ಗುರುತಿಸಿ ಫ್ಲ್ಯಾಷಸ್ ಫ್ರಮ್ ದಿ ಪಾಸ್ಟ್ ಎಂಬ ಲೇಖನವನ್ನು ಬರೆದರು. ಅದೇ ಮುಂದೆ ಮತ್ತಷ್ಟು ಘನೀಭೂತವಾಗಿ ನಮ್ಮ ಹಿರಿಯರನ್ನು ಕುರಿತು – ಎಂಬ ಲೇಖನದಲ್ಲಿ (ಜೀವೋತ್ತಮ, 1955) ನಿರ್ಣಯಾತ್ಮಕ ರೂಪ ತಾಳಿತು. ಸಾರಸ್ವತರು ಮೂಲತಃ ಪಂಜಾಬದ ಸರಸ್ವತೀ ನದೀತೀರದವರೆಂದು ಸಾಧಾರವಾಗಿ ಹೇಳಿದುದಲ್ಲದೆ, ಕೊಂಕಣಿ ಭಾಷೆಯ ಮೂಲದ ಬಗ್ಗೆಯೂ ಆಳವಾದ ಸಂಶೋಧನೆಯನ್ನು ನಡೆಸಿ ಅದು ಮರಾಠಿ ಜನ್ಯವಲ್ಲ, ಮಾಗಧೀ ಪ್ರಾಕೃತದಿಂದ ಜನಿಸಿದ ಭಾಷೆ ಎಂಬುದನ್ನು ಪೈಗಳು ಸ್ಥಾಪಿಸಿದ್ದಾರೆ. ಅಷ್ಟೇ ಅಲ್ಲದೆ ಮರಾಠಿಯೂ ಈಚಿನ ಕಾಲದ್ದಾದ ಮಹಾರಾಷ್ಟ್ರ ಪ್ರಾಕೃತದಿಂದ ಹುಟ್ಟಿದ್ದಾದುದರಿಂದ ಕೊಂಕಣಿ ಭಾಷೆ ಮರಾಠಿಗಿಂತಲೂ ಪ್ರಾಚೀನ ಎಂದೂ ಮಂಜೇಶ್ವರದ ಅನಂತೇಶ್ವರ ದೇವಾಲಯವೂ ಮೂಲತಃ ಸಾರಸ್ವತರ ದೇವಸ್ಥಾನವೇ ಎಂದೂ ಪೈಗಳ ಅನಿಸಿಕೆ.

ಇನ್ನೊಂದು ಪ್ರಮುಖ ಸಂಶೋಧನೆ ತುಳುನಾಡಿನ ಇತಿಹಾಸವನ್ನು ಕುರಿತದ್ದು. 1927ರಲ್ಲಿ ಮೊದಲು ರೂಪುಗೊಂಡು ಕೊನೆಗೆ 1947ರಲ್ಲಿ ತುಳುನಾಡು ಪೂರ್ವಸ್ಮೃತಿ ಎಂಬ ಹೆಸರಿನಲ್ಲಿ ಪ್ರಚುರಗೊಂಡ ಲೇಖನದಲ್ಲಿ 20 ವರ್ಷಗಳ ಸತತ ಸಂಶೋಧನೆಯ ಸಾರವಿದೆ. ಇದರಲ್ಲಿ ತುಳುನಾಡ ಹೆಸರಿನ ಉತ್ಪತ್ತಿ, ಪ್ರಾಚೀನತೆಗಳನ್ನು ಕುರಿತು ವಿಚಾರ ಮಾಡುತ್ತ 2ನೆಯ ಶತಮಾನದಿಂದ 15ನೆಯ ಶತಮಾನದ ವರೆಗೆ ಆಳಿದ ಆಳುಪರೆಂಬ ರಾಜಮನೆತನದ ಇತಿಹಾಸವನ್ನು ಹೇಳಿರುವುದಲ್ಲದೆ ಇವರಲ್ಲಿ ಪ್ರಮುಖನಾದ ಭೂತಾಳ ಪಾಂಡ್ಯ ಆಳುಪ ಮನೆತನದವನೇ ಎಂಬುದನ್ನು ನಿರ್ಧರಿಸಿದ್ದಾರೆ. ಅಲ್ಲಿನ ಧಾರ್ಮಿಕ ಇತಿಹಾಸವನ್ನು ವಿವರವಾಗಿ ತಿಳಿಸುತ್ತ ನಾಥ ಸಂಪ್ರದಾಯದ ಪ್ರಭಾವವನ್ನೂ ಅಲ್ಲಿನ ಶಿವಲಿಂಗಕ್ಕೆ ಮಂಜುನಾಥ ಎಂದು ಹೆಸರು ಬರಲು ಈ ಸಂಪ್ರದಾಯದ ಪ್ರಭಾವವೇ ಕಾರಣವೆಂಬುದನ್ನೂ ಹೇಳಿದ್ದಾರೆ. ತುಳುನಾಡಿನಲ್ಲಿ ಜನಿಸಿದ ಮಧ್ವಾಚಾರ್ಯ, ರತ್ನಾಕರವರ್ಣಿ, ಪಾರ್ತಿಸುಬ್ಬ, ಮುದ್ದಣ ಮೊದಲಾದ ವ್ಯಕ್ತಿಗಳ ವಿಷಯದಲ್ಲಿದ್ದ ಸಂದಿಗ್ಧತೆಗಳನ್ನು ಪರಿಹರಿಸಿದ್ದಾರೆ.

ಕರ್ನಾಟಕಕ್ಕೆ ಸಂಬಂಧಿಸಿದ ವಿಷಯದಲ್ಲಿ ಹೆಚ್ಚಿನ ಸಂಶೋಧನೆ ನಡೆಸಿ ದಕ್ಷಿಣಕ್ಕೆ ಭದ್ರಬಾಹು ಮುನಿಯೊಂದಿಗೆ ಬಂದ ದೊರೆ ಚಂದ್ರಗುಪ್ತ ಮೌರ್ಯನಲ್ಲ, ಮಧ್ಯ ಭಾರತದ ಉಜ್ಜಯಿನಿಯಲ್ಲಿ ರಾಜ್ಯಭಾರ ಮಾಡುತ್ತಿದ್ದ ಸಂಪ್ರತಿ ಚಂದ್ರಗುಪ್ತ ಎಂದು ನಿರ್ಣಯಿಸಿ ಆತ ಕರ್ನಾಟಕಕ್ಕೆ ಬಂದ ಕಾಲ ಪ್ರ.ಶ.ಪೂ. 300 ಅಲ್ಲ, ಪ್ರ.ಶ.ಪೂ. 250 ಎಂದೂ ಇವರೇ ಪ್ರಪ್ರಥಮವಾಗಿ ಕರ್ನಾಟಕಕ್ಕೆ ಕಾಲಿರಿಸಿದ ಜೈನರು ಎಂದೂ ಇವರು ದಿಗಂಬರ ಶಾಖೆಯವರೆಂದೂ ಪೈಗಳು ನಿರ್ಣಯಿಸಿದ್ದಾರೆ. ಅನಂತರ ಟಾಲೆಮಿಯ ಪುಸ್ತಕದಲ್ಲಿ ಬಂದಿರುವ ಕರ್ನಾಟಕದ ಊರುಗಳನ್ನು ಗುರುತಿಸಿದ್ದಾರೆ. ಕೆಲವು ಪ್ರಾಚೀನ ಕರ್ನಾಟಕದ ರಾಜಮನೆತನಗಳ, ಅದರಲ್ಲೂ ಸಾತವಾಹನ, ಪುನ್ನಾಟ, ಗಂಗ ಮತ್ತು ಕದಂಬರ ಇತಿಹಾಸವನ್ನು ಅಧಿಕೃತವಾಗಿ ಸಂಶೋಧಿಸಿ ಬರೆದಿದ್ದಾರೆ.

ಕರ್ನಾಟಕವಷ್ಟೇ ಅಲ್ಲದೆ ಭಾರತೀಯ ಇತಿಹಾಸಕ್ಕೂ ಸಂಬಂಧಿಸಿದಂತೆ ಸಂಶೋಧನೆ ನಡೆಸಿ, ಸೆಲ್ಯೂಕಸನನ್ನು ಸೋಲಿಸಿದ ಚಂದ್ರಗುಪ್ತ ಬಸಿಲೆಸ್ ಎಂಬ ಬಿರುದನ್ನು ಪಡೆದಿದ್ದಿರಬೇಕೆಂದೂ ಅದನ್ನು ವಿಶಾಖದತ್ತ ತನ್ನ ಮುದ್ರಾರಾಕ್ಷಸ ನಾಟಕದಲ್ಲಿ ವೃಷ (ಶೂದ್ರ) ಎಂದು ತಪ್ಪಾಗಿ ಗ್ರಹಿಸಿ ಅದನ್ನು ಚಾಣಕ್ಯನ ಬಾಯಲ್ಲಿ ಹೇಳಿಸಿರುವನೆಂದೂ ಹೇಳಿದ್ದಾರೆ. ಅಲ್ಲದೆ ಭಾರತ, ಗ್ರೀಕ್ ಸಂಬಂಧವನ್ನು ಬೇಸ್‍ನಗರ ಎಂಬಲ್ಲಿಯ ಗರುಡಗಂಬದ ಮೇಲಿದ್ದ ಪ್ರಾಕೃತ ಭಾಷೆಯ ಶಾಸನದಿಂದ (ಪ್ರ.ಶ.ಪೂ. 105) ನಿರ್ಧರಿಸಿದ್ದಾರೆ. ಇದರ ಜೊತೆಗೆ ಹೊರಗಿನಿಂದ ಭಾರತಕ್ಕೆ ಪ್ರಸಕ್ತ ಶಕೆಯ ಆರಂಭದಲ್ಲಿ ಬಂದು ಆಳಿದ ಮಾಬಸ್ ರಾಜನಿಂದ (ಪ್ರ.ಶ.ಪೂ. 105) ಆರಂಭವಾದ ಶಕರಾಜರ ಆಳಿಕೆಯ ಮತ್ತು ಅವರ ಯುದ್ಧಯಾತ್ರೆಗಳ ಕಾಲಗಳನ್ನು ನಿರ್ಧರಿಸಿದ್ದಾರೆ.

ಶಕರಾಜನನ್ನು ಸೋಲಿಸಿ 78ರಲ್ಲಿ ಸಾತವಾಹನ ಶಕಯುಗವನ್ನು ಸ್ಥಾಪಿಸಿದಂತೆ 136–137 ಗುಪ್ತ ವಲ್ಲಭೀ ಯುಗಗಳು ಒಂದೇ ಎಂದೂ ಆಲ್ಬೆರೂನಿ ಹೇಳಿದ ಕಾಲ ತಪ್ಪೆಂದೂ 272ರಂದು ಆರಂಭವಾದ ಗುಪ್ತಯುಗ 366ರಲ್ಲಿ ಲುಪ್ತವಾದ ಮೇಲೆಯೇ ವಲಭೀಯುಗ ಆರಂಭವಾಯಿತೆಂದೂ ಹೊಸ ಅಭಿಪ್ರಾಯವನ್ನು ಮಂಡಿಸಿದ್ದಾರೆ. ಪ್ರಾಚೀನ ಭಾರತದಲ್ಲಿ ರಾಜ್ಯವಾಳಿದ ವಿಂಧ್ಯಪ್ರದೇಶದ ವಾಕಾಟಕರ (174–515) ಮತ್ತು ದಕ್ಷಿಣ ಪಲ್ಲವರ (87–900) ಚರಿತ್ರೆಯನ್ನು ಬರೆದಿದ್ದಾರೆ.

ಧಾರ್ಮಿಕ ವಿಷಯಗಳಲ್ಲಿನ ಸಂಶೋಧನೆಯಲ್ಲಿಯೂ ಪೈಗಳ ಶುದ್ಧ ಐತಿಹಾಸಿಕ ದೃಷ್ಟಿಯನ್ನು ಕಾಣಬಹುದು. ಆಯಾ ಮತಧರ್ಮಗಳ ಜಿಜ್ಞಾಸೆಗೆ ತೊಡಗದೆ ಜೈನ, ಬೌದ್ಧ, ವೀರಶೈವ–ಇವುಗಳಿಗೆ ಸಂಬಂಧಿಸಿದಂತೆ ಕೆಲವು ಐತಿಹಾಸಿಕ ಅಂಶಗಳನ್ನೂ ವ್ಯಕ್ತಿಗಳ ಜೀವನ ಕಾಲಗಳನ್ನೂ ಕುರಿತು ಇವರು ಪ್ರೌಢವಾಗಿ ವಿಚಾರ ನಡೆಸಿದ್ದಾರೆ. ಗೊಮ್ಮಟೇಶ್ವರ, ಪಾರ್ಶ್ವನಾಥ ತೀರ್ಥಂಕರ, ತೀರ್ಥಂಕರರಲ್ಲಿ ಕೊನೆಯವನಾದ ಮಹಾವೀರಸ್ವಾಮಿ ಇವರ ವಿಷಯದಲ್ಲಿ ಸಂಶೋಧನೆ ನಡೆಸಿ ಆ ಬಗ್ಗೆ ಅತ್ಯಂತ ನಿರ್ದಿಷ್ಟವಾಗಿ ಕಾಲ, ತಿಥಿಗಳನ್ನು ಕೊಟ್ಟಿದ್ದಾರೆ, ಬೌದ್ಧ ಧರ್ಮದ ವಿಷಯದಲ್ಲಿ ಬುದ್ಧನ ಚರಿತ್ರೆ ಮತ್ತು ಅವನ ಬದುಕಿನ ಕೆಲವು ಪ್ರಮುಖ ಘಟನೆಗಳ ಕಾಲನಿರ್ಣಯ ಮಾಡಿದ್ದಾರೆ. ವೀರಶೈವಧರ್ಮದಲ್ಲಿ ಬಸವೇಶ್ವರನ ಉಲ್ಲೇಖವಿರುವ ಹತ್ತಾರು ಶಾಸನಗಳನ್ನೂ ವಿಶೇಷವಾಗಿ ಅರ್ಜುನವಾಡ ಶಿಲಾಶಾಸನವನ್ನು ಕೂಲಂಕಷವಾದ ವಿವೇಚನೆಗೆ ಒಳಪಡಿಸಿ ಬಸವೇಶ್ವರನ ವಂಶಾವಳಿ ಹಾಗೂ ಅವನ ಜೀವನದ ಮಹತ್ತ್ವದ ಘಟನೆಗಳ ಕಾಲವನ್ನು ನಿರ್ಣಯಿಸಿದ್ದಾರೆ. ಜೊತೆಗೆ ದೇವರದಾಸಿಮಯ್ಯ ಹಾಗೂ ರೇವಣಸಿದ್ಧ, ಮರುಳಸಿದ್ಧ, ಏಕೋರಾಮಿತಂದೆ, ಮಲ್ಲಿಕಾರ್ಜುನ ಪಂಡಿತಾರಾಧ್ಯರ ಕಾಲನಿರ್ಣಯ ಮಾಡಿದ್ದಾರೆ.

ಕನ್ನಡ ಸಾಹಿತ್ಯದ ಪ್ರಾಚೀನತೆಯನ್ನು ಕುರಿತು ಹೇಳುತ್ತ ಹಲ್ಮಿಡಿ ಶಾಸನದ ಕಾಲವನ್ನು ಪೈಗಳು ಬಹಳ ಹಿಂದಕ್ಕೆ ತೆಗೆದುಕೊಂಡು ಹೋಗುತ್ತಾರೆ. ಕನ್ನಡ ಸಾಹಿತ್ಯದ ಆರಂಭವನ್ನು ಪ್ರಸಕ್ತ ಶಕೆಯ ಆರಂಭಕ್ಕೆ ಕೊಂಡೊಯ್ಯುತ್ತಾರೆ. ಕನ್ನಡದ ಪ್ರಾಚೀನತೆಯನ್ನು ಕುರಿತು ಹೇಳುವಾಗ ಗ್ರೀಕ್ ಪ್ರಹಸನದಲ್ಲಿರುವ ವಾಕ್ಯಗಳನ್ನು ಕನ್ನಡವೆಂದು ಗುರುತಿಸಿ ಚರ್ಚೆ ಮಾಡಿದ್ದಾರೆ. ಕನ್ನಡದಲ್ಲಿ ಪ್ರಮುಖರಾದ ಪಂಪ, ರನ್ನ, ನಾಗಚಂದ್ರ, ನಾಗವರ್ಮ(ರು), ದುರ್ಗಸಿಂಹ, ಬ್ರಹ್ಮಶಿವ, ಹರಿಹರ, ರಾಘವಾಂಕ, ಕುಮಾರವ್ಯಾಸ, ಲಕ್ಷ್ಮೀಶ, ಶಿಶುಮಾಯಣ, ಸೋಮರಾಜ, ರತ್ನಾಕರವರ್ಣಿ, ಪಾರ್ತಿಸುಬ್ಬ ಮುದ್ದಣ ಮುಂತಾದ ಕವಿಗಳ ಜೀವನ, ಕಾಲ, ಸ್ಥಳ, ಕಾಲಾದಿ ವಿಷಯಗಳನ್ನು ಚರ್ಚಿಸಿದ್ದಾರೆ. ಕರ್ಣ ಮುಂತಾದ ಪಾತ್ರಗಳ ರಸವಿಮರ್ಶೆ ಮಾಡಿದ್ದಾರೆ. ಷಟ್ಪದಿ ಛಂದಸ್ಸನ್ನು ಕುರಿತು ಬರೆದಿದ್ದಾರೆ. ಹೊಸಗನ್ನಡ ಸಾಹಿತ್ಯದ ಪ್ರಕಾರಗಳಾದ ಸಣ್ಣಕತೆ, ಶಿಶು ಸಾಹಿತ್ಯ, ಕಾದಂಬರಿ, ಪ್ರಬಂಧಗಳ ಆದಿಗ್ರಂಥಗಳ ಹೆಸರನ್ನೂ ಕಾಲವನ್ನೂ ತಿಳಿಸಿದ್ದಾರೆ, ಕಿಟ್ಟೆಲ್, ಎಂ.ಎನ್. ಕಾಮತ್, ಪಂಜೆ, ಎನ್.ಎಸ್. ಕಿಲ್ಲೆ, ಬಿ.ಎಂ. ಶ್ರೀಕಂಠಯ್ಯ, ಎಂ.ಆರ್. ಶ್ರೀ. ಮುಂತಾದವರ ವ್ಯಕ್ತಿಚಿತ್ರಗಳನ್ನು ಕೊಡುತ್ತ ಈ ವ್ಯಕ್ತಿಗಳು ಕನ್ನಡ ಸಾಹಿತ್ಯಕ್ಕೆ ನೀಡಿದ ಕಾಣಿಕೆಯೇನು ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಕೊನೆಗೆ ತಮ್ಮ ಆತ್ಮಕಥನವನ್ನೂ ಗುರುತಿಸಿದ್ದಾರೆ. ಇಷ್ಟೇ ಅಲ್ಲದೆ ಅನೇಕ ಪುಸ್ತಕಗಳಿಗೆ ಮುನ್ನುಡಿಗಳನ್ನು ಬರೆದಿದ್ದಾರಲ್ಲದೆ ಪುಸ್ತಕ ವಿಮರ್ಶೆಯನ್ನೂ ಮಾಡಿದ್ದಾರೆ.

ಗೋವಿಂದ ಪೈ ಅವರ ವಿದ್ವತ್ತು, ಬಹು ಭಾಷಾಜ್ಞಾನ ಅಗಾಧವಾದುದು, ಕೌತುಕವನ್ನುಂಟು ಮಾಡುವಂಥದು. ಕನ್ನಡ, ಕೊಂಕಣಿ, ತುಳು, ಇಂಗ್ಲಿಷ್, ಮರಾಠಿ, ಮಲಯಾಳಂ, ಸಂಸ್ಕೃತ, ಪ್ರಾಕೃತ, ಪಾಳಿ, ಅರ್ಧಮಾಗಧಿ, ಹಿಂದಿ, ಉರ್ದು, ತಮಿಳು, ತೆಲುಗು, ಒರಿಯ, ಬಂಗಾಳಿ, ಜಪಾನಿ, ಗ್ರೀಕ್, ಲ್ಯಾಟಿನ್, ಪರ್ಷಿಯನ್ ಮುಂತಾದ ಭಾಷೆಗಳಲ್ಲಿ ಪರಿಣತಿಯನ್ನು ಪಡೆದು ಆಯಾ ವಿಷಯಗಳನ್ನು ಆಯಾ ಭಾಷೆಗಳಲ್ಲಿಯೇ ಅಧ್ಯಯನ ಮಾಡಿ ಸಂಶೋಧನೆ ನಡೆಸಿದ್ದಾರೆ. ಇವರು ಮಂಡಿಸಿದ ನಿರ್ಣಯಗಳನ್ನೆಲ್ಲ ಒಪ್ಪುವುದು ಕಷ್ಟವಾದರೂ ಇವರ ವಿವೇಚನಾ ಸಾಮರ್ಥ್ಯ, ಹರಿತ ತರ್ಕಸರಣಿ, ಇತಿಹಾಸಪ್ರಜ್ಞೆ, ವಸ್ತುನಿಷ್ಠೆ ಮುಂತಾದ ಗುಣಗಳನ್ನು ಇವರ ಸಂಶೋಧನೆಗಳಲ್ಲಿ ಕಾಣಬಹುದು.

ಪೈಗಳ ಸೃಷ್ಟ್ಯಾತ್ಮಕ ಸಾಹಿತ್ಯ ಅದ್ಭುತವಾಗಿದೆ. 1947ರ ಅನಂತರ ಇವರು ನಾಟಕ ರಚನೆಗೆ ಕೈಹಾಕಿ ಏಕಲವ್ಯನನ್ನು ಕುರಿತು ಹೆಬ್ಬೆರಳು ಎಂಬ ಪದ್ಯಾತ್ಮಕ ಏಕಾಂಕವನ್ನೂ 1942ರ ಚಳವಳಿಯನ್ನು ಆಧಾರವಾಗಿಟ್ಟುಕೊಂಡು ಚಿತ್ರಭಾನು ಎಂಬ ಗದ್ಯನಾಟಕವನ್ನೂ ಬರೆದಿದ್ದಾರೆ. ಇವುಗಳ ಜೊತೆಗೆ ಜಪಾನಿನ ಎಂಟು ನೋ ನಾಟಕಗಳನ್ನು ಕನ್ನಡಕ್ಕೆ ಅನುವಾದ ಮಾಡಿಕೊಟ್ಟಿರುವುದಲ್ಲದೆ, ವಿಶಿಷ್ಟ ನಾಟಕ ಪ್ರಕಾರದ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ಇವರಿಂದ ರಚಿತವಾದ ಏಕೈಕ ಸಾಮಾಜಿಕ ಏಕಾಂಕ ನಾಟಕ ತಾಯಿ ಎಂಬುದು.

ಇವೆರಡು ಪ್ರಕಾರಗಳಿಗಿಂತ ಪೈ ಅವರ ಕಾವ್ಯಸೃಷ್ಟಿ ಉತ್ತಮವೆನ್ನಲಾಗಿದೆ. 1900ರಿಂದ ಕೊನೆಗಾಲದ ವರೆಗೆ ಇವರು ರಚಿಸಿದ ಸಣ್ಣದೊಡ್ಡ ಕವನಗಳ ಸಂಖ್ಯೆ 180. ಇವರ ಗಿಳಿವಿಂಡು ಕವನ ಸಂಕಲನದಲ್ಲಿ 45 ಭಾವಗೀತಗಳೂ ನಂದಾದೀಪದಲ್ಲಿ 37 ಕವನಗಳೂ ನಾಡಿನ ವಿವಿಧ ಪತ್ರಿಕೆಗಳಲ್ಲಿ 95 ಕವನಗಳೂ ಅಚ್ಚಾಗಿವೆ. ಇವರ ಕಾವ್ಯಸೃಷ್ಟಿಯಲ್ಲಿ ಯೇಸುವಿನ ಅಂತ್ಯವನ್ನು ಚಿತ್ರಿಸುವ ಗೊಲ್ಗೊಥಾ ಮತ್ತು ಬುದ್ಧನ ಕಡೆಯ ದಿನಗಳನ್ನು ಚಿತ್ರಿಸುವ ವೈಶಾಖಿ ಎಂಬ ಎರಡು ನೀಳ್ಗವನಗಳು ಮುಖ್ಯವಾದವು. ಭಕ್ತಿ, ಪ್ರೇಮಭಾವನೆ, ಜೀವನ ವಿವೇಕ, ಸ್ನೇಹ ಸೌಹಾರ್ದ, ಸ್ವಾತಂತ್ರ್ಯ ಪ್ರೇಮ–ಇವು ಇವರ ಕಾವ್ಯಸೃಷ್ಟಿಯ ಸ್ಫೂರ್ತಿಗಳಾಗಿವೆ. ಅಸಂದಿಗ್ಧ ಭಾಷೆ, ಅಚ್ಚಗನ್ನಡ ಪದಪ್ರಯೋಗ, ಹೊಸ ಪದಸೃಷ್ಟಿ, ಭಾಷೆಯಲ್ಲಿನ ಪ್ರಾದೇಶಿಕ ಬನಿ–ಇವುಗಳಿಂದಾಗಿ ಪೈಗಳ ಸಾಹಿತ್ಯ ಗಮನಾರ್ಹವಾಗಿದೆ.

ಹಿಂದಿನ ಮದ್ರಾಸು ಸರ್ಕಾರ ಪೈಗಳಿಗೆ ರಾಷ್ಟ್ರಕವಿ ಪ್ರಶಸ್ತಿಯನ್ನಿತ್ತು (1949) ಗೌರವಿಸಿತು. ಪೈಗಳು 1951ರಲ್ಲಿ ಮುಂಬಯಿಯಲ್ಲಿ ಸೇರಿದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಪೈಗಳು ಉತ್ಕಟ ಕನ್ನಡಾಭಿಮಾನಿಗಳು. ತಾವು ಬೆಳೆದು ಬಾಳಿದ ಮಂಜೇಶ್ವರದ ನೆಲ ಕನ್ನಡನಾಡಿಗೆ ಸೇರಲಿಲ್ಲವಲ್ಲ ಎಂಬ ಕೊರಗು ಕನ್ನಡದ ಈ ನಿಷ್ಠಾವಂತ ಅಭಿಮಾನಿಯನ್ನು ಕೊನೆಯವರೆಗೂ ಬಾಧಿಸುತ್ತಿತ್ತು.

ಪೈಗಳ ಜೀವನ ಮತ್ತು ಸಾಹಿತ್ಯದ ವಿವರಗಳನ್ನು ತಿಳಿಯಲು ದೀವಿಗೆ (ಭಂಡಾರ್ಕರ್ಸ್ ಕಾಲೇಜು, ಕುಂದಾಪುರ), ಗೋವಿಂದ ಪೈ ವಾಙ್ಮಯ ದರ್ಶನ (ಮಹಾತ್ಮಗಾಂಧಿ ಮೆಮೋರಿಯಲ್ ಕಾಲೇಜು, ಉಡುಪಿ)– ಈ ಗ್ರಂಥಗಳು ನೆರವಾಗುತ್ತವೆ. (ಬಿ.ಎನ್.ಪಿ.)

**ಗೋವಿಂದರಾಜ :** ಕಾಲ 12ನೆಯ ಶತಮಾನ. ಮೂರನೆಯ ಪೃಥ್ವೀರಾಜ ಚೌಹಾಣನಿಂದ ದೆಹಲಿ ಪ್ರದೇಶದ ಆಡಳಿತಮುಖ್ಯನಾಗಿ ನೇಮಕವಾಗಿದ್ದವ. ಈತ ಸ್ವಾಮಿಭಕ್ತ, ಸ್ವಾತಂತ್ರ್ಯ ಪ್ರೇಮಿ, ಉಜ್ವಲ ರಾಷ್ಟ್ರಭಕ್ತ, ಅಸಾಧಾರಣ ಪರಾಕ್ರಮಿ. ಮಹಮ್ಮದ್ ಘೋರಿ ತನ್ನ ಮೊದಲನೆಯ ದಂಡಯಾತ್ರೆಯಲ್ಲಿ ಪಂಜಾಬ್ ಪ್ರದೇಶವನ್ನು ಗೆದ್ದು ಮುಲ್ತಾನ್ ನಗರದಲ್ಲಿ ತನ್ನ ಪ್ರತಿನಿಧಿಯಾಗಿ ಮಲ್ಲಿಕ್ ಜಿಯಾವುದ್ದೀನನನ್ನು ನೇಮಿಸಿದ್ದ. ಆ ಪ್ರದೇಶದಲ್ಲಿ ಹಿಂದೂಗಳಿಗಾಗುತ್ತಿದ್ದ ಕಿರುಕುಳವನ್ನು ಗಮನಿಸಿದ ಗೋವಿಂದರಾಜ ಪೃಥ್ವೀರಾಜನ ಬಳಿಗೆ ಹೋಗಿ ಮಹಮ್ಮದೀಯರ ಆಡಳಿತವನ್ನು ಕೊನೆಗಾಣಿಸಿ ಅಲ್ಲಿಯ ಜನ ನೆಮ್ಮದಿಯಿಂದ ಬಾಳುವಂತೆ ಏರ್ಪಾಡು ಮಾಡಬೇಕೆಂದು ವಿನಂತಿಸಿದ. ಪೃಥ್ವೀರಾಜನಿಗೂ ಮಹಮ್ಮದ್ ಘೋರಿಗೂ 1190–91ರಲ್ಲಿ ತರೈನ್ ಮೈದಾನದಲ್ಲಿ ಘೋರಯುದ್ಧ ಸಂಭವಿಸಿತು. ಗೋವಿಂದರಾಜ ಆನೆಯ ಮೇಲೆ ಕುಳಿತು ಹೋರಾಡುತ್ತ ನೇರವಾಗಿ ಸುಲ್ತಾನನನ್ನು ಎದುರಿಸಿದ. ದಿಗ್ಭ್ರಮೆಗೊಂಡ ಸುಲ್ತಾನ ಒಂದು ಭರ್ಜಿಯನ್ನು ತೆಗೆದುಕೊಂಡು ಗೋವಿಂದರಾಜನ ಮುಖಕ್ಕೆ ಎಸೆದ. ಗೋವಿಂದರಾಜನ ಎರಡು ಹಲ್ಲುಗಳು ಮುರಿದುಹೋದುವು. ಆದರೂ ಇವನು ಧೃತಿಗೆಡದೆ ಪ್ರತಿಯಾಗಿ ಪ್ರಯೋಗಿಸಿದ ಭರ್ಜಿಯಿಂದ ಸುಲ್ತಾನ ಅತೀವವಾಗಿ ಪೆಟ್ಟುತಿಂದು ಕುದುರೆಯ ಮೇಲಿಂದ ಬಿದ್ದು ತನ್ನ ಅಂಗರಕ್ಷಕನೊಬ್ಬನ ಸಹಾಯದಿಂದ ರಣರಂಗದಿಂದ ಪಲಾಯನ ಮಾಡಿದ. ಅವನ ಸೈನ್ಯ ಕಂಗೆಟ್ಟು ಓಡಿಹೋಯಿತು. ಗೋವಿಂದರಾಜನ ಧೈರ್ಯ ಪರಾಕ್ರಮಗಳಿಂದ ಪೃಥ್ವೀರಾಜ ಜಯಗಳಿಸಿದ. ಮರುವರ್ಷ ಮಹಮ್ಮದ್ ಘೋರಿಗೂ ಪೃಥ್ವೀರಾಜನಿಗೂ ಪುನಃ ತರೈನ್ ಮೈದಾನದಲ್ಲಿ ಘೋರಯುದ್ಧ ನಡೆಯಿತು. ಗೋವಿಂದರಾಜ ಸುಲ್ತಾನನ ಭಾರಿ ಸೈನ್ಯವನ್ನು ಎದುರಿಸಿ ಜೀವಭಯವನ್ನು ತೊರೆದು ವೀರಾವೇಶದಿಂದ ಹೋರಾಡಿ ರಣರಂಗದಲ್ಲಿ ಸಾವಿಗೆ ಈಡಾದ. ಇವನ ಮರಣದಿಂದ ಪೃಥ್ವೀರಾಜನ ಬಲ ಕುಗ್ಗಿತು. ಅಂತಿಮವಾಗಿ ಅವನು ಸೋತ. (ಜಿ.ಆರ್.ಆರ್.)

**ಗೋವಿಂದ ವೈದ್ಯ :** ಕಂಠೀರವ ನರಸರಾಜ ವಿಜಯವೆಂಬ ಕಾವ್ಯದ ಕರ್ತೃ. ಕಂಠೀರವ ನರಸರಾಜ ಒಡೆಯರ ಆಸ್ಥಾನಕವಿಯಾಗಿದ್ದ ಈತ 1648ರಲ್ಲಿ ಈ ಕೃತಿಯನ್ನು ರಚಿಸಿದ. ದಳವಾಯಿ ನಂಜರಾಜೇಂದ್ರ ತನ್ನಿಂದ ಕಾವ್ಯ ಬರೆಯಿಸಿದನೆಂದು ಕವಿ ಹೇಳಿಕೊಂಡಿದ್ದಾನೆ. ಕಂಠೀರವನರಸರಾಜ ವಿಜಯದ ಕಡೆಯಲ್ಲಿ ಬರುವ ಗದ್ಯಭಾಗದಲ್ಲಿ 'ರಂಗನಾಥಸ್ವಾಮಿಯ ಕೃಪೆಯಿಂದ ಶ್ರೀನಿವಾಸ ಪಂಡಿತರ ಮಗ ಗೋವಿಂದ ವೈದ್ಯನು ಕಂಠೀರವ ನರಸರಾಜ ವಿಜಯವನ್ನು ವಿರಚಿಸಿ, ಆಚಂದ್ರಾರ್ಕವಾಗಿ ಭೂಮಿಯೊಳಿರಲಿ ಎಂದು ಭಾರತಿನಂಜನ ಮುಖದಿಂದ ವಾಚಿಸಿ ರಾಜಾಸ್ಥಾನದಲ್ಲಿ ವಿಸ್ತಾರಪಡಿಸಿದನು' ಎಂದು ಉಕ್ತವಾಗಿದೆ. ಗೋವಿಂದ ವೈದ್ಯ ಬರೆದ ಕಾವ್ಯವನ್ನು ಭಾರತಿನಂಜನೆಂಬಾತ ವಾಚಿಸಿದನೆಂದು ಕೆಲವರೂ ಭಾರತಿನಂಜ ಎಂಬುದು ಗೋವಿಂದ ವೈದ್ಯನ ಮತ್ತೊಂದು ಹೆಸರೆಂದು ಕೆಲವರೂ ಊಹಿಸಿದ್ದಾರೆ.

ಕಂಠೀರವ ನರಸರಾಜ ವಿಜಯ 26 ಸಂಧಿಗಳನ್ನೂ 2,870 ಪದ್ಯಗಳನ್ನೂ ಒಳಗೊಂಡ ಸಾಂಗತ್ಯಕಾವ್ಯ. ಇದರಲ್ಲಿ ಕಥೆಯಿಲ್ಲ; ಕಂಠೀರವ ನರಸರಾಜ ಒಡೆಯರ ವಿಜಯಪರಂಪರೆಯ ಸವಿಸ್ತಾರ ವರ್ಣನೆಯಿದೆ. ಇದೊಂದು ಶುದ್ಧ ಐತಿಹಾಸಿಕ ಕಾವ್ಯವಾಗಿದ್ದು ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನ ಪಡೆದುಕೊಂಡಿದೆ. ನಂಜುಂಡನ ಕುಮಾರರಾಮ ಸಾಂಗತ್ಯ ಗೋವಿಂದ ವೈದ್ಯನ ಮೇಲೆ ಪ್ರಭಾವ ಬೀರಿದ್ದರೂ ಕಂಠೀರವ ನರಸರಾಜ ವಿಜಯವೊಂದು ಅಪೂರ್ವವಾದ ವೀರಕಾವ್ಯವಾಗಿ ಪರಿಣಮಿಸಿದೆ. ಕರ್ನಾಟಕದ ಬಗ್ಗೆ ಗೋವಿಂದ ವೈದ್ಯನಿಗಿರುವ ಅಭಿಮಾನ ಇದರಲ್ಲಿ ಎದ್ದು ಕಾಣುತ್ತಿದೆ. ಕನ್ನಡಿಗರ ಶೌರ್ಯ ಸಾಹಸಗಳನ್ನು ಈತ ಉಜ್ವಲವಾಗಿ ಚಿತ್ರಿಸಿ ತನ್ನ ಕೃತಿಗೆ ರಾಷ್ಟ್ರೀಯ ಕಾವ್ಯದ ಮಹತ್ತ್ವವನ್ನು ತಂದುಕೊಂಡಿದ್ದಾನೆ.

ಕಂಠೀರವ ನರಸರಾಜ ಒಡೆಯರನ್ನು ಕಲಿಯುಗದ ನರಸಿಂಹಾವತಾರವೆಂದೂ ಮುಸಲ್ಮಾನರನ್ನು ದನುಜರೆಂದೂ ಕಲ್ಪಿಸಿಕೊಂಡಿರುವ ಕವಿ ಆ ದೊರೆಯ ವಂಶ, ಜೀವನ, ಸಾಧನೆಗಳನ್ನು ಸವಿವರವಾಗಿ ನಿರೂಪಿಸಿದ್ದಾನೆ. ರಣದುಲ್ಲಖಾನನ ದಾಳಿ ಹಾಗೂ ಕಂಠೀರವ ನರಸರಾಜ ಒಡೆಯರು ಅವನನ್ನು ಸೋಲಿಸಿದ್ದು ಸ್ವಾರಸ್ಯಪೂರ್ಣ ವಾಗಿ ಚಿತ್ರಿತವಾಗಿವೆ. ತನ್ನ ಕಾಲದ ಜನಜೀವನವನ್ನೂ ರಾಜಕೀಯವನ್ನೂ ಕವಿ ವಿಸ್ತಾರವಾಗಿ ಹಿಡಿದಿಟ್ಟಿರುವುದರಿಂದ ಈ ಕಾವ್ಯ ಚರಿತ್ರೆಗೆ ಪೂರಕವಾಗುತ್ತದೆ. ಅಂದಿನ ಯುದ್ಧ ತಂತ್ರಗಳು, ಆಯುಧಗಳು, ಉಡುಗೆ ತೊಡುಗೆಗಳು, ತಿಂಡಿತಿನಿಸುಗಳು ಮುಂತಾದುವನ್ನೆಲ್ಲ ಈ ಕೃತಿಯಲ್ಲಿ ನೋಡಬಹುದು; ಅಂದಿನ ಕಲೆ ಸಂಸ್ಕೃತಿಗಳನ್ನರಿಯಬಹುದು. ಸಮಕಾಲೀನ ಜೀವನದ ಲೌಕಿಕ, ಧಾರ್ಮಿಕ ಮುಖಗಳೆರಡೂ ಇಲ್ಲಿ ಬಿಂಬಿತವಾಗಿವೆ. ಆಗ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣದ ಒಂದು ಸಮಗ್ರ ಚಿತ್ರವನ್ನು ಕವಿ ಕೊಟ್ಟಿದ್ದಾನೆ. ಇದು ವೀರಕಾವ್ಯವಾದರೂ, ಮದನಮೋಹಿನೀ ಪ್ರಸಂಗವೊಂದನ್ನು ಅನಗತ್ಯವಾಗಿ ಸೇರಿಸಿ ಶೃಂಗಾರಕ್ಕೂ ಕವಿ ಅವಕಾಶ ಕಲ್ಪಿಸಿದ್ದಾನೆ.

ಚಾರಿತ್ರಿಕ ಕೃತಿಯಾಗಿ ಪ್ರಾಮುಖ್ಯ ಪಡೆದುಕೊಂಡಿರುವುದು ಮಾತ್ರವಲ್ಲದೆ ಕಾವ್ಯವಾಗಿಯೂ ಕಂಠೀರವ ನರಸರಾಜ ವಿಜಯ ತಕ್ಕಮಟ್ಟಿಗೆ ಗಮನಾರ್ಹವಾಗಿದೆ. ವಿದ್ವಾಂಸರೊಬ್ಬರು ಗೋವಿಂದ ವೈದ್ಯನನ್ನು ಚಾರಣ ಕವಿಯೆಂದೂ ಅವನ ಕೃತಿಯನ್ನು ಚಾರಣ ಕಾವ್ಯವೆಂದೂ ಕರೆದಿದ್ದಾರೆ. ನಂಜುಂಡನ ಕಾವ್ಯವನ್ನು ಬಿಟ್ಟರೆ ಇಂಥ ಕೃತಿ ಕನ್ನಡದಲ್ಲಿ ಮತ್ತೊಂದಿಲ್ಲ ಎನ್ನಬಹುದು. (ಸಿ.ಪಿ.ಕೆ.)

**ಗೋವಿಂದ ಸಖಾರಾಮ್ ಸರ್‌ದೇಸಾಯಿ :** 1865–1959. ಭಾರತೀಯ ಇತಿಹಾಸಕಾರ. ಮಹಾರಾಷ್ಟ್ರದ ರತ್ನಗಿರಿಯಲ್ಲಿ 1865ರ ಮೇ 17ರಂದು ಜನಿಸಿದರು. ಪುಣೆ ಹಾಗೂ ಮುಂಬಯಿಯಲ್ಲಿ ಪದವಿ ಶಿಕ್ಷಣ ಪಡೆದು 1889ರಲ್ಲಿ ಬರೋಡ ಸಂಸ್ಥಾನದಲ್ಲಿ ವೃತ್ತಿಜೀವನ ಆರಂಭಿಸಿದರು. ಜೊತೆಗೆ ಮಹಾರಾಜ 3ನೆಯ ಸಯಾಜಿರಾವ್



ಗಾಯಕವಾಡರ ಖಾಸಗಿ ಗುಮಾಸ್ತರೂ ಆಗಿದ್ದರು. ಅನಂತರ ರಾಜಮನೆತನದ ಮಕ್ಕಳಿಗೆ ಖಾಸಗಿ ಬೋಧಕರಾಗಿ ನೇಮಿಸಲ್ಪಟ್ಟರು. ಇತಿಹಾಸದಲ್ಲಿ ಇವರಿಗೆ ಆಸಕ್ತಿ ಬೆಳೆಯಲು ಕಾರಣ ಮಕ್ಕಳಿಗೆ ಇವರು ಹೇಳುತ್ತಿದ್ದ ಮನೆಪಾಠ. ಮುಂದೆ ಮಹಾರಾಜರ ಪ್ರೋತ್ಸಾಹದಿಂದ ಹಾಗೂ ರಾಜಗ್ರಂಥಾಲಯದಲ್ಲಿ ಲಭ್ಯವಿದ್ದ ನೂರಾರು ಚಾರಿತ್ರಿಕ ಪುಸ್ತಕಗಳ ನೆರವಿನಿಂದ ಮರಾಠಿಯಲ್ಲಿ ಹಲವು ಕೃತಿಗಳನ್ನು ರಚಿಸಿದರು. ಮರಾಠಿ ರಿಯಾಸತ್ (8 ಸಂಪುಟ), ಮುಸಲ್ಮಾನಿ ರಿಯಾಸತ್ (3 ಸಂಪುಟ) ಹಾಗೂ ಬ್ರಿಟಿಷ್ ರಿಯಾಸತ್ (2 ಸಂಪುಟ) ಸಂಪುಟಗಳಲ್ಲಿ ಭಾರತದ 1000 ವರ್ಷಗಳ ಇತಿಹಾಸವನ್ನು ನಿರೂಪಿಸಿರುವುದು ಇವರ ಸಾಧನೆ. 1925ರಲ್ಲಿ ನಿವೃತ್ತರಾದ ಅನಂತರ ಮುಂಬಯಿ ಸರ್ಕಾರದ ಕೋರಿಕೆಯ ಮೇರೆಗೆ ರಾಜ್ಯ ದಾಖಲೆಗಳನ್ನು ಸಂಪಾದಿಸುವ ಕಾರ್ಯ ಕೈಗೊಂಡರು. ಮೋಡಿ, ಮರಾಠಿ, ಇಂಗ್ಲಿಷ್, ಪಾರ್ಸಿ ಹಾಗೂ ಗುಜರಾತಿ ಭಾಷೆಗಳಲ್ಲಿರುವ ಸು. 34,972 ದಾಖಲೆಗಳನ್ನು ಸಂಗ್ರಹಿಸಿ ಈ ಪೈಕಿ 8,650 ದಾಖಲೆಗಳನ್ನು ಪೇಶ್ವ ದಫ್ತಾರ್ ಎಂಬ ಶೀರ್ಷಿಕೆಯಲ್ಲಿ 45 ಸಂಪುಟಗಳಲ್ಲಿ ಪ್ರಕಟಿಸಿದರು. ಮತ್ತಷ್ಟು ದಾಖಲೆಗಳನ್ನು ಸರ್ಕಾರ್‌ರೊಂದಿಗೆ ಪೂನಾ ರೆಸಿಡೆನ್ಸಿ ಕರೆಸ್ಪಾಂಡೆನ್ಸ್ ಎಂಬ ಶೀರ್ಷಿಕೆಯಲ್ಲಿ ಸಂಪಾದಿಸಿದರು. 80ರ ಇಳಿವಯಸ್ಸಿನಲ್ಲಿ ಇವರು ಪ್ರಕಟಿಸಿದ ದಿ ನ್ಯೂ ಹಿಸ್ಟರಿ ಆಫ್ ಮರಾಠಾಸ್‌ನ 3 ಸಂಪುಟಗಳು ಮರಾಠ ಇತಿಹಾಸದ ಆಕರಗ್ರಂಥಗಳಾಗಿವೆ. ಇವರಿಗೆ ರಾವ್ ಬಹಾದ್ದೂರ್ (1937) ಹಾಗೂ ಇತಿಹಾಸ ಮಾರ್ತಾಂಡ್ (1946) ಎಂಬ ಬಿರುದುಗಳು ಪ್ರಾಪ್ತವಾಗಿದ್ದವು. ಪುಣೆ ವಿಶ್ವವಿದ್ಯಾಲಯ ಇವರಿಗೆ ಗೌರವ ಡಿ.ಲಿಟ್ ಪದವಿ ನೀಡಿ ಗೌರವಿಸಿತ್ತು (1951). ಭಾರತ ಸರ್ಕಾರ 1957ರಲ್ಲಿ ಪದ್ಮಭೂಷಣ ಪ್ರಶಸ್ತಿ ನೀಡಿ ಸನ್ಮಾನಿಸಿತ್ತು. ಇವರು 1959ರ ನವೆಂಬರ್ 29ರಂದು ನಿಧನರಾದರು. (ವಿ.ಎಸ್.)

**ಗೋವಿನ ಹಾಡು :** ಕನ್ನಡ ನಾಡಿನ ಆಬಾಲವೃದ್ಧರಿಗೆಲ್ಲ ಪರಿಚಿತವೂ ಪ್ರಿಯವೂ ಆಗಿರುವ ಕಥನಕವನ. ಇದರಲ್ಲಿ ಒಟ್ಟು 137 ಪದ್ಯಗಳಿದ್ದು, ಅವುಗಳಲ್ಲಿ 114 ಮಾತ್ರ ಮೂಲವೆಂದೂ ಉಳಿದುವು ಪ್ರಕ್ಷಿಪ್ತವೆಂದೂ ವಿದ್ವಾಂಸರ ಮತ. ಈ ಹಾಡನ್ನು ರಚಿಸಿದ ಕವಿಯಾಗಲೀ ಅವನ ಕಾಲವಾಗಲೀ ತಿಳಿದಿಲ್ಲ. ಹಾಡಿನ ಅಂತ್ಯದಲ್ಲಿ ಮದ್ದೂರಿನ ನರಸಿಂಹ ದೇವರ ಹೆಸರಿರುವುದರಿಂದ, ಇದನ್ನು ಕಟ್ಟಿದ ಕವಿ ಆ ಊರಿನವನೋ ಅಥವಾ ಆ ದೇವರ ಒಕ್ಕಲಿನವನೋ ಆಗಿರಬೇಕೆಂದೂ ಸು. 1800 ಕ್ಕಿಂತ ಹಿಂದೆ ಇದು ಹುಟ್ಟಿರಲಾರದೆಂದೂ ಊಹಿಸಲಾಗಿದೆ. ಈ ಹಾಡಿನ ಛಂದಸ್ಸು ಗೋವಿನ ಹಾಡಿನ ಮಟ್ಟು ಎಂದೇ ಪ್ರಚುರವಾಗಿದೆ. ಇದು ನಾಲ್ಕು ಸಾಲಿನ ಪದ್ಯಗಳಿಂದ ಕೂಡಿದ್ದು ಪ್ರತಿ ಪದ್ಯವನ್ನೂ ಹಾಡಿನ ಲಯಕ್ಕೆ ಹೊಂದಿದಂತೆ ಬ್ರಹ್ಮ, ವಿಷ್ಣು ಮೊದಲಾಗಿ ಅಂಶಗಣಗಳಾಗಿ ವಿಭಾಗಿಸಬಹುದು. ಗೋವಿನ ಹಾಡಿನ ಭಾಷೆ ಒಟ್ಟಿನಲ್ಲಿ ಸರಳವಾಗಿದ್ದರೂ ಅದನ್ನು ಜಾನಪದವೆಂದು ಕರೆಯಲಾಗುವುದಿಲ್ಲ; ಇಡೀ ಗೀತೆ ಏಕ ಕವಿ ಕೃತವೇ ಹೊರತು ಶುದ್ಧ ಜನಪದ ರಚನೆಯಲ್ಲ. ಆದರೂ ಜನಪದ ಅದನ್ನು ಎತ್ತಿಕೊಂಡಿದೆ, ಎದೆಗೊತ್ತಿಕೊಂಡಿದೆ. ಇದಕ್ಕೆ ಕಾರಣ ಹಾಡಿನ ಸ್ವಾರಸ್ಯ.

ಗೋವಿನ ಹಾಡಿನ ಕಥಾಂಶ ಇಷ್ಟು; ಅರುಣಾದ್ರಿಯನ್ನು ಬಳಸಿದ ಏಳು ಗಿರಿಗಳ ನಡುವೆ ಒಂದು ಮಹಾರಣ್ಯ. ಅದರ ಮಧ್ಯೆ ಕಾಳಿಂಗನೆಂಬ ಗೊಲ್ಲನ ದೊಡ್ಡಿ. ಅಲ್ಲಿ ಪುಣ್ಯಕೋಟಿಯೆಂಬ ಒಂದು ಹಸು. ಒಮ್ಮೆ ಹಸುಗಳೆಲ್ಲ ಬೆಟ್ಟದ ಕಿಬ್ಬಿಯಲ್ಲಿ ಮೇದು ದೊಡ್ಡಿಗೆ ಮರಳುವಾಗ ಏಳು ದಿವಸ ಆಹಾರವಿಲ್ಲದೆ ಬಳಲಿದ್ದ ಅರ್ಬುತನೆಂಬ ಹುಲಿ ಗವಿಯಿಂದ ಹೊರಬಿದ್ದು ಗೋವುಗಳ ಮಂದೆಯ ಮೇಲೆರಗುತ್ತದೆ. ಹಸುಗಳೆಲ್ಲ ಚೆಲ್ಲಾಪಿಲ್ಲಿಯಾಗುತ್ತವೆ. ನಿರಾಶೆಗೊಂಡ ಹುಲಿಗೆ, ತನ್ನ ಕಂದನನ್ನು ನೆನೆಯುತ್ತ ಬರುತ್ತಿರುವ ಪುಣ್ಯಕೋಟಿ ಕಾಣಿಸುತ್ತದೆ. ಅದನ್ನು ಹುಲಿ ಅಡ್ಡಗಟ್ಟಿ ತಿನ್ನಬಯಸುತ್ತದೆ. ಪುಣ್ಯಕೋಟಿ ತನ್ನ ಕಂದನಿಗೆ ಹಾಲು ಕುಡಿಸಿ ಮತ್ತೆ ಹುಲಿಯ ಬಳಿಗೆ ಬಂದು, ತನ್ನನ್ನು ತಿಂದು ಹಸಿವನ್ನು ತೀರಿಸಿಕೊಳ್ಳುವಂತೆ ಹೇಳುತ್ತದೆ. ಹುಲಿ ಪುಣ್ಯಕೋಟಿಯ ಪ್ರಾಮಾಣಿಕತೆಗೆ ಮೆಚ್ಚಿ, ತನ್ನನ್ನು ಹಳಿದುಕೊಳ್ಳುತ್ತ ಆಕಾಶಕ್ಕೆ ನೆಗೆದು ಪ್ರಾಣ ಬಿಡುತ್ತದೆ. ಶಿವ ಅದಕ್ಕೆ ಮೋಕ್ಷ ಕರುಣಿಸುತ್ತಾನೆ. ಪುಣ್ಯಕೋಟಿ ಹರ್ಷದಿಂದ ದೊಡ್ಡಿಗೆ ಮರಳುತ್ತದೆ; ಅದರ ಕೋರಿಕೆಯಂತೆ ಗೊಲ್ಲಗೌಡ ಹಬ್ಬವನ್ನಾಚರಿಸಿ, ಪ್ರತಿವರ್ಷವೂ ಸಂಕ್ರಾಂತಿಯಂದು ಹಬ್ಬ ಮಾಡುವುದಾಗಿ ಮಾತು ಕೊಡುತ್ತಾನೆ.

ಹಾಡಿನಲ್ಲಿ ಬರುವ ಅರಣ್ಯದ ವರ್ಣನೆ, ಗೊಲ್ಲನ ವರ್ಣನೆ, ಅವನು ಹಸುಗಳನ್ನು ಹೆಸರಿಸಿ ಕರೆಯುವ ರೀತಿ, ಹುಲಿಯ ಆರ್ಭಟದ ಚಿತ್ರ, ಹಸುವಿಗೂ ಅದಕ್ಕೂ ನಡೆದ ಸಂಭಾಷಣೆ – ಇವೆಲ್ಲ ಚೆನ್ನಾಗಿವೆ. ಪುಣ್ಯಕೋಟಿಗೂ ಅದರ ಕರುವಿಗೂ ನಡೆಯುವ ಮಾತುಕಥೆಗಳಲ್ಲಿ ಕರುಣ ಮಡುಗಟ್ಟಿದೆ. ಪುಣ್ಯಕೋಟಿಯ ಸತ್ಯಸಂಧತೆಯ ಚಿತ್ರಣದಷ್ಟೇ ಹುಲಿಯ ಪರಿವರ್ತನೆಯ ಚಿತ್ರಣವೂ ಹೃದಯಸ್ಪರ್ಶಿಯಾಗಿದೆ. ಸತ್ಯವೇ ನಮ್ಮ ತಾಯಿತಂದೆ, ಸತ್ಯವೇ ನಮ್ಮ ಸರ್ವ ಬಳಗವು, ಸತ್ಯವಾಕ್ಯಕೆ ತಪ್ಪಿದಾರೆ ಅಚ್ಚುತಾ ಹರಿ ಮೆಚ್ಚನು– ಎಂಬುದೇ ಈ ಗೋವಿನ ಹಾಡಿನ ಸಂದೇಶ. ಇಲ್ಲಿ ಹಸು ಸತ್ಯ ಅಹಿಂಸೆಗಳಿಗೂ ಹುಲಿ ಹಿಂಸೆ ಕ್ರೌರ್ಯಗಳಿಗೂ ಸಂಕೇತವಾಗಿದೆ; ಹುಲಿಯ ಸಾವು ಹಿಂಸೆಯ ಸಾವು. ಸತ್ಯ ಅಹಿಂಸೆಗಳ ಪ್ರಚಂಡ ಶಕ್ತಿ ಹೇಗೆ ಹೃದಯ ಪರಿವರ್ತನೆಯನ್ನೆಸಗಬಲ್ಲುದೆಂಬುದನ್ನು ಈ ಗೀತೆ ತೋರಿಸುತ್ತದೆ. ಆದ್ದರಿಂದ, ಕಥೆಯ ಸವಿ ಮಾತ್ರವಲ್ಲ, ದರ್ಶನದ ಆಳವೂ ಇದರಲ್ಲಿದೆ.


ಈ ಗೋವಿನ ಕಥೆ ಪ್ರಾಚೀನವಾದುದೆಂದೂ ಸಂಸ್ಕೃತದ ಇತಿಹಾಸ ಸಮುಚ್ಚಯ ವೆಂಬ ಪುರಾಣಕಥಾಕೋಶದಲ್ಲಿ ಇದು ಬಹುಲೋಪಾಖ್ಯಾನವೆಂಬುದಾಗಿ ಕಂಡು ಬರುತ್ತದೆಂದೂ ಹೇಳಲಾಗಿದೆ. ಅಲ್ಲಿ ಹಸುವಿನ ಹೆಸರು ಬಹುಲಾ; ಹುಲಿಯ ಹೆಸರು ಕಾಮರೂಪಿ (ಅಸತ್‌ಶಕ್ತಿಗೆ ಉಚಿತವಾದ ಹೆಸರು). ಈ ಕಥೆಯನ್ನು ಮೊದಲು ಭೀಷ್ಮ ಯುಧಿಷ್ಠಿರನಿಗೆ ಹೇಳಿದನಂತೆ. ಕಥೆ ಹಳೆಯದಾದರೂ ಕನ್ನಡದಲ್ಲಿ ಅದರ ಕಲೆ ಹೊಸತಾಗಿದೆ. ಈ ಕಥೆಯ ರೂಪಾಂತರಗಳು ಕನ್ನಡ ನಾಡಿನ ಬೇರೆಬೇರೆ ಭಾಗಗಳಲ್ಲಿ ಪ್ರಚಲಿತವಾಗಿರುವಂತೆ ತೋರುತ್ತದೆ. ಉತ್ತರ ಕರ್ನಾಟಕದಲ್ಲಿ ಆಕಳ ಹಾಡು ಎಂಬ ಶುದ್ಧ ಜನಪದ ಕಥನಗೀತೆಯೊಂದು ಸಿಕ್ಕಿದೆ. ಅಲ್ಲಿ ಹಸುವಿನ ಹೆಸರು ಬವಲಿ (ಬಹುಲಾ ಎಂಬುದರ ಅಪಭ್ರಂಶ). ಆದರೆ ಆಕಳ ಹಾಡು ಸತ್ಯನಿಷ್ಠೆಗಿಂತ ಹೆಚ್ಚಾಗಿ ಮಾತೃವಾತ್ಸಲ್ಯವನ್ನು ಎತ್ತಿ ತೋರುವಂತೆ ಇದೆ. ಅದರ ಮುಕ್ತಾಯವೂ ಗೋವಿನ ಹಾಡಿನಲ್ಲಿರುವಷ್ಟು ಪರಿಣಾಮಕಾರಿಯಾಗಿಲ್ಲ.

ಭಾರತೀಯ ಸಂಸ್ಕೃತಿಯ ಒಂದು ಉಜ್ವಲವಾದ ಮುಖ ಕನ್ನಡ ಕವಿಯೊಬ್ಬನ ಕೈಯಲ್ಲಿ ರಸಸ್ಯಂದಿ ಕವಿತೆಯಾಗಿರುವುದಕ್ಕೆ – ನಿದರ್ಶನ ಈ ಗೋವಿನ ಹಾಡು.

(ಸಿ.ಪಿ.ಕೆ.)

**ಗೋ, ವಿನ್‌ಸೆಂಟ್ ವ್ಯಾನ್ (ವ್ಯಾನ್‌ಗೋ) :** 1853–90. ಖ್ಯಾತ ಡಚ್ ಚಿತ್ರ ಕಲಾವಿದ. ತಂದೆ ಹಾಲೆಂಡಿನ ಹಳ್ಳಿಯೊಂದರಲ್ಲಿ ಒಬ್ಬ ಪಾದ್ರಿಯಾಗಿದ್ದನಾಗಿ ಉತ್ತಮ ಧಾರ್ಮಿಕ ಮನೋಭಾವವುಳ್ಳ ತಂದೆತಾಯಿಗಳ ಪೋಷಣೆಯಲ್ಲಿ ಬೆಳೆದ. ದೊಡ್ಡವನಾದ ಮೇಲೆ ಕಲಾಕೃತಿಗಳ ಮಾರಾಟದಲ್ಲಿ ಅಂತಾರಾಷ್ಟ್ರೀಯ ಖ್ಯಾತಿಗಳಿಸಿದ್ದ ಗೌಪಿಲ್ ಅಂಡ್ ಕಂಪನಿ ಎಂಬ ಸಂಸ್ಥೆಯಲ್ಲಿ ಒಂದು ಸಣ್ಣ ಉದ್ಯೋಗ ಗಳಿಸಿಕೊಂಡ. ಆಗ ಇವನ ಪ್ರಾಯ 16. ಕಲಾಕೃತಿಗಳ ಮಾರಾಟದ ಸಂಬಂಧದಲ್ಲಿ ಇಂಗ್ಲೆಂಡಿಗೆ ಹೋದ (1873). ಅಲ್ಲಿ ಶಾಲಾ ಉಪಾಧ್ಯಾಯಿನಿಯೊಬ್ಬಳನ್ನು ಮೋಹಿಸಿದ. ಪ್ರೇಮ ವಿಫಲಗೊಂಡಾಗ ಜುಗುಪ್ಸೆಗೊಂಡು ಗೌಪಿಲ್ ಕಂಪನಿಯ ಹುದ್ದೆಗೆ ರಾಜೀನಾಮೆ ಕೊಟ್ಟ. ಅನಂತರ ಇಂಗ್ಲೆಂಡಿನ ರ್‍ಯಾಮ್ಸ್‌ಗೇಟ್ ಮತ್ತು ಐಲ್‌ವರ್ತ್ ಎಂಬಲ್ಲಿ ಶಾಲಾ ಉಪಾಧ್ಯಾಯನಾಗಿ ಕೆಲಸ ಮಾಡಿದ (1876). ಈ ವೃತ್ತಿಯಲ್ಲೂ ಉತ್ಸಾಹ ಕಂಡುಬರಲಿಲ್ಲವಾಗಿ ಅದನ್ನು ತೊರೆದು ಹಾಲೆಂಡಿಗೆ ಹಿಂತಿರುಗಿ ಆಮ್‌ಸ್ಟರ್‌ಡ್ಯಾಮ್‌ನ ಥಿಯಲಾಜಿಕಲ್ ಕಾಲೇಜಿನಲ್ಲಿ ಆಧ್ಯಾತ್ಮ ವಿಷಯವನ್ನು ಕುರಿತು ಅಧ್ಯಯನ ನಡೆಸಿದ. ಬೆಲ್ಜಿಯನ್ ಗಣಿಗಾರರಿಗೆ ಮತ ಪ್ರಚಾರ ಮಾಡುವ ಕೆಲಸವನ್ನು ಈತನಿಗೆ ವಹಿಸಲಾಯಿತು. ಆಧ್ಯಾತ್ಮಿಕ ವ್ಯಾಸಂಗ ಮತ್ತು ಮತಪ್ರಚಾರದ ವಿಷಯದಲ್ಲೂ ವ್ಯಾನ್‌ಗೋ ಜಯಶಾಲಿಯಾಗಲಿಲ್ಲ. ಗಣಿ ಕಾರ್ಮಿಕರ ಹಿತಚಿಂತನೆ ಮಾಡಹೋಗಿ ಗಣಿಮಾಲೀಕರ ಕೋಪಕ್ಕೆ ಪಾತ್ರನಾಗಿ 1879 ರಲ್ಲಿ ಕೆಲಸ ಕಳೆದುಕೊಂಡ. ಜೀವನ ದುಸ್ತರವಾಯಿತು. ಉದ್ದಕ್ಕೂ ಅಪಜಯದ ಸರಣಿಯನ್ನೇ ಕಂಡ ಈತನಿಗೆ ಆಧ್ಯಾತ್ಮಿಕ ಚಿಂತನೆಯಿಂದ ಯಾವ ದಾರಿಯೂ ಕಾಣದಾಯಿತು. ಅನೇಕ ತಿಂಗಳುಗಳ ಒಳತೋಟಿಯ ಅನಂತರ ಚಿತ್ರಕಲಾವಿದನಾಗಲು ನಿರ್ಧರಿಸಿದ (1880). ಚಿತ್ರಕಲೆಯಲ್ಲಿ ಮೊದಲಿಂದ ಬೆಳೆಸಿಕೊಂಡ ಆಸ್ಥೆ ಈಗ ಜೀವನೋಪಾಯವನ್ನು ಒದಗಿಸಿತು.

ವ್ಯಾನ್‌ಗೋ 1881 ರಲ್ಲಿ ಬ್ರಸಲ್ಸ್‌ಗೆ ತೆರಳಿದ. ಅಲ್ಲಿದ್ದ ಸಮಯದಲ್ಲಿ ನಾನಾ ರೀತಿಯ ಚಿತ್ರಕೃತಿಗಳನ್ನು ರಚಿಸಿದ. ಇವನ ತಮ್ಮ ಥೀಯೋ ಎಂಬುವನ ನೆರವು ದೊರೆಯಿತಾಗಿ ಚಿತ್ರಕಲೆಗೆ ಸಂಬಂಧಿಸಿದಂತೆ ಯಥಾದೃಷ್ಟಿ ರೂಪಣದಲ್ಲೂ (ಪರ್ಸ್‌ಪೆಕ್ಟಿವ್) ಅಂಗರಚನಾಶಾಸ್ತ್ರದಲ್ಲೂ (ಅನಾಟಮಿ) ಹೆಚ್ಚಿನ ಶಿಕ್ಷಣ ಪಡೆದುಕೊಂಡ. ಕೆಲಕಾಲ ಛಾಯಾ ಚಿತ್ರಕಲೆಯಲ್ಲಿಯೂ ವ್ಯಾಸಂಗ ಮಾಡಿದ. ಸೋದರ ಸಂಬಂಧಿಯೊಬ್ಬಳಲ್ಲಿ ವ್ಯಾಮೋಹಗೊಂಡು ವಿಫಲನಾದ. ಇದರಿಂದಾಗಿ ಮತ್ತೆ ಜುಗುಪ್ಸೆಗೊಂಡು ಬ್ರಸಲ್ಸನ್ನು ತೊರೆದು ದಿ ಹೇಗ್ ಪಟ್ಟಣಕ್ಕೆ ಬಂದು ನೆಲೆಸಿದ. ಅಲ್ಲಿ ಕ್ರಿಶ್ಚನ್ ಎಂಬ ವೇಶ್ಯೆಯ ಸಂಗ ಮಾಡಿ ಆಕೆಯನ್ನು ಮದುವೆಯಾಗಲು ಬಹು ವಿಧದಲ್ಲಿ ಪ್ರಯತ್ನಪಟ್ಟ. ಕೊನೆಗೊಮ್ಮೆ ಆಕೆಯ ಶೀಲದ ಬಗ್ಗೆ ಶಂಕೆಗೊಂಡು ಅವಳನ್ನು ತ್ಯಜಿಸಿದ. ಈತನ ಕಲಾಕೃತಿ ಸಾರೋ (1882) ಮತ್ತು ಸೀನ್ ಪೋಸಿಂಗ್‌ಗಳಲ್ಲಿ (1883) ಈಕೆಯ ಭಾವಭಂಗಿಗಳು ಕಾಣಸಿಗುತ್ತವೆ. ಅವ್ಯವಸ್ಥಿತ ಕಾಮುಕ ಜೀವನದಿಂದಾಗಿ ಈತನ ದೇಹಸ್ಥಿತಿ ಕ್ರಮೇಣ ಕ್ಷೀಣಿಸಿತು. ಔಷಧೋಪ ಚಾರಗಳು ನಡೆದು ಚೇತರಿಸಿಕೊಳ್ಳುವ ಸಮಯದಲ್ಲೇ ಮತ್ತೊಬ್ಬ ಮಹಿಳೆಯ ಪ್ರೇಮಪಾಶ ಈತನ ಕೊರಳಿಗೆ ಬಿತ್ತು. ಆದರೆ ಆಕೆಯನ್ನು ಈತ ಪರಿಗ್ರಹಿಸಲಿಲ್ಲ. ಇಷ್ಟಾದರೂ ಈತನ ಚಿತ್ರಕಲಾ ಹವ್ಯಾಸ ಅವ್ಯಾಹತವಾಗಿ ಮುಂದುವರಿದಿತ್ತು. ಕಡಲತೀರ ಪ್ರದೇಶದ ರಮ್ಯಚಿತ್ರಗಳನ್ನೂ ಬೆಸ್ತರಜೀವನವನ್ನೂ ನಿರೂಪಿಸುವ ಚಿತ್ರಗಳನ್ನು ತನ್ನದೇ ಆದ ಶೈಲಿಯಲ್ಲಿ ಮೂಡಿಸಿದ. ಮರೀನ್ ಡ್ರೈವ್ ಎಂಬಲ್ಲಿಗೆ ಹೋಗಿ ಅಲ್ಲಿಯ ರೈತಾಪಿ ಜನರ ಜೀವನವನ್ನು ಚಿತ್ರಿಸಿದ. ತನ್ನ ತಂದೆಯ ಸ್ಥಳ ನ್ಯೂನೆನ್‌ಗೆ ಹೋಗಿ ಅಲ್ಲಿನ ಬೇಟೆಯ ದೃಶ್ಯಗಳನ್ನೂ ರೈತರ ಬಡಜೀವನವನ್ನೂ ಕುರಿತಂಥ ಚಿತ್ರಗಳನ್ನು ರಚಿಸಿದ. ದಿ ಪೊಟೆಟೋ ಈಟರ್ಸ್ (1885) ಎಂಬ ಚಿತ್ರಣ ಈತನ ಮೇರುಕೃತಿ. ಈ ಚಿತ್ರದಲ್ಲಿ ಬಳಸಿರುವ ವರ್ಣಗಳು ಮತ್ತು ವಿನ್ಯಾಸಗಳನ್ನು ಕುರಿತು ತನ್ನ ತಮ್ಮನಿಗೆ ಬರೆದ ಪತ್ರದಲ್ಲಿ ವ್ಯಾನ್‌ಗೋ ತನ್ನ ಭಾವನೆಯೇನೆಂಬುದನ್ನು ವ್ಯಕ್ತಪಡಿಸಿದ್ದಾನೆ. ಚಿತ್ರದಲ್ಲಿ ರೂಪುಗೊಂಡಿರುವ ಅಲ್ಲಿನ ಬಂಧುಗಳ ಸರಳಸ್ವಭಾವ, ಅವರು ಆಲೂಗಡ್ಡೆಯನ್ನು ಭೂಮಿಯಿಂದ ಹೊರತೆಗೆದು ಸೇವಿಸುವ ರೀತಿ, ಅವರ ಕಾಯಕ– ಇವೆಲ್ಲವನ್ನೂ ಯಥಾರ್ಥವಾಗಿ ಮೂಡಿಸಿರುವುದರ ಬಗ್ಗೆ ಹೇಳಿಕೊಳ್ಳುತ್ತ ತನ್ನ ಪ್ರಯತ್ನ ಸಫಲವಾಗುತ್ತಿದೆ ಎಂಬುದಾಗಿ ಆ ಪತ್ರದಲ್ಲಿ ತಿಳಿಸಿದ್ದಾನೆ. ಇವನ ಮತ್ತೊಂದು ಹೆಸರಾಂತ ಕೃತಿ ಬೂಟ್ಸ್. 1880 ಮತ್ತು 1886ರ ನಡುವೆ ಈತ ಪ್ಯಾರಿಸಿಗೆ ತೆರಳಿದ. ಇವನ ತಮ್ಮ ಥೀಯೋ ಕೂಡ ಒಬ್ಬ ಕಲಾಸಕ್ತ. ಈತ ತನ್ನ ಅಣ್ಣನಿಗೆ ಚಿತ್ರಕಲಾಭ್ಯಾಸವನ್ನು ಪ್ಯಾರಿಸಿನಲ್ಲಿ ಮುಂದುವರಿಸಲು (1866–88) ನೆರವು ನೀಡಿದ. ಈ ಸಮಯದಲ್ಲಿ ಕಾರ್ಮನ್ ಎಂಬ ಚಿತ್ರ ಕಲಾವಿದನ ಮಾರ್ಗದರ್ಶನ ವ್ಯಾನ್‌ಗೋಗೆ ದೊರಕಿತು. ಅಲ್ಲಿದ್ದಾಗ ಗೋಗ್ಯಾನ್, ಟುಲೂಜ಼್– ಲೋಟ್ರೆಕ್ ಮುಂತಾದ ಫ್ರೆಂಚ್ ಚಿತ್ರಕಲಾವಿದರ ಸಂಪರ್ಕವೂ ಖ್ಯಾತ ಕಲಾವಸ್ತು ಸಂಗ್ರಾಹಕನಾದ ಟಾಂಗೈ ಎಂಬ ಕಲಾಸಕ್ತನ ಪರಿಚಯವೂ ಈತನಿಗೆ ದೊರೆಯಿತು. ಪರಿಣಾಮ ವಿಧಾನದ (ಇಂಪ್ರೆಷನಿಸ್ಟಿಕ್) ಚಿತ್ರಕಾರರ ಕಲಾಕೃತಿಗಳು ಇವನ ಮನಸ್ಸಿನ ಮೇಲೆ ಹೆಚ್ಚಿನ ಪ್ರಭಾವ ಬೀರಿದವು. ವಸ್ತು ಮತ್ತು ಶೈಲಿಗಳ ವಿಚಾರದಲ್ಲಿ ಈತ ಹೊಸ ಸಂಗತಿಗಳನ್ನು ಕಂಡುಕೊಂಡ. ಈತ ಚಿತ್ರಿಸಿರುವ ಭಾವಚಿತ್ರಗಳಲ್ಲಿ (1887 – 88) ಟಾಂಗೈನ ಭಾವಚಿತ್ರವೂ ಒಂದು. ಹೊಸಹೊಸ ವಿಚಾರಗಳನ್ನು ಕುರಿತು ಆಲೋಚಿಸುವ ಸಲುವಾಗಿ ಲೋಟ್ರೆಕ್‌ನ ಆದೇಶದಂತೆ ಈತ ಪ್ಯಾರಿಸಿನಿಂದ ಆರ್‌ಲೆಗೆ ಬಂದ. ಅಲ್ಲಿನ ವಿಕಸಿತ ಪುಷ್ಪಭರಿತ ವೃಕ್ಷಗಳು, ನಗುಮುಖದ ತರುಣಿಯರು, ಇವೆಲ್ಲ ಇವನ ಚಿತ್ರಕಲಾ ಪ್ರಜ್ಞೆಗೆ ಹೆಚ್ಚಿನ ಪೋಷಕಾಂಶಗಳಾದವು. ಆ ಸ್ಥಳದಲ್ಲಿ ಇವನು ಚಿತ್ರಿಸಿದ ಕೃತಿಗಳಲ್ಲಿ ಸನ್‌ಫ್ಲವರ್ (1888), ದಿ ಚೇರ್ ಅಂಡ್ ದಿ ಪೈಪ್



ಒಂದು ಸ್ವಚಿತ್ರಣ

(1888) ಸೇರಿವೆ. ಇವನ ಆಗಿನ ರೇಖಾವಿನ್ಯಾಸದಲ್ಲಿ ನಿಶ್ಚಿತ ಜ್ಞಾನ ಮತ್ತು ದೃಢತೆಗಳಿದ್ದವು. ವರ್ಣ ಮಿಶ್ರಣದಲ್ಲಿ ನವೀನ ಕ್ರಮವನ್ನನುಸರಿಸಿದುದರಿಂದ ಚಿತ್ರಗಳಲ್ಲಿ ಸೊಬಗೂ ಸೊಗಡೂ ಎದ್ದು ಕಾಣುತ್ತಿದ್ದವು. ಬಿಸಿಲು, ಗಾಳಿಗಳನ್ನು ಲೆಕ್ಕಿಸದೆ ವ್ಯಾನ್‌ಗೋ ತನ್ನ ಚಿತ್ರ ಕಲಾಭ್ಯಾಸವನ್ನು ಮುಂದುವರಿಸಿದ. ಸುಮಾರು ಹದಿನೈದು ತಿಂಗಳ ಅವಧಿಯಲ್ಲಿ ಈತ ಇನ್ನೂರು ಚಿತ್ರಕೃತಿಗಳನ್ನು ತಯಾರಿಸಿದ. ತನ್ನ ಚಿತ್ರಕೃತಿಗಳನ್ನೂ ಅಲ್ಲಿನ ಚಿತ್ರ ಕಲಾವಂತರನ್ನೂ ಪರಿಚಯ ಮಾಡಿಕೊಡುವ ಸಲುವಾಗಿ ಗೋಗ್ಯಾನನ್ನು ಈತ ಅಲ್ಲಿಗೆ ಆಹ್ವಾನಿಸಿದ. ಆತ ಬಂದ ಕೆಲವೇ ದಿವಸಗಳಲ್ಲಿ ಇಬ್ಬರಲ್ಲೂ ವೈಮನಸ್ಯ ತಲೆದೋರಿತು. ಆಗ ನಡೆದಂಥ ಘಟನೆ ವಿಚಿತ್ರವಾದ್ದು. ಒಮ್ಮೆ ತರುಣಿಯೊಬ್ಬಳು ವ್ಯಾನ್‌ಗೋನನ್ನು ಚಹ ಅಂಗಡಿಯೊಂದರಲ್ಲಿ ಭೇಟಿ ಮಾಡಿ ತನ್ನ ಪ್ರೀತಿಯನ್ನು ವ್ಯಕ್ತಪಡಿಸಿದಳು. ತನಗೇನಾದರೂ ಬಹುಮಾನವನ್ನು ಕೊಡಲೇಬೇಕೆಂದು ಆಕೆ ಈತನನ್ನು ಆಗಾಗ ಒತ್ತಾಯ ಮಾಡುತ್ತಿದ್ದು, ಏನೂ ಇಲ್ಲದಿದ್ದರೆ ಕಿವಿಯನ್ನಾದರೂ ಕೊಡಬೇಕೆಂದು ಕುಚೋದ್ಯ ಮಾಡಿದಳು. ಕ್ರಿಸ್‌ಮಸ್ ಹಬ್ಬಕ್ಕೆ ಮುಂಚೆ ತನಗೆ ಬಂದ ಭಾಂಗಿಯೊಂದನ್ನು ಬಿಚ್ಚಿ ನೋಡಿದಾಗ ಅದರಲ್ಲಿ ವ್ಯಾನ್‌ಗೋನ ಕಿವಿ ಇದ್ದುದನ್ನು ಕಂಡು ಆಕೆ ಗಾಬರಿಗೊಂಡಳು. ಅತ್ತ ಕಿವಿ ಕತ್ತರಿಸಿಕೊಂಡ ವ್ಯಾನ್‌ಗೋನನ್ನು ಆಸ್ಪತ್ರೆಗೆ ಸೇರಿಸಲಾಯಿತು. ಆಸ್ಪತ್ರೆಯಿಂದ ಹಿಂದಿರುಗಿದ ಅನಂತರ ಈತ ತನ್ನ ಎರಡೂ ಬಗೆಯ ಸ್ವಚಿತ್ರಣವನ್ನು ರೂಪಿಸಿದ. ಕತ್ತರಿಸಿಹೋದ ಕಿವಿಯ ಜಾಗದಲ್ಲಿ ಕಟ್ಟುಕಟ್ಟಿ, ತಲೆಯ ಮೇಲೆ ಟೋಪಿ, ಬಾಯಲ್ಲಿ ಸಿಗರೇಟ್ ಇಟ್ಟಂತೆ ರೂಪಿಸಿರುವ ಚಿತ್ರ ಅವುಗಳಲ್ಲೊಂದು.



ಚರ್ಚೊಂದರ ಚಿತ್ರಣ : ವ್ಯಾನ್‌ಗೋ ಆತ್ಮಹತ್ಯೆಮಾಡಿಕೊಳ್ಳುವ ಮುನ್ನ ರಚಿತವಾದುದು (1890)

ಬುದ್ಧಿಭ್ರಮಣೆ ಮತ್ತು ಮನೋವಿಕಾರಗಳಿಂದ ನರಳುತ್ತಿದ್ದ ವ್ಯಾನ್‌ಗೋನನ್ನು ಇವನ ಇಷ್ಟದಂತೆ ಸೇಂಟ್ ರೆಮಿಯಲ್ಲಿನ ಮಾನಸಿಕರೋಗಿಗಳ ಆಸ್ಪತ್ರೆಗೆ ಸೇರಿಸಲಾಯಿತು (1889). ಅಲ್ಲಿದ್ದಾಗ ಈತ ರವೀನ್ (1889) ಎಂಬ ಚಿತ್ರಕೃತಿಯನ್ನು ಸೃಷ್ಟಿಸಿದ. ಅಲ್ಲಿ ಈತ ರೂಪಿಸಿದ ಚಿತ್ರಗಳು ಪರಿಣಾಮ ವಿಧಾನೋತ್ತರ (ಪೋಸ್ಟ್ ಇಂಪ್ರೆಷನಿಸ್ಟಿಕ್) ಚಿತ್ರಕಲಾ ಶೈಲಿಗೆ ಸೇರಿದವೆನ್ನಲಾಗಿದೆ. ಈ ಕೃತಿಗಳಲ್ಲಿ ಇವನದೇ ಆದ ಶೈಲಿಗಳು ಕಾಣಬರುತ್ತವೆ. 1890ರಲ್ಲಿ ರವೀನ್ ನಿಂದ ಈತ ಪ್ಯಾರಿಸಿಗೆ ಮರಳಿದ. ಅಲ್ಲಿ ಇವನಿಗೆ ಗೋಗ್ಯಾನನ ಮಿತ್ರನಾದ ವೈದ್ಯನೊಬ್ಬನ ಆಶ್ರಯ ಲಭಿಸಿತು. ಆ ವೈದ್ಯನ ಭಾವಚಿತ್ರವನ್ನೂ (ಡಾ. ಪಾಲ್ ಗ್ಯಾಚೆಟ್ – 1890) ಈತ ಬಿಡಿಸಿದ. ಆ ವರ್ಷ ಒರಿಯರ್ ಎಂಬಾತ ಈತನ ಕಲಾಕೃತಿಗಳನ್ನು ಕುರಿತ ಒಂದು ಲೇಖನವನ್ನು ಪ್ರಕಟಿಸಿದ. ಇದರಿಂದಾಗಿ ಈತನಿಗೆ ಪ್ರಚಾರ ಸಿಕ್ಕಿದಂತಾಯಿತು. ಮನೋವಿಕಲ್ಪದಿಂದಾಗಿ 1890 ರ ಜುಲೈ 27ರಂದು ತಾನೇ ಗುಂಡಿಟ್ಟುಕೊಂಡು ಆತ್ಮಹತ್ಯೆ ಮಾಡಿಕೊಂಡ. ಪ್ರಾಣಹತ್ಯೆ ಮಾಡಿಕೊಂಡದ್ದು ತಾನೇ ರಚಿಸಿದ ಕೃತಿಯೊಂದರ (ಕಾರ್ನ್‌ಫೀಲ್ಡ್ಸ್ ವಿತ್ ಫ್ಲೈಟ್ ಆಫ್ ಬರ್ಡ್ಸ್) ಎದುರಿನಲ್ಲಿ. ಇವನ ಸಾವಿನ ವಾರ್ತೆಯನ್ನು ಕೇಳಿದ ಇವನ ತಮ್ಮ ಬಹಳ ದುಃಖಪಟ್ಟು ಅಣ್ಣ ಸತ್ತ ಆರು ತಿಂಗಳುಗಳಲ್ಲಿಯೇ ತಾನೂ ಅಸುನೀಗಿದ.

ನೂತನ ಚಿತ್ರಕಲಾ ಸಂಪ್ರದಾಯದಲ್ಲಿ ಪ್ರಸಿದ್ಧನಾದ ವ್ಯಾನ್‌ಗೋ ತನ್ನದೇ ಆದ ಸ್ವಂತಿಕೆಯನ್ನು ಪ್ರದರ್ಶಿಸಿದ. ಸಾಂಪ್ರದಾಯಿಕ ಪರಿಣಾಮ ವಿಧಾನದ ಚಿತ್ರಕಲಾವಿದರು ಬಳಸುವ ವರ್ಣಗಳನ್ನು, ರೂಪಿಸುವ ಕ್ರಮವನ್ನು ಇವನು ಸ್ವಾಗತಿಸಿದನಾದರೂ ಚಿತ್ರ ಬಿಡಿಸುವುದರಲ್ಲಿ ನವೀನ ವಿನ್ಯಾಸವನ್ನೂ ಕಲಾವಂತಿಕೆಯನ್ನೂ ಬಳಸಿದ. ಅಭಿವ್ಯಕ್ತಿವಾದದ ಪ್ರವರ್ತಕರಲ್ಲಿ ಈತ ಒಬ್ಬ ಎನ್ನಲಾಗಿದೆ. 20ನೆಯ ಶತಮಾನದ ಅನೇಕ ಚಿತ್ರ ಕಲಾವಿದರ ಮೇಲೆ ಈತ ಬೀರಿದ ಪ್ರಭಾವ ವಿಶೇಷ ರೀತಿಯದು. ಇವನ ಜೀವನವನ್ನು ಚಿತ್ರಿಸುವ ಹಲವಾರು ಸಂಪಾದಿತ, ಸಂಗ್ರಹಿತ ಗ್ರಂಥಗಳಲ್ಲಿ ಕಂಪ್ಲೀಟ್ ಲೆಟರ್ಸ್ (1958), ಪರ್ಸನಲ್ ರಿಕಲೆಕ್ಷನ್ಸ್ (ಅನು: 1913) ಎಂಬವೂ ಇವನ ಜೀವನವನ್ನಾಧರಿಸಿ ರಚಿತವಾದ ಕಾದಂಬರಿ ಲಸ್ಟ್ ಫಾರ್ ಲೈಫ್ ಎಂಬುದೂ ಮುಖ್ಯವಾದವು. (ಎ.ಎನ್.ಎಸ್‌ಯು.)

**ಗೋಷ್ಠಿಗಾನ :** ಹಲವರು ಒಟ್ಟುಗೂಡಿ ಒಮ್ಮೆಗೇ ಹಾಡಿ ನುಡಿಸುವುದಕ್ಕೆ ಈ ಹೆಸರಿದೆ. ಇಂಥ ಸಮುದಾಯದಲ್ಲಿ ಪ್ರತಿಯೊಬ್ಬರಿಗೂ ಪೂರ್ವ ನಿಶ್ಚಿತ ಧಾತು (ಗೇಯಾಂಶ) ಮತ್ತು ಮಾತುಗಳು ತಿಳಿದಿದ್ದು ಅವನ್ನು ನಿಯತಕಾಲದಲ್ಲಿ ಸ್ವತಂತ್ರವಾಗಿ ಹಾಡಿ ನುಡಿಸುತ್ತಾರೆ. ಪಾಶ್ಚಾತ್ಯರ ಆರ್ಕೆಸ್ಟ್ರ ಎಂಬ ಮಾತು ನಮ್ಮಲ್ಲಿ ಇದಕ್ಕೆ ಪರ್ಯಾಯವಾಗಿ ಇಂದು ಬಳಕೆಗೆ ಬಂದಿದೆ. ಕರ್ಣಾಟಕ ಸಂಗೀತ ಅಥವಾ ಹಿಂದೂಸ್ತಾನೀ ಸಂಗೀತಗಳಲ್ಲಿನ ಕಚೇರಿಗಳನ್ನು ಗೋಷ್ಠಿಗಾಯನವೆನ್ನಲಾಗದು. ಏಕೆಂದರೆ ಇವುಗಳಲ್ಲಿನ ಪ್ರಧಾನ ಗಾಯಕ ಅಥವಾ ವಾದಕ ಹಾಡಿ ನುಡಿಸುವುದನ್ನೇ ಪಕ್ಕವಾದ್ಯಗಳವರು ಅನುಸರಿಸಿ ಅನುಕರಿಸುತ್ತಾರೆ. ಸಂಗೀತದ ಧಾತುವಾದರೂ ಇಲ್ಲಿ ಪೂರ್ವನಿಶ್ಚಿತವಲ್ಲ. ಗಾಯಕ ವಾದಕರುಗಳ ಸ್ವತಂತ್ರ ಕಲ್ಪನಾಶಕ್ತಿಯೇ ಇದರ ಜೀವನಾಡಿ. ಅಲ್ಲದೆ ಗೋಷ್ಠಿಗಾನದ ಮೂಲತತ್ತ್ವವಾದ ಸಹಕಾಲಿಕ ಸ್ವತಂತ್ರ ಗಾನವಾದನಗಳು ಇಲ್ಲಿಲ್ಲ.

**ಇತಿಹಾಸ :** ಗೋಷ್ಠಿಗಾನ ಎಂಬುದು ಆಧುನಿಕ ಪ್ರಯೋಗಸಿದ್ಧಿಯನ್ನು ಪಡೆದಿದ್ದರೂ ಅಶುದ್ಧವೇ ಎನ್ನಬೇಕು. ಗೋಷ್ಠಿ ಮತ್ತು ಗಾನ ಎಂಬ ಶಬ್ದಗಳಿಂದ ಆದ ಶಬ್ದವಿದು. ಇವೆರಡು ಮಾತುಗಳಿಗೂ ಭಾರತೀಯ ಸಂಗೀತಶಾಸ್ತ್ರದಲ್ಲಿ ನಿರ್ದಿಷ್ಟವೂ ಸ್ವತಂತ್ರವೂ ಆದ ಬೇರೆ ಬೇರೆ ಅರ್ಥಗಳೇ ಇವೆ. ಗೋಷ್ಠಿ ಎಂಬುದು ಗಾಯನವಿಲ್ಲದೆ ವಾದ್ಯಗಳು ಮಾತ್ರ ಸೇರಿ ಉತ್ಪತ್ತಿಮಾಡಿದ ಸಂಗೀತಕ್ಕೆ ಶಾಸ್ತ್ರವಿಟ್ಟ ಪಾರಿಭಾಷಿಕ ಸಂಜ್ಞೆ. ಇದನ್ನೇ ಪಂಪಾದಿ ಕನ್ನಡ ಕವಿಗಳು ಪ್ರಾಚೀನ ಕಾಲದಿಂದಲೂ ಗೊಟ್ಟಿ ಎಂಬ ತದ್ಭವ ರೂಪದಲ್ಲಿ ಹೇಳುತ್ತ ಬಂದಿದ್ದಾರೆ. ಇದಕ್ಕೆ ಶುಷ್ಕವೆಂಬ ಮತ್ತೊಂದು ಹೆಸರೂ ಉಂಟು. ಗಾನವೆಂದರೆ ಹಾಡುವುದು ಎಂದು ಅರ್ಥ. ಹಾಡು ಬಾಜನೆಗಳೆರಡೂ ಸೇರಿದ ಕೂಟವನ್ನು ಬೃಂದವೆಂಬ ಹೆಸರಿನಿಂದ ಶಾಸ್ತ್ರ ವ್ಯವಹರಿಸುತ್ತದೆ. ಒಬ್ಬರೇ ಹಾಡುವುದಕ್ಕೆ ಏಕಲವೆಂದೂ ಇಬ್ಬರು ಕೂಡಿ ಹಾಡುವ ದ್ವಂದ್ವಗಾಯನಕ್ಕೆ ಯಮಳವೆಂದೂ ಮೂವರು ಅಥವಾ ಹೆಚ್ಚು ಮಂದಿ ಕೂಡಿ ಹಾಡುವುದಕ್ಕೆ ಬೃಂದವೆಂದೂ ಶಾಸ್ತ್ರೀಯ ಪರಿಭಾಷೆ. ಬೃಂದವನ್ನು ಕನಿಷ್ಠ, ಮಧ್ಯಮ, ಉತ್ತಮ ಮತ್ತು ಕೋಲಾಹಲವೆಂದು ನಾಲ್ಕು ಬಗೆಯಾಗಿ ಸಂಗೀತರತ್ನಾಕರದಲ್ಲಿ ಶಾರ್ಙ್ಗದೇವ ವಿಂಗಡಿಸುತ್ತಾನೆ. ಇವುಗಳಲ್ಲಿ ಉತ್ತಮ ಗಾಯಕ ವೃಂದದಲ್ಲಿ ನಾಲ್ವರು ಗಾಯನರೂ ಎಂಟು ಅನುಗಾಯನರೂ (ಇವರಿಗೆ ಸಮಗಾಯನರೆಂದು ಹೆಸರು: ಗಾಯನ=ಹಾಡುಗಾರ ಎಂದು ಶಾಸ್ತ್ರಾರ್ಥ) ನಾಲ್ವರು ಕೊಳಲು ನುಡಿಸುವವರೂ ನಾಲ್ವರು ಮಾರ್ದಂಗಿಕರೂ ಇರುತ್ತಿದ್ದರು. ಮಧ್ಯಮ ಗಾಯನ ಬೃಂದದಲ್ಲಿ ಇದರ ಅರ್ಧದಷ್ಟು ಸಂಖ್ಯೆಯ ಗಾಯನ, ಸಮಗಾಯನ ಮುಂತಾದವರೂ ಕನಿಷ್ಠ ಗಾಯನ ಬೃಂದದಲ್ಲಿ ಒಬ್ಬ ಮುಖ್ಯ ಗಾಯನನೂ ಮೂವರು ಗಾಯನಿಯರೂ (ಹಾಡುಗಾರ್ತಿ) ಇಬ್ಬರು ವಾಂಶಿಕರೂ (ಕೊಳಲುಗಾರ) ಇಬ್ಬರು ಮಾರ್ದಂಗಿಕರೂ ಇರುತ್ತಿದ್ದರು. ಹಾಗೆಯೇ ಉತ್ತಮ ಗಾಯನೀ ಬೃಂದದಲ್ಲಿ ಇಬ್ಬರು ಮುಖ್ಯ ಗಾಯನಿಯರೂ ಹತ್ತು ಸಮಗಾಯನಿಯರೂ ಇಬ್ಬರು ವಾಂಶಿಕರೂ ಇಬ್ಬರು ಮದ್ದಳೆಗಾರರೂ ಇರುತ್ತಿದ್ದರು. ಮಧ್ಯಮ ಗಾಯನೀ ಬೃಂದದಲ್ಲಿ ಒಬ್ಬ ಮುಖ್ಯ ಗಾಯನಿಯೂ ನಾಲ್ವರು ಸಮಗಾಯನಿಯರೂ ನಾಲ್ವರು ವಾಂಶಿಕರೂ ಒಬ್ಬ ಮಾರ್ದಲಿಕನೂ ಕನಿಷ್ಠ ಗಾಯನೀ ಬೃಂದದಲ್ಲಿ ಇದಕ್ಕಿಂತ ಕಡಿಮೆ ಸಂಖ್ಯೆಯವರೂ ಇರುತ್ತಿದ್ದರು. ಉತ್ತಮ ಬೃಂದದಲ್ಲಿರುವುದಕ್ಕಿಂತ ಹೆಚ್ಚಿನ ಸಂಖ್ಯೆಯ ಹಾಡುವವರು ನುಡಿಸುವವರು ಭಾಗವಹಿಸಿದರೆ ಅದನ್ನು ಕೋಲಾಹಲವೆಂದು ಕರೆಯುವರು. ಇದೆಲ್ಲವನ್ನೂ ರನ್ನ, ಅಭಿನವಪಂಪ, ಅಗ್ಗಳ, ಕಮಲಭವ ಮೊದಲಾದ ಕನ್ನಡ ಕವಿಗಳು ಹತ್ತನೆಯ ಶತಮಾನದಿಂದ ಹೇಳುತ್ತ ಬಂದಿರುವುದರಿಂದ, ಕನ್ನಡನಾಡಿನಲ್ಲಿ ಬೃಂದ ಸಂಗೀತ ಈ ವೇಳೆಗಾಗಲೇ ಪ್ರೌಢಾವಸ್ಥೆಯಲ್ಲಿ ಉತ್ಕರ್ಷವನ್ನು ಪಡೆದಿತ್ತೆಂದು ತಿಳಿಯಬಹುದು.

ವಾದ್ಯಗಳು ಮಾತ್ರವಿರುವ ಬೃಂದವಿಶೇಷಕ್ಕೆ ಕುತಪವೆಂದು ಸಂಜ್ಞೆ. ಶಾರ್ಙ್ಗದೇವ ಸಂಗೀತರತ್ನಾಕರದ ಪ್ರಕೀರ್ಣಕಾಧ್ಯಾಯದಲ್ಲಿ ಕುತಪವನ್ನು ತತ, ಅವನದ್ಧ ಮತ್ತು

ನಾಟ್ಯವೆಂದು ಮೂರು ಬಗೆಯಾಗಿ ವರ್ಣಿಸಿದ್ದಾನೆ. ತತಕುತಪದಲ್ಲಿ ಘೋಷವತೀ, ಚಿತ್ರಾ, ವಿಪಂಚೀ, ಪರಿವಾದಿನೀ, ವಲ್ಲಕೀ, ಕುಬ್ಜಿಕಾ, ಜ್ಯೇಷ್ಠಾ, ನಕುಲೋಷ್ಠೀ, ಕಿನ್ನರೀ, ಜಯಾ, ಕೂರ್ಮಿಕಾ, ಪಿನಾಕೀ, ಹಸ್ತಿಕಾ, ಶತತಂತ್ರೀ, ಔದುಂಬರೀ, ಷಟ್ಕರ್ಣ, ಪೌಣ, ರಾವಣಹಸ್ತಾ, ಸಾರಂಗೀ, ಆಲಾಪಿನೀ ಮೊದಲಾದ ತಂತೀವಾದ್ಯಗಳು ಇರುತ್ತಿದ್ದವು. ಇವನ್ನು ಉಗುರಿನಿಂದ ಮಿಡಿದು ಅಥವಾ ಕಮಾನಿನಿಂದ ಎಳೆದು ನುಡಿಸಲಾಗುತ್ತಿತ್ತು. ಇವುಗಳಲ್ಲಿ ಕೆಲವಕ್ಕೆ ಮೆಟ್ಟುಗಳೂ ಇರುತ್ತಿದ್ದವು. ಇವೇ ಅಲ್ಲದೆ ತತಕುತಪದಲ್ಲಿ ವಾಂಶಿಕಾ, ಪಾವಿಕಾ, ಪಾವಕಾ, ಕಹಳೆ, ಶಂಖ, ಮಾರಿ, ಕೊಂಬು ಮೊದಲಾದ ಸುಷಿರ (ಗಾಳಿ) ವಾದ್ಯಗಳೂ ಕಂಚಿನ ತಾಳದಂಥ ಗಟ್ಟಿ (ಘನ) ವಾದ್ಯಗಳೂ ಇರುತ್ತಿದ್ದವು. ಅವನದ್ಧ ಕುತಪದಲ್ಲಿ ಮೃದಂಗ, ಪಣವ, ದರ್ದುರ, ಢಕ್ಕಾ, ಮಂಡಿಢಕ್ಕಾ, ಕಕ್ಕುಲಿ, ಪಟಹ, ಕರಟ, ಢವಸ, ಘಡಸ, ಹುಡುಕ್ಕಾ, ಡಮರು, ರುಂಜಾ, ಕುಡುಕ್ಕಾ, ಕುಡುವಾ, ನಿಃಸಾಣ, ತ್ರಿವಲೀ, ಭೇರೀ, ತುಂಬಕೀ, ಬೊಂಬಡೀ ಮೊದಲಾದ ಚರ್ಮವಾದ್ಯಗಳೂ ಪಿಟ್ಟ, ಪವೆ, ಕಮ್ರಾ, ಝಲ್ಲರೀ, ಬಾಣ, ಸೆಲ್ಲುಕಾ, ಜಾಗಟೆ, ಕಂಚಿನತಾಲ, ಘಂಟೆ, ಕಿರಿಕಿಟ್ಟ ಮೊದಲಾದ ಘನವಾದ್ಯಗಳೂ ಭಾಗವಹಿಸುತ್ತಿದ್ದುವು.

ನಾಟ್ಯಕ್ಕೆ ಪ್ರಯೋಜಕವಾದ ವಾದ್ಯಸಮೂಹವನ್ನು ಶಾಸ್ತ್ರಪರಿಭಾಷೆಯಲ್ಲಿ ಸಂಪ್ರದಾಯವೆಂದೂ ಆಡುಮಾತಿನಲ್ಲಿ ಮೇಳ ಅಥವಾ ಹಿಮ್ಮೇಳವೆಂದೂ ಕರೆಯಲಾಗಿದೆ. ಇದರ ವಿವರಗಳನ್ನು ಸಂಗೀತರತ್ನಾಕರಾದಿ ಶಾಸ್ತ್ರಗ್ರಂಥಗಳು ಕೊಡುತ್ತವೆ. ಇದಲ್ಲದೆ ನಾಟ್ಯ ಕುತಪದಲ್ಲಿ ವರಾಟ, ಲಾಟ, ಕರ್ಣಾಟ, ಗೌಡ, ಗುರ್ಜರ, ಕೊಂಕಣ, ಮಹಾರಾಷ್ಟ್ರ, ಆಂಧ್ರ, ಹಮ್ಮೀರ, ಚೋಳ, ಮಲಯ, ಮಾಲವ, ಅಂಗ, ವಂಗ, ಕಲಿಂಗ ಇತ್ಯಾದಿ ದೇಶಗಳ ಅಭಿನಯ ಕೋವಿದರೂ ಅಂಗಹಾರ ಕರಣಾದಿಗಳ ಪ್ರಯೋಗತಜ್ಞರೂ ಲಾಸ್ಯ ತಾಂಡವ ವಿಶಾರದರೂ ಚಿತ್ರ ವಿಚಿತ್ರ ಸ್ಥಾನಕ (ನಿಲುವು) ಪ್ರೌಢಗಳೂ ವಿಷಮಪ್ರಯೋಗ, ನಿಷ್ಣಾತರೂ ಉತ್ತಮ ಮಧ್ಯಮ ಪಾತ್ರಗಳೂ ಇರುತ್ತಿದ್ದರು.

ಕುತಪಗಳು ಅನುಸರಿಸಬೇಕಾದ ಪ್ರಯೋಗತಂತ್ರವನ್ನು ಭರತಮುನಿ ನಾಟ್ಯಶಾಸ್ತ್ರದ ನಾಲ್ಕನೆಯ ಅಧ್ಯಾಯದಲ್ಲಿ ಪೂರ್ವರಂಗ ವಿಧಿವರ್ಣನ ಸಂದರ್ಭದಲ್ಲಿ ಕೊಡುತ್ತಾನೆ. ನಾಟ್ಯ ಸಂದರ್ಭದಲ್ಲಿ ಕರಣಗಳನ್ನು ಪ್ರಯೋಗಿಸುವಾಗ, ನೃತ್ಯ, ಹಸ್ತಾಭಿನಯ ಮತ್ತು ಗೀತಗಳನ್ನು ಒಟ್ಟಿಗೆ ಸಂಯೋಜಿಸುವಾಗ ವಿಲಂಬ ಲಯದಲ್ಲಿ ತತ್ತ್ವ ಎಂಬ ತಂತ್ರವನ್ನೂ ಮಧ್ಯಲಯದಲ್ಲಿ ಅನುಗತವನ್ನೂ ದ್ರುತಲಯದಲ್ಲಿ ಓಘವನ್ನೂ ಪ್ರಯೋಗಿಸಬೇಕು. ಬೃಂದಗಳಿಗೂ ಕುತಪಗಳಿಗೂ ಶಾರ್ಙ್ಗದೇವ ಹೇಳಿರುವ ಲಕ್ಷಣಗಳು ಸಾರ್ವಕಾಲಿಕಾನ್ವಯವನ್ನೂ ಸಮಗ್ರಸಮೀಚೀನ ಸೂಕ್ಷ್ಮದರ್ಶನವನ್ನೂ ಒಳಗೊಂಡು ಇಂದಿನ ವಾದ್ಯಮೇಳಗಳೂ ಬೃಂದಗಳೂ ಅನುಸಂಧಾನಮಾಡಿ ಅನುಷ್ಠಾನದಲ್ಲಿಟ್ಟುಕೊಳ್ಳಲು ಬಹುಯೋಗ್ಯವಾಗಿದೆ. ಮುಖ್ಯಾನುವೃತ್ತಿಯೆಂದರೆ ನಾಯಕನಾದ ಗಾಯನ ಅಥವಾ ವಾದಕನನ್ನು ನೆರಳಿನಂತೆ ಅನುಸರಿಸುವುದು; ಮುಖ್ಯರಸದ ಪೋಷಣೆಯಲ್ಲಿ ಸಾರ್ಥಕತೆಯನ್ನು ಸಾಧಿಸಲೆಳಸುವುದು. ಮಿಲನವೆಂದರೆ ಒಟ್ಟಿಗೆ ಕೂಡಿ ಹಾಡಿ ನುಡಿಸುವಾಗ ಭಿನ್ನತೆಯೇ ಗೋಚರಿಸದಂತೆ ಒಂದರಲ್ಲಿ ಇನ್ನೊಂದು ಸೇರಿಬಿಡುವುದು. ಕಾಲಲೀನಾನುವರ್ತನವೆಂದರೆ ತಾಳದ ಆವರ್ತ, ಪಾದಭಾಗ ಕ್ರಿಯೆ ಮುಂತಾದವುಗಳಲ್ಲಿ ಕರಗಿಹೋದಂತೆ ಒಂದಾಗುವುದು. ಮಿಥಸ್ಸುಟಿತ ನಿರ್ವಾಹವೆಂದರೆ ಜೋಡಣೆಯಲ್ಲೂ ಮುನ್ನಡೆಯಲ್ಲೂ ಎಡೆಬಿಡದಂತೆ ಅಖಂಡವಾಗಿರುವುದು. ತ್ರಿಸ್ಥಾನವ್ಯಾಪ್ತಿಶಕ್ತಿಯೆಂದರೆ ಮಂದ್ರ ಮಧ್ಯತಾರಗಳೆಂಬ ಮೂರು ಸ್ಥಾನಗಳಲ್ಲಿಯೂ ಒಂದೇ ರೀತಿಯ ಘನತೆ, ಸ್ನಿಗ್ಧತೆ, ಸಾಂದ್ರತೆ, ಪ್ರಸನ್ನತೆ ಮೊದಲಾದ ಸ್ವರಗುಣಗಳನ್ನು ಪಡೆದಿರುವುದು. ಶಬ್ದಸಾದೃಶ್ಯವೆಂದರೆ ವಿವಿಧ ವಾದ್ಯಗಳೂ ಕಂಠಗಳೂ ಗೀತದಲ್ಲಿ ತೊಡಗಿರುವಾಗ, ಒಂದೇ ಬಗೆಯ ಶಬ್ದಗಳು ಒಂದೇ ಕಾಲದಲ್ಲಿ ಬರುವಂತೆ ಏರ್ಪಡಿಸುವುದು. ಇಲ್ಲದಿದ್ದರೆ ವಿವಿಧ ರೀತಿಯ ಶಬ್ದಗಳು ತಮ್ಮಷ್ಟಕ್ಕೆ ಮಾತ್ರ ರಂಜನಾಸ್ಪದಗಳಾಗಿದ್ದರೂ ಬೇರೆ ವಾದ್ಯಗಳ ಶಬ್ದಗಳೊಡನೆ ಬೆರೆತಾಗ ವಿರುದ್ಧ ಧರ್ಮದಿಂದ ಮುಖ್ಯರಸಾನುಭೂತಿಗಳು ಶ್ರವಣ ಲಾಲಿತ್ಯಕ್ಕೂ ಹಾನಿಯನ್ನುಂಟುಮಾಡುವುವು.

**ಪಾಶ್ಚಾತ್ಯ ಸಂಗೀತದಲ್ಲಿ ವಾದ್ಯಗೋಷ್ಠಿಗಳು :** ಹೀಗೆ ಗಾನಗೋಷ್ಠಿಗಳೂ ವಾದ್ಯಗೋಷ್ಠಿಗಳೂ ಬಹು ಪ್ರಾಚೀನಕಾಲದಿಂದಲೂ ಇದ್ದೇ ಇವೆ. ಸಾಮಗಾನದಲ್ಲಿ ಬರುವ ಗ್ರಾಮೇಗೇಯಗಾನಗಳೂ ಉತ್ಸವಾದಿಗಳಲ್ಲಿ ಮತ್ತು ಧಾರ್ಮಿಕ ಸಂದರ್ಭಗಳಲ್ಲಿ ಸಾಮೂಹಿಕ ಭಜನಪದ್ಧತಿಯೂ ಜನಪದ ಗಾನನೃತ್ಯಗಳಲ್ಲಿ ಗೋಷ್ಠಿಗಳೂ ಚಿರಪರಿಚಿತವೇ ಆಗಿವೆ. ಆದರೆ ಭಾರತದ ಶಾಸ್ತ್ರೀಯ ಸಂಗೀತದಲ್ಲಿರುವ ವಾದ್ಯಮೇಳಗಳನ್ನು ಆರ್ಕೆಸ್ಟ್ರ ಎಂಬ ಪಾಶ್ಚಾತ್ಯ ವಾದ್ಯಮೇಳದೊಡನೆ ಸಮೀಕರಿಸಲಾಗದು. ಏಕೆಂದರೆ ಉದ್ದೇಶ, ವ್ಯಾಪ್ತಿ, ತಂತ್ರ, ಸಾಧನೆ–ಇವುಗಳೆಲ್ಲ ಈ ಎರಡರಲ್ಲಿ ಸಂಪೂರ್ಣ ವೈದೃಶ್ಯವೇ ಸಿದ್ಧವಾಗುತ್ತದೆ. ಪಾಶ್ಚಾತ್ಯ ಸಂಗೀತದಲ್ಲಿ ಸಹಕಾಲಿಕ ಅನೇಕ ಸ್ವರಶ್ರೇಣಿ ಅದರ ಮೂಲ ತತ್ತ್ವಗಳಲ್ಲಿ ಒಂದಾದಾಗ, ಅದರ ಪರಿಣಾಮವಾಗಿ ಸ್ವರಸ್ಥಾನಗಳು ಸಮ ದೂರದಲ್ಲಿರುವಂತೆ ಪಲ್ಲಟಿತವಾದಾಗ, ಏಕಾಧಾರ ಸ್ವರಪದ್ಧತಿ ಗೌಣವಾದಾಗ ಅದರ ಸ್ವರೂಪವೇ ಬದಲಾಯಿಸಿತು. ಸುಮಾರು ಹದಿನಾರು ಹದಿನೇಳನೆಯ ಶತಮಾನಗಳಲ್ಲಿ ಇಟಲಿಯಿಂದ ಯುರೋಪಿನಲ್ಲೆಲ್ಲ ಹರಡಿ ನಿಂತ ಆಪೆರ ಎಂಬ ಗೀತನಾಟಕ ಪ್ರಕಾರದಲ್ಲಿಯೂ ಹದಿನೆಂಟು ಹತ್ತೊಂಬತ್ತನೆಯ ಶತಮಾನಗಳಲ್ಲಿ ಜರ್ಮನ್ ವಾಗ್ಗೇಯಕಾರರಿಂದ ಬಲಿತು ಬೆಳೆದ ಸಿಂಫೊನಿ ಎಂಬ ಗೇಯಪ್ರಕಾರದಲ್ಲಿಯೂ ಮುಖ್ಯವಾಗಿ ಆರ್ಕೆಸ್ಟ್ರ ರೂಪುಗೊಂಡು ಬಲಿಯಿತು. ಇದರಲ್ಲಿ ಪ್ರತಿಯೊಂದು ವಾದ್ಯಕ್ಕೂ ನಿರ್ದಿಷ್ಟ ಕಾರ್ಯವುಂಟು. ಅದಿಲ್ಲದೆ ಕೃತಿ ಪೂರ್ಣವಾಗುವುದಿಲ್ಲ. ಆದರೆ ಅಲ್ಲಿ ಯಾರೊಬ್ಬರಿಗೂ ಸ್ವಂತಕಲ್ಪನೆಯ ಸ್ವಾತಂತ್ರ್ಯ ಎಳ್ಳಷ್ಟೂ ಇಲ್ಲ. ಸ್ವರಗುಣ ವೈವಿಧ್ಯ, ಅನೇಕ ಸ್ವರಗಳು ಒಟ್ಟಿನಲ್ಲಿ ಒಂದೇ ಕ್ಷಣದಲ್ಲಿ ಉಂಟುಮಾಡುವ ಸಂವೇದನೆ ಮತ್ತು ಸೌಂದರ್ಯಾನುಭೂತಿ, ನಾದಲಯಗಳ ಏಕಕಾಲಿಕ ತಿರ್ಯಗ್ಗಮನ ಹಾಗೂ ಊರ್ಧ್ವಾಧೋಗಮನ, ಸೌಕರ್ಯಾನುಸಾರವಾಗಿ ಆಧಾರಸ್ವರದ ರೂಪಾಂತರ ಹಾಗೂ ತತ್ಫಲವಾದ ಮೂರ್ಛನಾಂತರ– ಇವೇ ಮುಂತಾದ ಹಲವು ಅಂಶಗಳು ಪಾಶ್ಚಾತ್ಯ ಸಂಗೀತದ ಆರ್ಕೆಸ್ಟ್ರದ ವೈಶಿಷ್ಟ್ಯಗಳು. ಇವುಗಳಲ್ಲಿ ಯಾವುದಿಲ್ಲದಿದ್ದರೂ ಅದರ ಸ್ವರೂಪಹಾನಿಯೇ ಆಗುತ್ತದೆ. ಭಾರತೀಯ ಸಂಗೀತದಲ್ಲಿ ಹಾಗಲ್ಲ.

ಆಧುನಿಕ ಆರ್ಕೆಸ್ಟ್ರಗಳು : ಸ್ವಾತಂತ್ರ್ಯಾನಂತರದ ಭಾರತದಲ್ಲಿ ನಡೆಯುತ್ತಿರುವ ಸಂಗೀತದ ಪುನರುಜ್ಜೀವನ ಪ್ರಯತ್ನಗಳಲ್ಲಿ ಗೋಷ್ಠಿಗಾನವೂ ಒಂದು. ಅಧಿಕೃತ ಕ್ಷೇತ್ರದಲ್ಲಿ ಅಖಿಲ ಭಾರತೀಯ ಆಕಾಶವಾಣಿ ಈ ದಿಕ್ಕಿನಲ್ಲಿ ಮಹತ್ತ್ವದ ಸೇವೆ ಸಲ್ಲಿಸುತ್ತಿದೆ. ಕಲ್ಪನೆ, ತಂತ್ರ, ಉಪಕರಣ, ದೃಷ್ಟಿ ಇತ್ಯಾದಿಗಳಲ್ಲಿ ಹೊಸತನ್ನು ಈ ದಿಕ್ಕಿನಲ್ಲಿ ಮೂಡಿಸ ಲಾಗುತ್ತಿದೆ. ಇದನ್ನು ಹಲವು ವಿಧಗಳಲ್ಲಿ ಉತ್ತಮಪಡಿಸಿ ಪಂಡಿತ ಪಾಮರರಿಬ್ಬರನ್ನೂ ರಂಜಿಸಬಲ್ಲ ಸಾಧನವನ್ನಾಗಿ ಮಾಡಿಕೊಳ್ಳಲವಕಾಶವಿದೆ. ಉದಾಹರಣೆಗೆ ತ್ರಿಸ್ಥಾಯಿ ಮಿತಿಯಲ್ಲಿ ಸ್ವರ ಸ್ಥಾನ ಪಲ್ಲಟವಿಲ್ಲದೆಯೇ ಬಹುಸ್ವರ ಶ್ರೇಣಿಯಲ್ಲಿ ಧಾತುವು ಗೀತದಲ್ಲಿ ಅನೇಕ ವೇಳೆ ಮುನ್ನಡೆಯಬಹುದು; ವೈಯಕ್ತಿಕ ಕಲ್ಪನೆಗೆ ಸ್ವಾತಂತ್ರ್ಯ ನೀಡಿ ಗೀತದ ನಿರ್ದಿಷ್ಟ ತಾಳಭಾಗಗಳಲ್ಲಿ ಅವಕಾಶವನ್ನು ಕಲ್ಪಿಸಿಕೊಡಬಹುದು. ಇಂಥ ಸಂದರ್ಭಗಳಲ್ಲಿ ಗಮಕ ಪ್ರಯುಕ್ತಿಗೆ ಅವಕಾಶವಿರುವುದರಿಂದ ಶಾಸ್ತ್ರೀಯ ಚೌಕಟ್ಟಿನಲ್ಲಿ ರಾಗಭಾವಗಳ ಗಾಂಭೀರ್ಯ, ಆಳಗಳನ್ನು ಸಾಧಿಸಬಹುದು; ವಾದ್ಯಗಳ ಸಂಖ್ಯೆ, ವೈವಿಧ್ಯಗಳನ್ನು ಹೆಚ್ಚಿಸಿ ಸ್ವರಗುಣದಲ್ಲಿ ವ್ಯಾಪ್ತಿ ವಿಸ್ತಾರವನ್ನೇ ಪಡೆಯಬಹುದು. ಶ್ರುತಿಭೇದ, ನಡೆ, ಲಯ, ಇವುಗಳ ಪ್ರತಿಭಾಯುಕ್ತ ಸಂಯೋಜನೆಯಿಂದ ಹೊಸ ಸೃಷ್ಟಿಯನ್ನೇ ಮಾಡಬಹುದು; ಸ್ವರಸಾಂದ್ರತೆ ಮತ್ತು ಲಾವಣ್ಯ (ಟೆಕ್ಸ್‌ಚರ್), ಸ್ವರಗತಿ (ಡೈನ್ಯಮಿಕ್ಸ್) ಮೊದಲಾದ ಕಲ್ಪನೆಗಳನ್ನು ಪರಿಷ್ಕರಿಸಿ ಅಳವಡಿಸಿಕೊಳ್ಳಬಹುದು.

ಅಂತೆಯೇ ಪಾಶ್ಚಾತ್ಯ ದೇಶಗಳಲ್ಲಿರುವಂತೆ ಸಾಮಾಜಿಕ, ಸಾಂಸ್ಕೃತಿಕ ಸಂಸ್ಥೆಗಳಲ್ಲಿಯೂ ಶಾಲಾ ಕಾಲೇಜುಗಳಲ್ಲಿಯೂ ಸಂಗೀತ ಸಂಘಗಳನ್ನು ಗ್ಲೀಕ್ಲಬ್‌ಗಳ ಮಾದರಿಯಲ್ಲಿ ಏರ್ಪಡಿಸಿಕೊಂಡು ನಡೆಸುವುದು ತುಂಬಾ ಅಪೇಕ್ಷಣೀಯವಾಗಿದೆ. ಹೀಗೆ ಮಾಡುವುದರಿಂದ ಪೂರ್ವನಿಯೋಜಿತ ಕಾರ್ಯಕ್ರಮದ ಮೂಲಕ ಸಾಮೂಹಿಕ ಸಂಗೀತವನ್ನು ದೇಶದಲ್ಲಿ ಬೆಳೆಸಿ ಅದನ್ನು ರಾಷ್ಟ್ರಪ್ರಜ್ಞೆಯ ಪ್ರಮುಖಾಭಿವ್ಯಕ್ತಿ ಸಾಧನವನ್ನಾಗಿಯೂ ಭಾವೈಕ್ಯ ಸಾಧನವನ್ನಾಗಿಯೂ ಸಂಸ್ಕೃತಿ ಪ್ರಸಾರ ಸಾಧನವನ್ನಾಗಿಯೂ ಮಾಡಲು ಸಾಧ್ಯವಿದೆ. ಕೇವಲ ಅಂಧಾನುಕರಣೆಯಿಂದ ವಿವಿಧ ಅಹಿತಶಬ್ದಗಳ ಅವ್ಯವಸ್ಥಿತ ಸಂಯೋಜನೆಯಿಂದ ಗದ್ದಲವನ್ನೇ ಪರಿಣಾಮವೆಂದು ಭ್ರಮಿಸಿ ಭಾರತೀಯ ಸಂಗೀತ, ಸಂಸ್ಕೃತಿಗಳ ಚಿರಂತನ ಮೌಲ್ಯಗಳಿಗೆ ಕುಠಾರಪ್ರಾಯವಾಗಿರುವ ಆಧುನಿಕ ಆರ್ಕೆಸ್ಟ್ರ ಪಾರ್ಟಿಗಳ ಹಾವಳಿಯನ್ನಡಗಿಸಲು ಇದರಿಂದ ಸಾಧ್ಯವಾಗುತ್ತದೆ. ಭಾರತದಲ್ಲಿ ಸಾಮೂಹಿಕ ಸಂಗೀತದ ಕನಸನ್ನು ಮೊದಲ ಬಾರಿಗೆ ಕಂಡು ಅದಕ್ಕೊಂದು ಸುವ್ಯವಸ್ಥಿತ ಶಾಸ್ತ್ರೀಯ ಬುನಾದಿಯನ್ನು ನಿರ್ಮಿಸಿದ ಕೀರ್ತಿ ಮೈಸೂರಿನ ವರಲಕ್ಷ್ಮೀ ಅಕಾಡೆಮಿಗೆ ಸಲ್ಲುತ್ತದೆ. ಈ ಸಂಸ್ಥೆ 1956ರಲ್ಲಿ ದೇಶದಲ್ಲೇ ಮೊದಲ ಬಾರಿಗೆ ನಡೆಸಿದ ಅಖಿಲ ಭಾರತೀಯ ಸಾಮೂಹಿಕ ಸಂಗೀತ ವಿಚಾರಗೋಷ್ಠಿ ಮೌಲಿಕವಾದ ಸಂಶೋಧನ ಫಲಿತಾಂಶಗಳನ್ನು ಹೊರಗೆಡಹಿದೆ. (ಆರ್.ಎಸ್.ಎನ್.)

**ಗೋಷ್ವಾರೆ ಸಿದ್ಧಾಂತ :** ಕೈಗಾರಿಕೋದ್ಯಮ, ವ್ಯಾಪಾರ ಸಂಸ್ಥೆ ಇವೇ ಮುಂತಾದ ವ್ಯವಸ್ಥೆಗಳಲ್ಲಿ ನಿವೇಶನಸಾಮಗ್ರಿಗಳ (ಎಂದರೆ ಆಯಾ ವ್ಯವಸ್ಥೆಗೆ ಹೊರಗಿನಿಂದ ಪಡೆದು ಒದಗಿಸುವ ಸಾಮಗ್ರಿಗಳು; ಉದಾಹರಣೆಗೆ, ಒಂದು ಕೈಗಾರಿಕೋದ್ಯಮದಲ್ಲಿ ಕಚ್ಚಾ ಸರಕುಗಳು ಮುಖ್ಯ ನಿವೇಶನ ಸಾಮಗ್ರಿಗಳು) ಯಾದಿಯ ಕ್ರಮಬದ್ಧ ತಯಾರಿಕೆ, ಅದರ ಅಧ್ಯಯನ ಮತ್ತು ಅದರಿಂದ ತೀರ್ಮಾನಗಳ ನಿಗಮನ (ಇನ್ವೆಂಟರಿ ಥಿಯರಿ). ಹೆಚ್ಚಿನ ವಿವರಗಳಿಗೆ **ನೋಡಿ–ತಪಶೀಲು ಸಿದ್ಧಾಂತ.** *


**ಗೋಸಲ ಚನ್ನಬಸವೇಶ್ವರ :** 15ನೆಯ ಶತಮಾನದಲ್ಲಿ ಜೀವಿಸಿದ್ದ ಒಬ್ಬ ಶಿವಯೋಗಿ. ತುಮಕೂರು ಜಿಲ್ಲೆಯ ಗುಬ್ಬಿಯಲ್ಲಿ ಈತ ನಿರ್ವಯಲಾದ. ಈತನ ಗದ್ದಿಗೆಯ ಮೇಲೆ ದೇವಸ್ಥಾನವನ್ನು ಕಟ್ಟಿದ್ದಾರೆ. ಅದು ಗುಬ್ಬಿ ಚನ್ನಬಸವೇಶ್ವರ ಎಂಬ ಹೆಸರಿನ ಪ್ರಖ್ಯಾತ ದೇವಾಲಯವಾಗಿ ಸುತ್ತಮುತ್ತಲಿನ ಭಕ್ತರನ್ನು ಆಕರ್ಷಿಸಿದೆ. ಈತನ ಗುರು ಗೋಸಲ ಸಿದ್ಧೇಶ್ವರ. ಈತನ ಸಮಾಧಿ ತುಮಕೂರು ಜಿಲ್ಲೆಯ ಸಿದ್ಧರ ಬೆಟ್ಟದಲ್ಲಿದೆ. ಶಿಷ್ಯ ಎಡೆಯೂರು ಸಿದ್ಧಲಿಂಗ. ಈತನ ಸಮಾಧಿ ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಎಡೆಯೂರಿನಲ್ಲಿದೆ. ಗೋಸಲ ಚನ್ನಬಸವೇಶ್ವರ ಮಹಾ ತಪಸ್ವಿಯೆಂದೂ ಅನೇಕ ಪವಾಡಗಳನ್ನು ಮೆರೆದನೆಂದೂ ಸ್ಥಳಪುರಾಣದಿಂದ ತಿಳಿದುಬರುತ್ತದೆ. ಈತನ ಗುರು

ಪರಂಪರೆ ವಿಖ್ಯಾತವಾದುದು. ಈತ ಕ್ಷೇತ್ರಜ್ಞ ಸುಮನೋವಾದ ಎಂಬ ಗ್ರಂಥವನ್ನು ರಚಿಸಿದ್ದಾನೆ. ಇದರಲ್ಲಿ ವೀರಶೈವ ಷಟ್ಸ್ಥಲ ಸಿದ್ಧಾಂತವನ್ನು ವಿವಿಧ ಷಟ್ಪದಿಯಲ್ಲಿ ನಿರೂಪಿಸಲಾಗಿದೆ. ನಿರಂಜನ ವಂಶ ರತ್ನಾಕರದಲ್ಲಿ ಈತನ ವಿಷಯವನ್ನು ವಿಸ್ತಾರವಾಗಿ ಪ್ರಸ್ತಾಪಿಸಲಾಗಿದೆ. (ಬಿ.ಎಸ್.)

**ಗೋಸಾನ್ :** ಖನಿಜ ಸಿರಗಳ ಮತ್ತು ಅದಿರು ನಿಕ್ಷೇಪಗಳ ಅಪಘಟನೆಗೊಂಡ (ಡೀಕಂಪೋಸ್ಡ್) ಮೇಲುಭಾಗಗಳಿಗೆ ಇರುವ ಹೆಸರು. ರಾಸಾಯನಿಕ ಶಿಥಿಲತೆಯಿಂದ ಕರಗದ ಖನಿಜ ನಿಕ್ಷೇಪಗಳು ಶೇಷ ನಿಕ್ಷೇಪಗಳಾಗಿ ಭೂಮಿಯ ಮೇಲುಭಾಗದಲ್ಲಿ ಉಳಿಯುತ್ತವೆ. ಲೋಹ ನಿಕ್ಷೇಪಗಳು ಸಾಮಾನ್ಯವಾಗಿ ನೆಲಮಟ್ಟದಲ್ಲಿ ರಂಧ್ರಾನ್ವಿತ ಕಾವಿ ಅದಿರನ್ನು (ಸೆಲ್ಯುಲರ್ ಲಿಮೊನೈಟ್) ಇಲ್ಲವೇ ಜಲಯೋಜಿತ (ಹೈಡ್ರೇಟೆಡ್) ಕಬ್ಬಿಣದ ಆಕ್ಸೈಡ್ ಮೇಲ್ಪದರವನ್ನು ಪಡೆದಿರುತ್ತವೆ. ಈ ಮೇಲ್ಪದರವೇ ಗೋಸಾನ್. ಇದರ ದಪ್ಪ (ಎಂದರೆ ಮಂದತ್ವ) ರಾಸಾಯನಿಕ ಕ್ರಿಯೆಯ ಪ್ರಮಾಣವನ್ನು ಅನುಸರಿಸಿ ಒಂದೆರಡು ಅಂಗುಲಗಳಿಂದ ಹತ್ತಿಪ್ಪತ್ತು ಅಂಗುಲಗಳ ವರೆಗೂ ಅಪರೂಪಕ್ಕೆ ಇನ್ನೂ ಹೆಚ್ಚಾಗಿ ಕೂಡ ಇರಬಹುದು. ಗೋಸಾನಿನ ಬಣ್ಣ, ರೂಪ, ರಚನೆ ಮುಂತಾದ ಲಕ್ಷಣಗಳ ಅಧ್ಯಯನದಿಂದ ಅದರ ತಳಭಾಗದಲ್ಲಿ ಯಾವ ಲೋಹ ನಿಕ್ಷೇಪವಿದೆ ಎಂಬುದನ್ನು ನಿರ್ಧರಿಸಬಹುದು. (ಟಿ.ಟಿ.)


**ಗೋಸಾಯಿ :** ಹಿಂದೂ ಸನ್ಯಾಸಿಗಳ ಒಂದು ಪಂಗಡ. ಇವರಿಗೆ ಗೋಸ್ವಾಮಿ, ಗೋಸಾಮಿ ಎಂಬ ನಾಮಾಂತರಗಳುಂಟು. 1901ರ ಜನಗಣತಿ ಪ್ರಕಾರ ಇವರ ಸಂಖ್ಯೆ ಭಾರತದಲ್ಲಿ ಎರಡು ಲಕ್ಷ ಇತ್ತು ; ಗೋಸಾಯಿಗಳು ಈಗಲೂ ಹೇರಳವಾಗಿದ್ದಾರೆ. ಇವರಲ್ಲಿ ಶೈವರೂ ಉಂಟು, ವೈಷ್ಣವರೂ ಉಂಟು. ಸಾಮಾನ್ಯವಾಗಿ ಶೈವರು ಶಂಕರಾಚಾರ್ಯರ ಅದ್ವೈತ ಸಂಪ್ರದಾಯದವರು. ಇವರಲ್ಲಿ ಹತ್ತು ಹೆಸರುಗಳು (ದಶನಾಮಿ) ರೂಢವಾಗಿವೆ. ಅವು ತೀರ್ಥ, ಆಶ್ರಮ, ವನ, ಅರಣ್ಯ, ಸರಸ್ವತಿ, ಭಾರತೀ, ಪುರೀ, ಗಿರಿ, ಪರ್ವತ, ಸಾಗರ. ಇವರು ದಂಡಧಾರಿಗಳಾದ್ದರಿಂದ ದಂಡಿಗಳೆಂದೂ ಕರೆಸಿಕೊಳ್ಳುವರು. ಮಠಧಾರಿಗಳಲ್ಲದೆ ಸಾಂಸಾರಿಕರೂ ಇವರಲ್ಲಿ ಕೆಲವರುಂಟು. ಕಾಶಿ, ಹರಿದ್ವಾರ ಮುಂತಾದ ಯಾತ್ರಾಸ್ಥಳಗಳಲ್ಲಿ ಇವರನ್ನು ಹೆಚ್ಚಾಗಿ ಕಾಣಬಹುದು. ವೈಷ್ಣವ ಸ್ವಾಮಿಗಳನ್ನು ಬಂಗಾಲ, ಅಸ್ಸಾಮ್‌ಗಳಲ್ಲಿ ಗೋಸಾಯಿಗಳೆನ್ನುವರು. ಇವರು ವಲ್ಲಭಾಚಾರ್ಯ, ಚೈತನ್ಯ ಮುಂತಾದವರ ಸಂಪ್ರದಾಯಗಳನ್ನು ಅನುಸರಿಸಿ ಶಿಷ್ಯರಿಗೆ ಬೋಧೆ ಮಾಡುವರು. ಸಾಮಾನ್ಯವಾಗಿ ಉದರನಿಮಿತ್ತವಾಗಿ ಕಾವಿ ಹಾಕಿಕೊಂಡು ತಿರುಗಾಡುವವರನ್ನೆಲ್ಲ ಗೋಸಾಯಿಯೆಂದು ಹಾಸ್ಯ ಮಾಡುವುದೂ ಇದೆ. (ಕೆ.ಕೆ.)

**ಗೋಳ :** ಅರ್ಧವೃತ್ತವನ್ನು ಅದರ ವ್ಯಾಸದ ಸುತ್ತ ಪರಿಭ್ರಮಿಸಿದಾಗ ದೊರೆಯುವ ಆಕೃತಿ (ಸ್ಫಿಯರ್). ಪರ್ಯಾಯವಾಗಿ ಅಂತಸ್ಥ ಸ್ಥಿರಬಿಂದುವೊಂದರಿಂದ ಸ್ಥಿರ ದೂರದಲ್ಲಿರುವ ಸಕಲ ಬಿಂದುಗಳೂ ನೆಲೆಸಿರುವ ಮೇಲ್ಮೈ. ಚಿತ್ರ (1)ರಲ್ಲಿ $O$ ಸ್ಥಿರ ಬಿಂದು. $OA = OB = OC = ... = OH = r$ (ಸ್ಥಿರಾಂಕ) ಆಗಿರುವಂತೆ, ಮೂರು ಆಯಾಮಗಳಲ್ಲಿ $A$ ಯಿಂದ $F$ ವರೆಗಿನ ಕೆಲವು ಪ್ರರೂಪೀ ಬಿಂದುಗಳನ್ನು ಗುರುತಿಸಿದೆ. ಇಂಥ ಸಮಸ್ತ ಬಿಂದುಗಳೂ ನೆಲೆಸಿ ರಚಿಸುವ ಅವಿಚ್ಛಿನ್ನ ಸಂವೃತಾಕೃತಿಯೇ ಗೋಳ. ಸ್ಥಿರ ಬಿಂದುವಿನ ($O$) ಹೆಸರು ಕೇಂದ್ರ ; ಸ್ಥಿರ ದೂರದ ($r$) ಹೆಸರು ತ್ರಿಜ್ಯ.




ಚಿತ್ರ 1

ಒಂದು ಗೋಳ ಘನವಾಗಿರಬಹುದು (ಸಾಲಿಡ್) ಇಲ್ಲವೇ ಟೊಳ್ಳಾಗಿರಬಹುದು (ಹಾಲೋ). ಘನಗೋಳವನ್ನು ಅಸಂಖ್ಯಾತ ಏಕಕೇಂದ್ರಿಯ ಟೊಳ್ಳು ಗೋಳಗಳ ಸಂಕಲನ ಎಂದು ಭಾವಿಸುವ ಸಾಧ್ಯತೆ ಉಂಟು. ಟೊಳ್ಳುಗೋಳದ ಮೇಲ್ಮೈಯನ್ನು ತೆಗೆದರೆ ಉಳಿಯುವುದು ಕೇಂದ್ರ ಬಿಂದು ಮಾತ್ರ. $r$ ತ್ರಿಜ್ಯವಿರುವ ಒಂದು ಗೋಳದ ಘನಗಾತ್ರ $\frac{4}{3}\pi r^3$. ಅದರ ಮೇಲ್ಮೈಯ ಸಲೆ $4pr^2$. ಅನ್ಯಥಾ ಹೇಳದಿದ್ದರೆ ಇನ್ನು ಮುಂದಕ್ಕೆ ಗೋಳವೆಂದಾಗ ಘನಗೋಳವೆಂದು ಭಾವಿಸಬೇಕು.




ಚಿತ್ರ 2

ಗೋಳದ ಸಮೀಕರಣ : ಕೇಂದ್ರವನ್ನು ($O$) ಮೂಲಬಿಂದುವಾಗಿಯೂ ಅದರ ಮೂಲಕ ಸಾಗುವ ಯಾವುದೇ ಮೂರು ಪರಸ್ಪರ ಲಂಬರೇಖೆಗಳನ್ನು ಅಕ್ಷಗಳಾಗಿಯೂ ಆಯಬೇಕು. ಗೋಳದ ಮೇಲ್ಮೈ ಮೇಲಿನ ಯಾವುದೇ ಚರಬಿಂದು $P$ ಯ ನಿರ್ದೇಶಕಗಳು $(x, y, z)$ ಆಗಿರಲಿ. $OP = r$ (ಸ್ಥಿರಾಂಕ, ತ್ರಿಜ್ಯ) ಆಗಿರುವುದರಿಂದ $P$ ಯ ಪಥದ ಸಮೀಕರಣ


$$x^2 + y^2 + z^2 = r^2$$

ಎಂದಾಗುವುದು. ಗೋಳದ ಮೇಲ್ಮೈ ಮೇಲಿನ ಪ್ರತಿಯೊಂದು ಬಿಂದುವೂ ಈ ಸಮೀಕರಣವನ್ನು ತೃಪ್ತಿಪಡಿಸುವುದರಿಂದ, ಬೇರೆ ಯಾವ ಬಿಂದುವೂ ಇದನ್ನು ತೃಪ್ತಿಪಡಿಸದಿರುವುದರಿಂದ, ಇದೇ ಗೋಳದ ಸಮೀಕರಣ. ಕೇಂದ್ರಬಿಂದು $C(g, f, h)$ ಆಗಿದ್ದರೆ ಆಗ ಈ ಗೋಳದ ಸಮೀಕರಣ

$$(x - g)^2 + (y - f)^2 + (z - h)^2 = r^2$$

$$x^2 + y^2 + z^2 - 2gx - 2fy - 2hz + g^2 + f^2 + h^2 - r^2 = 0$$

ಎಂದಾಗುವುದು. ಇದರ ಅಧ್ಯಯನದಿಂದ ತಿಳಿಯುವ ಸಂಗತಿಗಳಿಷ್ಟು : ಇದೊಂದು x, y, z ಚರಗಳಲ್ಲಿನ ದ್ವಿಘಾತೀಯ ಸಮೀಕರಣ ; ಇದರಲ್ಲಿ $xy, yz, zx$ ಪದಗಳ ಗುಣಾಂಕಗಳು ಶೂನ್ಯ ; ಮತ್ತು $x^2, y^2, z^2$ ಪದಗಳ ಗುಣಾಂಕಗಳು ಸಮವಾಗಿವೆ. ವಿಲೋಮವಾಗಿ, ಈ ಗುಣಗಳನ್ನು ಪಡೆದಿರುವ $x, y, z$ ಗಳಲ್ಲಿನ ಯಾವುದೇ ದ್ವಿಘಾತೀಯ ಸಮೀಕರಣ ಒಂದು ಗೋಳವನ್ನು ಸೂಚಿಸುತ್ತದೆ ಎಂದು ಸಾಧಿಸಬಹುದು.



ಚಿತ್ರ 3

ಸಮತಲ ಮತ್ತು ಗೋಳ : ಆಕಾಶದಲ್ಲಿರುವ ಒಂದು ಸಮತಲ ಹಾಗೂ ಒಂದು ಗೋಳವನ್ನು ಪರಿಶೀಲಿಸಿದರೆ ಈ ಕೆಳಗಿನ ಮೂರು ಸಾಧ್ಯತೆಗಳು ಇವೆ – ತಲ ಗೋಳವನ್ನು ಛೇದಿಸುತ್ತದೆ, ಇಲ್ಲವೆ ಸ್ಪರ್ಶಿಸುತ್ತದೆ, ಇಲ್ಲವೇ ಛೇದಿಸುವುದಿಲ್ಲ. ಮೊದಲಿನ ಸಂದರ್ಭದಲ್ಲಿ ತಲ ಮತ್ತು ಗೋಳಗಳ ಸಾಮಾನ್ಯ ವಕ್ರರೇಖೆ ಒಂದು ವೃತ್ತ; ಎರಡನೆಯ ಸಂದರ್ಭದಲ್ಲಿ ಈ ವೃತ್ತ ಬಿಂದು (ಸ್ಪರ್ಶಬಿಂದು) ಆಗುತ್ತದೆ ; ಮೂರನೆಯ ಸಂದರ್ಭದಲ್ಲಿ ಇದು ಕಾಲ್ಪನಿಕವಾಗಿದೆ ಎನ್ನುತ್ತೇವೆ.

$$S \equiv x^2 + y^2 + z^2 + 2gx + 2fy + 2hz + c = 0$$


ಗೋಳದ ಸಮೀಕರಣವು

$$P \equiv lx + my + nz + 1 = 0$$

ಸಮತಲದ ಸಮೀಕರಣವೂ ಆಗಿದ್ದರೆ ಇವುಗಳ ಸಾಮಾನ್ಯ ವಕ್ರರೇಖೆಯ (ವೃತ್ತದ) ಸಮೀಕರಣ ಇವೆರಡನ್ನೂ ಒಟ್ಟಿಗೆ ಪರಿಶೀಲಿಸುವುದರಿಂದ ದೊರೆಯುತ್ತದೆ:


$$S = 0$$
$$P = 0$$

ಗೋಳವನ್ನು ಸಮತಲ ಸ್ಪರ್ಶಿಸಿದಾಗ ಅದಕ್ಕೆ ಗೋಳದ ಸ್ಪರ್ಶಕ ಸಮತಲವೆಂದು ಹೆಸರು. ಗೋಳವನ್ನು ಸಮತಲ ಛೇದಿಸುವಾಗ ಲಭಿಸುವ ವೃತ್ತಗಳಲ್ಲಿ ಎರಡು ವರ್ಗದವು ಇವೆ. ಗೋಳಕೇಂದ್ರ ವೃತ್ತಕೇಂದ್ರವೂ ಆಗಿರುವಂಥ ವೃತ್ತಗಳು – ಇವು ಮಹಾವೃತ್ತಗಳು;




ಚಿತ್ರ 4

ವೃತ್ತಕೇಂದ್ರ ಗೋಳಕೇಂದ್ರದಿಂದ ಭಿನ್ನವಾಗಿರುವಂಥ ವೃತ್ತಗಳು – ಇವು ಅಲ್ಪ ವೃತ್ತಗಳು. ಒಂದು ಗೋಳದಲ್ಲಿ ದೊರೆಯುವ ಒಂದೊಂದು ವರ್ಗದ ವೃತ್ತಗಳ ಸಂಖ್ಯೆಯೂ ಅನಂತ. ಎಲ್ಲ ಮಹಾವೃತ್ತಗಳ ತ್ರಿಜ್ಯಗಳೂ ಗೋಳತ್ರಿಜ್ಯಕ್ಕೆ ಸಮ. ಎಲ್ಲ ಅಲ್ಪವೃತ್ತಗಳ ತ್ರಿಜ್ಯಗಳೂ ಗೋಳ ತ್ರಿಜ್ಯಕ್ಕಿಂತ ಕಡಿಮೆ.




ಚಿತ್ರ 5

ಸರಳರೇಖೆ ಮತ್ತು ಗೋಳ : ಒಂದು ಸರಳರೇಖೆ ಒಂದು ಗೋಳವನ್ನು ಎರಡು ಬಿಂದುಗಳಲ್ಲಿ ಛೇದಿಸಬಲ್ಲುದು ; ಇಲ್ಲವೇ ಒಂದು ಬಿಂದುವಿನಲ್ಲಿ ಸ್ಪರ್ಶಿಸಬಲ್ಲುದು; ಇಲ್ಲವೇ ಛೇದಿಸದಿರಬಲ್ಲುದು. ಎರಡನೆಯ ಸಂದರ್ಭದಲ್ಲಿ ಆ ರೇಖೆಗೆ ಸ್ಪರ್ಶಕರೇಖೆ ಎಂದು ಹೆಸರು. ಗೋಳಕೇಂದ್ರದ ಮೂಲಕ ಸಾಗುವ ಎಲ್ಲ ಸರಳರೇಖೆಗಳೂ ಗೋಳದ ವ್ಯಾಸಗಳು. ರೂಢಿಯಲ್ಲಿ ವ್ಯಾಸವೆಂದರೆ ಗೋಳದ ಕೇಂದ್ರದ ಮೂಲಕ ಸಾಗಿ ಗೋಳದ ಮೇಲ್ಮೈಯಿಂದ ಸೀಮಿತವಾದ ಪರಿಮಿತ ರೇಖೆ ಎಂದು ಅರ್ಥ; ಇದರ ಉದ್ದ ತ್ರಿಜ್ಯದ ಎರಡರಷ್ಟು.





ಚಿತ್ರ 6

ಮಹಾವೃತ್ತ : ಯಾವುದೇ ಮಹಾವೃತ್ತ ಗೋಳವನ್ನು ಎರಡು ಸಮಭಾಗಗಳಾಗಿ ವಿಭಾಗಿಸುತ್ತದೆ (ಇವು ಅರ್ಧಗೋಳಗಳು). σ ಇಂಥ ಒಂದು ಮಹಾವೃತ್ತ. $O$ ಇದರ ಕೇಂದ್ರ (ಗೋಳದ ಸಹ). $AOB$ ವ್ಯಾಸ σ ದ ತಲಕ್ಕೆ ಲಂಬವಾಗಿ ಎಳೆದ ವ್ಯಾಸ. ಇದಕ್ಕೆ ಮಹಾವೃತ್ತದ ಅಕ್ಷ ಎಂದು ಹೆಸರು. ಆದ್ದರಿಂದ ಒಂದು ಮಹಾವೃತ್ತದ ತಲಕ್ಕೆ ಅದರ ಕೇಂದ್ರದ (ಗೋಳಕೇಂದ್ರದ) ಮೂಲಕ ಎಳೆದ ಸರಳರೇಖೆ ಆ ಮಹಾವೃತ್ತದ ಅಕ್ಷ ಎನಿಸಿಕೊಳ್ಳುವುದು. ಈ ಅಕ್ಷದ ಎರಡು ಕೊನೆಗಳಿಗೆ $(A, B)$ ಮಹಾವೃತ್ತದ ಧ್ರುವಗಳೆಂದು ಹೆಸರು. $P$ ಯು σ ದ ಮೇಲಿನ ಯಾವುದೇ ಬಿಂದು ಆಗಿದ್ದರೆ $\angle AOP = \angle BOP = 90^0$ ಎಂಬುದನ್ನು ಗಮನಿಸಬೇಕು. σ ಮಹಾವೃತ್ತಕ್ಕೆ ಸಮಾಂತರವಾಗಿರುವ ಎಲ್ಲ ಅಲ್ಪವೃತ್ತಗಳಿಗೂ $AB$ ಯೇ ಅಕ್ಷ ಮತ್ತು $A, B$ ಗಳೇ ಧ್ರುವಗಳು. ಇಂಥ ಒಂದು ಅಲ್ಪವೃತ್ತದ ಮೇಲೆ $Q$ ಒಂದು ಬಿಂದುವಾಗಿದ್ದರೆ ಆಗ $\angle AOQ \neq 90^0$ ಎಂಬುದನ್ನು ಸಹ ಗಮನಿಸಬೇಕು. $\sigma_1, \sigma_2, \sigma_3$ , ಯಾವುದೇ ಮೂರು ಮಹಾವೃತ್ತಗಳಾಗಿರಲಿ (ಚಿತ್ರ 7 ರಲ್ಲಿ ಒಂದು ಪಾರ್ಶ್ವವನ್ನು ಮಾತ್ರ ತೋರಿಸಿದೆ.) ಇವು ಗೋಳದ ಮೇಲ್ಮೈ ಮೇಲೆ ABC ಎನ್ನುವ ಸಾಮಾನ್ಯ ಪ್ರದೇಶವನ್ನು ರೂಪಿಸುತ್ತವೆ (ಚಿತ್ರ 7ರಲ್ಲಿ ನೆರಳು ಮಾಡಿದೆ). ಇದಕ್ಕೆ ಈ ಮಹಾವೃತ್ತಗಳು ರಚಿಸುವ ಗೋಳತ್ರಿಭುಜ ಎಂದು ಹೆಸರು. ಇದರ ಹೆಚ್ಚಿನ ವಿವರಗಳಿಗೆ **ನೋಡಿ– ಗೋಳತ್ರಿಕೋಣಮಿತಿ.**




ಚಿತ್ರ 7


ಗೋಳಖಂಡ : $P$ ಸಮತಲ $S$ ಗೋಳವನ್ನು ಯಾದೃಚ್ಛಿಕವಾಗಿ ಛೇದಿಸಿದಾಗ $S_1$ ಮತ್ತು $S_2$ ಎನ್ನುವ ಎರಡು ಗೋಳಖಂಡಗಳು ಲಭಿಸುತ್ತವೆ. ಈ ಒಂದೊಂದು ಖಂಡವನ್ನೂ ಗೋಳೀಯ ಟೊಪ್ಪಿಗೆ (ಸ್ಫೆರಿಕಲ್ ಕ್ಯಾಪ್) ಎಂದು ಕರೆಯುವುದುಂಟು.




ಚಿತ್ರ 8

$S_1$ ಟೊಪ್ಪಿಗೆಯ ಪಾದವೃತ್ತದ (σ) ತ್ರಿಜ್ಯ $a (= CL)$ ಮತ್ತು ಎತ್ತರ $h (= CA)$ ಆಗಿದ್ದರೆ ಆಗ ಅದರ ಘನಗಾತ್ರ $\frac{\pi h}{6}(3a^2 + h^2)$. ಮೇಲ್ಮೈಸಲೆ $\pi (a^2 + h^2)$. $h = 2r$ , $a = 0$ ಆದಾಗ ಟೊಪ್ಪಿಗೆ ಗೋಳವೇ ಆಗುತ್ತದೆ. ಆದ್ದರಿಂದ ಮೇಲಿನ ಫಲಿತಾಂಶಗಳಿಂದ ಗೋಳದ ಗಾತ್ರ ಮತ್ತು ಮೇಲ್ಮೈಸಲೆ $4pr^2$ ಎಂಬುದನ್ನು ನಿಗಮಿಸಬಹುದು. $h$ ಅಂತರದಲ್ಲಿರುವ ಒಂದು ಜೊತೆ ಸಮಾಂತರ $(\sigma_1, \sigma_2)$ ತಲಗಳು ಗೋಳವನ್ನು ಛೇದಿಸಲಿ. ಈಗ ದೊರೆಯುವ ಟೊಪ್ಪಿಗೆಗಳ ಪಾದವೃತ್ತಗಳ ತ್ರಿಜ್ಯಗಳು $r_1, r_2$ ಆಗಿರಲಿ. ಟೊಪ್ಪಿಗೆಗಳನ್ನು ತೆಗೆದ ಬಳಿಕ ಉಳಿಯುವ ಗೋಳಖಂಡದ (S') ಘನಗಾತ್ರ $\frac{\pi h}{6}(3r_1^2 + 3r_2^2 + h^2)$.

ಪಾದವೃತ್ತಗಳ ಸಲೆಗಳು $B_1 (=p\ r\ _1^2)$ ಮತ್ತು $B_2\ (=p\ r\ _2^2)$ ಎಂಬುದಾಗಿಯೂ ಅವುಗಳ ನಡುವಿನ ಗೋಳಛೇದದ (σ ವೃತ್ತ) ಸಲೆ $M$ ಎಂಬುದಾಗಿಯೂ ಭಾವಿಸಿದರೆ ಈ ಘನಗಾತ್ರದ ಬೆಲೆ $\frac{h}{6}(B_1 + 4M + B_2)$ ಆಗುತ್ತದೆ. ಇದಕ್ಕೆ ಪ್ರಿಸ್ಮಾಯಿಡಲ್ ಸೂತ್ರವೆಂದು ಹೆಸರು. $h = 2r$, ಎಂದರೆ $h$ ಅಂತರ ಗೋಳದ ವ್ಯಾಸ ಆದಾಗ $r_1 = r_2 = 0$ ಆಗುತ್ತವೆ ಮತ್ತು ಗೋಳಖಂಡ ಇಡೀ ಗೋಳವೇ ಆಗುತ್ತದೆ. ಆಗ ಮೇಲಿನ ಸೂತ್ರದಲ್ಲಿ $B_1 = B_2 = 0$ ಮತ್ತು $M = \pi r^2$ ಆಗುತ್ತವೆ; ಮತ್ತು ಸೂತ್ರದ ಬೆಲೆ ಗೋಳದ ಘನಗಾತ್ರವನ್ನು ಕೊಡುತ್ತದೆ. ಇದು ನಾವು ನಿರೀಕ್ಷಿಸುವಂತೆ, $\frac{2r}{6} \times 4\pi r 2 = \frac{4}{3}\pi r 3$ ಆಗುತ್ತದೆ (**ನೋಡಿ–ಗೋಳತ್ರಿಕೋಣಮಿತಿ**).




ಚಿತ್ರ 9

(ಬಿ.ಬಿ.ಬಿ.)

**ಗೋಳಕಲ್ಪ :** ದೀರ್ಘವೃತ್ತ ಅದರ ಯಾವುದೇ ಅಕ್ಷದ ಸುತ್ತ ಆವರ್ತಿಸಿದಾಗ ದೊರೆಯುವ ಘನಾಕೃತಿ (ಸ್ಫಿರಾಯಿಡ್). ದೀರ್ಘಾಕ್ಷ ಆವರ್ತನಾಕ್ಷವಾದಾಗ ದೀರ್ಘ ಗೋಳಕಲ್ಪವೂ (ಪ್ರೊಲೇಟ್ ಸ್ಫಿರಾಯಿಡ್) ಹ್ರಸ್ವಾಕ್ಷ ಆವರ್ತನಾಕ್ಷವಾದಾಗ ಹ್ರಸ್ವ ಗೋಳಕಲ್ಪವೂ (ಆಬ್ಲೇಟ್ ಸ್ಫಿರಾಯಿಡ್) ದೊರೆಯುತ್ತವೆ. x-1 ಸಮತಲದಲ್ಲಿ ಒಂದು ದೀರ್ಘವೃತ್ತದ ಸಮೀಕರಣ.


$$\frac{y^2}{a^2} + \frac{z^2}{b^2} = 1, a > b$$

ಆಗಿದ್ದರೆ ಈ ದೀರ್ಘ ವೃತ್ತವನ್ನು *y*- ಅಕ್ಷದ ಸುತ್ತ ಆವರ್ತಿಸಿದಾಗ ದೊರೆಯುವ ದೀರ್ಘ ಗೋಳಕಲ್ಪದ ಸಮೀಕರಣ

$$\frac{x^2}{b^2} + \frac{y^2}{a^2} + \frac{z^2}{b^2} = 1$$

ಮತ್ತು *z* ಅಕ್ಷದ ಸುತ್ತ ಆವರ್ತಿಸಿದಾಗ ದೊರೆಯುವ ಹ್ರಸ್ವಗೋಳಕಲ್ಪದ ಸಮೀಕರಣ

$$\frac{x^2}{a^2} + \frac{y^2}{a^2} + \frac{z^2}{b^2} = 1$$



**ಗೋಳಕಲ್ಪ : ಮೇಲಿನದು ದೀರ್ಘಗೋಳ ಕಲ್ಪ, ಕೆಳಗಿನದು ಹ್ರಸ್ವಗೋಳ ಕಲ್ಪ**

ಇವುಗಳ ಘನಗಾತ್ರಗಳು ಅನುಕ್ರಮವಾಗಿ $(4/3)\,\pi ab^2$, $(4/3)\,\pi a^2 b$; ಮೇಲ್ಮೈ ಸಲೆಗಳು ಅನುಕ್ರಮವಾಗಿ

$$2\pi b^2 + 2\pi (ab/e)\sin^{-1} e.$$

$$2\pi a^2 + \pi \frac{b^2}{e} \log\ [(1+e)/(1-e)].$$

ಇಲ್ಲಿ e ದೀರ್ಘವೃತ್ತದ ಉತ್ಕೇಂದ್ರತೆ (ಎಕ್ಸೆಂಟ್ರಸಿಟಿ). $e = \sqrt{a^2 - b^2/a}$

(ಬಿ.ಬಿ.ಬಿ.)

**ಗೋಳಗುಮ್ಮಟ :** ಬಿಜಾಪುರದಲ್ಲಿ ಆದಿಲ್‌ಷಾಹಿ ದೊರೆ ಮಹಮ್ಮದ್ (1627–56) ತನಗಾಗಿ ಕಟ್ಟಿಸಿಕೊಂಡ ಸ್ಮಾರಕ. ಜಗತ್ಪ್ರಸಿದ್ಧವಾದುದು. ಇದೊಂದು ಸರಳ ವಿನ್ಯಾಸದ ದೈತ್ಯಾಕಾರದ ಕಟ್ಟಡ. ಹೊರ ತಳ ಅಳತೆ 205 X 205', ಎತ್ತರ 198' 6". ಈ ಕಟ್ಟಡದಲ್ಲಿ ನಾಲ್ಕು ಗೋಡೆಗಳಿಂದ ಆವೃತವಾಗಿ ಮೇಲು ಗುಮ್ಮಟದಿಂದ ಆಚ್ಛಾದಿತವಾಗಿರುವ ಒಂದು ದೊಡ್ಡ ಹಜಾರ ಮಾತ್ರ ಇದೆ. 135' 5" ಚೌಕವಾಗಿದ್ದು, 18,337,67 ಚ. ಅ. ಪ್ರದೇಶವನ್ನು ಆಕ್ರಮಿಸಿರುವ ಈ ಹಜಾರ, ಕಂಬಗಳಿಲ್ಲದೆ ಆಚ್ಛಾದಿತವಾಗಿರುವ ಹಜಾರಗಳಲ್ಲಿ ಜಗತ್ತಿನಲ್ಲೇ ಅತ್ಯಂತ ದೊಡ್ಡದು. ಹಜಾರದ ಸುತ್ತಲಿನ ನಾಲ್ಕು ಗೋಡೆಗಳು ಮೊದಲು ಮೂರು ಮೂರು ಕಮಾನುಗಳನ್ನೊಳಗೊಂಡಿದ್ದವು. ಅನಂತರದಲ್ಲಿ ಉತ್ತರದ ಗೋಡೆಯ ಮಧ್ಯದ್ದೊಂದನ್ನು ಬಿಟ್ಟು ಉಳಿದ ಕಮಾನುಗಳನ್ನು ಗೋಡೆಗಳಿಂದ ಮುಚ್ಚಲಾಗಿದ್ದು, ದಕ್ಷಿಣದ ಮಧ್ಯ ಕಮಾನಿನಲ್ಲಿ ಮಾತ್ರ ಒಂದು ಪ್ರವೇಶದ್ವಾರಕ್ಕೆ ಅವಕಾಶ ಮಾಡಲಾಗಿದೆ. ಒಳಭಾಗದಲ್ಲಿ ಈ ಗೋಡೆಗಳಿಗೆ ಒತ್ತಿದಂತೆಯೇ ಮೇಲೆದ್ದು, ಅಡ್ಡಡ್ಡವಾಗಿ ಪರಸ್ಪರ ಛೇದಿಸುವ ಎಂಟು ಕಮಾನುಗಳನ್ನು ಅಳವಡಿಸಲಾಗಿದೆ. ನೆಲದಿಂದ ಸುಮಾರು 109' ಎತ್ತರದಲ್ಲಿ ಇವುಗಳ ತಲೆಬಿಂದುಗಳಿಂದ ಒಂದು ಅಷ್ಟಕೋನ ನಿರ್ಮಾಣವಾಗಿದೆ. ಇವುಗಳ ಮೇಲೆ ದುಂಡು ಗುಮ್ಮಟವನ್ನು ಕೂರಿಸಲಾಗಿದೆ. ನೆಲ ಚೌಕವಾಗಿದ್ದರೂ ಮೇಲೆ, ದುಂಡುಗುಮ್ಮಟವನ್ನಿಡಲು ಪರಸ್ಪರ ಛೇದಿಸುವ ಕಮಾನುಗಳನ್ನು ನಿರ್ಮಿಸಿರುವ ತಂತ್ರ ವಾಸ್ತುರಚನಾ ರೀತಿಯಿಂದ ವಿಶಿಷ್ಟವಾದ್ದು. ಈ ಕಮಾನುಗಳ ಮೇಲೆ ಗುಮ್ಮಟದ ಬುಡದಲ್ಲಿ ಅದರ ದುಂಡು ಒಳಗೋಡೆಗೆ ಹೊಂದಿಕೊಂಡಂತೆ ವರ್ತುಲಾಕರದಲ್ಲಿ ಹಬ್ಬಿರುವ 11' ಅಗಲದ ಒಂದು ಚಾಚು ಗ್ಯಾಲರಿ ಇದೆ. ಈ ಗ್ಯಾಲರಿ ನೆಲದಿಂದ 109' 6" ಮೇಲಿದೆ. ಈ ಮಟ್ಟದಿಂದ ಗುಮ್ಮಟದ ತಲೆ 68' 6" ಎತ್ತರದಲ್ಲಿದೆ. ಎಂದರೆ ಹಜಾರದ ಒಳಗೆ ನೆಲದಿಂದ ಗುಮ್ಮಟದ ನೆತ್ತಿಯ ವರೆಗಿನ ಎತ್ತರ 178'. ಗುಮ್ಮಟದ ವ್ಯಾಸ 124' 5". ಏಷ್ಯ ಖಂಡದಲ್ಲೇ ಅತಿ ದೊಡ್ಡದಾದ, ವಿಶ್ವದಲ್ಲಿ ಎರಡನೆಯದಾದ, ಗುಮ್ಮಟವಿದು. ಗೋಡೆಗಳ ರಚನೆಯಲ್ಲಿ ಸಾಮಾನ್ಯ ಕಲ್ಲುತುಂಡುಗಳನ್ನು ಗಾರೆಯೊಡನೆ ಹುದುಗಿಸಿ, ಒಳ ಹೊರಮ್ಮೈಗಳಲ್ಲಿ ಹಲವೆಡೆ ತೆಳು ಚಪ್ಪಡಿಗಳನ್ನು ಅಂಟಿಸಿ ಮೇಲೆ ಗಾರೆ ಬಳಿಯಲಾಗಿದೆ. ಮೇಲೆ ಹೋದಂತೆ ಸ್ವಲ್ಪ ಸ್ವಲ್ಪವಾಗಿ ಒಳ ಚಾಚುವ ಇಟ್ಟಿಗೆಯ ವರ್ತುಲಗಳನ್ನು ಒಂದರ ಮೇಲೊಂದರಂತೆ ಪೇರಿಸಿ ಗುಮ್ಮಟವನ್ನು ರಚಿಸಲಾಗಿದೆ. ಇಲ್ಲಿ ಉಪಯೋಗಿಸಿರುವ ಬಿಗಿ ಗಾರೆಯಿಂದಾಗಿ ಗುಮ್ಮಟ ಕಾಂಕ್ರೀಟಿನಲ್ಲಿ ಮಾಡಿದ ಬೋರಲಿಟ್ಟ ದೊಡ್ಡ ಬಟ್ಟಲಿನಂತೆ ಒಂದೇ ಘನವಾಗಿ ಭದ್ರವಾಗಿ ನಿಂತಿದೆ. ಗುಮ್ಮಟದ ಗೋಡೆಯ ದಪ್ಪ 10'; ಅದರ ಹೊರ ವ್ಯಾಸ 144'.



ಕಟ್ಟಡದ ಹೊರಗಿನ ನಾಲ್ಕು ಮೂಲೆಗಳಿಗೆ ಸೇರಿದಂತಿರುವ ಷಟ್ಕೋಣಾಕೃತಿಯ ಗೋಪುರಗಳ ಒಳಗಿರುವ ಮೆಟ್ಟಿಲುಗಳಿಂದ ಚಾವಣಿಯ ಮೇಲೇರಿ, ಗುಮ್ಮಟದಲ್ಲಿ ಕೊರೆದಿರುವ ಎಂಟು ಸಣ್ಣ ದ್ವಾರಗಳ ಮೂಲಕ ಒಳಗಿನ ಚಾಚು ಗ್ಯಾಲರಿಗೆ ಹೋಗಬಹುದು. ಇಲ್ಲಿ ವಿಶಾಲವಾದ ಆಚ್ಛಾದನ ಗುಮ್ಮಟದಿಂದ ಶಬ್ದತರಂಗಗಳು ಪ್ರತಿಧ್ವನಿಸಿ ವಿಶಿಷ್ಟ ಪರಿಣಾಮ ಉಂಟುಮಾಡುತ್ತವೆ. ಮಾತು, ಚಪ್ಪಾಳೆ ಅಥವಾ ಯಾವುದೇ ಶಬ್ದವನ್ನು ಇಲ್ಲಿ ಒಮ್ಮೆ ಹೊಮ್ಮಿಸಿದರೆ ಸುಮಾರು ಹತ್ತಕ್ಕೂ ಹೆಚ್ಚು ಸಲ ಅದು ಸ್ಪಷ್ಟವಾಗಿ ಪ್ರತಿಫಲಿಸುವುದಲ್ಲದೆ ಎಷ್ಟೇ ಸಣ್ಣ ಶಬ್ದವನ್ನು ಒಂದೆಡೆ ಉಂಟುಮಾಡಿದರೂ, ಈ ಗ್ಯಾಲರಿಯ ಯಾವುದೇ ಭಾಗದಲ್ಲಿರುವವರಿಗೂ ಅದೇ ಶಬ್ದ ಸ್ಪಷ್ಟವಾಗಿ ಗೋಡೆಯಿಂದ ಹೊರ ಬೀಳುವಂತೆ ಕೇಳುತ್ತದೆ. ಈ ಆಶ್ಚರ್ಯಕರ ವೈಶಿಷ್ಟ್ಯದಿಂದಾಗಿ ಇದು ಪಿಸುಗುಟ್ಟುವ ಗ್ಯಾಲರಿ ಎಂದು ಪ್ರಸಿದ್ಧವಾಗಿದೆ.

ಕಟ್ಟಡದ ಹೊರಮ್ಮೈಯ ವಿನ್ಯಾಸ ಸುಂದರವಾಗಿ ರೂಪಿತವಾಗಿದೆ. ಕಮಾನುಗಳನ್ನೊಳಗೊಂಡ ಎತ್ತರದ ಗೋಡೆಗಳ ಮೇಲೆ ಚಾವಣಿಯ ಮಟ್ಟದಲ್ಲಿ ಚಾಚು ಕಪೋತವಿದೆ. ಅದರ ಅಡಿಯಲ್ಲಿ ತೂಗಾಡುವ ಬಾಳೆಮೋತೆಗಳಿಂದ ಅಲಂಕೃತವಾಗಿರುವ ಗಂಧವಾರಣಗಳುಂಟು. ಎತ್ತರದಲ್ಲಿ ಕಟ್ಟಡದ ಸುತ್ತ ಹಬ್ಬಿರುವ ಈ ಅಲಂಕರಣ, ಗೋಡೆಗಳ ಬರಿಮ್ಮೈ ವೈಶಾಲ್ಯವನ್ನು ಖಂಡಿಸಿ ಅಲಂಕೃತ ಕಂಠಹಾರದಂತೆ ಸುಂದರವಾಗಿ ಜೋಡಣೆಗೊಂಡಿದೆ. ಅದರ ಮೇಲೆ ಸಣ್ಣ ಕಮಾನುಗಳ ಸಾಲೂ, ಅದಕ್ಕೂ ಮೇಲೆ ಚೂಪು ಪಟ್ಟೆಗಂಬಗಳ ಸಾಲೂ ಇವೆ. ಕಟ್ಟಡದ ನಾಲ್ಕೂ ಮೂಲೆಗಳಿಗೆ ಹೊಂದಿಕೊಂಡಂತಿರುವ ಷಡ್ಭುಜ ಗೋಪುರಗಳನ್ನು ಏಳು ಅಂತಸ್ತುಗಳಲ್ಲಿ ಎತ್ತಲಾಗಿದೆ. ಒಂದೊಂದು ಮುಖದಲ್ಲೂ ಚೂಪು ತುದಿಯ ಕಮಾನಿನ ಕಿಟಕಿಗಳನ್ನಿಡಲಾಗಿದೆ. ಈ ಗೋಪುರದ ಮೇಲ್ಭಾಗದಲ್ಲಿ ಚಿಕ್ಕ ಗುಮ್ಮಟಗಳಿವೆ. ಇವು ಚಾವಣಿಯ ಮಟ್ಟಕ್ಕಿಂತಲೂ ಮೇಲಿವೆ. ವಿಶಾಲ ಚಾವಣಿಯ ಮೇಲೆ ಮಧ್ಯದಲ್ಲಿರುವ ಬೃಹತ್ ಗುಮ್ಮಟ ಅರೆಗೋಳಾಕಾರದ್ದು. ಇದರ ತಳ ಕೂಡ ಮೀನಾರುಗಳ ಮೇಲಿರುವ ಚಿಕ್ಕ ಗುಮ್ಮಟಗಳಂತೆ ಪದ್ಮದಳಗಳಿಂದ ಸುತ್ತುವರಿಯಲ್ಪಟ್ಟಿದೆ. ಅಲ್ಲದೆ ಗೋಡೆಗಳ ಮೇಲೆಲ್ಲ ಗಾರೆಯಲ್ಲಿ ಅನೇಕ ಬಗೆಯ ವಿನ್ಯಾಸಗಳ ಅಲಂಕಾರವಿದೆ. ಈ ವಾಸ್ತು ಮತ್ತು ಅಲಂಕರಣ ಪರಸ್ಪರ ಪೂರಕವಾಗಿ, ಗೋಳಗುಮ್ಮಟವನ್ನು ಮೋಹಕ ಕೃತಿಯನ್ನಾಗಿ ಮಾಡಿವೆ. ಈ ಕಟ್ಟಡವನ್ನು ಹತ್ತಿರದಿಂದ ನೋಡುವವರಿಗೆ, ಇದರ ದೈತ್ಯಾಕಾರದ ಎದುರು ತಮ್ಮ ವಾಮನತ್ವದ ಅನುಭವವಷ್ಟೇ ಆದರೂ ದೂರದಿಂದ ನೋಡಿದಲ್ಲಿ ಈ ಸೌಂದರ್ಯದ ಸ್ವರೂಪ ಸ್ಪಷ್ಟವಾಗುತ್ತದೆ.


ಗೋಳಗುಮ್ಮಟದ ಒಳಹಜಾರದ ಮಧ್ಯೆ ದೊಡ್ಡ ಚೌಕ ಕಟ್ಟೆಯ ಮೇಲೆ ಮುಹಮ್ಮದನ ಮತ್ತು ಅವನ ಸಮೀಪ ಸಂಬಂಧಿಗಳ ಕೃತಕ ಗೋರಿಗಳಿವೆ. ನಿಜವಾದ ಗೋರಿಗಳು ಇದರ ಕೆಳಗೆ ನೆಲಮಾಳಿಗೆಯಲ್ಲಿವೆ. ಮುಹಮ್ಮದ ತನ್ನ ಆಳಿಕೆಯ ಉತ್ತರಾರ್ಧದಲ್ಲಿ ಈ ಕಟ್ಟಡವನ್ನು ಕಟ್ಟಲಾರಂಭಿಸಿ, ತನ್ನ ಕೊನೆಗಾಲದವರೆಗೂ ಮುಂದುವರಿಸಿದ. ಆದರೆ ಆ ಹೊತ್ತಿಗೂ ಕಟ್ಟಡದ ಗಾರೆಯ ಅಲಂಕರಣ ಮುಗಿದಿರಲಿಲ್ಲವಾಗಿ ಆ ಭಾಗಗಳು ಇಂದೂ ಅಪೂರ್ಣವಾಗಿಯೇ ಉಳಿದಿವೆ. ಮುಹಮ್ಮದ್ ತನ್ನ ಗೋರಿಗಾಗಿ ಬಹಳ ಆಸ್ಥೆ ವಹಿಸಿದ್ದನೆಂದೂ, ತನ್ನ ದೇಹವನ್ನು ಪವಿತ್ರ ಸ್ಥಳದಲ್ಲಿ ಹುಗಿಯಬೇಕೆಂಬ ಉದ್ದಿಶ್ಯದಿಂದ

ಇರಾಕಿನಲ್ಲಿ ಹುಸೇನನ ಸಮಾಧಿ ಇರುವ ಕರ್ಬಲಾದಿಂದ ಮಣ್ಣನ್ನು ತರಿಸಿಕೊಂಡಿದ್ದನೆಂದೂ ತಿಳಿದುಬಂದಿದೆ. ತನ್ನ ಸಮಾಧಿಗಾಗಿ ಈ ದೊರೆ ತಳೆದಿದ್ದ ಅಸೀಮ ಆಸಕ್ತಿಯಿಂದಾಗಿ ಜಗತ್ತಿನ ಉತ್ತಮ ವಾಸ್ತುರಚನೆಯೊಂದು ಮೈತಳೆಯಿತು.

ವಿನ್ಯಾಸದಲ್ಲಿ ಗೋಳಗುಮ್ಮಟ ಬಹಳ ಸರಳವಾಗಿದ್ದರೂ ಇದರ ಬೃಹದಾಕಾರ, ವಿವಿಧ ಭಾಗಗಳ ಹಿತಪ್ರಮಾಣ, ಮಿತ ಅಲಂಕರಣ ಮತ್ತು ಚತುರ ರಚನಾ ತಂತ್ರ – ಇವುಗಳಿಂದಾಗಿ ಆದಿಲ್‌ಷಾಹಿ ವಾಸ್ತುಶಿಲ್ಪದ ಉಚ್ಚತಮ ಸಾಹಸದ ಸಾಧನೆಯೆಂದು ಇದು ಪರಿಗಣಿತವಾಗಿದೆ. (ಎಸ್.ಎನ್.)

**ಗೋಳತ್ರಿಕೋಣಮಿತಿ :** ಗೋಳತ್ರಿಭುಜದ ಗುಣಗಳನ್ನು ಅಭ್ಯಸಿಸುವ ತ್ರಿಕೋಣ ಮಿತಿಭಾಗ (ಸ್ಫೆರಿಕಲ್ ಟ್ರಿಗನೊಮೆಟ್ರಿ). ಖಗೋಳವಿಜ್ಞಾನದ ಅಧ್ಯಯನದಲ್ಲಿ ಮೂಲಭೂತ ಪ್ರಾಮುಖ್ಯವಿರುವ ಶಾಸ್ತ್ರವಿದು. ಇದರ ಅನ್ವಯ ಸರ್ವೇಕ್ಷಣೆ (ಸರ್ವೇಯಿಂಗ್), ನೌಕಾಯಾನ (ನ್ಯಾವಿಗೇಷನ್), ಗಣಿತ ಮುಂತಾದ ಶಾಸ್ತ್ರಗಳಲ್ಲಿ ಉಂಟು.

ಗೋಳತ್ರಿಭುಜ : ಒಂದು ಗೋಳಕೇಂದ್ರದ ಮೂಲಕ ಸಾಗುವ ಯಾವುದೇ ಮೂರು ಸಮತಲಗಳು ಆ ಗೋಳವನ್ನು ಮೂರು ಮಹಾವೃತ್ತಗಳಲ್ಲಿ ಛೇದಿಸುತ್ತವೆ. ಇವುಗಳ ಕಂಸಗಳು ಗೋಳದ ಮೇಲ್ಮೈ ಮೇಲೆ ಸಂವೃತಿಸುವ ಯಾವುದೇ ಪ್ರದೇಶಕ್ಕೆ ಗೋಳತ್ರಿಭುಜವೆಂದು ಹೆಸರು. ಅಂದರೆ, ಒಂದು ಗೋಳತ್ರಿಭುಜದ ಭುಜಗಳು ಮಹಾವೃತ್ತಗಳ ಕಂಸಗಳು. ಇಂಥ ಒಂದು ತ್ರಿಭುಜ ಮೂರು ಆಯಾಮಗಳ ಆಕಾಶದಲ್ಲಿ ನೆಲೆಸಿದೆ ಎಂಬುದನ್ನು ಗಮನಿಸಬೇಕು. ಇದರ ಆರು ಧಾತುಗಳು, ಸಮತಲ ತ್ರಿಭುಜದಂತೆಯೇ ಮೂರು ಭುಜಗಳು ಹಾಗೂ ಮೂರು ಕೋನಗಳು. ಆದರೆ ಈ ಧಾತುಗಳನ್ನು ಅಳೆಯುವ ರೀತಿ ಮಾತ್ರ ಬೇರೆ.



ಚಿತ್ರ 1

ಚಿತ್ರ 1(a) ಯಲ್ಲಿ ಏಕಮಾನ (1) ತ್ರಿಜ್ಯವಿರುವ ಒಂದು ಗೋಳವನ್ನು ಪರಿಶೀಲಿಸಿದೆ. $O$ ಬಿಂದು ಇದರ ಕೇಂದ್ರ. $\sigma_1$ ಒಂದು ಮಹಾವೃತ್ತ. $A, B$ ಇದರ ಮೇಲಿನ ಎರಡು ಬಿಂದುಗಳು. $BC$ ಕಂಸ $O$ನಲ್ಲಿ ರಚಿಸುವ ಕೋನ $\alpha$ ಆಗಿರಲಿ. ಚಿತ್ರ 1($b$) ಯಲ್ಲಿ $\sigma_1, \sigma_2, \sigma_3$, ಎಂಬ ಮೂರು ಮಹಾವೃತ್ತಗಳು ಗೋಳದ ಮೇಲ್ಮೈ ಮೇಲೆ ಸಂವೃತಿಸುವ ಗೋಳತ್ರಿಭುಜ $ABC$ಯನ್ನು ನೆರಳು ಮಾಡಿ ತೋರಿಸಿದೆ. ಈಗ $\angle BOC=$ , $\angle COA=$ , $\angle AOB=\gamma$ ಆಗಿದ್ದರೆ ಆಗ $BC\,(=a), CA(=b), AB(=c)$ ಕಂಸಗಳ (ಅಂದರೆ ಗೋಳತ್ರಿಭುಜ ABCಯ ಭುಜಗಳು) ಮಾಪನಗಳು ಅನುಕ್ರಮವಾಗಿ , , $\gamma$ ಎಂದು ವ್ಯಾಖ್ಯಿಸುತ್ತೇವೆ. ಆದ್ದರಿಂದ $a=$ , $b=$ , $c=\gamma$ ಎಂಬುದು ಸ್ಪಷ್ಟ.

$\sigma_2$ ನೆಲೆಸಿರುವ ಸಮತಲ ಮತ್ತು $\sigma_3$ ನೆಲೆಸಿರುವ ಸಮತಲ ಇವುಗಳ ನಡುವಿನ ದ್ವಿತಲ ಕೋನವನ್ನು (ಎಂದರೆ $A$ ಬಿಂದುವಿನಲ್ಲಿ ಆಯಾ ಸಮತಲಗಳಲ್ಲಿ $CA$ ಮತ್ತು $BA$ ಕಂಸಗಳಿಗೆ ಎಳೆದ ಸ್ಪರ್ಶಕಗಳ ನಡುವಿನ ಕೋನ) ಶೃಂಗ $A$ಯಲ್ಲಿನ ಕೋನದ ಮಾಪನ ಎನ್ನುತ್ತೇವೆ. ಇದನ್ನು $A$ ಪ್ರತೀಕದಿಂದ ಸೂಚಿಸುತ್ತೇವೆ. ಇದೇ ರೀತಿ $\sigma_3, \sigma_1$ ಸಮತಲಗಳ ನಡುವಿನ ದ್ವಿತಲ ಕೋನ $B$ ಮತ್ತು $\sigma_1\ \sigma_2$ ಸಮತಲಗಳ ನಡುವಿನ ದ್ವಿತಲ ಕೋನ $C$. ಹೀಗೆ ಗೋಳತ್ರಿಭುಜ $ABC$ಯ ಆರು ಧಾತುಗಳು $a,b,c$ ಮತ್ತು $A,B,C$ ಇವೆಲ್ಲವೂ ಕೋನಗಳೇ ಎಂಬುದನ್ನು ಗಮನಿಸಬೇಕು.

ಒಂದು ಗೋಳತ್ರಿಭುಜದಲ್ಲಿ ಯಾವುದೇ ಭುಜದ ಉದ್ದ ಅರ್ಧವೃತ್ತಕ್ಕಿಂತ ಕಡಿಮೆ ಎಂದು ಭಾವಿಸುತ್ತೇವೆ. ಆದ್ದರಿಂದ ತ್ರಿಭುಜದ ಯಾವುದೇ ಕೋನ ಎರಡು ಲಂಬಕೋನಗಳಿಗಿಂತ ಕಡಿಮೆ ಎಂಬುದು ಸಿದ್ಧಿಸುತ್ತದೆ. ಸಾರ್ವತ್ರಿಕತೆಗೆ ಇದರಿಂದ ಏನೂ ಬಾಧಕವಿಲ್ಲ.

ಒಂದು ಮಹಾವೃತ್ತಕ್ಕೆ ಅದರ ಕೇಂದ್ರದ ಮೂಲಕ ಎಳೆದ ಲಂಬವು ಗೋಳವನ್ನು ಸಂಧಿಸುವ ಎರಡು ಬಿಂದುಗಳು ಆ ಮಹಾವೃತ್ತದ ಧ್ರುವಗಳು. ಇವನ್ನು ಜೋಡಿಸುವ ರೇಖೆಗೆ (ಇದು ಗೋಳದ ಒಂದು ವ್ಯಾಸ) ಮಹಾವೃತ್ತದ ಅಕ್ಷವೆಂದು ಹೆಸರು. ಗೋಳತ್ರಿಭುಜ $ABC$ ಯನ್ನು ಸಂವೃತಿಸುವ $\sigma_1, \sigma_2, \sigma_3$ ಎಂಬ ಮೂರು ಮಹಾವೃತ್ತಗಳ (ಅಂದರೆ $BC,CA,AB$ ಕಂಸಗಳ) ಧ್ರುವಗಳು ಅನುಕ್ರಮವಾಗಿ $A', A''$ ; $B', B''$ ; $C', C''$ ಆಗಿರಲಿ, ಇವುಗಳ ಪೈಕಿ $A,B,C$ ಶೃಂಗಗಳ ಸಮೀಪ ಇರುವ ಧ್ರುವಗಳು $A', B', C'$ ಎಂದು ಭಾವಿಸೋಣ. ಈ ಮೂರು ಬಿಂದುಗಳು ರಚಿಸುವ ಗೋಳತ್ರಿಭುಜಕ್ಕೆ $\Delta ABC$ಯ ಧ್ರುವೀಯ ತ್ರಿಭುಜ (ಪೋಲಾರ್ ಟ್ರೈಆಂಗಲ್) ಎಂದು ಹೆಸರು. $\Delta A'B'C'$ ಯ ಧ್ರುವೀಯ ತ್ರಿಭುಜ $\Delta ABC$ ಆಗುತ್ತದೆ ಎಂದು ತೋರಿಸಬಹುದು. ಇವೆರಡು ಪರಸ್ಪರ ಧ್ರುವೀಯ ತ್ರಿಭುಜಗಳ ನಡುವೆ ಈ ಕೆಳಗಿನ ಸಂಬಂಧಗಳಿವೆ.

$$A' = \pi - a, \quad a' = \pi - A$$
$$B' = \pi - b, \quad b' = \pi - B$$
$$C' = \pi - c, \quad c' = \pi - C$$

ಬಹು ಮುಖ್ಯ ಗುಣಗಳಿವು. ಒಂದು ತ್ರಿಭುಜದ ಭುಜಗಳನ್ನೂ ಕೋನಗಳನ್ನೂ ಸಂಯೋಜಿಸುವ ಯಾವುದೇ ಸೂತ್ರದಲ್ಲಿ ಭುಜ ಹಾಗೂ ಕೋನಗಳ ಬದಲು ಅವುಗಳ ಸರಳಪೂರಕಗಳನ್ನು ಉಪಯೋಗಿಸಿ ಹೊಸತೊಂದು ಸೂತ್ರವನ್ನು ಪಡೆಯಬಹುದು.

ಗೋಳತ್ರಿಭುಜದ ಕೆಲವು ಮುಖ್ಯ ಗುಣಗಳನ್ನು ಇಲ್ಲಿ ತಿಳಿಸಿದೆ:

1. ಎರಡು ಭುಜಗಳ ಮೊತ್ತ ಮೂರನೆಯ ಭುಜಕ್ಕಿಂತ ಅಧಿಕ ($a + b>c$, ಇತ್ಯಾದಿ).

2. ಮೂರೂ ಭುಜಗಳ ಮೊತ್ತ ಮಹಾವೃತ್ತದ ಪರಿಧಿಗಿಂತ ಕಡಿಮೆ ($a+b+c<2\pi$).


3. ಮೂರು ಕೋನಗಳ ಮೊತ್ತ ಎರಡು ಲಂಬಕೋನಗಳಿಗಿಂತ ಅಧಿಕ, ಆದರೆ ಆರು ಲಂಬಕೋನಗಳಿಗಿಂತ ಕಡಿಮೆ ($\pi<A+B+C<3\pi$.), ಮಹಾವೃತ್ತದ ಪರಿಧಿಗಿಂತ ಕಡಿಮೆ.

4. ಸಮದ್ವಿಭುಜ ತ್ರಿಭುಜದ ಪಾದಕೋನಗಳು (ಬೇಸ್ ಆಂಗಲ್ಸ್) ಸಮ; ಮತ್ತು ವಿಲೋಮವಾಗಿ ಕೂಡ.

5. $\Delta ABC$ ಯಲ್ಲಿ $B > C$ ಆಗಿದ್ದರೆ $b > c$ ಮತ್ತು ವಿಲೋಮವಾಗಿ ಕೂಡ.

ಗೋಳತ್ರಿಕೋಣಮಿತೀಯ ಸೂತ್ರಗಳು. 1 ಕೊಸೈನುಗಳ ನಿಯಮ: $a,b,c$ ಒಂದು ಗೋಳತ್ರಿಭುಜದ ಭುಜಗಳೂ $A,B,C$ ಈ ಭುಜಗಳ ಅನುಕ್ರಮ ಅಭಿಮುಖ ಕೋನಗಳೂ ಆಗಿದ್ದರೆ ಆಗ

$$\cos a=\cos b \cos c+\sin b \sin c \cos A$$
$$\cos b=\cos c \cos a+ \sin c \sin a \cos B$$
$$\cos c=\cos a \cos b+ \sin a \sin b \cos C$$



ಚಿತ್ರ 2

ಚಿತ್ರ (2) ರಲ್ಲಿ $b$ ಮತ್ತು $c$ ಗಳು ಲಘುಕೋನಗಳೆಂದೂ (< ) $ABC$ ಗೋಳ ತ್ರಿಭುಜ ಏಕಮಾನ ತ್ರಿಜ್ಯವಿರುವ ಗೋಳದ ಅಂಗವೆಂದೂ ಭಾವಿಸಲಾಗಿದೆ. $AB$ ಕಂಸಗಳಿಗೆ $A$ಯಲ್ಲಿ ಎಳೆದ ಸ್ಪರ್ಶಕಗಳು $OB$ ಮತ್ತು $OC$ಗಳನ್ನು ಅನುಕ್ರಮವಾಗಿ $B'$ ಮತ್ತು $C'$ ಬಿಂದುಗಳಲ್ಲಿ ಛೇದಿಸಲಿ. ಆಗ $OB'C'$ ಮತ್ತು $AB'C'$ ಗಳಿಂದ (ಇವು ಸಮತಲ ತ್ರಿಭುಜಗಳು)

$$= AC'^2 + AB'^2 - 2.AC', AB'.\cos A$$

ದೊರೆಯುತ್ತವೆ. ಅಲ್ಲದೆ ಲಂಬಕೋನ ತ್ರಿಭುಜಗಳಾದ OAC' ಮತ್ತು OAB' ಗಳಿಂದ

$$OC' = \sec b,\ OB'. \sec c,$$
$$AC' = \tan b, \quad AB' = \tan c$$

ಇದನ್ನು ಸರಳೀಕರಿಸಿದರೆ $\cos a = \cos b \cos c + \sin b \sin c \cos A$ ದೊರೆಯುತ್ತದೆ. ಇದೇ ರೀತಿ ಉಳಿದ ಎರಡು ರೂಪಗಳನ್ನು ಕೂಡ ಪಡೆಯಬಹುದು. ಈ ಸಾಧನೆಯಲ್ಲಿ $b$ ಮತ್ತು $c$ ಗಳನ್ನು ಲಘುಕೋನಗಳೆಂದು ಆಯ್ದಿರುವುದು ಕೇವಲ ಸೌಕರ್ಯಕ್ಕಾಗಿ. ಮೇಲಿನ ಸೂತ್ರ ಸಾರ್ವತ್ರಿಕವಾಗಿ ಸತ್ಯವೆಂದು ಸಾಧಿಸುವುದು ಸಾಧ್ಯವಿದೆ.

ಗೋಳತ್ರಿಭುಜ *ABC*ಯ ಧ್ರುವೀಯ ತ್ರಿಭುಜ *A'B'C'* ಆಗಿದ್ದರೆ ಆಗ ಮೇಲಿನ ಸೂತ್ರಗಳು ಈ ಕೆಳಗಿನ ರೂಪ ಪಡೆಯುತ್ತವೆ :


ಆದ್ದರಿಂದ ಸಾರ್ವತ್ರಿಕವಾಗಿ $\Delta ABC$ಯಲ್ಲಿ

ಎಂಬ ಸೂತ್ರಗಳು ಸಹ ದೊರೆಯುತ್ತವೆ.

2 ಸೈನುಗಳ ನಿಯಮ : ನಿರೂಪಣೆ ಹೀಗಿದೆ–

ಚಿತ್ರ (3)ರಲ್ಲಿ *CD*ಯನ್ನು *OAB* ಸಮತಲಕ್ಕೆ, *DP*ಯನ್ನು *OA*ಗೆ ಮತ್ತು *DQ*ವನ್ನು *OB*ಗೆ ಲಂಬವಾಗಿ ಎಳೆದಿದೆ. *C, P ; C, Q* ಗಳನ್ನು [illegible] ಲಂಬಕೋನ ತ್ರಿಭುಜಗಳು. ಚಿತ್ರ (3)ರಿಂದ ಈ ಕೆಳಗಿನ ಫಲಿತಾಂಶಗಳು ಸಿದ್ಧಿಸುತ್ತವೆ : $QC = \sin a$

$$\tan\frac{C}{2} = \frac{r}{\sin(s-c)}, \tan\frac{A}{2} = \sqrt{\frac{\sin}{\sin s \sin(s-a)}}$$



ಚಿತ್ರ 3


$\therefore\ DC = \sin a \sin B$ ಇದೇ ಪ್ರಕಾರ

$$\therefore\ \sin a \sin B = \sin b \sin A$$

$\therefore\ \dfrac{\sin A}{\sin a} = \dfrac{\sin B}{\sin b}$ ಇದೇ ಪ್ರಕಾರ ಇವನ್ನು $\dfrac{\sin C}{\sin c}$ ಗೆ ಕೂಡ ಸಮವೆಂದು ತೋರಿಸಬಹುದು.

ನಿಗಮನಗಳು : ಮೇಲೆ ಸಾಧಿಸಿರುವ ಸೂತ್ರಗಳಿಂದ ಕೆಲವು ಮುಖ್ಯ ನಿಗಮನಗಳನ್ನು ಪಡೆಯಬಹುದು.

1 ಚಿತ್ರ (4)ರಲ್ಲಿ *a,b, B,C* ಧಾತುಗಳು ತಿಳಿದಿವೆ. ಅವನ್ನು ಸಂಬಂಧಿಸಲು *cos a cos C=sin a cot b-sin C cot B* ಎಂಬ ಸೂತ್ರ ಉಂಟು. ಇದರ ಸಾಧನೆಯನ್ನು ಇಲ್ಲಿ ಕೊಟ್ಟಿದೆ.



ಚಿತ್ರ 4

$$\cos b = \cos a \cos x + \sin a \sin x \cos B$$
$$\cos x = \cos a \cos b + \sin a \sin b \cos C$$
$$\frac{\sin x}{\sin C} = \frac{\sin b}{\sin B}$$

ಎಂಬ ಮೂರು ಗೊತ್ತಿರುವ ಸೂತ್ರಗಳಲ್ಲಿ *sinx* ಮತ್ತು *cosx* ಗಳನ್ನು ವಿಸರ್ಜಿಸಿ ಸರಳೀಕರಿಸಿ ಪದಗಳನ್ನು ವ್ಯವಸ್ಥಿತಗೊಳಿಸಿದರೆ ಮೇಲಿನ ಸೂತ್ರ ಬರುತ್ತದೆ. ಇದನ್ನು ನೆನಪಿನಲ್ಲಿಡುವ ಸೂತ್ರ ಹೀಗಿದೆ :

cos (ಒಳ ಭುಜ) cos (ಒಳ ಕೋನ)=sin (ಒಳ ಭುಜ) cot (ಬೇರೆ ಭುಜ)-sin (ಒಳ ಕೋನ) cot (ಬೇರೆ ಕೋನ)

2 ಗೋಳತ್ರಿಕೋಣಮಿತಿಯ ಅರ್ಧಕೋನ ಸೂತ್ರಗಳು ಹೀಗಿವೆ :

$$\sin A = \frac{2}{\sin b \sin c}[\sin s \sin(s-a)\sin(s-b)\sin(s-c)]^{\frac{1}{2}}$$

ಇಲ್ಲಿ $s = \frac{1}{2}(a+b+c)$ ಮತ್ತು

$$r = [\sin(s-a)\sin(s-b)\sin(s-c)/\sin s]^{\frac{1}{2}}$$

ಈ ಸೂತ್ರಗಳನ್ನು ಸಮತಲ ತ್ರಿಕೋಣಮಿತಿಯಲ್ಲಿ ಅನುರೂಪ ಸೂತ್ರಗಳನ್ನು ಪಡೆಯಲು ಬಳಸುವ ವಿಧಾನದಿಂದ ಪಡೆಯಬಹುದು. ಇದೇ ಪ್ರಕಾರ

$S = \frac{1}{2}(A+B+C)$ ಮತ್ತು

$$R = [\cos(S-A)\cos(S-B)\cos(S-C)/(-\cos S)]^{\frac{1}{2}}$$

ಆಗಿರುವಾಗ

$$\cot\frac{a}{2} = \frac{R}{S-A}$$
$$\cot\frac{b}{2} = \frac{R}{S-B}$$
$$\cot\frac{c}{2} = \frac{R}{S-C}$$

ಸಮತಲ ತ್ರಿಕೋಣಮಿತಿಯಲ್ಲಿನ ಅನುರೂಪ ಸೂತ್ರಗಳೊಡನೆ ಮೇಲಿನ ಸೂತ್ರಗಳ ಸಾದೃಶ್ಯ ಗಮನಾರ್ಹವಾಗಿದೆ.

ಗೋಳತ್ರಿಭುಜದ ಬಿಡಿಸುವಿಕೆ : ಒಂದು ಗೋಳತ್ರಿಭುಜದ ಮೂರು ಧಾತುಗಳು ದತ್ತವಾಗಿರುವ ಕೆಳಗಿನ ಸಂದರ್ಭಗಳಲ್ಲಿ ಆ ತ್ರಿಭುಜವನ್ನು ಮೇಲೆ ನಿರೂಪಿಸಿರುವ ವಿವಿಧ ಸೂತ್ರಗಳ ಬಳಕೆಯಿಂದ ಬಿಡಿಸಬಹುದು. 1 ಮೂರು ಭುಜಗಳು ದತ್ತ, 2 ಎರಡು ಭುಜಗಳೂ ಅವುಗಳ ನಡುವಿನ ಕೋನವೂ ದತ್ತ, 3 ಮೂರು ಕೋನಗಳು ದತ್ತ, 4 ಎರಡು ಕೋನಗಳೂ ಅವನ್ನು ಜೋಡಿಸುವ ಭುಜವೂ ದತ್ತ, 5 ಎರಡು ಭುಜಗಳೂ ಒಂದು ಅಭಿಮುಖ ಕೋನವೂ ದತ್ತ, 6 ಎರಡು ಕೋನಗಳೂ ಅವುಗಳ ಪೈಕಿ ಒಂದರ ಅಭಿಮುಖ ಬಾಹುವೂ ದತ್ತ.

1. *a,b,c* ದತ್ತವಾದಾಗ

*cos a=cos b cos c+sin b sin c cos A* ಸೂತ್ರ *A*ಯನ್ನು ಕೊಡುತ್ತದೆ. ಇದೇ ರೀತಿ *B,C* ಗಳನ್ನು ಪಡೆಯಬಹುದು.

2. *a,b,c* ದತ್ತವಾದಾಗ

*cos c= cos a cos b+sin a sin b cos C* ಸೂತ್ರ *c* ಯನ್ನು ಕೊಡುತ್ತದೆ. ಬಳಿಕ (1)ರ ಅನುಸಾರ *A,B* ಗಳನ್ನು ಪಡೆಯಬಹುದು.

3. *A,B,C* ದತ್ತವಾದಾಗ (ಧ್ರುವೀಯ ತ್ರಿಭುಜ)

$\cos A = -\cos B \cos C + \sin B \sin C \cos a$ ಸೂತ್ರ a ಯನ್ನು ಕೊಡುತ್ತದೆ. ಇದೇರೀತಿ b,c ಗಳನ್ನು ಪಡೆಯಬಹದು.

4. *B,C, a* ದತ್ತವಾದಾಗ

*cos A=-cos B cos C +sin B +sin C cos a* ಸೂತ್ರ *A*ಯನ್ನು ಕೊಡುತ್ತದೆ. ಬಳಿಕ

ಸೂತ್ರಗಳಿಂದ *b,c* ಗಳನ್ನು ಪಡೆಯಬಹುದು.

5. *b,c, B* ದತ್ತವಾದಾಗ

$$\frac{\sin b}{\sin B} = \frac{\sin c}{\sin C}$$

ಸೂತ್ರ *C* ಕೊಡುತ್ತದೆ. ಬಳಿಕ

$\cos b = \cos c \cos a + \sin c \sin a \cos B$ ಸೂತ್ರದಿಂದ *a* ಯನ್ನೂ

ಸೂತ್ರದಿಂದ *A*ಯನ್ನೂ ಪಡೆಯಬಹುದು.

6. *b,B,C* ದತ್ತವಾದಾಗ

$$\frac{\sin b}{\sin B} = \frac{\sin c}{\sin C}$$


ಸೂತ್ರ *c* ಯನ್ನು ಕೊಡುತ್ತದೆ. ಬಳಿಕ ಈ ಹಿಂದಿನಂತೆ *a* ಮತ್ತು *A*ಗಳನ್ನು ಪಡೆಯಬಹುದು.

ನೇಪಿಯರನ ಸೂತ್ರವಿಧಿಗಳು : ಗೋಳತ್ರಿಭುಜದಲ್ಲಿನ ಒಂದು ಕೋನ ಲಂಬಕೋನವಾದಾಗ ಮೇಲಿನ ಸೂತ್ರಗಳು ಸರಳರೂಪವನ್ನು ತಳೆಯುತ್ತವೆ.

$\Delta ABC$ ಯಲ್ಲಿ C= $\frac{\pi}{2}$ ಎಂದು ಭಾವಿಸೋಣ. ಆಗ

ಇತ್ಯಾದಿ ಸುಲಭ ಸೂತ್ರಗಳು ಲಭ್ಯವಾಗುತ್ತವೆ. ಇವೆಲ್ಲವನ್ನೂ ಸುಲಭವಾಗಿ ನೆನಪಿನಲ್ಲಿಟ್ಟುಕೊಂಡು ಬರೆಯಲು ಎರಡು ಸೂತ್ರವಿಧಿಗಳು (ರೂಲ್ಸ್) ಇವೆ. ಅವನ್ನು ಅವುಗಳ ಆವಿಷ್ಕರ್ತೃ ನೇಪಿಯರನ ಹೆಸರಿನಿಂದ ಕರೆಯಲಾಗಿದೆ. $\Delta ABC$ ಯಲ್ಲಿ

. ಇದನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಈ ಕೋನವನ್ನು ರಚಿಸುವ *a,b*



ಚಿತ್ರ 5

ಭುಜಗಳನ್ನು ಹಾಗೆಯೇ ಇಡುತ್ತೇವೆ. ಉಳಿದ ಧಾತುಗಳ (*B,c, A*) ಲಂಬಪೂರಕ ಗಳನ್ನು (ಕಾಂಪ್ಲಿಮೆಂಟ್ಸ್) ಗಣಿಸುತ್ತೇವೆ. (ಅವು $\frac{\pi}{2}$-B. -c, -A). ಈ ಐದು ಧಾತುಗಳನ್ನು, ಒಂದು ವೃತ್ತವನ್ನು ಐದು ಖಂಡಗಳಾಗಿ ವಿಭಾಗಿಸಿ ಒಂದೊಂದು ಖಂಡದೊಳಗೆ ಒಂದೊಂದರಂತೆ, ಅವು ತ್ರಿಭುಜದಲ್ಲಿ ಬರುವ ಕ್ರಮದಲ್ಲಿ, ಬರೆಯುತ್ತೇವೆ. (ಚಿತ್ರ 5). ನೇಪಿಯರನ ಸೂತ್ರವಿಧಿಗಳ ನಿರೂಪಣೆ ಹೀಗಿದೆ :

ನಡುವಣ ಧಾತುವಿನ ಸೈನ್=ಪಾರ್ಶ್ವ ಧಾತುಗಳ ಟ್ಯಾಂಜೆಂಟುಗಳ ಗುಣಲಬ್ಧ

ನಡುವಣ ಧಾತುವಿನ ಸೈನ್= ಅಭಿಮುಖ ಧಾತುಗಳ ಕೊಸೈನುಗಳ ಗುಣಲಬ್ಧ


ಉದಾಹರಣೆಗೆ -*C* ನಡುವಣ ಧಾತುವಾಗಿರಲಿ. ಆಗ -*A*, -*B* ಧಾತುಗಳು ಪಾರ್ಶ್ವಧಾತುಗಳೂ, *a,b* ಧಾತುಗಳು ಅಭಿಮುಖ ಧಾತುಗಳೂ ಆಗುತ್ತವೆ. ನೇಪಿಯರನ ಸೂತ್ರವಿಧಿಗಳ ಪ್ರಕಾರ

ಮತ್ತು $\sin\left(\frac{\pi}{2} - C\right) = \cos a \cos b$

$$\therefore \cos C = \cot A \cot B$$

=

ಒಂದು ಲಂಬಕೋನ ಗೋಳತ್ರಿಭುಜದಲ್ಲಿ ಯಾವುದೇ ಎರಡು ಧಾತುಗಳು ದತ್ತವಾಗಿರುವಾಗ ಆ ತ್ರಿಭುಜವನ್ನು ಬಿಡಿಸಬಹುದು.



ಚಿತ್ರ 6

ಗೋಳತ್ರಿಭುಜದ ಇತರ ಗುಣಗಳು : *ABC* ಗೋಳತ್ರಿಭುಜ ದಲ್ಲಿ *AD* ಮಹಾವೃತ್ತವನ್ನು *BC* ಗೆ ಲಂಬವಾಗಿ ಎಳೆದಿದೆ (ಚಿತ್ರ 6). ಇದೇ ರೀತಿ *BE,CF* ಗಳನ್ನು ಅನುಕ್ರಮವಾಗಿ *CA, AB* ಗಳಿಗೆ ಲಂಬಗಳಾಗಿ ಎಳೆದಿದೆ. ಇವು ಸಂಪಾತಿಸುತ್ತವೆ (ಕನ್‌ಕರೆಂಟ್).

1 ಈಗ *sin a sin AD=sin b sin BE= sin c sin CF=2n*


*sin A sin AD=sin b sin BE=sin c sin CF=2N*

ಇಲ್ಲಿ *n=[ sin s sin (s-a) sin (s-b) sin (s-c)]½*

*N=[-cos S cos (S-A)cos (S-B) cos (S-C)] ½*

*2s=a+b+c, 2S=A+B+C*

ಆದ್ದರಿಂದ $\frac{\sin a}{\sin A} = \frac{\sin b}{\sin B} = \frac{\sin c}{\sin C} = \frac{n}{N}$



ಚಿತ್ರ 7

2. *ABC* ಗೋಳತ್ರಿಭುಜದಲ್ಲಿ ಶೃಂಗಗಳ ಮೂಲಕ ಎಳೆದ ಯಾವುದೇ ಮೂರು ಮಹಾವೃತ್ತಗಳು *AD, BE, CF* ಸಂಪಾತಿಸಿದರೆ ಆಗ

$$\frac{\sin BD \sin CE \sin AF}{\sin DC \sin EA \sin FB} = +1$$


ಮತ್ತು ವಿಲೋಮವಾಗಿ ಕೂಡ. ಇದನ್ನು ಉಪಯೋಗಿಸಿ ಅಥವಾ ಸ್ವತಂತ್ರವಾಗಿ ಈ ಕೆಳಗಿನ ಪ್ರಮೇಯಗಳನ್ನು ಸಾಧಿಸಬಹುದು:

*(a)* ಗೋಳತ್ರಿಭುಜದ ಮೂರು ಲಂಬಗಳು ಸಂಪಾತಿಸುತ್ತವೆ.

*(b)* ಗೋಳತ್ರಿಭುಜದ ಕೋನಗಳನ್ನು ಅರ್ಧಿಸುವ ಮಹಾವೃತ್ತಗಳು ಸಂಪಾತಿಸುತ್ತವೆ.

*(c)* ಶೃಂಗಗಳನ್ನು ಆಯಾ ಅಭಿಮುಖ ಬಾಹುವಿನ ಮಧ್ಯ ಬಿಂದುವಿಗೆ ಸೇರಿಸುವ ಮಹಾವೃತ್ತಗಳು ಸಂಪಾತಿಸುತ್ತವೆ.

3. ಗೋಳತ್ರಿಭುಜ $ABC$ಯ ಭುಜಗಳನ್ನು ಲಂಬವಾಗಿ ಅರ್ಧಿಸುವ ಮಹಾವೃತ್ತಗಳು $S$ ಬಿಂದುವಿನಲ್ಲಿ ಸಂಪಾತಿಸುತ್ತವೆ (ಚಿತ್ರ 7). ಆಗ $SA = SB = SC$. ಆದ್ದರಿಂದ $S$ ಬಿಂದು ಧ್ರುವವಾಗಿಯೂ $SA = SB = SC = R$ ತ್ರಿಜ್ಯವಾಗಿಯೂ ಇರುವ ಅಲ್ಪ ವೃತ್ತವನ್ನೆಳೆದರೆ ಅದು $\Delta\ ABC$ ಪರಿವೃತ್ತ (ಸರ್ಕಮ್ ಸರ್ಕಲ್) ಆಗುತ್ತದೆ. $\Delta\ ABC$ ಕೋನಾರ್ಧಕಗಳು ಕೂಡ ಸಂಪಾತಿಸುವುವಷ್ಟೆ. ಸಂಪಾತಬಿಂದು $I$ ನಿಂದ $IL, IM, IN$ ಕಂಸಗಳನ್ನು ಭುಜಗಳಿಗೆ ಲಂಬವಾಗಿ ಎಳೆದರೆ $IL=IM=IN$ ಆಗುತ್ತವೆ. ಇವುಗಳ ಬೆಲೆ $r$ ಆಗಿರಲಿ. $I$ ಧ್ರುವವಾಗಿ $r$ ತ್ರಿಜ್ಯವಾಗಿ ಇರುವ ಲಘುವೃತ್ತ ತ್ರಿಭುಜದ ಮೂರು ಭುಜಗಳನ್ನೂ ಸ್ಪರ್ಶಿಸುತ್ತದೆ. ಇದು $\Delta\ ABC$ಯ ಒಳವೃತ್ತ. ಹೀಗೆಯೇ $BC$ ಭುಜವನ್ನು ಒಳಗಡೆಯೂ $AB, AC$ ಭುಜಗಳನ್ನು ಹೊರಗಡೆಯೂ ಸ್ಪರ್ಶಿಸುವ ಲಘುವೃತ್ತವನ್ನು ಕೂಡ ಎಳೆಯಬಹುದು (ಚಿತ್ರ 8). ಇದು ತ್ರಿಭುಜದ ಒಂದು ಹೊರವೃತ್ತ. ಇದೇ ತೆರನ ಇನ್ನೂ ಎರಡು ಹೊರವೃತ್ತಗಳಿವೆ.




ಚಿತ್ರ 8


$AB, AC$ ಭುಜಗಳನ್ನು ಮುಂದುವರಿಸಿದಾಗ ಅವು $A$ ಗೆ ವ್ಯಾಸಾಭಿಮುಖವಾದ $A'$ ಬಿಂದುವಿನಲ್ಲಿ ಸಂಧಿಸುತ್ತವೆ. $ABA'$ ಮತ್ತು $ACA'$ ಮಹಾವೃತ್ತಗಳು ಗೋಳದ ಮೇಲೆ ಒಂದು ಇಂದುಕವನ್ನು (ಲ್ಯೂನ್) ರಚಿಸುತ್ತವೆ. $ABC$ ಮತ್ತು $A'BC$ ತ್ರಿಭುಜಗಳಿಗೆ ಸಹೇಂದುಕ (ಕೋಲ್ಯೂನಾರ್) ತ್ರಿಭುಜಗಳೆಂದು ಹೆಸರು. $\Delta\ A'BC$ ಯ ಒಳವೃತ್ತ $\Delta\ A'BC$ ಗೆ ಹೊರವೃತ್ತವಾಗುತ್ತದೆ.

4 ಇತರ ಕೆಲವು ಪ್ರಮೇಯಗಳನ್ನು ಇಲ್ಲಿ ನಿರೂಪಿಸಿದೆ.

($a$) ಒಂದು ಮಹಾವೃತ್ತದ ಮೇಲೆ $X, Y, Z$ ಮೂರು ಬಿಂದುಗಳಾಗಿ ಗೋಳದ ಮೇಲೆ $P$ ಬೇರೊಂದು ಬಿಂದುವಾಗಿದ್ದರೆ ಆಗ

$$\cos PX \sin YZ + \cos PY \sin ZX + \cos PZ \sin XY = 0$$

ಇಲ್ಲಿ $YZ, ZX, XY$ ಗಳನ್ನು ಸೂಕ್ತ ಧನ ಅಥವಾ ಋಣ ಚಿಹ್ನೆಗಳೊಂದಿಗೆ ಉಪಯೋಗಿಸಬೇಕು. ಉದಾಹರಣೆಗೆ $ZY=-YZ$.




ಚಿತ್ರ 9


($b$) $ABC$ ತ್ರಿಭುಜದ ಭುಜಗಳನ್ನು ಒಂದು ಮಹಾವೃತ್ತ $L, M, N$ ಬಿಂದುಗಳಲ್ಲಿ ಸಂಧಿಸಿದರೆ

$$\frac{\sin BL \ \sin CM \ \sin AN}{\sin LC \ \sin MA \ \sin NB} = -1$$

(ಇದು ಮೆನೆಲಾಸನ ಪ್ರಮೇಯವನ್ನು ಹೋಲುತ್ತದೆ.)

($c$) $ABCD$ ಗೋಳೀಯ ಚತುರ್ಭುಜದ ಶೃಂಗಗಳು ಒಂದು ಲಘುವೃತ್ತದ ಮೇಲಿದ್ದರೆ ಆಗ $A + C = B + D$.

($d$) $A, B$ ಕೇಂದ್ರಗಳಾಗಿ ಇರುವ ಎರಡು ಲಘುವೃತ್ತಗಳಿಗೆ ಗೋಳದ ಮೇಲಣ ಒಂದು ಬಿಂದು $P$ ಯಿಂದ ಎಳೆದ ಸ್ಪರ್ಶವೃತ್ತಗಳು ಸಮವಾಗಿದ್ದರೆ $P$ ಬಿಂದುವಿನ ಪಥ $AB$ ವೃತ್ತಕ್ಕೆ ಲಂಬವಾಗಿರುವ ಮಹಾವೃತ್ತ (ಚಿತ್ರ 10). ಇದಕ್ಕೆ ಲಘುವೃತ್ತಗಳ ಮೂಲಾಕ್ಷವೃತ್ತವೆಂದು (ರ್‍ಯಾಡಿಕಲ್ ಸರ್ಕಲ್) ಹೆಸರು. ದತ್ತ ಲಘುವೃತ್ತಗಳು ಎರಡು ಬಿಂದುಗಳಲ್ಲಿ ಸಂಧಿಸಿದರೆ ಈ ಬಿಂದುಗಳನ್ನು ಸೇರಿಸತಕ್ಕ ಮಹಾವೃತ್ತವೇ ಮೂಲಾಕ್ಷವೃತ್ತ. ಮೂಲಾಕ್ಷವೃತ್ತದ ಹಾಗೂ ಸಹಮೂಲಾಕ್ಷ (ಕೋಆಕ್ಸಿಯಲ್) ವೃತ್ತ ಸಮುದಾಯದ ಗುಣಗಳನ್ನು ಸಮತಳಗಣಿತದ ವಿಧಾನಗಳನ್ನನುಸರಿಸಿ ಅನೇಕವಾಗಿ ಪಡೆಯಬಹುದು.




ಚಿತ್ರ 10

($e$) ಸಮತಳ ತ್ರಿಭುಜದಲ್ಲಿ ಒಳವೃತ್ತವನ್ನೂ ಹೊರವೃತ್ತಗಳನ್ನೂ ಸ್ಪರ್ಶಿಸತಕ್ಕ ಒಂದು ವೃತ್ತವಿದೆ. ಇದಕ್ಕೆ ನವಬಿಂದು ವೃತ್ತ ಎಂದು ಹೆಸರು. ಇದೇ ರೀತಿಯಲ್ಲಿ ಒಂದು ಗೋಳತ್ರಿಭುಜದಲ್ಲಿ ಒಳವೃತ್ತವನ್ನೂ ಹೊರವೃತ್ತಗಳನ್ನೂ ಸ್ಪರ್ಶಿಸತಕ್ಕ ಒಂದು ಲಘುವೃತ್ತವಿರುತ್ತದೆ. ಇದಕ್ಕೆ ಹಾರ್ಟನ ವೃತ್ತ ಎಂದು ಹೆಸರು. ಹಾರ್ಟನ ವೃತ್ತದ ತ್ರಿಜ್ಯ $\rho$ ಮತ್ತು ಪರಿವೃತ್ತದ ತ್ರಿಜ್ಯ $R$ ಆಗಿದ್ದರೆ ಆಗ, $\tan\rho = ½ \ \frac{1}{2}\tan R$.

($f$) ಗೋಲತ್ರಿಭುಜದ ಲಂಬಕೇಂದ್ರ $0$, ಮಧ್ಯರೇಖೆಗಳ (ಮೀಡಿಯನ್ಸ್) ಸಂಪಾತಕೇಂದ್ರ $G$, ಹಾರ್ಟನ ವೃತ್ತದ ಕೇಂದ್ರ $H$, ಆಗಿದ್ದರೆ ಆಗ $O, H, G$ ಬಿಂದುಗಳು ಒಂದು ಮಹಾವೃತ್ತದ ಮೇಲಿರುವವು.

5. ಗೋಳೀಯ ಹೆಚ್ಚಳ: $ABC$ ಗೋಳತ್ರಿಭುಜದ ಕೋನಗಳ ಮೊತ್ತ $\pi$ ಗಿಂತ ಅಧಿಕವೆಂದು ಗಮನಿಸಿದ್ದೇವೆ. $A + B + C = \pi$ ಪರಿಮಾಣಕ್ಕೆ ತ್ರಿಭುಜದ ಗೋಳೀಯ ಹೆಚ್ಚಳ (ಸ್ಫರಿಕಲ್ ಎಕ್ಸೆಸ್) ಎಂದು ಹೆಸರು. ಗೋಳದ ತ್ರಿಜ್ಯ $R$ ಆಗಿದ್ದರೆ ಆಗ $ABC$ ತ್ರಿಭುಜದ ಸಲೆ $(A + B + c - \pi) R^2$ . ಇದಕ್ಕೆ ಗಿರಾರ್ಡನ ಪ್ರಮೇಯ ಎಂದು ಹೆಸರು. ಇದನ್ನು ವಿಸ್ತರಿಸುವುದರಿಂದ $n$ ಭುಜಗಳಿರುವ ಗೋಳೀಯ ಬಹುಭುಜದ ಸಲೆ $[\Sigma - (n-2)\pi]\ R^2$ ಎಂದು ದೊರೆಯುತ್ತದೆ. ಇಲ್ಲಿ $\Sigma$ ಬಹುಭುಜದ ಕೋನಗಳ ಮೊತ್ತ. $\Delta\ ABC$ ಯ ಗೋಳೀಯ ಹೆಚ್ಚಳವನ್ನು $E$ ಎಂದು ಕರೆದರೆ $E$ ಯನ್ನು ಕುರಿತ ಕೆಲವು ಉಕ್ತಿಗಳು ಮುಖ್ಯವಾಗಿವೆ.

$$\sin \frac{1}{2} E = \frac{[\sin s \sin (s-a) \sin (s-b) \sin (s-c)]^{\frac{1}{2}}}{2 \cos \frac{a}{2} \cos \frac{b}{2} \cos \frac{c}{2}}$$

ಇದಕ್ಕೆ ಕಿಗ್ನೋಲಿಯ ಪ್ರಮೇಯವೆಂದು ಹೆಸರು.

$$\tan \frac{1}{4} E = [\tan \frac{1}{2} s \tan \frac{1}{2}(s-a) \tan \frac{1}{2}(s-b) \tan \frac{1}{2}(s-c)]^{\frac{1}{2}}$$

ಇದಕ್ಕೆ ಲ್ವಿಲಿಯರನ ಪ್ರಮೇಯ ಎಂದು ಹೆಸರು. ಆದ್ದರಿಂದ ತ್ರಿಭುಜದ ಭುಜಗಳು ದತ್ತವಾಗಿದ್ದರೆ ಗೋಳೀಯ ಹೆಚ್ಚಳ ನಿರ್ಧರಿಸಲ್ಪಡುತ್ತದೆ.

$$L = [\cot \frac{1}{2} s \tan \frac{1}{2}(s-a) \tan \frac{1}{2}(s-b) \tan \frac{1}{2}(s-c)]^{\frac{1}{2}}$$

ಆಗಿದ್ದರೆ ಆಗ ಮೇಲಣ ಉಕ್ತಿಯನ್ನು $\tan \frac{1}{4} E = L / \cot \frac{s}{2}$ ಎಂದು ಬರೆಯಬಹುದು.

ಹೀಗೆಯೇ $\tan \frac{1}{4}(2A - E) = L / \tan \frac{1}{2}(s-a)$ ಇತ್ಯಾದಿ.


ಆದ್ದರಿಂದ

$$L = [\tan \frac{1}{4} E \tan \frac{1}{4}(2A - E) \tan \frac{1}{4}(2B - E) \tan \frac{1}{4}(2C - E)]^{\frac{1}{2}}$$

(ಸಿ.ಎನ್.ಎಸ್)

**ಗೌಜಲು ಮರ :** ಲೆಸಿಥಿಡೇಸೀ ಕುಟುಂಬಕ್ಕೆ ಸೇರಿದ ಒಂದು ಕಾಡುಮರ. ಕವುಲುಮರ, ದದ್ದಾಲ, ಹೆಣ್ಣುಮತ್ತಿ ಪರ್ಯಾಯನಾಮಗಳು. ಕ್ಯಾರಿಯ ಆರ್ಬೋರಿಯ ಇದರ ಶಾಸ್ತ್ರೀಯ ಹೆಸರು. ಇದು ಭಾರತದ ಮೂಲನಿವಾಸಿ. ಭಾರತಾದ್ಯಂತ ಮತ್ತು ಮಲಯ, ಇಂಡೋಚೀನ ಮುಂತಾದೆಡೆಗಳಲ್ಲೆಲ್ಲ ಇದು ಹರಡಿದೆ. ಸಮುದ್ರಮಟ್ಟದಿಂದ ಹಿಡಿದು 1500 ಮೀ ಎತ್ತರದ ಬೆಟ್ಟ ಪ್ರದೇಶಗಳವರೆಗೂ ಇದರ ವ್ಯಾಪ್ತಿ ಉಂಟು. 10–20 ಮೀ ಎತ್ತರಕ್ಕೆ ಬೆಳೆಯುವ ಮರವಿದು. ಇದರ ಚೌಬೀನೆ ಗಡುಸಾಗಿಯೂ ಭಾರವಾಗಿಯೂ ಬಲವಾಗಿಯೂ ಉಂಟು. ಬಹುಕಾಲ ನೀರಿನ ಸಂಪರ್ಕವಿದ್ದರೂ ಕೆಡದು. ಆದರೆ ಬೇಗ ಸೀಳುವುದರಿಂದ ಮತ್ತು ಬಾಗುವುದರಿಂದ ಅಷ್ಟಾಗಿ ಉಪಯೋಗದಲ್ಲಿಲ್ಲ. ಇದನ್ನು ಗರಗಸದಿಂದ ಕೊಯ್ಯುವುದೂ ಕಷ್ಟ. ಆದರೂ ಸೂಕ್ತರೀತಿಯಲ್ಲಿ ಸಂಸ್ಕರಿಸುವುದರಿಂದ ಇದನ್ನು ಕೃಷಿ ಉಪಕರಣಗಳು, ಹಲಗೆಗಳು, ರೈಲ್ವೆ ಸ್ಲೀಪರುಗಳು, ಬಂದೂಕದ ಹಿಡಿಗಳು, ತೊಲೆಗಳು ಮುಂತಾದವುಗಳ ತಯಾರಿಕೆಯಲ್ಲಿ ಬಳಸಬಹುದು. ತೊಗಟೆಯಿಂದ ಒರಟಾದ ಹಗ್ಗ ಮತ್ತು ಕಂದುಬಣ್ಣದ ಕಾಗದ ಮುಂತಾದವನ್ನು ತಯಾರಿಸುವುದಿದೆ. ತೊಗಟೆಗೆ ಔಷಧೀಯ ಗುಣಗಳೂ ಉಂಟು. ಇದನ್ನು ಕೆಮ್ಮು, ಶೀತ, ಜ್ವರ, ಸಿಡುಬು ಮುಂತಾದ ಬೇನೆಗಳಲ್ಲಿ ಶಾಮಕ ಔಷಧಿಯಾಗಿ ಬಳಸುತ್ತಾರೆ. ಹಣ್ಣಿನ ಕಷಾಯವನ್ನು ಪಚನಕ್ರಿಯೆಯನ್ನು ಹೆಚ್ಚಿಸುವುದಕ್ಕೂ ಎಲೆಗಳನ್ನು ವ್ರಣಗಳ ನಿವಾರಣೆಗೂ ಬಳಸುವುದಿದೆ. (ಎಂ.ಎಚ್.ಎಂ.)

**ಗೌಜಲು ಹಕ್ಕಿ :** ಗ್ಯಾಲಿಫಾರ್ಮೀಸ್ ಗಣದ ಟೆಟ್ರವೋನಿಡೀ ಕುಟುಂಬಕ್ಕೆ ಸೇರಿದ ಫ್ರಾಂಕೋಲೈನಸ್ ಎಂಬ ಜಾತಿಯ ವನ್ಯಪಕ್ಷಿ (ಪಾರ್ಟ್‌ರಿಜ್). ಇದರಲ್ಲಿ 3 ಮುಖ್ಯ ಬಗೆಗಳಿವೆ; ಫ್ರಾ. ಫ್ರಾಂಕೋಲೈನಸ್ (ಬ್ಲ್ಯಾಕ್ ಪಾರ್ಟ್‌ರಿಜ್), ಫ್ರಾ. ಪಿಕ್ಟಸ್ (ಪೇಂಟೆಡ್ ಪಾರ್ಟ್‌ರಿಜ್) ಮತ್ತು ಫ್ರಾ. ಪಾಂಡಿಸೆರಿಯೇನಸ್ (ಗ್ರೇ ಪಾರ್ಟ್‌ರಿಜ್). ಮೊದಲನೆಯದು ಉತ್ತರಭಾರತ ಮತ್ತು ಅಸ್ಸಾಮ್‌ಗಳಲ್ಲೂ ಎರಡನೆಯದು ದಕ್ಷಿಣ ಭಾರತದಲ್ಲೂ ಮೂರನೆಯದು ಅಸ್ಸಾಂ ಬಿಟ್ಟು ಭಾರತಾದ್ಯಂತವೂ ಕಾಣದೊರೆಯುತ್ತವೆ. ಎಲ್ಲ ಬಗೆಗಳೂ ಹುಲ್ಲುಗಾವಲುಗಳಲ್ಲಿ, ಕುರುಚಲು ಕಾಡುಗಳಲ್ಲಿ, ಕೆಲವೊಮ್ಮೆ ಹಳ್ಳಿಗಳ ಸನಿಹದಲ್ಲಿ ಕಬ್ಬು ಮತ್ತು ಧಾನ್ಯ ಬೆಳೆಗಳ ಕೃಷಿಭೂಮಿಗಳ ಬಳಿ ವಾಸಿಸುತ್ತವೆ.



ಗೌಜಲು ಹಕ್ಕಿಗಳು ಮುಖ್ಯವಾಗಿ ಭೂವಾಸಿಗಳು. ಕಾಳು,ವಿವಿಧ ರೀತಿಯ ಬೀಜಗಳು, ಗೆದ್ದಲು, ಜೀರುಂಡೆಯ ಡಿಂಭಗಳು ಇವುಗಳ ಪ್ರಧಾನ ಆಹಾರ. ಗುಂಡನೆಯ ಮತ್ತು ಹೃಷ್ಟಪುಷ್ಟವಾದ ದೇಹ, ಮೋಟು ಬಾಲ, ಕಾಳುಕಡ್ಡಿ ತಿನ್ನಲು ಸಹಾಯಕವಾದ ಕೋಳಿ ಕೊಕ್ಕಿನಂಥ ಕೊಕ್ಕು, ಬಲವಾದ ಕಾಲುಗಳು, ಮೋಟು ಕತ್ತು–ಇವು ಗೌಜಲು ಹಕ್ಕಿಗಳ ಪ್ರಧಾನ ಲಕ್ಷಣಗಳು. ದೇಹದ ಬಣ್ಣ ಕಪ್ಪು ಇಲ್ಲವೇ ಬೂದುಮಿಶ್ರಿತ ಕಂದು. ದೇಹದ ಮೇಲೆ ಬಿಳಿ, ಕಂದು, ಕಗ್ಗಂದು ಬಣ್ಣದ ಮಚ್ಚೆಗಳು ಮತ್ತು ಪಟ್ಟಿಗಳು ಇವೆ. ಗಂಡು ಹಕ್ಕಿಯ ಬಣ್ಣ ಹೆಣ್ಣಿನದಕ್ಕಿಂತ ಹೆಚ್ಚು ಗಾಢವಾದ್ದು.

ಗೌಜಲು ಹಕ್ಕಿಗಳ ಚಟುವಟಿಕೆ ಸಂಜೆ ಹಾಗೂ ಬೆಳಗ್ಗೆ ಹೆಚ್ಚಾಗಿರುತ್ತದೆ. ಕತೀತರ್ – ಕತೀತರ್ ಇಲ್ಲವೆ ಚಿಕ್‌ಚೀಕ್‌ಚೀಕ್‌ಕೆರೇ ಎಂಬಂತೆ, ಸಿಳ್ಳು ಹೊಡೆದಂತೆ ಕೂಗಿಕೊಂಡು ಇವು ತಿರುಗಾಡುತ್ತಿರುತ್ತವೆ. ನೆಲದ ಮೇಲೆ ಇವು ಬಲು ಚೆನ್ನಾಗಿ ಓಡಬಲ್ಲವು; ಇವುಗಳ ಚಲನೆಯೆಲ್ಲ ಸಾಮಾನ್ಯವಾಗಿ ಕಾಲುಗಳಿಂದಲೆ. ಆದರೆ ಅನಿರೀಕ್ಷಿತ ಅಪಾಯವೊದಗಿ ಬಂದಾಗ ಮಾತ್ರ ಭರ್‍ರನೆ ಕೆಳಮಟ್ಟದಲ್ಲಿ ಹಾರುತ್ತವೆ. ಹಾರುವುದಾದರೂ ಕೇವಲ ಕೆಲವೇ ಮೀಟರುಗಳು ಮಾತ್ರ. ಮತ್ತೆ ನೆಲಕ್ಕಿಳಿದು ಓಡಿ ಪೊದೆಯೊಳಗೆ ಅವಿತುಕೊಂಡುಬಿಡುತ್ತವೆ. ಇವುಗಳ ಸಂತಾನಾಭಿವೃದ್ಧಿಯ ಕಾಲ ಜೂನ್– ಸೆಪ್ಟೆಂಬರ್. ಹುಲ್ಲು ಇಲ್ಲವೆ ಕಬ್ಬಿನ ಗದ್ದೆಗಳಲ್ಲಿ ಗೂಡು ಕಟ್ಟಿ ಮೊಟ್ಟೆಯಿಡುತ್ತವೆ. ಮೊಟ್ಟೆಗಳ ಸಂಖ್ಯೆ 4–8.

ಗೌಜಲು ಹಕ್ಕಿಗಳು ಒಳ್ಳೆಯ ಬೇಟೆಯ ಹಕ್ಕಿಗಳೆನಿಸಿವೆ. ಬೂದುಗೌಜಲು ಹಕ್ಕಿಯ ಗಂಡುಗಳನ್ನು ಹಿಡಿದು ಅವುಗಳ ನಡುವೆ ಕಾಳಗವನ್ನೇರ್ಪಡಿಸುವುದುಂಟು. ಗೌಜಲು ಹಕ್ಕಿಗಳ ಮಾಂಸಕ್ಕೆ ವಿಶಿಷ್ಟವಾದ ರುಚಿ ಹಾಗೂ ವಾಸನೆಯಿರುವುದರಿಂದ ಇವನ್ನು ಆಹಾರಕ್ಕಾಗಿ ಜನ ಬೇಟೆಯಾಡುತ್ತಾರೆ. (ಎನ್.ಬಿ.ಕೆ.)

**ಗೌಡ ದೇಶ :** ಪಶ್ಚಿಮ ಮತ್ತು ವಾಯವ್ಯ ಬಂಗಾಲ ಪ್ರದೇಶಕ್ಕೆ ಹಿಂದೆ ಇದ್ದ ಹೆಸರು. ಈ ಪ್ರದೇಶದ ರಾಜಧಾನಿಯಾಗಿದ್ದ ಗೌಡ ನಗರದಿಂದಾಗಿ ಇದಕ್ಕೆ ಗೌಡದೇಶವೆಂಬ ಹೆಸರು ಬಂದಿರಬಹುದು. ಗೌಡ ಎಂಬುದು ಗೋನರ್ಧ ಎಂಬುದರ ಅಪಭ್ರಂಶವಿರಬಹುದೆಂಬುದು ಕನ್ನಿಂಗ್‌ಹ್ಯಾಮನ ಅಭಿಪ್ರಾಯ. ಗೌಡ ಎಂಬ ಶಬ್ದ ದೇಶ ಹಾಗೂ ಜನ ವಾಚಕವಾಗಿ ಬಳಕೆಯಲ್ಲಿತ್ತು. ಪಾಣಿನಿ, ಕೌಟಿಲ್ಯ ಮುಂತಾದವರು ಈ ಎರಡೂ ಅರ್ಥಗಳಲ್ಲಿ ಈ ಶಬ್ದವನ್ನು ಬಳಸಿದ್ದಾರೆ. ಶ್ರಾವಸ್ತಿಯ ದಕ್ಷಿಣಕ್ಕೆ 72ಕಿಮೀ ದೂರದಲ್ಲಿರುವ ಇಂದಿನ ಗೋಂಡದ ಸುತ್ತಮುತ್ತಲಿನ ಪ್ರದೇಶವೇ ಗೌಡದೇಶವೆಂದು ಕೂರ್ಮಲಿಂಗ ಪುರಾಣಗಳಿಂದ ತಿಳಿದುಬರುತ್ತದೆ. ಹಿತೋಪದೇಶದ ಪ್ರಕಾರ ಕೌಶಾಂಬಿನಿ ಕೂಡ ಗೌಡ ದೇಶದಲ್ಲಿತ್ತು. ವಂಗದೇಶದಿಂದ ಹಿಡಿದು ಭುವನೇಶದ (ಒರಿಸ್ಸದ ಭುವನೇಶ್ವರ) ವರೆಗಿನ ಪ್ರದೇಶ ಗೌಡದೇಶವೆಂದು ಸ್ಕಾಂದಪುರಾಣದಲ್ಲಿ ವರ್ಣಿತವಾಗಿದೆ. ಬಾಣಭಟ್ಟನ ಹರ್ಷ ಚರಿತೆಯಲ್ಲೂ ಇದರ ಉಲ್ಲೇಖವುಂಟು. ಕಲ್ಹಣನ ರಾಜತರಂಗಿಣಿಯಲ್ಲಿ ಪಂಚಗೌಡ ಎಂಬ ಶಬ್ದ ಬರುತ್ತದೆ. ಬಂಗಾಲ, ಸಾರಸ್ವತ, ಕನ್ಯಾಕುಬ್ಜ, ಗೌಡ, ಉತ್ಕಲ, ಮೈಥಿಲ – ಇವು ದೇಶಗಳಾಗಿದ್ದುವೆಂದು ತಿಳಿದುಬರುತ್ತದೆ. ಗೌಡದೇಶ ಗುಪ್ತಸಾಮ್ರಾಜ್ಯದ ಅಂಗವಾಗಿದ್ದರೂ ಸಮುದ್ರಗುಪ್ತನ ಅಲಹಾಬಾದ್ ಶಾಸನ ಆ ಕುರಿತು ಏನನ್ನೂ ಸ್ಪಷ್ಟವಾಗಿ ಹೇಳಿದಂತಿಲ್ಲ. ಬಹುಶಃ ಗುಪ್ತ ಸಾಮ್ರಾಜ್ಯದ ಪತನಾನಂತರ ಗೌಡದೇಶ ಪ್ರಸಿದ್ಧಿಗೆ ಬಂದಿರಬಹುದು. ಗೌಡದೇಶದ ಉಲ್ಲೇಖ ಪ್ರಥಮತಃ ಬಂದಿರುವುದು ಹರಾಹಾ ಶಿಲಾಶಾಸನದಲ್ಲಿ (554) ಎಂದು ತಿಳಿಯಲಾಗಿದೆ. ಈಗಿನ ಗೊಂಡ್ವಾನದ ಹತ್ತಿರದ ಪ್ರದೇಶಗಳನ್ನೂ ಗೌಡ ದೇಶವೆಂದು ಕರೆಯುತ್ತಿದ್ದರೆಂದು ಚೇದಿರಾಜರ ತಾಮ್ರಪತ್ರದಿಂದ ತಿಳಿದುಬರುತ್ತದೆ.

ಗೌಡ ದೇಶವನ್ನು ಆಳಿದ ಅನೇಕ ಸ್ಥಳೀಯ ಅರಸರಲ್ಲಿ ಗೋಪಚಂದ್ರ **(ನೋಡಿ)**, ಸಮಯಾಚಾರ ದೇವ–ಇವರು ಪ್ರಸಿದ್ಧರು. ಇವರು ಗೌಡ ದೇಶದ ಶಕ್ತಿಯನ್ನು ವೃದ್ಧಿಸಿದರು. 7ನೆಯ ಶತಮಾನದಲ್ಲಿ ಗೌಡ ರಾಜನಾದ ಶಶಾಂಕನಿಗೂ ಥಾಣೇಶ್ವರದ ಹರ್ಷವರ್ಧನನಿಗೂ ಯುದ್ಧ ನಡೆದಿತ್ತು. ಶಶಾಂಕನ ಮರಣಾನಂತರ ಸುಮಾರು ಒಂದು ಶತಮಾನ ಕಾಲ ಗೌಡದೇಶ ಪರಕೀಯರ ಆಕ್ರಮಣ, ಆಂತರಿಕ ಅಶಾಂತಿಗಳಿಗೆ ಒಳಗಾಗಿತ್ತು. 750ರಲ್ಲಿ ಪಾಲವಂಶದ ಅರಸು ಅಧಿಕಾರಕ್ಕೆ ಬಂದಾಗಿನಿಂದ ಪರಿಸ್ಥಿತಿ ಸುಧಾರಿಸಿತು. ಪಾಲ ಅರಸರು ಗೌಡೇಶ್ವರ ಎಂಬ ಬಿರುದಿನಿಂದ ರಾಜ್ಯವಾಳಿದರು. ಧರ್ಮಪಾಲ (ಸು.752–810) ಮತ್ತು ದೇವನಪಾಲನ ಕಾಲದಲ್ಲಿ (ಸು. 810–49) ಗೌಡದೇಶ ಇಡೀ ಉತ್ತರ ಭಾರತದಲ್ಲೇ ಒಂದು ಪ್ರಬಲ ಶಕ್ತಿಯಾಗಿತ್ತು. ಕಾಲಕ್ರಮದಲ್ಲಿ ಗೌಡದೇಶ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡು ಗೌಡ ನಗರದ ರೂಪದಲ್ಲಿ ಮುಂದುವರಿಯಿತು. ಮುಂದೆ ದೆಹಲಿ ಸುಲ್ತಾನರು ಈ ಪ್ರದೇಶವನ್ನಾಕ್ರಮಿಸಿಕೊಂಡರು. (ಎಚ್.ಆರ್.ಆರ್.ಬಿ.)

**ಗೌಡ ನಗರ :** ಪಶ್ಚಿಮ ಬಂಗಾಲದ ಮಾಲದಾ ಜಿಲ್ಲೆಯಲ್ಲಿದ್ದ ಒಂದು ಪ್ರಾಚೀನ ನಗರ. ಇದನ್ನು ಲಕ್ಷ್ಮಣಾವತಿ, ಲಖ್ನೌತಿ, ನಿರ್ವಿತಿ, ವಿಜಯಪುರ, ಪುಂಡ್ರವರ್ಧನ, ಬರೇಂದ್ರ ಎಂದೂ ಕರೆಯುತ್ತಿದ್ದರು. ಮಾಲದಾದಿಂದ 16 ಕಿಮೀ ದೂರದಲ್ಲಿದ್ದ ಈ ನಗರ ಗಂಗಾ ಮತ್ತು ಮಹಾನಂದಾ ನದಿಗಳ ಸಂಗಮ ಸ್ಥಾನದಲ್ಲಿತ್ತು.

ಮೇರುತುಂಗನ ಪ್ರಬಂಧಚಿಂತಾಮಣಿಯ ಪ್ರಕಾರ 730 ರಲ್ಲಿ ಗೌಡ ನಗರ ಗೌಡ ದೇಶದ ರಾಜಧಾನಿಯಾಗಿತ್ತೆಂದು ತಿಳಿದುಬರುತ್ತದೆ. ದೇವಪಾಲ, ಮಹೇಂದ್ರಪಾಲ, ಆದಿಸುರ, ಬಲ್ಲಾಳ ಮೊದಲಾದ ಅರಸರ ಕಾಲದಲ್ಲೂ (11–12ನೆಯ ಶತಮಾನ) ಇದು ರಾಜಧಾನಿಯಾಗಿ ಮುಂದುವರಿಯಿತು. ದಿಯೊಪಾರ ಶಾಸನದಂತೆ ಬಲ್ಲಾಳಸೇನನ ಮಗನಾದ ಲಕ್ಷ್ಮಣಸೇನ ಗೌಡ ನಗರದಲ್ಲಿ ದೇವಾಲಯಗಳನ್ನೂ ಇತರ ಇಮಾರತುಗಳನ್ನೂ ಕಟ್ಟಿಸಿದನೆಂದೂ ನಗರಕ್ಕೆ ತನ್ನ ಹೆಸರನ್ನೆ (ಲಕ್ಷ್ಮಣಾವತಿ, ಲಖ್ನೌತಿ) ಇಟ್ಟಿದ್ದನೆಂದೂ ಗೊತ್ತಾಗುತ್ತದೆ. ಈತ ಸಂಸ್ಕೃತಕ್ಕೆ ವಿಶೇಷ ಪ್ರೋತ್ಸಾಹ ನೀಡಿದ್ದ. ಗೌಡ ನಗರ ಅನೇಕ ಉದ್ದಾಮ ಪಂಡಿತರಿಂದಲೂ ಕವಿಗಳಿಂದಲೂ ಶೋಭಿಸುತ್ತಿತ್ತು. ಗೀತ ಗೋವಿಂದದ ಕವಿ ಜಯದೇವ, ಕಲಾಪ ವ್ಯಾಕರಣದ ವ್ಯಾಖ್ಯಾನಕಾರನೂ ಲಕ್ಷ್ಮಣಸೇನನ ಮಂತ್ರಿಯೂ ಆಗಿದ್ದ ಉಮಾಪತಿಧರ, ಲಕ್ಷ್ಮಣಸೇನನ ಧರ್ಮಗುರುವೂ ಆರ್ಯ ಸಪ್ತಶತಿಯ ಕರ್ತೃವೂ ಆಗಿದ್ದ ಗೋವರ್ಧನಾಚಾರ್ಯ, ಶರಣ, ಪವನದೂತದ ಕರ್ತೃವೂ ಗೀತಗೋವಿಂದದಲ್ಲಿ ಜಯದೇವನಿಂದ ಕವಿ ಕ್ಷಮಾಪತಿ ಶ್ರುತಿಧರನೆಂಬ ಹೊಗಳಿಕೆಗೆ ಭಾಜನನೂ ಆಗಿದ್ದ ಧೋಯಿ – ಈ ಐವರೂ ಲಕ್ಷ್ಮಣಸೇನನ ಆಸ್ಥಾನದ ಪಂಚರತ್ನರು ಎಂದು ವರ್ಣಿತರಾಗಿದ್ದಾರೆ. ಶಬ್ದಕೋಶಕಾರನೂ ರಾಜನ ಧರ್ಮೋಪದೇಶಕನೂ ಆಗಿದ್ದ ಹಲಾಯುಧ, ಸಾಧೂಕ್ತಿಕರ್ಣಾಮೃತದ ಕರ್ತೃ ಶ್ರೀಧರದಾಸ ಮುಂತಾದ ಇನ್ನೂ ಹಲವು ವಿದ್ವಾಂಸರು ಇಲ್ಲಿ ಇದ್ದರೆಂದು ಹೇಳಲಾಗಿದೆ. ಹೀಗೆ ಗೌಡ ನಗರ ಹಿಂದೂರಾಜರ ಉತ್ಕರ್ಷೆಯ ಕಾಲದಲ್ಲಿ ಒಂದು ಪ್ರಸಿದ್ಧ ಸಂಸ್ಕೃತ ವಿದ್ಯಾಕೇಂದ್ರವಾಗಿದ್ದಿರಬಹುದು. ಈ ನಗರ 12 ಕಿಮೀ ಉದ್ದವೂ 3.2 ಕಿಮೀ ಅಗಲವೂ ಇತ್ತೆಂದೂ ಇದರ ಸುತ್ತಲೂ ಭದ್ರವಾದ ಕೋಟೆಗೋಡೆಗಳಿದ್ದುವೆಂದೂ ತಿಳಿದುಬರುತ್ತದೆ.

ಗೌಡ ನಗರ 1203 ರಲ್ಲಿ ಮಲಿಕ್ ಇಕ್ತ್ಯಾರುದ್ದೀನ್ ಮಹಮದ್ ಬಖ್ತಿಯಾರನ ವಶವಾಯಿತು. 1220 ರಲ್ಲಿ ಘಿಯಾಸುದ್ದೀನ್ ಇವಾಜ಼್ ಇದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದ. ಷೇರ್ ಶಹ 1538 ರಲ್ಲಿ ಈ ನಗರವನ್ನು ಕೊಳ್ಳೆಹೊಡೆದು ಸುಟ್ಟು ಹಾಕಿದ್ದ. ಹುಮಾಯೂನ್ ಗೌಡ ನಗರವನ್ನು ಪುನರ್ರಚಿಸಿ ಜೀರ್ಣೋದ್ಧಾರ ಮಾಡಿದ್ದ. 1570 ರಲ್ಲಿ ಅಕ್ಬರನ ದಂಡಯಾತ್ರೆಯ ವೇಳೆಯಲ್ಲಿ, ಆತನ ದಳದವರು ಈ ನಗರವನ್ನು ವಶಪಡಿಸಿಕೊಂಡಿದ್ದರು. 1575 ರಲ್ಲಿ ಅಕ್ಬರನ ಸುಬೇದಾರನೊಬ್ಬ ಈ ನಗರದ ಸೌಂದರ್ಯಕ್ಕೆ ಮಾರುಹೋಗಿ ತನ್ನ ರಾಜಧಾನಿಯನ್ನು ಪಾಂಡುವಾದಿಂದ ಗೌಡ ನಗರಕ್ಕೆ ಸ್ಥಳಾಂತರಿಸಿಕೊಂಡ. ಅನಂತರ ಬಂದ ಪಿಡುಗೊಂದರಿಂದಾಗಿ ನಗರದ ಜನಸಂಖ್ಯೆ ಬಹುವಾಗಿ ಇಳಿದುಹೋಯಿತು. ನಗರದ ಪಕ್ಕದಲ್ಲಿ ಹರಿಯುತ್ತಿದ್ದ ಗಂಗಾನದಿಯ ಪಾತ್ರವೂ ಬದಲಾಯಿತು. ಈ ಎಲ್ಲ ಕಾರಣಗಳಿಂದಾಗಿ ಗೌಡ ನಗರ ಪಾಳುಬಿದ್ದಿತು. ಕಾಡು ಬೆಳೆದುಕೊಂಡಿತು. ಪುರಾತತ್ತ್ವಜ್ಞರು ಇಲ್ಲಿಯ ಅವಶೇಷಗಳನ್ನು ಅಭ್ಯಸಿಸಿ ಪ್ರಾಚೀನ ನಗರದ ಇತಿಹಾಸ ವೈಭವಗಳನ್ನು ಅರಿಯಲು ಯತ್ನಿಸಿದ್ದಾರೆ. ಇಲ್ಲಿ ಈಗ ಉತ್ಖನನವನ್ನೂ ನಡೆಸಿದ್ದು ಅರಮನೆಯ ಅವಶೇಷಗಳು ಬೆಳಕಿಗೆ ಬಂದಿವೆ.

ಕಾವ್ಯದಲ್ಲಿ ಗೌಡಶೈಲಿಯೊಂದಿದ್ದಂತೆ, ವಾಸ್ತುಶಿಲ್ಪ ದೃಷ್ಟಿಯಿಂದಲೂ ಈ ನಗರದ್ದು ವಿಶಿಷ್ಟ ಶೈಲಿ. ದಪ್ಪನೆಯ ಕುಳ್ಳ ಕಲ್ಗಂಬಗಳು, ಚೂಪನೆಯ ಕಮಾನು, ಇಟ್ಟಿಗೆಗಳಿಂದ ರಚಿಸಿದ ಗೋಳಾಕಾರದ ಮುಚ್ಚಿಗೆ–ಇವು ಗೌಡ ನಗರದ ವಾಸ್ತುವಿನಲ್ಲಿ ಕಂಡುಬರುವ ಕೆಲವು ವೈಲಕ್ಷಣ್ಯಗಳು. ಅಲ್ಲಿಯ ಖಜೆಕಿ ಮಸೀದಿ, ದರಸ್ ಮಸೀದಿ ಮತ್ತು ದಖಲ್ ದರವಾಜಾ (ನಗರದ್ವಾರ) ಇವನ್ನು ಹುಸೇನ್ ಷಹ ಎಂಬ ಸುಲ್ತಾನ ಕಟ್ಟಿಸಿದ. ಇಲ್ಲಿಯ ನತುನ್ ಮಸೀದಿಯಂಥ ಒಂದೆರಡು ಕಟ್ಟಡಗಳನ್ನು ಬಣ್ಣ ಬಣ್ಣದ ಹೊಳಪಿಟ್ಟಿಗೆಗಳಿಂದ ಕಟ್ಟಿರುವುದು ಒಂದು ವಿಶೇಷ.

ಒಟ್ಟಿನಲ್ಲಿ, ಐತಿಹಾಸಿಕವಾಗಿ ಅನೇಕ ಏರಿಳಿತಗಳನ್ನು ಕಂಡುಂಡು ಅನೇಕ ಶತಮಾನಗಳವರೆಗೆ ಪ್ರಾಚೀನ ಬಂಗಾಲದ ರಾಜಧಾನಿಯಾಗಿ ಮೆರೆದ ಗೌಡ ನಗರ ಈಗ ಒಂದು ಹಳ್ಳಿಯಾಗಿದೆ. ಚೈತನ್ಯನ ಕಾಲದಿಂದಲೂ ನಡೆದುಕೊಂಡು ಬಂದ ರಾಮಕೇಳಿ ಎಂಬ ಉತ್ಸವ ಇಲ್ಲಿ ಇಂದಿಗೂ ನಡೆಯುತ್ತದೆ. (ಎಚ್.ಆರ್.ಆರ್.ಬಿ.)

**ಗೌಡ, ಕೆ.ಸಿ.ಎನ್. :** 1928–2012. ಕನ್ನಡ ಚಲನಚಿತ್ರ ನಿರ್ಮಾಣ, ಹಂಚಿಕೆ ಮತ್ತು ಪ್ರದರ್ಶನ ವಲಯದಲ್ಲಿ ದೊಡ್ಡ ಹೆಸರು ಮಾಡಿರುವ ಕೆ.ಸಿ.ಎನ್. ಸಂಸ್ಥೆಯ ನಿರ್ಮಾತೃ. ದೊಡ್ಡಬಳ್ಳಾಪುರದ ಸಮೀಪದ ಕೊನೇನಹಳ್ಳಿ ಹಳ್ಳಿಯ ರೈತ ಕುಟುಂಬದಲ್ಲಿ ಕೆ.ಸಿ. ನಂಜುಂಡೇಗೌಡರು 1926ರ ಜನವರಿ 6 ರಂದು ಜನಿಸಿದರು. ತಂದೆ ಕೆ.ಚವಡಯ್ಯ, ತಾಯಿ ಮುದ್ದಮ್ಮ. ಹಿರಿಯರ ಕಾಲದಿಂದಲೂ ಇವರದು ರೇಷ್ಮೆ ಉದ್ಯಮ. ಇವರ ರೇಷ್ಮೆ ಜವಳಿಗೆ ಭಾರಿ ಬೇಡಿಕೆ. ವ್ಯಾಪಾರವೂ ಅಷ್ಟೇ ಭಾರಿ. ಈ ಉದ್ಯಮದ ಜೊತೆಗೆ ಬಣ್ಣದ ಲೋಕದ ವ್ಯಾಪಾರಕ್ಕೂ ಇಳಿದರು. ದೊಡ್ಡಬಳ್ಳಾಪುರದಲ್ಲಿ ಸೌಂದರ್ಯಮಹಲ್, ಬೆಂಗಳೂರಿನಲ್ಲಿ ನವರಂಗ್, ಊರ್ವಶಿ ಚಿತ್ರ ಮಂದಿರಗಳನ್ನು ನಿರ್ಮಿಸಿ ಪ್ರದರ್ಶಕರಾದರು. ಕೆ.ಸಿ.ಎನ್.ಸಂಸ್ಥೆ ಸ್ಥಾಪಿಸಿ, ಚಲನಚಿತ್ರ ವಿತರಕರಾಗಿ ಕನ್ನಡ ಚಿತ್ರೋದ್ಯಮದ ಬೆಳೆವಣಿಗೆಗೆ ನೆರವಾದರು. ರಾಜಕಮಲ್ ಆರ್ಟ್ಸ್ ಸಂಸ್ಥೆ ಆರಂಭಿಸಿ ದೊಡ್ಡ ಮಟ್ಟದಲ್ಲಿ ಚಿತ್ರನಿರ್ಮಾಪಕರೂ ಆದರು. ಜೊತೆಗೆ ತಮ್ಮ ಇಬ್ಬರು ಪುತ್ರರನ್ನು–ಕೆ.ಸಿ.ಎನ್. ಚಂದ್ರಶೇಖರ್ ಮತ್ತು ಕೆ.ಸಿ.ಎನ್.ಮೋಹನ್–ಇವರನ್ನು ಚಿತ್ರೋದ್ಯಮದಲ್ಲಿ ತೊಡಗಿಸಿದರು. ಕೆ.ಸಿ.ಎನ್.ಚಂದ್ರಶೇಖರ್ ಕರ್ನಾಟಕ ಚಲನಚಿತ್ರ ವಾಣಿಜ್ಯಮಂಡಳಿ ಹಾಗೂ ದಕ್ಷಿಣ ಭಾರತ ಚಲನಚಿತ್ರ ವಾಣಿಜ್ಯ ಮಂಡಳಿಗಳ ಅಧ್ಯಕ್ಷರಾಗಿ ಉದ್ಯಮದ ಬೆಳೆವಣಿಗೆಗೆ ನೆರವಾಗಿದ್ದಾರೆ. ಇವರೀರ್ವರು ಶ್ರೇಷ್ಠ ನಿರ್ಮಾಪಕರು ಹಾಗೂ ವಿತರಕರೆಂದೂ ಹೆಸರು ಪಡೆದಿದ್ದಾರೆ.



ಕೆ.ಸಿ.ಎನ್.ಗೌಡರು, ಸಾರ್ವಕಾಲಿಕ ದಾಖಲೆ ನಿರ್ಮಿಸಿದ ಬಂಗಾರದ ಮನುಷ್ಯ ಚಿತ್ರದ ನಿರ್ಮಾಪಕರಿಗೆ ನೆರವು ನೀಡಿ, ಆ ಚಿತ್ರದ ವಿತರಣೆಯನ್ನೂ ಮಾಡಿದರು. ಹುಲಿಯ ಹಾಲಿನ ಮೇವು, ಬಬ್ರುವಾಹನದಂತಹ ಅದ್ದೂರಿಯ ಜನಪ್ರಿಯ ಚಿತ್ರಗಳನ್ನು ನಿರ್ಮಿಸಿದರಲ್ಲದೆ, ಉತ್ತಮ ಅಭಿರುಚಿಯ ಯಶಸ್ವಿ ಚಿತ್ರಗಳಾದ ಶರಪಂಜರ, ಭಲೇಜೋಡಿ ಮುಂತಾದ ನೂರಕ್ಕೂ ಹೆಚ್ಚು ಚಿತ್ರಗಳ ಹಂಚಿಕೆದಾರರು. ಕಸ್ತೂರಿ ನಿವಾಸ, ತಾಯಿ ದೇವರು, ಬಬ್ರುವಾಹನ, ದಾರಿ ತಪ್ಪಿದಮಗ, ದೂರದ ಬೆಟ್ಟ, ಹುಲಿಯ ಹಾಲಿನಮೇವು, ಸನಾದಿ ಅಪ್ಪಣ್ಣ, ಭಕ್ತ ಸಿರಿಯಾಳ, ರಂಗನಾಯಕಿ ಮೊದಲಾದ ಚಿತ್ರಗಳನ್ನು ತೆರೆಗಿತ್ತರು. ಹುಣಸೂರು ಕೃಷ್ಣಮೂರ್ತಿ, ಪುಟ್ಟಣ್ಣ ಕಣಗಾಲ್, ಸಿದ್ದಲಿಂಗಯ್ಯ, ವಿಜಯಾರೆಡ್ಡಿ ಮೊದಲಾದ ಪ್ರತಿಭಾವಂತ ನಿರ್ದೇಶಕರಿಗೆ ಪ್ರೋತ್ಸಾಹಿಸಿ, ಉತ್ತಮ ಚಿತ್ರಗಳ ನಿರ್ಮಾಣಕ್ಕೆ ನೀರೆರೆದರು.

ಚಲನಚಿತ್ರ ವಹಿವಾಟು ಕೇಂದ್ರವಾದ ಗಾಂಧಿನಗರದಲ್ಲಿ ಕೆ.ಸಿ.ಎನ್.ಸಂಸ್ಥೆ ಒಂದು ಪ್ರತಿಷ್ಠಿತ ಸಂಸ್ಥೆಯಾಗಿ ಹಲವು ದಶಕಗಳ ಕಾಲ ಮೆರೆಯಿತು. ನವರಂಗ್ ಚಿತ್ರಮಂದಿರ ಕನ್ನಡ ಚಿತ್ರಗಳಿಗೇ ಮೀಸಲಾಗಿರುವುದು ಗಮನಾರ್ಹ.

ಕರ್ನಾಟಕ ರಾಜ್ಯಸರ್ಕಾರ ಚಿತ್ರೋದ್ಯಮಕ್ಕೆ ಕೆ.ಸಿ.ಎನ್.ಗೌಡರ ವಿಶಿಷ್ಟ ಸೇವೆಗಾಗಿ 2002–2003ನೆಯ ಸಾಲಿನ ರಾಜಕುಮಾರ್ ಪ್ರಶಸ್ತಿಯನ್ನಿತ್ತು ಗೌರವಿಸಿದೆ. ಇವರು 2012ರ ಅಕ್ಟೋಬರ್ 4 ರಂದು ನಿಧನರಾದರು. (ಎಸ್.ಕೆ.)

**ಗೌಡಪಾದ :** ಶಂಕರಾಚಾರ್ಯರ ಗುರುಗಳಾದ ಗೋವಿಂದಪಾದರ ಗುರು. ಕಾಲ ಬಹುಶಃ ಏಳನೆಯ ಶತಮಾನದ ಅಂತ್ಯ ಇಲ್ಲವೆ ಎಂಟನೆಯ ಶತಮಾನದ ಆದಿ. ಶಂಕರಾದ್ವೈತಕ್ಕೆ ಆಧಾರವಾದ ಮುಖ್ಯ ಭಾವನೆಗಳೆಲ್ಲ ಇವರು ರಚಿಸಿದ ಮಾಂಡೂಕ್ಯಕಾರಿಕೆಯಲ್ಲಿ ಅಡಗಿವೆ. ಈ ಕಾರಿಕೆ ಮಾಂಡೂಕ್ಯೋಪನಿಷತ್ತಿನ ಆಧಾರದ ಮೇಲೆ ರಚಿತವಾದ್ದು. ಇವರು ಉತ್ತರಗೀತೆಯ ಮೇಲೂ ಒಂದು ವ್ಯಾಖ್ಯಾನವನ್ನು ಬರೆದಿದ್ದರೆಂದು ತಿಳಿದುಬರುತ್ತದೆ. ಈಗ ಉಪಲಬ್ಧವಿರುವುದು ಇವರ ಕಾರಿಕೆ ಮಾತ್ರ.

ಗೌಡಪಾದರ ಕಾಲದಲ್ಲಿ ಮಾಧ್ಯಮಿಕ ತತ್ತ್ವ ತುಂಬ ಪ್ರಬಲವಾಗಿತ್ತು. ಇವರು ಅದರ ಕೆಲವು ಭಾವನೆಗಳನ್ನು ಉಪನಿಷತ್ತಿನ ತತ್ತ್ವಕ್ಕೆ ಅಳವಡಿಸಿಕೊಂಡು ಹೊಸ ತತ್ತ್ವವನ್ನು ಸ್ಥಾಪಿಸಿದರು. ಅದರಲ್ಲಿ ಇವರು ಬೌದ್ಧರ ವಿಜ್ಞಾನವಾದವನ್ನೂ ಶೂನ್ಯವಾದವನ್ನೂ ಖಂಡಿಸಿ ಬ್ರಹ್ಮವೊಂದೇ ಸತ್ಯವೆಂದು ಸಾರಿರುತ್ತಾರೆ. ಇವರು ಆ ಸತ್ಯವನ್ನು ಶ್ರುತಿಯ ಆಧಾರದ ಮೇಲಲ್ಲದೆ ತರ್ಕಸಮ್ಮತವಾಗಿ ಬೆಳೆಸಿರುತ್ತಾರೆ. ಇವರ ತತ್ತ್ವ ಮಾಧ್ಯಮಿಕ ತತ್ತ್ವದಲ್ಲಿ ಸಾರಭೂತವಾದುದನ್ನು ಉಪನಿಷತ್ತಿನ ತತ್ತ್ವಕ್ಕೆ ಅಧೀನ ಮಾಡಿಕೊಂಡು ಬೌದ್ಧರ ಪ್ರಚಾರವನ್ನು ದುರ್ಬಲಗೊಳಿಸಿತು.

ಇವರ ಕಾರಿಕೆಯಲ್ಲಿ ನಾಲ್ಕು ಅಧ್ಯಾಯಗಳಿವೆ. ಮೊದಲನೆಯದಾದ ಆಗಮಾಧ್ಯಾಯದಲ್ಲಿ ಮಾಂಡೂಕ್ಯೋಪನಿಷತ್ತಿನ ಪಾಠವನ್ನು ಅದ್ವೈತತತ್ತ್ವಕ್ಕೆ ಆಧಾರ ಮಾಡಿಕೊಂಡಿರುತ್ತಾರೆ. ಎರಡನೆಯದಾದ ವೈತಥ್ಯ ಅಧ್ಯಾಯದಲ್ಲಿ ಆ ಶ್ರುತಿವಾಕ್ಯಗಳು ಹೇಗೆ ತರ್ಕಕ್ಕೆ ಸಂಗತವಾಗಿವೆಯೆಂದು ತೋರಿಸಿರುತ್ತಾರೆ. ಅದರಲ್ಲಿ ಇವರು ಭೇದಗಳಿಂದ ಕೂಡಿದ ವಿಶ್ವ ಪರಮಸತ್ಯವಾಗಲಾರದೆಂದು ವಾದಿಸಿರುತ್ತಾರೆ. ಮೂರನೆಯದು ಅದ್ವೈತಾಧ್ಯಾಯ. ಅದರಲ್ಲಿ ಅದ್ವೈತವೇ ಪರಮಸತ್ಯವೆಂದು ಸ್ಥಾಪಿಸಿರುತ್ತಾರೆ. ಕೊನೆಯದಾದ ಅಲಾತಶಾಂತಿ ಅಧ್ಯಾಯದಲ್ಲಿ ತಿರುಗಿಸುತ್ತಿರುವ ಕೊಳ್ಳಿಯಿಂದ ಹುಟ್ಟಿದ ಚಕ್ರಾಕಾರವಾದ ಒಂದು ಬೆಳಕು ತೋರಿಕೆಯಾದಂತೆ ವಿಶ್ವವೂ ಒಂದು ತೋರಿಕೆ ಎಂದು ಪರಿಸಮಾಪ್ತಿ ಮಾಡಿರುತ್ತಾರೆ.

ಮೊದಲನೆಯ ಅಧ್ಯಾಯದಲ್ಲಿ, ಮಾಂಡೂಕ್ಯೋಪನಿಷತ್ತಿನಲ್ಲಿ ಹೇಳಿರುವಂತೆ ಸ್ವಪ್ನ, ಜಾಗ್ರತ, ಸುಷುಪ್ತಿ, ತುರೀಯ ಎಂಬ ಜೀವನದ ನಾಲ್ಕು ಅವಸ್ಥೆಗಳ ಆಧಾರದ ಮೇಲೆ ಅವುಗಳಿಗೆ ಸಾಪೇಕ್ಷವಾದ ಶಕ್ತಿ ಸ್ವರೂಪವನ್ನು ತಿಳಿಸಿರುತ್ತದೆ. ಈ ಒಂದೊಂದೂ ಒಂದೊಂದು ವಿಶಿಷ್ಟವಾದ ವಿಶ್ವವನ್ನು ಪ್ರಕಾಶಿಸುತ್ತಿದೆ. ಅವುಗಳಲ್ಲೂ ಒಂದು ಕ್ರಮವಿದೆ. ಅವೂ ಒಂದು ರೀತಿಯಲ್ಲಿ ಫಲಕಾರಿಗಳು. ಸತ್ತಿನ ಅಂಶವಿರುವ ಯಾವುದೂ ಫಲಕಾರಿಯಾಗದಿರದು. ಸ್ವಪ್ನದಲ್ಲಿನ ನೀರೂ ದಾಹವನ್ನು ಅಡಗಿಸುತ್ತದೆ, ಅಲ್ಲಿನ ಹೆಂಗಸೂ ಕಾಮವನ್ನು ತೃಪ್ತಿಗೊಳಿಸುತ್ತಾಳೆ. ಆ ನೀರು, ಆ ಹೆಂಗಸು ಜಾಗ್ರತ್ ಪ್ರಪಂಚದ ವಸ್ತುವಾಗದಿದ್ದ ಮಾತ್ರಕ್ಕೆ, ಆ ಪ್ರಪಂಚದ ವಸ್ತುಗಳು ರೂಢಿಗೆ ಸಂಗತವಾಗಿಲ್ಲದಿರುವ ಮಾತ್ರಕ್ಕೆ ಅವು ಅಸತ್ತಲ್ಲ. ಸತ್ತಿನ ಆಶ್ರಯವಿಲ್ಲದ ಯಾವ ಅನುಭಾವವೂ ಇಲ್ಲ. ಅದ್ವಿತೀಯವಾದ ಸತ್ತೇ ಎಲ್ಲ ಅನುಭವಗಳಲ್ಲೂ ಆಯಾ ಅನುಭವದ ಯೋಗ್ಯತಾನುಸಾರವಾಗಿ ಅಭಿವ್ಯಕ್ತವಾಗುತ್ತದೆ ಎಂಬುದನ್ನೂ ಸತ್ತಿನ ಅದ್ವಿತೀಯತೆಯನ್ನೂ ಭಾವರೂಪವನ್ನೂ ತೋರಿಸಿದ್ದೇ ಗೌಡಪಾದರ ವೈಶಿಷ್ಟ್ಯ. ಕನಸು ಮತ್ತು ಎಚ್ಚರದ ಅನುಭವಗಳಿಗೆ ಆತ್ಮವೇ ಆಧಾರವಾದರೂ ಅವೆರಡೂ ಸುಷುಪ್ತಿಯ ಅನುಭವಕ್ಕಿಂತ ಭಿನ್ನ. ಸುಷುಪ್ತಿಯಲ್ಲಿ ಚೇತನ ಆತ್ಮದಲ್ಲಿ ಒಂದೇ ಆಗಿ ಅಡಗಿರುತ್ತದೆ. ಆದರೂ ಅವಿದ್ಯೆ ಅದಕ್ಕೆ ಅಂಟಿಕೊಂಡೇ ಕಾದಿರುತ್ತದೆ. ತುರೀಯದಲ್ಲಿ ಅವಿದ್ಯೆಯೆಂಬ ಉಪಾಧಿ ಸುಟ್ಟುಹೋಗಿ ಭೇದವಿಲ್ಲದ ಅಖಂಡವಾದ ಆತ್ಮರಲ್ಲಿ ಜೀವನ ಚೇತನ ಐಕ್ಯವಾಗುತ್ತದೆ. ಈ ತುರೀಯಾವಸ್ಥೆಯ ಸತ್ತಿನ ನಿಟ್ಟಿನಿಂದ ಸುಷುಪ್ತಿ ಜಾಗ್ರತ್ ಮತ್ತು ಸ್ವಪ್ನಾವಸ್ಥೆಯ ವಿಷಯಗಳು, ಭಿನ್ನಪ್ರಮಾಣಗಳಲ್ಲಿ ಭ್ರಮೆಗೆ ಒಳಪಟ್ಟಿವೆ. ಎಚ್ಚರ ಜೀವನವೂ ಹೆಚ್ಚು ದೀರ್ಘಕಾಲದ ಒಂದು ಕನಸೇ. ಭೇದವನ್ನು ಕಾಣುವಷ್ಟು ಕಾಲವೂ ನಮ್ಮ ಅನುಭವ ಕನಸೇ, ಆ ಭೇದಗಳು ಅನಿತ್ಯ, ಸರ್ವಕಾಲಿಕವಲ್ಲ. ಅವು ಅಖಂಡ ಚೇತನದ ಪರದೆಯ ಮೇಲೆ ಬಂದು ಹೋಗುವ ಬಿಂಬಗಳು. ನಿದ್ರೆಯಿಂದ ಎಚ್ಚೆತ್ತಾಗ ಕನಸಿನ ವಸ್ತುಗಳು ಇಲ್ಲವಾಗುತ್ತವೆ. ಐಕ್ಯಜ್ಞಾನ ಪಡೆದಾಗ ಎಚ್ಚರದ ಪ್ರಪಂಚದ ವಸ್ತುಗಳು

ತೇಲಿಹೋಗುತ್ತವೆ. ಸುಷುಪ್ತಿಯ ಐಕ್ಯಾನುಭವವೂ ತಾತ್ಕಾಲಿಕ ಮತ್ತು ಔಪಾಧಿಕ. ಎಲ್ಲ ಕಾಲದಲ್ಲೂ ಎಲ್ಲ ಅನುಭವಗಳಿಗೂ ಆಶ್ರಯವಾದ ಅಖಂಡಚೇತನವೇ ಸತ್ಯ. ಅದೇ ಸತ್. ಉಳಿದವು ಸತ್ ಮತ್ತು ಅಸತ್ತುಗಳ ಮಿಶ್ರಣ. ಅವು ಬಂಜೆಯ ಮಗನಂತೆ ಇಲ್ಲದವಲ್ಲ. ಇಲ್ಲದ್ದರಿಂದ, ಅಭಾವದಿಂದ, ಶೂನ್ಯದಿಂದ ಯಾವುದೂ ಹುಟ್ಟಲಾರದು. ಸೃಷ್ಟಿ ಎಂಬ ಕಾರ್ಯ, ಇಲ್ಲದ್ದರಿಂದ ಹುಟ್ಟಲಾರದು. ಅಸತ್ತಾದುದು ಶೂನ್ಯವಾದುದು ಸತ್ತಿನಿಂದ ಬರಲಾರದು. ನಾವು ವ್ಯವಹಾರದಲ್ಲಿ ಉಪಯೋಗಿಸುವ ಕಾರ್ಯಕಾರಣಭಾವ, ಕಾಲದೇಶಭಾವಗಳು ಪರಮ ಸತ್ತಿಗೆ ಅನ್ವಯಿಸಲಾರವು. ವಿಶ್ವ ಪುರುಷರೂಪನಾದ ಒಬ್ಬ ದೇವನ ಸೃಷ್ಟಿ ಎಂಬ ಭಾವನೆ ಅನೇಕ ಆಭಾಸಗಳಿಗೆ ಎಡೆಕೊಡುತ್ತದೆ. ಈ ವಿಶ್ವ ಸೃಷ್ಟಿಯಾಯಿತು ಎಂದು ಹೇಳಿದರೆ ಅದು ಹಿಂದೆ ಇರಲಿಲ್ಲ, ಈಗ ಇದೆ ಎಂದು ಹೇಳಿದಂತಾಗುತ್ತದೆ. ಮೊದಲಲ್ಲಿ ಇಲ್ಲದ್ದು, ಕೊನೆಯಲ್ಲೂ ಇಲ್ಲದ್ದೇ ಆಗಬೇಕು. ಮೊದಲಲ್ಲೂ ಇಲ್ಲದ್ದು ಕೊನೆಯಲ್ಲೂ ಉಳಿಯದ್ದು ಮಧ್ಯದಲ್ಲಿ ಇರಲು ಹೇಗೆ ತಾನೆ ಸಾಧ್ಯ. ಆದ್ದರಿಂದ ನಿಜವಾದ ಸತ್ತಿಗೆ ಮೊದಲೂ ಇಲ್ಲ ಕೊನೆಯೂ ಇಲ್ಲ. ಆದಿಮಧ್ಯಾಂತ ರಹಿತವಾದ ಸತ್ತನ್ನು ತಿಳಿಯುವುದೇ ಪರಮಾರ್ಥಸತ್ಯ.

ಹೀಗೆಂದ ಮಾತ್ರಕ್ಕೆ ವಿಶ್ವ ಬರಿಯ ಕನಸೆಂದು ಭಾವಿಸಬಾರದು. ವ್ಯಾವಹಾರಿಕ ಪ್ರಪಂಚದ ವಸ್ತುಗಳು, ಬೌದ್ಧ ವಿಜ್ಞಾನವಾದಿಗಳು ವಾದಿಸಿರುವಂತೆ, ಕೇವಲ ಮಾನಸಿಕ ಭಾವನೆಗಳಲ್ಲ. ಅವು ಅಖಂಡ ಚೇತನದ ಭಾಸಮಾನರೂಪಗಳು; ಅದರ ಅದ್ಭುತ ಮಾಯೆಯಿಂದ ಭಾಸಮಾನವಾದ ರೂಪಗಳು. ಮಾಯೆ, ಜೀವರುಗಳ ದೃಷ್ಟಿಯಿಂದ ಅಖಂಡ ಚೇತನವನ್ನು ಮರೆಮಾಡಿ ಭೇದವನ್ನು ಅಭಿವ್ಯಕ್ತಗೊಳಿಸುತ್ತದೆ. ಮಾಯಾವಿಷ್ಟವಾದ ಅಖಂಡಚೇತನವೇ ಈಶ್ವರ. ಈಶ್ವರ ಬೇರೆ ಬೇರೆ ಹೆಸರುಗಳಿಂದ ಸ್ವಪ್ನ, ಜಾಗ್ರತ್, ಸುಷುಪ್ತಿಗಳ ಅಧ್ಯಕ್ಷನಾಗಿರುತ್ತಾನೆ. ಈಶ್ವರನ ಮಾಯೆ ಅವನನ್ನು ಬಂಧಿಸುವುದಿಲ್ಲ, ಅವನ ಸ್ವರೂಪವನ್ನು ಪ್ರಕಾಶಿಸುತ್ತದೆ. ಆದರೆ ಅದರ ಅಂಶವಾದ ಅವಿದ್ಯೆ ಜೀವರುಗಳ ದೃಷ್ಟಿಯನ್ನು ಮರೆ ಮಾಡುತ್ತದೆ. ತಾನು ಪರರು ಎಂಬ ಭೇದವನ್ನೂ ತಾನು ಹೊರವಸ್ತುಗಳು ಎಂಬ ಭೇದವನ್ನೂ ಹುಟ್ಟಿಸಿ, ತಾನು ಅಖಂಡ ಚೇತನನೆಂಬುದನ್ನು ಮರೆಯಿಸುತ್ತದೆ. ಆದರೂ ಈ ವಿಶ್ವದ ವಸ್ತುಗಳು ಕನಸಿನ ಭಾವನೆಗಳಂತೆ ಕ್ಷಣಿಕವಲ್ಲ. ನಾನು ಎಂಬುದು ಕೇವಲ ಕ್ಷಣಿಕ ಭಾವನೆಯಲ್ಲ. ಅದರಲ್ಲಿ ಒಗ್ಗಟ್ಟಿದೆ, ಸ್ವಲ್ಪಮಟ್ಟಿಗೆ ಸ್ಥಿರತೆ ಇದೆ ಎಂಬುದು ಅವುಗಳಿಗೆ ಸದಾ ಆಧಾರವಾದ ಚೇತನವನ್ನು ಜ್ಞಾಪಕಕ್ಕೆ ತರುತ್ತವೆ. ಹೀಗೆ ಆಗಾಗ ನಮ್ಮ ಚಿತ್ತಭೂಮಿಯಲ್ಲಿ ಕಾಣಿಸಿಕೊಂಡ ಭಾವನೆಯನ್ನು ಧ್ಯಾನದಿಂದ ಸ್ಥಿರವಾಗಿ ನಿಲ್ಲಿಸಿಕೊಂಡು ತಾನು ಅಖಂಡಚೇತನವೇ ಎಂಬ ಸ್ಮರಣೆಯನ್ನು ಬಲಪಡಿಸಿಕೊಂಡು ಎಲ್ಲ ಸಂದೇಹಗಳನ್ನೂ ನಿವಾರಣ ಮಾಡಿಕೊಳ್ಳುವುದೇ ಮೋಕ್ಷ. ಮೋಕ್ಷಸಿದ್ಧಿಗೆ ಜ್ಞಾನಯೋಗವೇ ಅಂತಿಮಸಾಧನ. ನಿಷ್ಕಾಮಕರ್ಮ, ಭಗವದುಪಾಸನೆ ಇದರ ಮೊದಲ ಹಂತ, ಜ್ಞಾನೋಪಾಸನೆ ಇದರ ಕೊನೆಯ ಹಂತ. ಸಮುದ್ರದ ನೀರನ್ನು ದರ್ಭೆಯ ಮೊನೆಯಿಂದ ಎತ್ತಿ ಅದನ್ನು ಬರಿದಾಗಿ ಮಾಡುವುದು ಎಷ್ಟು ಕಷ್ಟವೋ ಈ ಅದ್ವೈತವನ್ನು ಸಿದ್ಧಿಸಿಕೊಳ್ಳುವುದೂ ಅಷ್ಟೇ ಕಷ್ಟ. ಪಟ್ಟುಹಿಡಿದು ತಾಳ್ಮೆಯಿಂದ ಜ್ಞಾನಯೋಗದಲ್ಲಿ ನಿರತನಾದವನಿಗೆ ಅದು ಖಂಡಿತ ಸಿದ್ಧಿಸುತ್ತದೆ.

ಗೌಡಪಾದರು ಆಗ ಬಳಕೆಯಲ್ಲಿದ್ದ ಮಾಧ್ಯಮಿಕರ ಪಾರಿಭಾಷಿಕ ಶಬ್ದಗಳನ್ನು ವಿಶೇಷವಾಗಿ ಬಳಸಿರುತ್ತಾರೆ– ವಸ್ತುವಿಗೆ ಬದಲು ಧರ್ಮ, ವ್ಯಾವಹಾರಿಕ ಸತ್ಯಕ್ಕೆ ಬದಲು ಸಂವೃತಿ, ಹೊರವಸ್ತುಗಳಿಗೆ ಬದಲು ಸಂಘಾತ–ಹೀಗೆ. ನಾಗಾರ್ಜುನ ಬಳಸಿದ ಪದಗಳನ್ನೇ ಇವರು ಪುನಶ್ಚರಣೆ ಮಾಡಿರುತ್ತಾರೆ. ಬಂಧವೂ ಇಲ್ಲ, ಬಿಡುಗಡೆಯೂ ಇಲ್ಲ, ಸೃಷ್ಟಿಯೂ ಇಲ್ಲ, ವಿನಾಶವೂ ಇಲ್ಲ. ಇದೇ ಪರಮಸತ್ಯ ಎಂದು ನಾಗಾರ್ಜುನನ ಭಾಷೆಯಲ್ಲೇ ಪರಮಾರ್ಥವನ್ನು ವರ್ಣಿಸಿರುತ್ತಾರೆ. ಅಲಾತಚಕ್ರದ ಉಪಮಾನವೂ ಬೌದ್ಧಗ್ರಂಥಗಳಿಂದಲೇ ತೆಗೆದುಕೊಂಡದ್ದು. ಅನೇಕ ವೇಳೆ ಇವರು ಪರಮಾರ್ಥವನ್ನು ನೇತ್ಯರ್ಥ ಬೋಧಕ ಶಬ್ದಗಳಿಂದಲೇ ವರ್ಣಿಸಿರುವುದರಿಂದ ಅವರ ಪರಮಾರ್ಥ ಶೂನ್ಯವೆಂದು ಭಾವಿಸಲು ಅವಕಾಶ ಕೊಡುತ್ತದೆ. ತಮ್ಮ ವಾದ ಶೂನ್ಯವಾದವೆಂಬ ಶಂಕೆಗೆ ಎಡೆಕೊಡುತ್ತದೆ ಎಂಬುದನ್ನು ಗೌಡಪಾದರು ಗಮನಿಸಿರುತ್ತಾರೆ. ಆದ್ದರಿಂದ ಇವರು 'ಅದು ಶೂನ್ಯವಾದವಲ್ಲ; ನಾನು ಹೇಳಿದ ಅಸ್ಪರ್ಶಕ ಭೂಮ ಬ್ರಹ್ಮನನ್ನು ಬುದ್ಧ ಉಪದೇಶಿಸಲಿಲ್ಲ' ಎಂದು ಹೇಳಿ ತಮ್ಮ ಕಾರಿಕೆಯನ್ನು ಪರಿಸಮಾಪ್ತಿಗೊಳಿಸಿರುತ್ತಾರೆ.

ಗೌಡಪಾದರು ಮಾಯಾ ಎಂಬ ಪದವನ್ನು ಅನೇಕ ಅರ್ಥಗಳಲ್ಲಿ ಉಪಯೋಗಿಸಿ ಸಂದಿಗ್ಧತೆಗೆ ಅವಕಾಶ ಕೊಟ್ಟಿರುತ್ತಾರೆ. ವಿಶ್ವ ಮಾಯೆ ಎಂದರೆ ಕನಸಿಗೆ ಸದೃಶವಾದದ್ದು ಎಂಬ ಅರ್ಥವೇ ಹೆಚ್ಚಾಗಿ ಅದು ಮಾಧ್ಯಮಿಕರ ಸಂವೃತಿಯನ್ನು ಹೋಲುತ್ತದೆ. ಶಂಕರಾಚಾರ್ಯರು ಅದನ್ನು ಸದಸದ್‍ವಿಲಕ್ಷಣವೆಂಬ ಅರ್ಥದಲ್ಲಿ ಉಪಯೋಗಿಸುವುದೇ ಸಾಧುವೆಂದು ಹೇಳಿರುತ್ತಾರಲ್ಲದೆ ಮಾಧ್ಯಮಿಕರ ಪರಿಭಾಷೆಯನ್ನು ಬಿಟ್ಟು ವಿಶೇಷವಾಗಿ ಉಪನಿಷತ್ತಿನ ಪರಿಭಾಷೆಯಲ್ಲೇ ದ್ವೈತವನ್ನು ವಿವರಿಸಿ ಅದು ಬೌದ್ಧರ ಮಾಧ್ಯಮಿಕವಾದವಲ್ಲವೆಂಬುದನ್ನು ಸ್ಪಷ್ಟಪಡಿಸಿರುತ್ತಾರೆ.

ಗೌಡಪಾದರ ಕಾರಿಕೆಯಿಂದ ಶಂಕರಾಚಾರ್ಯರು ಸ್ಫೂರ್ತಿಪಡೆದು ಬಹು ಅಡಕವಾಗಿದ್ದ ಅದರಲ್ಲಿನ ಅದ್ವೈತತತ್ತ್ವವನ್ನು ತುಂಬ ವಿಸ್ತರಿಸಿದರು. (ಜಿ.ಎಚ್.)

**ಗೌತಮ :** ಸಪ್ತರ್ಷಿಗಳಲ್ಲಿ ಒಬ್ಬ. ದೀರ್ಘತಮ ಮತ್ತು ಪ್ರದ್ವೇಷಿಣಿಯರ ಮಗ. ಈತನ ತಂದೆ ಆಂಗಿರಸ ಕುಲದವನಿದ್ದು ಬೃಹಸ್ಪತಿಯ ಶಾಪದ ಮೂಲಕ ಹುಟ್ಟುಕುರುಡನಾಗಿದ್ದ. ಎಷ್ಟೋ ಕಡೆಗಳಲ್ಲಿ ದೀರ್ಘತಮ ತಾನೇ ಗೌತಮ ಎಂದು ಹೇಳಿಕೊಂಡಿದ್ದಾನೆ. ಗೌತಮನಿಗೆ ಔಶೀನರೀ ಎಂಬ ಶೂದ್ರ ಸ್ತ್ರೀಯಲ್ಲಿ ಕಕ್ಷೀವಾನ ಮುಂತಾದ ಮಕ್ಕಳು ಹುಟ್ಟಿದರು. ಸನತ್ಕುಮಾರ ಈತನಿಗೆ ಬ್ರಹ್ಮವಿದ್ಯೆ ಹೇಳಿಕೊಟ್ಟ ಗುರು. ಗೌತಮನಿಗೆ ಹಂಸ ಮತ್ತು ಪರಮಹಂಸ ಧ್ಯಾನವನ್ನು ಹೇಗೆ ಮಾಡಬೇಕೆಂದು ಗುರು ಹೇಳಿಕೊಟ್ಟ. ಗೌತಮನನ್ನು ಬ್ರಹ್ಮರ್ಷಿ ಎಂದು ಕರೆಯಲಾಗಿದೆ. ಬ್ರಹ್ಮದೇವನ ಮಾನಸಕನ್ಯೆ ಅಹಲ್ಯೆ (**ನೋಡಿ**) ಈತನ ಹೆಂಡತಿ. ಗೌತಮೀ ಎಂಬುದು ಈಕೆಯ ಒಂದು ಹೆಸರು. ಶತಾನಂದ ಈಕೆಯ ಮಗ. ಈಕೆಯ ಹೆಸರಿನಿಂದಲೇ ಗೋದಾವರಿ ನದಿಗೆ ಗೌತಮೀ ಎಂಬ ಹೆಸರು ಬಂದಿದೆ. ವೃಷಾದರ್ಭಿ ಎಂಬ ರಾಜ ತನ್ನ ರಾಜ್ಯದಲ್ಲಿ ಅನ್ನಕ್ಷಾಮ ಒದಗಿದ್ದರಿಂದ ಋಷಿಗಳಿಗೆ ದಾನ ಕೊಡಲು ನಿಶ್ಚಯಿಸಿದಾಗ ಆ ದಾನವನ್ನು ನಿರಾಕರಿಸಿದ ಏಳು ಋಷಿಗಳಲ್ಲಿ ಗೌತಮನೂ ಒಬ್ಬ. ತನ್ನ ಶಿಷ್ಯ ಉದಂಕನಿಗೇ ಮಗಳನ್ನು ಕೊಟ್ಟು ಲಗ್ನ ಮಾಡಿದನೆನ್ನಲಾಗಿದೆ.

ಗೌತಮನ ಆಶ್ರಮ ಪಾರಿಯಾತ್ರ (ವಿಂಧ್ಯ) ಪರ್ವತದ ಹತ್ತಿರ ಇತ್ತೆಂದು ಹೇಳಲಾಗಿದೆ. ಅಲ್ಲಿ ಈತ ಅರುವತ್ತು ಸಾವಿರ ವರ್ಷಗಳವರೆಗೆ ತಪಸ್ಸು ಮಾಡಿದನೆಂದು ಪ್ರತೀತಿ. ಆಗ ಅಲ್ಲಿ ಪ್ರತ್ಯಕ್ಷನಾದ ಯಮನನ್ನು ಪಿತೃಋಣದಿಂದ ಮುಕ್ತನಾಗುವ ಬಗೆಯನ್ನು ವಿವರಿಸುವಂತೆ ಈತ ಕೇಳಿಕೊಂಡ. ಸತ್ಯ, ಧರ್ಮ, ತಪಸ್ಸು ಮತ್ತು ಶುಚಿತ್ವಗಳನ್ನವಲಂಬಿಸಿ ತಂದೆತಾಯಿಗಳ ಸೇವೆ ಮಾಡಿದರೆ ಪವಿತ್ರಲೋಕ ಪ್ರಾಪ್ತಿಯಾಗುತ್ತದೆಂದು ಯಮ ಈತನಿಗೆ ಉತ್ತರವಿತ್ತ. ಹನ್ನೆರಡು ವರ್ಷದ ಬರಗಾಲ ಪ್ರಾಪ್ತವಾದರೂ ಗೌತಮ ಅಲ್ಲಿನ ಋಷಿಗಳಿಗೆ ಊಟವನ್ನು ಒದಗಿಸಿ ಬದುಕಿಸಿದ.

ಗೌತಮನೆಂಬ ಇನ್ನೊಬ್ಬ ಋಷಿ ಆಂಗಿರಸ ಕುಲದಲ್ಲಿನ ಋಷಿಯೂ ಪ್ರವರವೂ ಆಗಿದ್ದಾನೆ. ವೈವಸ್ವತ ಮನ್ವಂತರದಲ್ಲಿ ಈತ 20ನೆಯ ಪರ್ಯಾಯದ ವ್ಯಾಸ.

ಶಾಕ್ಯರಿಗೆ ಪೂಜ್ಯನಾದ ಬುದ್ಧದೇವನಿಗೂ ಗೌತಮನೆಂಬ ಹೆಸರಿದೆ. *

**ಗೌತಮ ಧರ್ಮಸೂತ್ರ :** ಈಗ ಉಪಲಬ್ಧವಿರುವ ಧರ್ಮಸೂತ್ರಗಳಲ್ಲೆಲ್ಲ ಹೆಚ್ಚು ಪ್ರಾಚೀನವೆಂದು ವಿದ್ವಾಂಸರು ಪರಿಗಣಿಸಿರುವ ಧರ್ಮಸೂತ್ರ. ಬೌಧಾಯನ ಧರ್ಮಸೂತ್ರದಲ್ಲಿಯೇ ಗೌತಮನ ಈ ಗ್ರಂಥದ ಉಲ್ಲೇಖವಿದೆ. ಇದರಲ್ಲಿ ಬೌದ್ಧಧರ್ಮದ ಉದಯದ ಪ್ರಸ್ತಾಪವೇ ಕಾಣಿಸದು. ಆದರೆ ಯವನ ಶಬ್ದ ಬರುತ್ತದೆ. ಆದ್ದರಿಂದ ಇದರ ಕಾಲ ಪ್ರ.ಶ.ಪೂ.ಸು. 600–400 ಎಂದು ಮಹಾಮಹೋಪಾಧ್ಯಾಯ ಪಿ.ವಿ. ಕಾಣೆ ತೀರ್ಮಾನಿಸಿದ್ದಾರೆ.

ಗೌತಮ ಧರ್ಮಸೂತ್ರ ಸಾಮವೇದದ ರಾಣಾಯಣೀಯ ಶಾಖೆಗೆ ಸೇರಿದುದು. ಆದ್ದರಿಂದ ಸಾಮವೇದಿಗಳು ಇದನ್ನು ತಮ್ಮ ಧರ್ಮಸೂತ್ರವೆಂದು ಭಾವಿಸುವುದು ಸಹಜ. ಆದರೆ ಪ್ರಾಚೀನ ವೇದವಿದ್ಯಾಚಾರ್ಯರಲ್ಲಿ ಗೌತಮನೆಂಬ ಹೆಸರಿನವರು ಅನೇಕರಿರುವುದರಿಂದ ಈ ಧರ್ಮಸೂತ್ರಕಾರ ಇವನೇ ಎನ್ನಲು ಖಚಿತವಾದ ಆಧಾರವಾವುದೂ ಸಿಕ್ಕಿಲ್ಲ.

ಗೌತಮ ಧರ್ಮಸೂತ್ರ ಗ್ರಂಥ ಹಲವು ಬಾರಿ ಅಚ್ಚಾಗಿದೆ–ಸ್ಟೆನ್‌ಬ್ಲರ್ 1876; ಕಲ್ಕತ್ತ 1876; ಆನಂದಾಶ್ರಮ 1910 ಮತ್ತು ಮೈಸೂರು. ಆನಂದಾಶ್ರಮ ಹಾಗೂ ಮೈಸೂರು ಆವೃತ್ತಿಗಳಲ್ಲಿ ಕ್ರಮವಾಗಿ ಹರದತ್ತ ಮತ್ತು ಮಸ್ಕರಿಗಳ ವ್ಯಾಖ್ಯಾನಗಳೂ ಅಚ್ಚಾಗಿವೆ.

ಈ ಗ್ರಂಥದಲ್ಲಿ ಬರುವ ಮುಖ್ಯವಾದ ವಿಷಯಗಳು ಹೀಗಿವೆ : 1. ಧರ್ಮದ ಮೂಲಗಳು, ವ್ಯಾಖ್ಯಾನವಿಧಿ, ಚಾತುರ್ವರ್ಣದವರಿಗೆ ಉಪನಯನಕಾಲ ಹಾಗೂ ನಿಯಮಿತ ಮೌಂಜಿ, ಅಜಿನ, ದಂಡಾದಿಗಳು, ಶೌಚ ಮತ್ತು ಆಚಮನ ವಿಧಿಗಳು. 2. ಬ್ರಹ್ಮಚಾರಿ ನಿಯಮಗಳು, ವಿದ್ಯಾಭ್ಯಾಸದ ಅವಧಿ. 3. ನಾಲ್ಕು ಆಶ್ರಮಗಳು, ಬ್ರಹ್ಮಚಾರಿ, ಭಿಕ್ಷು ಮತ್ತು ವೈಖಾನಸರ ಕರ್ತವ್ಯಗಳು. 4. ಗೃಹಸ್ಥನ ಕರ್ತವ್ಯಗಳು, ವಿವಾಹಕಾಲ ಹಾಗೂ ವಿಧಿ, ಎಂಟು ಬಗೆಯ ವಿವಾಹಗಳು, ಉಪಜಾತಿಗಳು. 5. ಪತ್ನೀಗಮನವನ್ನು ಕುರಿತ ವಿಧಿಗಳು, ಪಂಚಮಹಾಯಜ್ಞಗಳು, ಮಧುಪರ್ಕ, ಅತಿಥಿಸತ್ಕಾರ ಕ್ರಮ. 6. ಮಾತಾಪಿತೃಗಳಿಗೆ ಹಾಗೂ ಗುರುವಿಗೆ ಅಭಿವಾದನ ಕ್ರಮ, ಪ್ರಯಾಣಕಾಲದ ನಿಯಮಗಳು. 7. ಬ್ರಾಹ್ಮಣಧರ್ಮ, ಆಪದ್ಧರ್ಮ. 8. ನಲವತ್ತು ಸಂಸ್ಕಾರಗಳು ಮತ್ತು ಎಂಟು ಗುಣಗಳು (ದಯಾ ಇತ್ಯಾದಿ). 9. ಸ್ನಾತಕವ್ರತ. 10. ನಾಲ್ಕುವರ್ಣಗಳ ಕರ್ತವ್ಯಗಳು, ರಾಜಧರ್ಮಗಳು. 11. ಪುರೋಹಿತನ ಕರ್ತವ್ಯ. 12. ಕಳ್ಳತನ, ಖೂನಿ ಮುಂತಾದ ಅಪರಾಧಗಳಿಗೆ ವಿಹಿತವಾದ ಶಿಕ್ಷೆಗಳು, ಬಡ್ಡಿ ವ್ಯವಹಾರದ ನಿಯಮಗಳು. 13. ಸಾಕ್ಷಿಗಳ ಲಕ್ಷಣ. 14. ಅಶೌಚ ಮತ್ತು ಸೂತಕವಿಚಾರ. 15. ಐದು ಬಗೆಯ ಶ್ರಾದ್ಧಗಳು, ಶ್ರಾದ್ಧ ವಿಧಿಗಳು. 16. ಉಪಾಕರ್ಮ, ಅನಧ್ಯಯನ

ವಿಚಾರ. 17. ಬ್ರಾಹ್ಮಣಾದಿಗಳಿಗೆ ವಿಹಿತ ಹಾಗೂ ನಿಷಿದ್ಧ ಆಹಾರ. 18. ಸ್ತ್ರೀಕರ್ಮಗಳು, ನಿಯೋಗ ವಿಚಾರ. 19. ಪ್ರಾಯಶ್ಚಿತ್ತ, ಜಪ, ತಪಾದಿಗಳು. 20. ಬಹಿಷ್ಕಾರ. 21. ಮಹಾಪಾತಕಗಳು ಮತ್ತು ಉಪಪಾತಕಗಳು. 22. ಬ್ರಹ್ಮಹತ್ಯಾದಿಗಳಿಗೆ ಹೇಳುವ ಪ್ರಾಯಶ್ಚಿತ್ತಗಳು. 23. ಸುರಾ ಪಾನಾದಿಗಳಿಗೆ ಹೇಳುವ ಪ್ರಾಯಶ್ಚಿತ್ತ. 24. ಕೃಚ್ಛ್ರ, ಅತಿಕೃಚ್ಛ್ರ ಮುಂತಾದ ತೀವ್ರ ತಪಗಳು. 25. ಚಾಂದ್ರಾಯಣ ವ್ರತ. 26. ಸ್ತ್ರೀಧನ, ಆಸ್ತಿವಿಭಾಗ.

ಗೌತಮಧರ್ಮಸೂತ್ರ ಪೂರ್ಣವಾಗಿ ಗದ್ಯದಲ್ಲಿದೆ ; ಮಿಕ್ಕ ಧರ್ಮಸೂತ್ರಗಳಂತೆ ಇಲ್ಲಿ ಸ್ವರಚಿತ ಇಲ್ಲವೆ ಉದಾಹೃತ ಶ್ಲೋಕಗಳೊಂದೂ ಇಲ್ಲ. ಇಂದಿನ ಕಾನೂನು, ಸಮಾಜಶಾಸ್ತ್ರ, ಶಿಕ್ಷಣಶಾಸ್ತ್ರ ವೈದಿಕಧರ್ಮ ಇವನ್ನು ಸಪ್ರಮಾಣವಾಗಿ ಅರಿಯಬೇಕೆನ್ನುವವರಿಗೆ ಇದು ಉತ್ತಮ ಪ್ರಮಾಣ ಗ್ರಂಥವಾಗಿದೆ (**ನೋಡಿ– ಧರ್ಮಸೂತ್ರಗಳು**). (ಕೆ.ಕೆ.)

**ಗೌತಮ ಬುದ್ಧ : ನೋಡಿ–ಬುದ್ಧ**

**ಗೌತಮೀಪುತ್ರ ಸಾತಕರ್ಣಿ :** ಸಾತವಾಹನವಂಶದ ಅರಸ. ಈತನ ಆಳಿಕೆಯ ಕಾಲ 62–86 ಎಂದೂ 106–130 ಎಂದೂ ವಾದಗಳಿವೆ. ಇವನು 106–130ರ ಕಾಲಾವಧಿಯಲ್ಲಿ ಆಳಿರಬಹುದು ಎಂಬ ಅಭಿಪ್ರಾಯ ಹೆಚ್ಚು ಸಮಂಜಸವಾದುದು. ಈತನ ಶಾಸನಗಳು ನಾಸಿಕದ ಗುಹೆಗಳಲ್ಲಿ ದೊರೆತಿವೆ. ಇವನ ಮಗನಾದ ವಾಸಿಷ್ಠೀಪುತ್ರ ಪುಳುಮಾಯಿಯ ಶಾಸನದಲ್ಲಿ ಈತನ ಸಾಧನೆಗಳನ್ನು ಕುರಿತಾದ ವಿವರಗಳು ಲಭ್ಯವಾಗಿವೆ. ಪುರಾಣಗಳಲ್ಲಿ ಹಾಗೂ ಗ್ರೀಕ್ ಭೂಗೋಳಶಾಸ್ತ್ರಜ್ಞ ಟಾಲೆಮಿಯ ಗ್ರಂಥದಲ್ಲಿ ಕಂಡುಬರುವ ಉಲ್ಲೇಖಗಳಿಂದ ಈ ಸಾತವಾಹನ ಅರಸನಿಗೆ ಸಂಬಂಧಿಸಿದ ಅನೇಕ ವಿವರಗಳು ತಿಳಿದಿವೆ. ಭಾರತದ ಪಶ್ಚಿಮಕ್ಕೆ, ಈಗಿನ ಮಹಾರಾಷ್ಟ್ರಕ್ಕೆ ಸೇರಿದ ತೀರಪ್ರದೇಶಗಳು ಸಾತವಾಹನರ ಆಳಿಕೆಗೊಳಪಟ್ಟಿದ್ದುವು. ಪ್ರಸಕ್ತಶಕಾರಂಭದಲ್ಲಿ (ಅಥವಾ ಎರಡನೆಯ ಶತಮಾನದ ಆರಂಭದಲ್ಲಿ) ಗೌತಮೀಪುತ್ರ ಪಟ್ಟಕ್ಕೆ ಬರುವ ಮೊದಲು ಸಾತವಾಹನರು ಕ್ಷಹರಾತರ (ಕ್ಷತ್ರಪ) ದಾಳಿಗೆ ತುತ್ತಾಗಿ ತಮ್ಮ ಪ್ರಾಬಲ್ಯವನ್ನು ಕಳೆದುಕೊಂಡಿದ್ದರು. ಗೌತಮೀಪುತ್ರ ಪಟ್ಟಕ್ಕೆ ಬಂದಾಗ ದುಃಸ್ಥಿತಿಯಲ್ಲಿದ್ದ ರಾಜ್ಯವನ್ನು ಭದ್ರಗೊಳಿಸಲು ಶತ್ರುಗಳ ದಮನ ಅತ್ಯಾವಶ್ಯಕವಾಗಿತ್ತು. ಆದ್ದರಿಂದ ಅದಕ್ಕೆ ಬೇಕಾದ ಸಕಲ ಸನ್ನಾಹಗಳನ್ನೂ ಮಾಡಿಕೊಂಡು 80 ರಲ್ಲಿ ಅಥವಾ 124ರಲ್ಲಿ ಈತ ಕ್ಷಹರಾತರ ವಿರುದ್ಧ ದಂಡೆತ್ತಿದ್ದ. ಈತ ತನ್ನ ವಿಜಯಸ್ಕಂಧಾವಾರವೆನಿಸಿದ ಗೋವರ್ಧನ ನಗರದ ನೆಲೆವೀಡಿನಲ್ಲಿದ್ದಾಗ ಇವನ ನಾಸಿಕ ಹಾಗೂ ಕಾರ್ಲೆ ಶಾಸನಗಳು ಬರೆಯಿಸಲ್ಪಟ್ಟುವು. ಮೊದಲು ದೊರೆತ ಸಣ್ಣಪುಟ್ಟ ವಿಜಯಗಳು ಇವನನ್ನು ಹುರಿದುಂಬಿಸಿದುವು. ವೈಜಯಂತೀ ಸೈನ್ಯ ಈ ಕದನಗಳಲ್ಲಿ ಶ್ಲಾಘನೀಯವಾಗಿ ಹೋರಾಡಿತು. ಆದರೆ ಇಷ್ಟರಿಂದ ಗೌತಮೀಪುತ್ರನಿಗೆ ತೃಪ್ತಿಯುಂಟಾಗಲಿಲ್ಲ. ಸಾತವಾಹನರ ಗತವೈಭವವನ್ನು ಪುನಃ ಪ್ರತಿಷ್ಠಾಪಿಸುವುದು ಇವನ ಉದ್ದೇಶವಾಗಿತ್ತು.

ಇವನ ಈ ಉದ್ದೇಶ ಪೂರ್ಣಗೊಂಡಿತೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಇದನ್ನು ಈತನ ತಾಯಿ ಗೌತಮೀ ಬಾಲಶ್ರೀ ನೆಲೆಗೊಳಿಸಿದ ಶಾಸನದಲ್ಲಿ ಸ್ಪಷ್ಟಗೊಳಿಸಿದ್ದಾಳೆ. ಈತನ ರಾಜ್ಯ ಅಸಿಕ, ಅಸಕ, ಮುಳಕ, ಸುರಠ, ಕುಕುರ, ಅಪರಾಂತ, ಅನೂಪ, ವಿದರ್ಭ, ಆಕರ ಮತ್ತು ಅವಂತಿ ರಾಜ್ಯಗಳನ್ನೂ, ವಿಂಧ್ಯ, ಋಕ್ಷವತ್, ಪಾರಿಯಾತ್ರ, ಸಹ್ಯ, ಕಣ್ಹಗಿರಿ, ಮತ್ಸ್ಯ, ಶ್ರೀಸ್ಥಾನ, ಮಲಯ, ಮಹೇಂದ್ರ, ಸೇತ ಮತ್ತು ಚಕೋರ ಪರ್ವತ ಪ್ರದೇಶಗಳನ್ನು ಒಳಗೊಂಡಿತ್ತೆಂದು ಆ ಶಾಸನ ವರ್ಣಿಸಿದೆ. ಹೀಗೆ ವಿಸ್ತಾರವಾದ ಈತನ ರಾಜ್ಯ ತ್ರಿಸಮುದ್ರಪರ್ಯಂತ ಹಬ್ಬಿತ್ತು. ಇವನ ವಾಹನ–ಅಶ್ವ ಮೂರು ಸಮುದ್ರಗಳ ನೀರನ್ನು ಕುಡಿದಿತ್ತಂತೆ! ಶಾಸನಗಳಲ್ಲಿ ಹೇಳಿರುವ ಪ್ರದೇಶಗಳನ್ನು ಗುರುತಿಸುವುದರಲ್ಲಿ ಅಲ್ಪಸ್ವಲ್ಪ ಭಿನ್ನಾಭಿಪ್ರಾಯಗಳಿವೆಯೇ ಹೊರತು ಹೆಚ್ಚಿನ ಸಂದೇಹಗಳಿಲ್ಲ.

ಅಸಿಕ ಕೃಷ್ಣಾ ನದೀತೀರದಲ್ಲಿ ಹಿಂದಿನ ಋಷಿಕ ನಗರದ ಸುತ್ತಲೂ ಇದ್ದ ಪ್ರದೇಶ. ಅಸಕ (ಅಶ್ಮಕ) ಗೋದಾವರೀ ತೀರದಲ್ಲಿ ಪೌದನ್ಯವನ್ನು ರಾಜಧಾನಿಯಾಗಿ ಹೊಂದಿದ್ದ ದೇಶ. ಈಗಿನ ನಿಜಾಮಾಬಾದ್ ಜಿಲ್ಲೆಯಲ್ಲಿರುವ ಬೋಧನವೇ ಪೌದನ್ಯವೆಂದು ಗುರುತಿಸಲಾಗಿದೆ. ಮುಳಕಕ್ಕೆ ಈಗಿನ ಪೈಠಣ ರಾಜಧಾನಿಯಾಗಿತ್ತು. ಸುರಠವೆಂಬುದು ಸೌರಾಷ್ಟ್ರ. ಉತ್ತರ ಕಾಠಿಯಾವಾಡವೇ ಕುಕುರ, ಉತ್ತರ ಕೊಂಕಣವೇ ಅಪರಾಂತ. ಈಗಿನ ನಿಮಾರ್ ಜಿಲ್ಲೆಯ ಮಾಂಧಾತಾದ (ಮಾಹಿಷ್ಮತೀನಗರ) ಸುತ್ತಲಿನ ದೇಶ ಅನೂಪ. ಆಕರ, ಅವಂತಿಗಳು ಕ್ರಮವಾಗಿ ವಿದಿಶಾ ಮತ್ತು ಉಜ್ಜಯಿನಿಗಳು ರಾಜಧಾನಿಯಾಗಿದ್ದ ಪೂರ್ವ ಮತ್ತು ಪಶ್ಚಿಮ ಮಾಳವ. ವಿದರ್ಭ ಸುಪರಿಚಿತ. ಇವೆಲ್ಲ ಇವನ ಸ್ವಾಧೀನದಲ್ಲಿದ್ದುವೆಂಬುದನ್ನು ಗಮನಿಸಿದರೆ ಇವನ ರಾಜ್ಯ ದಕ್ಷಿಣೋತ್ತರವಾಗಿ ಕೃಷ್ಣಾನದಿಯಿಂದ ಮಾಳವ, ಸೌರಾಷ್ಟ್ರದವರೆವಿಗೂ, ಪೂರ್ವಪಶ್ಚಿಮವಾಗಿ ವಿದರ್ಭದಿಂದ (ಬೀರಾರ) ಸಮುದ್ರ ಪರ್ಯಂತವೂ ಹಬ್ಬಿತ್ತೆಂಬುದು ಸ್ಪಷ್ಟವಾಗುತ್ತದೆ. ಪರ್ವತಪ್ರದೇಶಗಳನ್ನು ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಸಹ್ಯವೆಂಬುದು ನೀಲಗಿರಿಯ ಉತ್ತರಕ್ಕಿರುವ ಪಶ್ಚಿಮಘಟ್ಟ ಪ್ರದೇಶ. ಮಲಯ, ತಿರುವಾಂಕೂರಿನ ಬೆಟ್ಟಗಳಿಗಿದ್ದ ಹೆಸರು. ಮಹೇಂದ್ರವೆಂಬುದು ಪೂರ್ವ ಘಟ್ಟ, ಕಣ್ಹಗಿರಿ(ಕೃಷ್ಣ ಗಿರಿ) ಈಗಿನ ಕನ್ಹೇರಿ. ಶ್ರೀಶೈಲವೇ ಶ್ರೀಸ್ಥಾನ. ಚಕೋರವೆಂಬುದು ಅದರ ಸಮೀಪದಲ್ಲಿಯ ಇನ್ನೊಂದು ಗಿರಿಪ್ರದೇಶ. ಸೇತ ಎಂಬುದನ್ನು ಗುರುತಿಸಲಾಗಿಲ್ಲ. ಈ ಎಲ್ಲ ಪ್ರದೇಶಗಳನ್ನೂ ಸೇರಿಸಿದರೆ ಇಡೀ ದಕ್ಷಿಣ ಭಾರತವೇ ಇವನ ಆಳಿಕೆಗೊಳಪಟ್ಟಿತ್ತು ಎನ್ನಬೇಕಾದೀತಾದರೂ ಬಹುಶಃ ಈ ಪರ್ವತ ಪ್ರದೇಶಗಳು ಇವನ ಪ್ರಭಾವಕ್ಕೊಳಪಟ್ಟಿದ್ದು, ಇವನ ಸಾರ್ವಭೌಮತ್ವವನ್ನು ಒಪ್ಪಿದ್ದುವು ಎಂದು ಅರ್ಥೈಸುವುದು ಹೆಚ್ಚು ಸಮಂಜಸವಾದೀತು. ಅಂತೂ ತ್ರಿಸಮುದ್ರತೋಯಪೀತವಾಹನ ಎಂಬ ಬಿರುದು ಇವನಿಗೆ ಅನ್ವರ್ಥವಾಗಿದೆ.

ಕ್ಷಹರಾತರ ನಹಪಾನನನ್ನು ಸೋಲಿಸಿದ ಅನಂತರ ಇವನು ಆತ ಅಚ್ಚು ಹಾಕಿಸಿದ ನಾಣ್ಯಗಳ ಮೇಲೆ ತನ್ನ ಹೆಸರನ್ನು ಮುದ್ರಿಸಿ ಅವೇ ನಾಣ್ಯಗಳನ್ನು ಚಲಾವಣೆಗೆ ತಂದನೆಂಬುದು ಜೋಗಲ್ಥಂಬಿಯ ನಾಣ್ಯಸಂಗ್ರಹದಿಂದ ಸ್ಪಷ್ಟವಾಗಿದೆ. ಈ ಸಂಗ್ರಹದಲ್ಲಿ 13,270 ನಾಣ್ಯಗಳು ದೊರೆತಿವೆ. ಇವುಗಳಲ್ಲಿ 9,270 ನಾಣ್ಯಗಳ ಮೇಲೆ ಗೌತಮೀಪುತ್ರನ ಹೆಸರನ್ನು ನಹಪಾನನ ಹೆಸರಿನ ಮೇಲೆ ಮುದ್ರಿಸಲಾಗಿದೆ. ಈ ಅರಸ ನಹಪಾನನನ್ನಲ್ಲದೆ ಶಕ, ಯವನ, ಪಹ್ಲವರನ್ನೂ ಸೋಲಿಸಿದ.

ಆದರೆ ಇವನ ಈ ವಿಜಯಗಳು ಶಾಶ್ವತವಾಗಿರಲಿಲ್ಲ. ಗಿರಿನಗರದಲ್ಲಿ (ಜುನಾಗಡ) ಆಳುತ್ತಿದ್ದ ಕಾರ್ದಮಕ ಮನೆತನದ ರುದ್ರದಾಮ ಇವನನ್ನು ಸೋಲಿಸಿ ನಹಪಾನನಿಂದ ಇವನ ವಶವಾಗಿದ್ದ ಬಹುತೇಕ ಪ್ರದೇಶಗಳನ್ನು ಕಸಿದುಕೊಂಡ. ಮುಲಕ ದೇಶ ಮತ್ತು ಗೋವರ್ಧನ ನಗರಗಳು ಮಾತ್ರ ಸಾತಕರ್ಣಿಯ ವಶದಲ್ಲೇ ಉಳಿದುವು. ದಕ್ಷಿಣದಲ್ಲಿ ಹಬ್ಬಿದ್ದ ಇವನ ಪ್ರಭಾವ ಕುಂಠಿತವಾಯಿತು. ರುದ್ರದಾಮನೊಡನೆ ಗೌತಮೀಪುತ್ರ ರಕ್ತಸಂಬಂಧ ಬೆಳೆಸಿ, ಆಗಬಹುದಾಗಿದ್ದ ಸರ್ವನಾಶವನ್ನು ಆ ರೀತಿ ತಪ್ಪಿಸಿಕೊಂಡಂತೆ ತೋರುತ್ತದೆ. ರುದ್ರದಾಮನ ಮಗಳನ್ನು ಇವನ ಕಿರಿಯ ಮಗ ವಾಸಿಷ್ಠೀಪುತ್ರ ಸಾತಕರ್ಣಿ ಮದುವೆಯಾದಂತೆ ಕಾಣುತ್ತದೆ.

ಗೌತಮೀಪುತ್ರನನ್ನು ನಾಸಿಕದ ಶಾಸನ ಮುಕ್ತಕಂಠದಿಂದ ಹೊಗಳಿದೆ. ಈತನ ರೂಪಲಾವಣ್ಯಗಳಿಗೆ ಸಂಬಂಧಿಸಿದಂತೆ ಇವನನ್ನು ಪರಿಪೂರ್ಣಚಂದ್ರಮಂಡಲಸ ಶ್ರೀಕಪ್ರಿಯದರ್ಶಕನೆಂದು, ಭುಜಗಪತಿಭೋಗಪೀನವೃತ್ತವಿಪುಲದೀರ್ಘಸುಂದರಭುಜ ಉಳ್ಳವನೆಂದು ಹೇಳಿದೆ. ಆಡಳಿತಕ್ಕೆ ಸಂಬಂಧಿಸಿದಂತೆ ಪ್ರಜಾನುರಾಗಿಯೂ ಅವರ ಸುಖದುಃಖಗಳಲ್ಲಿ ಸಮಭಾಗಿಯೂ ಆಗಿದ್ದವನೆಂದೂ ಧರ್ಮಶಾಸ್ತ್ರದಲ್ಲಿ ಸಮ್ಮತವಾದಂತೆ ಪ್ರಜೆಗಳ ಮೇಲೆ ಕರಾಕರಣೆಮಾಡುತ್ತಿದ್ದವನೆಂದೂ ವರ್ಣಸಂಕರವನ್ನು ತಡೆದವನೆಂದೂ ವರ್ಣಿಸಿದೆ. ಶೌರ್ಯಕ್ಕೆ ಸಂಬಂಧಿಸಿದಂತೆ, ಕ್ಷತ್ರಿಯರ ದರ್ಪವನ್ನು ಮುರಿದವನೆಂದೂ ಕ್ಷಹರಾತವಂಶನಿರವಶೇಷಕರನೆಂದೂ ಸಾತವಾಹನಕುಲಯಶಪ್ರತಿಷ್ಠಾಪನಕರನೆಂದೂ ವರ್ಣಿಸಿದೆ. ಸತ್ಪುರುಷರಿಗೆ ಆಶ್ರಯದಾತನೂ ವೇದಶಾಸ್ತ್ರಾದಿ ಜ್ಞಾನಗಳಿಗೆ ಆಧಾರನೂ ಏಕಾಂಕುಶ–ಏಕಶೂರ–ಏಕಬ್ರಾಹ್ಮಣನೂ ಆಗಿದ್ದ ಈತ ಶುಭದಿವಸಗಳಲ್ಲಿ ಪ್ರಜೆಗಳ ರಂಜನೆಗಾಗಿ ಮಹೋತ್ಸವಗಳನ್ನು ಏರ್ಪಡಿಸಿ ಪ್ರಜಾನುರಾಗವನ್ನು ಸಂಪಾದಿಸಿದ್ದ. ತ್ರಿವರ್ಗ (ಧರ್ಮಾರ್ಥಕಾಮ) ಲಾಭಕ್ಕಾಗಿ ಸ್ಥಾನ ಕಾಲಗಳಿಗೆ ಸಮನಾಗಿ ವ್ಯವಹರಿಸುತ್ತಿದ್ದ ಈತ ಅಪರಾಧಿಗಳಾದ ಶತ್ರುಗಳನ್ನು ಸಹ ಪ್ರಾಣಹಿಂಸೆಗೆ ಈಡುಮಾಡಲು ಹಿಂಜರಿಯುತ್ತಿದ್ದ.

ಆಳಿಕೆಯ ಕೊನೆಯ ಕಾಲದಲ್ಲಿ ರುದ್ರದಾಮನಿಂದ ಸೋಲಿಸಲ್ಪಟ್ಟ ಈತ ಸ್ವಲ್ಪಕಾಲ ಅನಾರೋಗ್ಯದಿಂದ ಬಳಲಿದ. ಈತನ ಆಳ್ವಿಕೆಯ 24 ನೆಯ ವರ್ಷದ ನಾಸಿಕದ ಶಾಸನದಲ್ಲಿ ಈತನ ತಾಯಿಯನ್ನು ಜೀವಸುತಾ ಎಂದು ವರ್ಣಿಸಲಾಗಿದೆ. ಜೀವದಿಂದಿದ್ದ ಮಗನ ತಾಯಿ ಎಂಬ ಅರ್ಥ ಬರುವ ಈ ಮಾತು, ಪ್ರಜೆಗಳಿಗೆ ರಾಜನ ಆರೋಗ್ಯವನ್ನು ಕುರಿತು ನೀಡಿದ ಆಶ್ವಾಸನೆಯ ಮಾತುಗಳಾಗಿರಬಹುದೆಂದು ಹೇಳಲಾಗಿದೆ. ಆದರೆ ಈ ಅನಾರೋಗ್ಯದಿಂದ ಗೌತಮೀಪುತ್ರ ಚೇತರಿಸಿಕೊಳ್ಳಲೇ ಇಲ್ಲ. (ಜ.ಬಿ.ಆರ್.)

**ಗೌರಮ್ಮ, ಕೊಡಗಿನ :** 1912–39. ಕನ್ನಡದ ಹೆಸರಾಂತ ಕಥೆಗಾರ್ತಿ. ಹುಟ್ಟಿದ್ದು ಮಡಿಕೇರಿಯಲ್ಲಿ. ಮನೆತನ ಹವ್ಯಕ ಬ್ರಾಹ್ಮಣರದ್ದು. ತಂದೆ ರಾಮಯ್ಯ, ತಾಯಿ ನಂಜಕ್ಕ. ಗೌರಮ್ಮ ತುಂಬ ಜಾಣೆ. ಮಡಿಕೇರಿಯ ಶಾಲೆಯಲ್ಲಿ ಓದಿದಳು. ಆಗ ಅಲ್ಲಿ ಕಾಲೇಜು ಇರಲಿಲ್ಲವಾಗಿ ಓದು ಮುಂದಕ್ಕೆ ನಡೆಯಲಿಲ್ಲ. 1928ರಲ್ಲಿ ಬಳಗ ದಲ್ಲೆ, ಬಿ.ಟಿ. ಗೋಪಾಲಕೃಷ್ಣ ಎಂಬುವರಿಗೆ ಕೊಟ್ಟು ಮದುವೆಯಾಯಿತು. ಈತ ತಮ್ಮ ಬಂಧುಗಳಾದ ಮಂಜನಾಥಯ್ಯನವರ ಕಾಫಿ ತೋಟದಲ್ಲಿ ಮ್ಯಾನೇಜರ ರಾಗಿದ್ದರು. 1931ರಲ್ಲಿ ಈ ದಂಪತಿಗಳಿಗೆ ಒಂದು ಗಂಡು ಮಗು ಆಯಿತು. ಮನೆಕೆಲಸ ಯಾವುದನ್ನೂ ಅಲಕ್ಷ್ಯ ಮಾಡದೆ, ಬಿಡುವಿನ ವೇಳೆಯಲ್ಲೆಲ್ಲ ಗೌರಮ್ಮ ಪುಸ್ತಕಗಳನ್ನು ಓದತೊಡಗಿದಳು. ಕಥೆಗಳನ್ನು ಬರೆಯತೊಡಗಿದಳು. ಮೊದಲಲ್ಲಿ ಪ್ರಕಟವಾದ ಕಥೆಯಲ್ಲಿ ಲೇಖಕಿಯ ಹೆಸರು ಮಿಸೆಸ್ ಬಿ.ಟಿ.ಜಿ. ಕೃಷ್ಣ ಎಂದಿತ್ತು. ಮನುವಿನ ರಾಣಿ ಎಂಬ ಆ ಕಥೆ ಈಕೆ ಶ್ರೇಷ್ಠ ಕತೆಗಾರ್ತಿ ಎನ್ನುವುದನ್ನು ಸಾಬೀತುಪಡಿಸಿತು. ಬಾಳನ್ನು ನೋಡಲು ಬಲ್ಲ ಕಣ್ಣು, ಸಹಾನುಭೂತಿಯ ಮನಸ್ಸು, ಸಹಜವಾದ ಕಥನ, ಸರಳವಾದ ಭಾಷೆ, ಕಥನದಲ್ಲಿ ಕ್ರಮ, ಮಿತ–ಇವೆಲ್ಲವನ್ನು ಅದರಲ್ಲಿ

ಸಾಕಷ್ಟು ಗುರುತಿಸಬಹುದು. ಗೌರಮ್ಮನವರ ಆಮೇಲಣ ಕಥೆಗಳಲ್ಲಿ ಈ ಗುಣಗಳು ಬೆಳೆದವು. ಅಲ್ಲಿ ಇಲ್ಲಿ ಪ್ರಕಟವಾದ ಈ ಕಥೆಗಳನ್ನು ಸೇರಿಸಿ ಪುಸ್ತಕವಾಗಿ ಪ್ರಕಟಿಸಲು ಧಾರವಾಡದ ಪ್ರಕಾಶಕ ದತ್ತಾತ್ರೇಯ ಕುಲಕರ್ಣಿಯವರು ಹವಣಿಸಿದರು. ಆ ಪುಸ್ತಕ ಹೊರಬರುವ ಮುನ್ನವೇ ಗೌರಮ್ಮ ಒಂದು ದಿನ ತಮ್ಮ ಮನೆಯ ಬದಿಯ ಹೊಳೆಯಲ್ಲಿ ಈಜುಹೋಗಿದ್ದವರು ನೀರಲ್ಲಿ ಮುಳುಗಿ ತೀರಿಕೊಂಡರು. ಚಿಗುರು ಎಂಬ ಹೆಸರಿನಿಂದ ಪ್ರಕಟವಾಗಬೇಕೆಂದು ಉದ್ದೇಶಿಸಿದ್ದ ಈಕೆಯ ಪುಸ್ತಕವನ್ನು ಮಿತ್ರರು ಕಂಬನಿ ಎಂದು ಹೆಸರಿಸಿ ಪ್ರಕಟಿಸಿದರು.



ಗೌರಮ್ಮನವರು ಹೊಸಕಾಲದ ಉನ್ನತ ಪ್ರೇರಣೆಗಳಿಗೆ ಮನತೆತ್ತ ಉದೀರ್ಣ ಚೇತನ. ಮಹಾತ್ಮಗಾಂಧಿ ಕೊಡಗಿನ ಪ್ರವಾಸದಲ್ಲಿ ಮಂಜನಾಥಯ್ಯನವರ ಅತಿಥಿಯಾಗಿ ಬಂದಾಗ, ಸತ್ಯಾಗ್ರಹಮಾಡಿ ಅವರನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ ದೇಶಸೇವೆಯ ನಿಧಿಗಾಗಿ ತಮ್ಮ ಒಡವೆಯನ್ನೆಲ್ಲ ಗೌರಮ್ಮ ಮುಡುಪಾಗಿ ಕೊಟ್ಟರು ಎಂಬ ಸಂಗತಿಯನ್ನು ಇಲ್ಲಿ ನೆನೆಯಬಹುದು. (ಎಂ.ವಿ.ಐ.)

**ಗೌರವ ರಕ್ಷೆ :** ವಿವಿಧ ರಕ್ಷಣಾ ಮತ್ತು ಸೇವಾದಳಗಳ ಸಮವಸ್ತ್ರಧಾರಿ ಯೋಧರು ತಮ್ಮ ರಾಷ್ಟ್ರದ ಗೌರವಕ್ಕೆ ಅರ್ಹನಾದ ಅಧಿಕಾರಿ ಅಥವಾ ಪ್ರತಿಷ್ಠಿತ ವ್ಯಕ್ತಿಗೆ ವಿಶಿಷ್ಟ ಸಂದರ್ಭಗಳಲ್ಲಿ ವ್ಯಕ್ತಪಡಿಸುವ ಶಸ್ತ್ರಸಹಿತ ಇಲ್ಲವೇ ಶಸ್ತ್ರರಹಿತ ಸಾಮೂಹಿಕ ಗೌರವ (ಗಾರ್ಡ್ ಆಫ್ ಆನರ್). ಗೌರವ ರಕ್ಷೆಯನ್ನು ಯಾರು, ಯಾರಿಗೆ, ಯಾವ ಸಂದರ್ಭದಲ್ಲಿ ಕೊಡಬೇಕೆಂಬುದು ಪ್ರತಿ ರಾಷ್ಟ್ರದಲ್ಲೂ ನಿಯಮಬದ್ಧವಾಗಿ ನಿಶ್ಚಿತವಾಗಿರುತ್ತದೆ. ಭಾರತ ಗಣರಾಜ್ಯದಲ್ಲಿ ಮತ್ತು ರಾಜ್ಯಗಳಲ್ಲಿ ಈ ಕೆಳಗಿನ ವ್ಯಕ್ತಿಗಳು ಅಥವಾ ಅಧಿಕಾರಿಗಳು ಗೌರವ ರಕ್ಷೆಗೆ ಅರ್ಹರೆಂದು ನಿಶ್ಚಿತವಾಗಿದೆ. ಅಲ್ಲದೆ ಇತರ ದೇಶದ ಯಾವ ಗಣ್ಯವ್ಯಕ್ತಿಗಾದರೂ ಸರ್ಕಾರ ತೀರ್ಮಾನಿಸಿದರೆ ಇಂಥ ಗೌರವ ರಕ್ಷೆಯನ್ನೀಯಬಹುದು. 1. ರಾಷ್ಟ್ರಾಧ್ಯಕ್ಷ, 2. ಉಪರಾಷ್ಟ್ರಾಧ್ಯಕ್ಷ, 3. ರಾಜ್ಯಪಾಲರು, 4. ಉಪರಾಜ್ಯಪಾಲ (ಲೆಫ್ಟಿನೆಂಟ್ ಗವರ್ನರ್), 5. ಪ್ರಧಾನ ಮಂತ್ರಿ, 6. ರಕ್ಷಣಾಮಂತ್ರಿ, 7. ರಕ್ಷಣೋತ್ಪಾದನಾ ಮಂತ್ರಿ, 8. ಉಪರಕ್ಷಣಾ ಮಂತ್ರಿ, 9. ರಾಜ್ಯಗಳ ಮುಖ್ಯಮಂತ್ರಿಗಳು, 10. ಪ್ರಧಾನ ದಂಡನಾಯಕ, 11. ಜನರಲ್ ಆಫಿಸರ್ ಕಮಾಂಡಿಂಗ್–ಇನ್–ಚೀಫ್ (ಪೂರ್ವ, ಪಶ್ಚಿಮ, ದಕ್ಷಿಣ ಇತ್ಯಾದಿ ವಲಯಗಳು) 12. ನೌಕಾದಳ ಮತ್ತು ವಾಯುಸೇನಾ ದಳಗಳ ದಂಡನಾಯಕರು, 13. ನೌಕಾದಳದ ಧ್ವಜಾಧಿಕಾರಿ. 14. ನೌಕಾದಳಗಳ ಮತ್ತು ವಾಯುಸೇನಾದಳಗಳ ಉಪದಂಡನಾಯಕರು, 15. ಭಾರತೀಯ ನೌಕಾದಳದ ಮುಂಬಯಿ ಮತ್ತು ಕೊಚಿನ್‍ಗಳ ಕಮಾಡೋರುಗಳು, 16. ಆಯಾ ಪ್ರದೇಶಗಳ ವಾಯುಸೇನಾದಳಪತಿಗಳು. ವಿಶ್ವವಿದ್ಯಾಲಯದ ಪದವಿ ಪ್ರಧಾನ ಸಮಾರಂಭ ಭಾಷಣಕ್ಕೆ ಆಹ್ವಾನಿತರಾಗಿ ಬಂದ ಪ್ರತಿಷ್ಠಿತ ವ್ಯಕ್ತಿಗೆ, ವಾರ್ಷಿಕ ಶಿಬಿರಗಳಿಗೆ ಆಹ್ವಾನಿತರಾಗಿ ಬಂದ ಪ್ರತಿಷ್ಠಿತ ವ್ಯಕ್ತಿಗಳಿಗೆ ಮತ್ತು ಆಯಾ ವಿಶ್ವವಿದ್ಯಾಲಯಗಳ ಕುಲಪತಿಗಳಿಗೆ ನ್ಯಾಷನಲ್ ಕ್ಯಾಡೆಟ್ ಕೋರ್ ಕ್ಯಾಡೆಟುಗಳು ಗೌರವ ರಕ್ಷೆಯನ್ನು ನೀಡಿ ತಮ್ಮ ಗೌರವವನ್ನು ವ್ಯಕ್ತಪಡಿಸಬಹುದು. ರಾಜ್ಯದ ಗೃಹಮಂತ್ರಿ ತನ್ನ ರಾಜ್ಯದ ಸಶಸ್ತ್ರ ಪೊಲೀಸರ ಗೌರವ ರಕ್ಷೆಯನ್ನು ಪಡೆಯಲು ಅರ್ಹರು.

ಸಂಖ್ಯೆ : ಗೌರವ ರಕ್ಷೆಯನ್ನೀಯಬೇಕಾದ ಯೋಧರ ಸಂಖ್ಯೆಯನ್ನು ಸಹ ವರ್ಗವಾರು ನಿಷ್ಕರ್ಷಿಸಲಾಗಿದೆ. ರಾಷ್ಟ್ರಾಧ್ಯಕ್ಷರಿಗೆ ಮೂರು ಜನ ಅಧಿಕಾರಿಗಳನ್ನು ಸೇರಿದಂತೆ 153; ಉಪರಾಷ್ಟ್ರಪತಿ ಮತ್ತು ಪ್ರಧಾನಮಂತ್ರಿಗಳಿಗೆ ಒಬ್ಬ ಅಧಿಕಾರಿ ಮತ್ತು 100 ಜನ ಯೋಧರು. ಉಳಿದ ಎಲ್ಲರಿಗೂ ಒಬ್ಬ ಅಧಿಕಾರಿ ಮತ್ತು 50 ಮಂದಿ ಯೋಧರು.

ಪೂರ್ವ ಸಿದ್ಧತೆ : ಗೌರವ ರಕ್ಷೆಯನ್ನೀಯುವ ಯೋಧರು ಮತ್ತು ವಾದ್ಯ ವೃಂದದವರು ಉತ್ಸವೋಚಿತ ಸಮವಸ್ತ್ರ, ಶಸ್ತ್ರ ಮತ್ತು ವಾದ್ಯೋಪಕರಣಧಾರಿಗಳಾಗಿ ನಿಗದಿಯಾದ ಸ್ಥಳದಲ್ಲಿ ವಂದನಾವೇದಿಕೆಗೆ ಎದುರಾಗಿ ನಿಶ್ಚಿತ ದೂರದಲ್ಲಿ ಮಧ್ಯೆ ನಾಲ್ಕು ದಾಪುಗಳ ಅಥವಾ 120 ಅಂಗುಲಗಳ ಅಂತರದಲ್ಲಿ ಎರಡು ಸಾಲಾಗಿ ನಿಲ್ಲುವರು. ರಾಷ್ಟ್ರಾಧ್ಯಕ್ಷರಿಗೆ ರಕ್ಷೆಯೀಯುವ ಸಂದರ್ಭದಲ್ಲಿ ಯೋಧರ ಮುಂದಿನ ಸಾಲಿನಿಂದ ಮುಂದಕ್ಕೆ ಮಧ್ಯದಲ್ಲಿ ಎಂಟು ದಾಪುಗಳ ಅಂತರದಲ್ಲಿ ಗೌರವ ರಕ್ಷೆಯ ನಾಯಕ ನಿಲ್ಲುತ್ತಾನೆ. ಬಾಕಿ ಸಂದರ್ಭದಲ್ಲಿ 4–5 ದಾಪುಗಳ ಅಂತರದಲ್ಲಿ ನಿಲ್ಲುತ್ತಾನೆ. ವಾದ್ಯವೃಂದದವರು ಯೋಧರ ಮುಂದಿನ ಸಾಲಿನ ಬಲಗಡೆ ಕೊನೆಯ ನಿರ್ದೇಶಕನ ಬಲಕ್ಕೆ ಅದೇ ಸಾಲಿನಲ್ಲಿ ಏಳು ದಾಪು ಬಲಕ್ಕೆ ನೀಟಸಾಲುಗಳಲ್ಲಿ (ಕಾಲಮ್ಸ್) ನಾಲ್ಕು ಅಡ್ಡಸಾಲುಗಳಾಗಿ ನಿಲ್ಲುವರು. ನಗಾರಿ ಮೇಜರನ (ಡ್ರಮ್ ಮೇಜರ್) ಸ್ಥಾನ ಮುಂದಿನ ಅಡ್ಡಸಾಲಿನ ಮಧ್ಯದವನ ಮುಂದಕ್ಕೆ ಮೂರು ದಾಪು ಮುಂದಕ್ಕೆ ಇದೆ. ವಾದ್ಯನಾಯಕ ಅವನಿಂದ ಮುಂದಕ್ಕೆ ಎರಡು ದಾಪು ಮುಂದೆ ನಿಲ್ಲುತ್ತಾನೆ. ವಾದ್ಯದವರ ಒಟ್ಟು ಸಂಖ್ಯೆ 12+1+1 = 14.

ಗೌರವ ರಕ್ಷೆಯನ್ನು ಸ್ವೀಕರಿಸುವ ವ್ಯಕ್ತಿ ಬಂದು ನಿಂತುಕೊಳ್ಳುವ ವೇದಿಕೆಯ ಮುಂದಿನ ಅಂಚಿನ ಎಡಬಲಗಳಲ್ಲಿ ಎರಡು ದಾಪುಗಳ ಅಂತರದಲ್ಲಿ ಇಬ್ಬರು ಸಹಾಯಾಧಿಕಾರಿಗಳು ರಕ್ಷೆಯ ಯೋಧರಿಗೆ ಎದುರಾಗಿ ನಿಲ್ಲುವರು. ವೇದಿಕೆಗೂ ಗೌರವ ರಕ್ಷೆಯ ನಾಯಕನಿಗೂ ಮಧ್ಯೆ ಸ್ಥಳಾವಕಾಶಕ್ಕೆ ತಕ್ಕಂತೆ ಕನಿಷ್ಠ ಪಕ್ಷ ಏಳು ದಾಮುಗಳ ಅಂತರವಿರಬೇಕು. ರಕ್ಷೆಯನ್ನು ಸ್ವೀಕರಿಸುವ ವ್ಯಕ್ತಿಯನ್ನು ಆಹ್ವಾನಿಸುವ ಅಧಿಕಾರಿ (ಕಂಡಕ್ಟಿಂಗ್ ಆಫಿಸರ್) ತನ್ನ ಕರ್ತವ್ಯ ನಿರ್ವಹಿಸಿ ವೇದಿಕೆಯ ಮೇಲೆ ಆತ ನಿಂತ ತರುವಾಯ ಆತನಿಗೆ ಹಿಂದೆ ಮೂರು ದಾಪು ಅಂತರದಲ್ಲಿ ಸಾವಧಾನ ಸ್ಥಿತಿಗೆ ಬಂದು ನಿಲ್ಲಬೇಕು. ಈಗ ಆವರಣವೆಲ್ಲವೂ ನಿಶ್ಶಬ್ದವಾಗಿರುತ್ತದೆ. ಎಲ್ಲ ಸಮವಸ್ತ್ರಧಾರಿಗಳೂ ಸಾವಧಾನ ಸ್ಥಿತಿಯಲ್ಲಿರುತ್ತಾರೆ.


ಪ್ರದಾನ : ಪ್ರತಿಷ್ಠಿತ ವ್ಯಕ್ತಿ ವೇದಿಕೆಯ ಮೇಲೆ ಪೂರ್ವನಿಶ್ಚಿತ ಸ್ಥಾನದಲ್ಲಿ ಬಂದು ನಿಂತ ಬಳಿಕ ರಕ್ಷಾನಾಯಕ ಸಂದರ್ಭ ಮತ್ತು ವ್ಯಕ್ತಿಯ ಸ್ಥಾನ ಪ್ರತಿಷ್ಠೆಗಳನ್ನನುಸರಿಸಿ ರಾಷ್ಟ್ರೀಯ ವಂದನೆ (ನ್ಯಾಷನಲ್ ಸೆಲ್ಯೂಟ್) ಅಥವಾ ಸಾರ್ವತ್ರಿಕ ವಂದನೆಯನ್ನು (ಜನರಲ್ ಸೆಲ್ಯೂಟ್) ಘೋಷಿಸಿ ರಕ್ಷಕ ಯೋಧರು ಶಸ್ತ್ರವಂದನೆಯನ್ನು ಅರ್ಪಿಸುತ್ತಿರುವ ಸಮಕಾಲಕ್ಕೆ ತಾನೂ ವಂದನೆಯನ್ನು ಅರ್ಪಿಸುತ್ತ ಅದೇ ಭಂಗಿಯಲ್ಲಿ ತನ್ನವರೊಡನೆ ಅಚಲವಾಗಿ ನಿಲ್ಲುತ್ತಾನೆ. ಈಗ ವಾದ್ಯವೃಂದ ರಾಷ್ಟ್ರಗೀತೆಯನ್ನು ಮೇಳದಲ್ಲಿ ನುಡಿಸುತ್ತದೆ. ಇತರ ದೇಶಗಳ ಪ್ರತಿಷ್ಠಿತ ವ್ಯಕ್ತಿಗಳಿಗೆ ರಕ್ಷೆ ನೀಡುವಾಗ ಪೂರ್ವನಿಶ್ಚಿತವಾಗಿದ್ದರೆ ಆಯಾ ದೇಶದ ರಾಷ್ಟ್ರಗೀತೆಯನ್ನು ನುಡಿಸಬಹುದು. ವೇದಿಕೆಯ ಮೇಲಿರುವ ಪ್ರತಿಷ್ಠಿತ ವ್ಯಕ್ತಿ ಮಾತ್ರ ಪ್ರತಿವಂದನೆಯನ್ನು ನೀಡುವುದರ ಮೂಲಕ ವಂದನೆಯನ್ನು ಸ್ವೀಕರಿಸುವನು. ಬಾಕಿಯವರೆಲ್ಲರೂ ಸಾವಧಾನ ಸ್ಥಿತಿಯಲ್ಲಿ ಅಚಲರಾಗಿ ನಿಲ್ಲಬೇಕಾಗುತ್ತದೆ. ರಾಷ್ಟ್ರಗೀತೆ ಮುಗಿದ ತರುವಾಯ ನಾಯಕ ಶಸ್ತ್ರಗಳನ್ನು ಕೆಳಗಿಳಿಸುವ ಆಜ್ಞೆಯಿತ್ತು ತಾನೊಬ್ಬನೇ ಕ್ರಮಬದ್ಧ ಪದವಿನ್ಯಾಸದಿಂದ ಮುಂದುವರಿದು ವೇದಿಕೆಯ ಮುಂದೆ ಕನಿಷ್ಠ ಪಕ್ಷ ಮೂರು ದಾಪು ದೂರದಲ್ಲಿ ನಿಂತು ಮತ್ತೊಮ್ಮೆ ವೈಯಕ್ತಿಕ ವಂದನೆಯನ್ನು ಅರ್ಪಿಸಿ ಇಂಥ ಬೆಟಾಲಿಯನ್ನಿನ ಗೌರವ ರಕ್ಷೆ ತಮ್ಮ ನಿರೀಕ್ಷಣಕ್ಕೆ ಸಜ್ಜಾಗಿದೆ ಎಂದು ಪೂರ್ವನಿಶ್ಚಿತ ಭಾಷೆಯಲ್ಲಿ (ನಮ್ಮ ರಾಷ್ಟ್ರದಲ್ಲಿ ಹಿಂದಿ) ವರದಿ ಮಾಡಿ ಮತ್ತೆ ವಂದಿಸಿ, ಆ ಪ್ರತಿಷ್ಠಿತ ವ್ಯಕ್ತಿ ಮರುವಂದಿಸಿ ವೇದಿಕೆಯಿಂದ ಇಳಿದು ಮುಂದುವರಿಯಲು ಸಿದ್ಧನಾದ ಕೂಡಲೇ ತಾನೂ ಹಿಂತಿರುಗಿ ಆತನ ಬಳಿ ಪದ ವಿನ್ಯಾಸಕ್ಕೆ ತಕ್ಕಂತೆ ತನ್ನ ನಡಿಗೆಯನ್ನು ಹೊಂದಿಸಿಕೊಂಡು ಆತನ ಬಲಗಡೆಗೆ ಆದಂತೆ ಸ್ವಲ್ಪ ಮುಂದೆ ನಡೆಯುವನು. ರಾಷ್ಟ್ರಾಧ್ಯಕ್ಷರು ವಂದನೆ ಸ್ವೀಕರಿಸುವ ಸಂದರ್ಭದಲ್ಲಿ ಮಾತ್ರ ಅಂಗರಕ್ಷಕರು ಅವರ ಮುಂದೆ ಎಡಬಲಗಳಲ್ಲಿ ನಡಿಗೆಯಲ್ಲಿ ಹೋಗುವರು. ಬಾಕಿ ಸಂದರ್ಭಗಳಲ್ಲಿ ಅವರು ಸ್ವಸ್ಥಾನದಲ್ಲಿರುತ್ತಾರೆ.

ವೀಕ್ಷಣೆ : ಈಗ ಪ್ರತಿಷ್ಠಿತ ವ್ಯಕ್ತಿ ವಾದ್ಯವೃಂದವನ್ನು ಸಮೀಪಿಸಿ ನಗಾರಿಮೇಜರನ ಹಿಂದುಗಡೆಯಿಂದ ಹಾಯ್ದು ವಾದ್ಯವೃಂದವನ್ನು ನಿರೀಕ್ಷಿಸುವನು. ಅವರೆಲ್ಲರೂ ಸಾವಧಾನ ಸ್ಥಿತಿಗಳಲ್ಲಿ ನಿಂತಿರುತ್ತಾರೆ. ವೃಂದದ ಮುಂದಿನ ಸಾಲಿನ ಎಡಗಡೆಯ ವ್ಯಕ್ತಿಯನ್ನು ದಾಟುತ್ತಿದ್ದಂತೆಯೇ ಮಿಂಚಿನ ವೇಗದಿಂದ ವಾದ್ಯನಾಯಕ ಹಿಂದಕ್ಕೆ ತಿರುಗಿ ಸನ್ನೆಯ ಆಜ್ಞೆ ಮಾಡಿ ವಾದ್ಯ ನುಡಿಸಲು ಹೇಳುತ್ತಾನೆ. ಪ್ರತಿಷ್ಠಿತ ವ್ಯಕ್ತಿ ನಿಧಾನ ನಡಿಗೆಯಲ್ಲಿ ರಕ್ಷೆಯ ಯೋಧರ ಬಲ ನಿರ್ದೇಶಕನನ್ನು ಸಮೀಪಿಸಿದಂತೆ, ನಗಾರಿಯ ಪ್ರಥಮ ಹೊಡೆತದ ಸನ್ನೆಯಿಂದ ಗಕ್ಕನೆ ತಮ್ಮೆಲ್ಲರ ದೃಷ್ಟಿಯನ್ನು ಯೋಧರು ಆತನ ಮೇಲೆ ಹಾಯಿಸುತ್ತಾರೆ. ರಕ್ಷೆಯ ಯೋಧರ ಮುಂದಿನ ಸಾಲನ್ನು ಮಾತ್ರ ವ್ಯಕ್ತಿ ವೀಕ್ಷಿಸುತ್ತ ದಾಪುಗಳ ಅಂತರದಲ್ಲಿ ಮುಂದುವರಿಯುತ್ತಾನೆ. ಆತ ಮುಂದುವರಿದಂತೆ ಯೋಧರ ಶಿರಗಳೂ ದೃಷ್ಟಿಯೂ ಆತನತ್ತ ತಿರುಗುತ್ತಿರುತ್ತವೆ. ರಕ್ಷೆಯ ನಾಯಕ ಬಲಗಡೆ ಮುಂದುವರಿಯುತ್ತಿರುತ್ತಾನೆ. ಎಡಗಡೆ ಕೊನೆಯ ಎಡನಿರ್ದೇಶಕನನ್ನು ತಲುಪಿದ ಕೂಡಲೇ ನಗಾರಿತಾಡನ ಧ್ವನಿಯ ಸಂಜ್ಞೆಗೆ ಯೋಧರೆಲ್ಲರೂ ಕ್ಷಣಾರ್ಧದಲ್ಲಿ ಮುಮ್ಮುಖರಾಗುತ್ತಾರೆ. ನಿರೀಕ್ಷಣೆ ಮುಗಿಯುತ್ತದೆ.

ನಿಷ್ಕ್ರಮಣ : ಈಗ ಪ್ರತಿಷ್ಠಿತ ವ್ಯಕ್ತಿ ವೇಗ ನಡಿಗೆಯಲ್ಲಿ ವೇದಿಕೆಯತ್ತ ಮುಂದುವರಿಯುತ್ತಾನೆ. ಈ ಮಧ್ಯೆ ತನ್ನನ್ನು ಹಿಂಬಾಲಿಸುತ್ತಿರುವ ರಕ್ಷೆಯ ನಾಯಕನಿಗೆ ಆತ ಹಸ್ತಲಾಘವವಿತ್ತರೆ ನಾಯಕ ಅದನ್ನು ಸ್ವೀಕರಿಸಿ, ವಂದಿಸಿ, ಅದೇ ನಡಿಗೆಯಲ್ಲಿ ತನ್ನ ಸ್ಥಾನಕ್ಕೆ ಬಂದು ಉಳಿದವರಂತೆ ಸಾವಧಾನ ಸ್ಥಿತಿಯಲ್ಲಿ ನಿಲ್ಲುತ್ತಾನೆ. ಆಹ್ವಾನ ಮಾಡುವ ಅಧಿಕಾರಿ ಈ ವೇಳೆಗೆ ವೇದಿಕೆಯಿಂದಿಳಿದು, ಉಚಿತ ಸ್ಥಳದಲ್ಲಿ ನಿಂತು, ವ್ಯಕ್ತಿಯನ್ನು

ಪೂರ್ವನಿರ್ದಿಷ್ಟ ಸ್ಥಳಕ್ಕೆ ಕೊಂಡೊಯ್ಯುತ್ತಾನೆ. ಆತ ದೂರ ಸರಿದಂತೆ ಗೌರವ ರಕ್ಷೆಯ ನಾಯಕ ತನ್ನ ಯೋಧರಿಗೆ ಸ್ವಸ್ಥಾನಕ್ಕೆ ತೆರಳುವ ಆಜ್ಞೆಯೀಯುತ್ತಾನೆ. **ನೋಡಿ–ಉತ್ಸವ ಕವಾಯತಿ; ಕವಾಯತಿ.** (ಸಿ.ಜಿ.ಪಿ.)

**ಗೌರಾಮಿ :** ಪರ್ಸಿಫಾರ್ಮಿಸ್ ಗಣದ ಆಸ್ಫ್ರೋನಿಮಿಡೆ ಕುಟುಂಬಕ್ಕೆ ಸೇರಿದ ಮೀನುಗಳಿಗೆ ಇರುವ ಸಾಮಾನ್ಯ ಹೆಸರು. ಶಾಸ್ತ್ರೀಯ ನಾಮ ಆಸ್ಫ್ರೋನಿಮಸ್ ಗೊರಾಮಿ. ಮೂಲತಃ ಇಂಡೊನೇಷ್ಯ, ಥೈಲೆಂಡ್, ಮಲೇಶಿಯ, ಕಾಂಬೋಡಿಯ, ವಿಯಟ್ನಾಂ ದೇಶಗಳ ಸಿಹಿನೀರು ಪ್ರದೇಶಗಳಲ್ಲಿ ವಾಸಿಸುವ ಮೀನು. ಈಗ ಈ ಮೀನನ್ನು ಭಾರತ, ಫಿಲಿಪೀನ್ಸ್, ಶ್ರೀಲಂಕ, ಮಡಗಾಸ್ಕರ್ ಮೊದಲಾದ ದೇಶಗಳಲ್ಲಿಯೂ ಸಾಕಲಾಗುತ್ತಿದೆ. 1916 ರಲ್ಲಿ ಜಾವ ಮತ್ತು ಮಾರಿಷಸ್ ನಿಂದ ತಮಿಳುನಾಡಿಗೆ ತರಲಾದ ಗೌರಾಮಿಗಳನ್ನು ಸಾಕಿ ಭಾರತದಲ್ಲಿ ನೆಲೆಗೊಳ್ಳುವಂತೆ ಮಾಡಲಾಯಿತು. ಇದು ಉಷ್ಣವಲಯದ ಮೀನಾಗಿದ್ದು $15^0$ ಸೆ. ಗಿಂತ ಕಡಿಮೆ ಉಷ್ಣತೆಯ ಶೀತಲ ನೀರಿನಲ್ಲಿ ಬದುಕಿರಲಾರದು. ಇದು ಸುಮಾರು 65 ಸೆಂಮೀ ವರೆಗೆ ಬೆಳೆಯಬಲ್ಲುದು. ಕಿವಿರು ಗೂಡಿನಲ್ಲಿ ಶ್ವಾಸನೇಂದ್ರಿಯ ಗಳಿರುವುದರಿಂದ ಇದು ನೇರವಾಗಿ ನೀರಿನ ಹೊರಗಿನ ಗಾಳಿಯನ್ನು ಉಸಿರಾಟಕ್ಕೆ ಬಳಸಿಕೊಳ್ಳಬಲ್ಲದು. ಗೌರಾಮಿ ಪ್ರಧಾನವಾಗಿ ಸಸ್ಯಾಹಾರಿ; ನೀರಿನಲ್ಲಿ ಬೆಳೆಯುವ ಮೃದು ಜಲಸಸ್ಯಗಳನ್ನು ತಿಂದು ಜೀವಿಸುತ್ತದೆ. ಇದಲ್ಲದೆ ಕೆಲವು ಬಾರಿ ಸಣ್ಣ ಹುಳ, ಸೀಗಡಿ, ಕೀಟದ ಮರಿಗಳು, ಇತ್ಯಾದಿಗಳನ್ನು ತಿನ್ನುತ್ತದೆ. ಮರಿ ಗೌರಾಮಿಗಳು ರೋಟಿಫರ್ ಮತ್ತು ಇನ್ಫುಸೋರಿಯನ್ ಜಾತಿಯ ಸೂಕ್ಷ್ಮ ಪ್ರಾಣಿ ಪ್ಲವಕಗಳನ್ನು ತಿನ್ನುತ್ತವೆ. ಈ ಮೀನು ಕೃತಕ ಆಹಾರವನ್ನೂ ತಿನ್ನುತ್ತವಾದ್ದರಿಂದ ಇವು ಸಾಕಣೆಗೆ ಯೋಗ್ಯವಾಗಿವೆ. ಆದರೆ ಮಂದಗತಿಯ ಬೆಳವಣಿಗೆಯ ಕಾರಣ ಭಾರತದಲ್ಲಿ ಈ ಮೀನನ್ನು ಅಷ್ಟಾಗಿ ಸಾಕುವುದಿಲ್ಲ.



ಅಂಡಾಕಾರದ ಮತ್ತು ಪಾರ್ಶ್ವದಿಂದ ಪಾರ್ಶ್ವಕ್ಕೆ ಚಪ್ಪಟೆಯಾದ ದೇಹ, ಭುಜದ ರೆಕ್ಕೆಯ ಬುಡದಲ್ಲಿರುವ ಕಪ್ಪು ಚುಕ್ಕೆ, ಮರಿ ಮೀನುಗಳಲ್ಲಿರುವ ನಾಲ್ಕೈದು ಉದ್ದ ಪಟ್ಟೆಗಳು – ಈ ಮೀನಿನ ಪ್ರಧಾನ ಲಕ್ಷಣಗಳು. ಗೌರಾಮಿ ಮೀನು ವರ್ಷಾದ್ಯಂತ ಸಂತಾನೋತ್ಪತ್ತಿ ಮಾಡುತ್ತದೆ. ಸಾಮಾನ್ಯವಾಗಿ ಬೇಸಿಗೆಯಲ್ಲಿ ಅಂದರೆ, ಏಪ್ರಿಲ್–ಮೇ ತಿಂಗಳಲ್ಲಿ ಸಂತಾನಾಭಿವೃದ್ಧಿ ತ್ವರಿತವಾಗಿರುತ್ತದೆ. ಈ ಮೀನು ಕೊಳಗಳಲ್ಲಿ ಬೆಳೆಯುವ ಸಸ್ಯಗಳ ಇಲ್ಲವೆ ಹುಲ್ಲಿನ ನಡುವೆ ಗೂಡುಕಟ್ಟಿ ಮೊಟ್ಟೆಯಿಡುತ್ತದೆ. ಸುಮಾರು 10 ದಿವಸಗಳಲ್ಲಿ ಮೊಟ್ಟೆಗಳು ಒಡೆದು ಮರಿಯಾಗುತ್ತವೆ. ಮೊಟ್ಟೆಗಳು ಹಳದಿ ಮಿಶ್ರಿತವಾಗಿದ್ದು ಅರೆಪಾರದರ್ಶಕವಾಗಿರುತ್ತವೆ. ತಂದೆ ತಾಯಿ ಮೀನುಗಳು ಸುಮಾರು ನಾಲ್ಕುವಾರಗಳ ವರೆಗೆ ಮರಿಗಳನ್ನು ರಕ್ಷಿಸುತ್ತವೆ.

ಅಕ್ವೇರಿಯಂಗಳಲ್ಲಿ ಈ ಮೀನುಗಳು ಸಾಮಾನ್ಯವಾಗಿ ಕಾಣಸಿಗುತ್ತವೆ. ಬ್ಲೂ ಗೌರಾಮಿ, ಮೂರು ಚುಕ್ಕೆ ಗೌರಾಮಿ, ಕುಬ್ಜ ಗೌರಾಮಿ, ಹೊಂಬಣ್ಣದ ಗೌರಾಮಿ ಹೀಗೆ ಹಲವಾರು ಬಗೆಯ ತಳಿಗಳನ್ನು ಅಭಿವೃದ್ಧಿ ಪಡಿಸಿ ಮಾರಾಟ ಮಾಡಲಾಗುತ್ತಿದೆ. ಈವರೆಗೆ ಸುಮಾರು 90 ತಳಿಗಳನ್ನು ಗುರುತಿಸಲಾಗಿದೆ. (ಬಿ.ಎನ್.;ಟಿ.ಎಸ್.ವಿ.)

**ಗೌರಿ :** ಪಾರ್ವತಿಯ ರೂಪಾಂತರ. ಪೂಜಿಸುವುದರಿಂದ ಸಂತುಷ್ಟಳಾಗಿ ಸರ್ವಾಭೀಷ್ಟಗಳನ್ನು ಕೊಡುತ್ತಾಳೆಂದು ಪುರಾಣಗಳು ಹೇಳುತ್ತವೆ. ಚೈತ್ರ ಮೊದಲಾದ ಹನ್ನೆರಡು ಚಾಂದ್ರಮಾಸಗಳಲ್ಲೂ ಬರುವ ಶುಕ್ಲ ತೃತೀಯಾ ಮತ್ತು ಕೃಷ್ಣತೃತೀಯಾ ತಿಥಿಗಳಲ್ಲಿ ಗೌರಿಯನ್ನು ಬೇರೆ ಬೇರೆ ಹೆಸರುಗಳಿಂದ ಪೂಜಿಸುವ ವಿಧಾನ ಪುರಾಣಗಳಲ್ಲಿ ಉಕ್ತವಾಗಿದೆ. ತೃತೀಯಾತಿಥಿ ಮಾತ್ರವಲ್ಲದೆ ವೈಶಾಖ ಶುಕ್ಲಪಂಚಮಿ, ಜೇಷ್ಠ ಶುಕ್ಲ ಪ್ರಥಮಾ ಶ್ರಾವಣಮಾಸದ ಎಲ್ಲ ಮಂಗಳವಾರಗಳು, ಸೂರ್ಯ ಹಸ್ತ ನಕ್ಷತ್ರವನ್ನು ಪ್ರವೇಶಿಸುವ ದಿನ– ಈ ಕಾಲಗಳಲ್ಲೂ ಗೌರೀ ಪೂಜೆಯನ್ನು ಮಾಡಬೇಕೆಂದಿದೆ. ಗೌರ (ಹಳದಿ–ಬಿಳುಪು ಮಿಶ್ರ) ವರ್ಣದ ಶರೀರದಿಂದ ಕೂಡಿ ಪಾರ್ವತಿ ರೂಪಾಂತರವನ್ನು ತಳೆದುದರಿಂದ ಆಕೆಗೆ ಗೌರೀ ಎಂದು ಹೆಸರು ಬಂದಿದೆ. ಈ ವಿಚಾರವಾಗಿ ಒಂದು ಪೌರಾಣಿಕ ಕಥೆಯೂ ಇದೆ.

ದಕ್ಷಬ್ರಹ್ಮನಿಗೆ ಕಾಳೀ ಎಂಬ ಮಗಳಿದ್ದಳು. ಆಕೆ ಕನ್ನೈದಿಲೆಯಂತೆ ಕಪ್ಪುಬಣ್ಣದಿಂದ ಕೂಡಿದ್ದಳು. ದಕ್ಷ ಆಕೆಯನ್ನು ಈಶ್ವರನಿಗೆ ಕೊಟ್ಟು ವಿವಾಹವನ್ನು ಮಾಡಿದ್ದ. ಶಿವನೂ ಆಕೆಯೊಡನೆ ಸಂತೋಷದಿಂದಿದ್ದ. ಒಮ್ಮೆ ಆಸ್ಥಾನ ಮಂಟಪದಲ್ಲಿ ವಿಷ್ಣು ಮತ್ತು ದೇವತೆಗಳೊಡನೆ ಈಶ್ವರ ತನ್ನ ಪತ್ನಿಯನ್ನು ಕೃಷ್ಣ ವರ್ಣಳಾದ ಕಾಳಿಯೇ ಬಾ, ನಿನ್ನ ಬಣ್ಣ ಕಪ್ಪಾಗಿದ್ದರೂ ಸೌಂದರ್ಯದಿಂದ ಕೂಡಿದ ನಿನ್ನ ರೂಪ ನನಗೆ ಪ್ರಿಯವಾಗಿದೆ ಎಂದು ಹೇಳಿದ. ಈ ಮಾತನ್ನು ಕೇಳಿದ ಕಾಳಿ ಲಜ್ಜಿತಳಾಗಿ, ದುಃಖಿಸಿ ತನ್ನ ಕಪ್ಪು ದೇಹವನ್ನು ನೀಗಲು ದೇವಸಮುದಾಯದೆದುರಿನಲ್ಲೇ ಅಗ್ನಿಪ್ರವೇಶಮಾಡಿ ಮತ್ತೆ ಪರ್ವತರಾಜನಿಗೆ ಮಗಳಾಗಿ ಗೌರವರ್ಣ ಶರೀರದಿಂದ ಕೂಡಿದವಳಾಗಿ ಹುಟ್ಟಿ ಈಶ್ವರನನ್ನೇ ವಿವಾಹವಾದಳು. ಈ ಬಗ್ಗೆ ಇನ್ನೊಂದು ಕಥೆ ಇದೆ. ಶುಂಭ ನಿಶುಂಭರೆಂಬ ದೈತ್ಯರು ಲೋಕಕಂಟಕರಾಗಿ ದೇವತೆಗಳನ್ನು ತೊಂದರೆಪಡಿಸುತ್ತಿರಲು ದೇವತೆಗಳೆಲ್ಲ ಪಾರ್ವತಿಯನ್ನು ಮೊರೆಹೊಕ್ಕರು. ಆಗ ಪಾರ್ವತಿಯ ಶರೀರದಿಂದ ಕೌಶಿಕೀ ಎಂಬ ಸುಂದರಿ ಆವಿರ್ಭವಿಸಿ ಆ ರಾಕ್ಷಸರನ್ನು ಸಂಹರಿಸಿದಳು. ಕೌಶಿಕಿ ಆವಿರ್ಭವಿಸಿದ ಮೇಲೆ ಪಾರ್ವತಿ ಕಪ್ಪಾಗಿ ಕಂಡಳು, ಶಿವ ಆಕೆಯನ್ನು ಕಾಳಿ ಎಂದು ಕರೆದ. ಆಗ ಪಾರ್ವತಿ ತಪಸ್ಸುಮಾಡಿ ಗೌರಶರೀರವನ್ನು ಪಡೆದಳು.

ಕಥೆಯ ನಿರೂಪಣೆಯಲ್ಲಿ ಬದಲಾವಣೆ ಇದ್ದರೂ ಕಪ್ಪುಶರೀರವನ್ನು ತ್ಯಜಿಸಿ ಗೌರ ಶರೀರವನ್ನು ಪಡೆದ ಕಾರಣ ಪಾರ್ವತಿಗೆ ಗೌರಿ ಎಂಬ ಅನ್ವರ್ಥನಾಮ ಬಂತು ಎಂಬ ವಿಷಯ ಸತ್ಯ. ಭಾದ್ರಪದ ಶುದ್ಧ ತೃತೀಯಾ ದಿವಸಾದಿಯಾಗಿ ಪಾರ್ವತಿ– ಆವಿರ್ಭವಿಸಿದುದರಿಂದ ಆ ದಿವಸ ಸ್ವರ್ಣಗೌರೀವ್ರತವನ್ನು ತಪ್ಪದೆ ಆಚರಿಸುವುದು ಕರ್ನಾಟಕದಲ್ಲಿ ರೂಢಿಯಲ್ಲಿದೆ.

ಪೂಜೆಗೆ ಮೊದಲು ಜನ್ಮಜನ್ಮಾಂತರದಲ್ಲಿ ಸೌಭಾಗ್ಯ ಮತ್ತು ಪುತ್ರಪೌತ್ರ ಧನ ಧಾನ್ಯೈಶ್ವರ್ಯಗಳು ಲಭಿಸಲು ವ್ರತವನ್ನು ಮಾಡುತ್ತೇನೆಂದು ಸಂಕಲ್ಪ ಮಾಡಬೇಕು. ಬಳಿಕ ಗೌರಿಯನ್ನು ಆಹ್ವಾನಿಸಿ ಆಸನ ಪಾದ್ಯ ಅರ್ಘ್ಯ ಆಚಮನ ಸ್ನಾನವಸ್ತ್ರ ಚಂದನ ಸೌಭಾಗ್ಯದ್ರವ್ಯ (ಅರಿಶಿನ–ಕುಂಕುಮ) ಮತ್ತು ಪುಷ್ಪಗಳನ್ನು ಸಮರ್ಪಣೆ ಮಾಡಿ ಅಷ್ಟೋತ್ತರ ಶತನಾಮಗಳಿಂದ ಪೂಜಿಸಬೇಕು. ಬಳಿಕ ಧೂಪ ದೀಪ ನೈವೇದ್ಯ ದಕ್ಷಿಣೆ ಸಹಿತ ತಾಂಬೂಲವನ್ನು ಸಮರ್ಪಿಸಿ ನೀರಾಜನವನ್ನು ಬೆಳಗಿ ಪ್ರದಕ್ಷಿಣೆ ಮಾಡಿ ನಮಸ್ಕರಿಸಿ ಪುತ್ರಂ ದೇಹಿ ಧನಂ ದೇಹಿ ಸೌಭಾಗ್ಯಂ ದೇಹಿ ಸುವ್ರತೇ! ಅನ್ಯಾಂಶ್ಚ ಸರ್ವಕಾಮಾಂಶ್ಚ ದೇಹಿ ದೇವಿ ನಮೋಸ್ತುತೇ–ಎಂದು ಪ್ರಾರ್ಥಿಸಿ ಪುಷ್ಪಾಂಜಲಿಯನ್ನು ಸಮರ್ಪಿಸಬೇಕು.

ಸ್ವರ್ಣಗೌರೀವ್ರತ ಕಥೆ : ಸರಸ್ವತೀ ತೀರದಲ್ಲಿ ವಿಮಲಾ ಎಂಬ ಪಟ್ಟಣವಿತ್ತು. ಅಲ್ಲಿಗೆ ಚಂದ್ರಪ್ರಭ ಎಂಬಾತ ರಾಜ. ಆತನಿಗೆ ಇಬ್ಬರು ಹೆಂಡಿರು. ಆತನಿಗೆ ಜ್ಯೇಷ್ಠ ಪತ್ನಿಯಲ್ಲಿ ಅಧಿಕವಾದ ಪ್ರೀತಿ ಇತ್ತು. ಒಮ್ಮೆ ರಾಜ ಬೇಟೆಗಾಗಿ ಕಾಡಿಗೆ ಹೋದ. ಬೇಟೆ ಎಲ್ಲ ಮುಗಿದ ಮೇಲೆ ಬರುವಾಗ ಒಂದೆಡೆಯಲ್ಲಿ ಅಪ್ಸರೆಯರೆಲ್ಲ ಸೇರಿ ದೇವಿಯ ಅರ್ಚನೆ ಮಾಡುತ್ತಿದ್ದುದನ್ನು ಕಂಡು ಅದೇನೆಂದು ಪ್ರಶ್ನಿಸಿದ. ಆಗ ಅವರು ತಾವು ಮಾಡುತ್ತಿದ್ದ ಸ್ವರ್ಣಗೌರೀಪೂಜೆಯ ವಿಷಯವನ್ನು ತಿಳಿಸಿ ಸರ್ವಸಂಪದ್ಯಭಿವೃದ್ಧಿಕರವಾದ ಆ ವ್ರತವನ್ನು ಆತನೂ ಮಾಡುವಂತೆ ಪ್ರೇರೇಪಿಸುತ್ತಾರೆ. ಭಾದ್ರಪದ ಶುದ್ಧ ತೃತೀಯವಾದ ಅಂದೇ ಸಂಕಲ್ಪಮಾಡಿ ಹದಿನಾರು ಗಂಟುಗಳುಳ್ಳ ದಾರವನ್ನು ಬಲಗೈಗೆ ಕಟ್ಟಿಕೊಂಡು ವ್ರತವನ್ನು ಮಾಡಿ ಮುಗಿಸುತ್ತಾನೆ. ಅನಂತರ ಅರಮನೆಗೆ ಹಿಂತಿರುಗಿ ಬಂದು ತನ್ನ ಪತ್ನಿಯರಿಗೆ ಗೌರೀವ್ರತದ ಮಹಿಮೆಯನ್ನು ತಿಳಿಸುತ್ತಾನೆ. ಜ್ಯೇಷ್ಠ ಪತ್ನಿ ಆತನ ಕೈಯಲ್ಲಿ ಕಟ್ಟಿದ್ದ 16 ಗ್ರಂಥಿಗಳಿಂದ ಕೂಡಿದ ದಾರವನ್ನು ನೋಡಿ ಕುಪಿತಳಾಗಿ, ರಾಜ ಬೇಡವೆಂದು ತಡೆದರೂ ಕೇಳದೆ ಅದನ್ನು ಕಿತ್ತು ಒಂದು ಒಣಗಿದ ಮರದ ಮೇಲಕ್ಕೆಸೆಯುತ್ತಾಳೆ. ಕೂಡಲೆ ಆ ಮರ ಚಿಗುರುತ್ತದೆ. ಕಿರಿಹೆಂಡತಿ ಅದನ್ನು ನೋಡಿ ಕೂಡಲೆ ಆ ಸೂತ್ರವನ್ನು ತೆಗೆದುಕೊಂಡು ತನ್ನ ಕೈಗೆ ಕಟ್ಟಿಕೊಳ್ಳುತ್ತಾಳೆ. ಅದರ ಮಹಾತ್ಮ್ಯದಿಂದ ಆಕೆ ಪತಿಗೆ ಪ್ರೀತಿಪಾತ್ರಳಾಗುತ್ತಾಳೆ. ಅಪಚಾರವೆಸಗಿದ ಜ್ಯೇಷ್ಠಾರ್ಯೆ ಪತಿಯಿಂದ ತ್ಯಕ್ತಳಾಗಿ ದುಃಖದಿಂದ ಕಾಡಿಗೆ ಹೋಗುತ್ತಾಳೆ. ಯಾವ ಮುನಿಯೂ ಅವಳನ್ನು ಹತ್ತಿರಕ್ಕೆ ಸೇರಿಸುವುದಿಲ್ಲ. ಕೊನೆಗೆ ನಿರಾಹಾರಳಾಗಿ ಗೌರಿಯನ್ನೆ ಧ್ಯಾನಿಸುತ್ತಾಳೆ. ಆಗ ಗೌರಿ ಪ್ರತ್ಯಕ್ಷಳಾಗುತ್ತಾಳೆ. ಗೌರಿಯಿಂದ ವರಪಡೆದ ರಾಣಿ ಭಕ್ತಿಶ್ರದ್ಧೆಗಳಿಂದ ಗೌರೀವ್ರತವನ್ನು ಆಚರಿಸುತ್ತಾಳೆ. ಬಳಿಕ ಅವಳಿಗೆ ಸರ್ವವಿಧವಾದ ಸಂಪತ್ತೂ ಲಭಿಸುತ್ತದೆ. ಪತಿಯೊಡನೆ ಸುಖದಿಂದ ಬಹುಕಾಲ ಜೀವಿಸಿದ್ದು ಮರಣಾನಂತರ ಶಿವಲೋಕವನ್ನು ಪಡೆಯುತ್ತಾಳೆ.

ಹೀಗೆಯೇ ಪ್ರತಿಯೊಂದು ಗೌರೀ ವ್ರತಕ್ಕೂ ಒಂದೊಂದು ವ್ರತಕಥೆ ಇದೆ.

ಗೌರೀವ್ರತದ ದಿನ ಸ್ನಾನಾನಂತರ ನದಿಯ ಸಮೀಪಕ್ಕೆ ಹೋಗಿ ಶುಭವೇಳೆಯಲ್ಲಿ ಪೂಜಿಸಿ ನದಿಯಲ್ಲಿರುವ ಮರಳನ್ನು ತೆಗೆದುಕೊಂಡು ವಸ್ತ್ರದ ಮೇಲಿಟ್ಟು ಹಿಂಡಿ ಗೌರಿಯ

ಆಕಾರದಂತೆ ಮಾಡಿ ಅದನ್ನು ಪೂಜಿಸಿ ಬಳಿಕ ವಾದ್ಯದೊಡನೆ ಗೃಹಕ್ಕೆ ತಂದು ವ್ರತವನ್ನು ಮಾಡುವುದು ಈಗಲೂ ರೂಢಿಯಲ್ಲಿದೆ. ಕೆಲವರು ದಾರಕ್ಕೆ 16 ಗಂಟುಗಳನ್ನು ಹಾಕಿ ಅದರಲ್ಲೇ ಗೌರಿಯನ್ನು ಆವಾಹನೆ ಮಾಡಿ ಪೂಜಿಸುತ್ತಾರೆ. ಪೂಜೆ ಮಾಡಿದ ದಿನವೇ ವಿಸರ್ಜಿಸುವುದು ವಾಡಿಕೆ. ಕೆಲವು ದಿನಗಳಿಟ್ಟುಕೊಂಡಿದ್ದು ಪೂಜಿಸಿ ಶುಭದಿನವನ್ನು ನೋಡಿ ವಿಸರ್ಜಿಸುವುದೂ ಉಂಟು. ಗೌರೀಪೂಜೆಯ ಸಂದರ್ಭದಲ್ಲಿ ಮೊರದಲ್ಲಿ ಐದು ವಿಧ ಧಾನ್ಯ, ಹಣ್ಣು, ಸುಗಂಧದ್ರವ್ಯ, ಮಂಗಳದ್ರವ್ಯಗಳನ್ನು ಇಟ್ಟು ಪೂಜಿಸಿ ವಿಸರ್ಜನೆಯಾದ ಬಳಿಕ ಅದನ್ನು ಸುಮಂಗಲಿಯರಿಗೆ ಕೊಡುವುದು ಇಂದಿಗೂ ರೂಢಿ. ಇದನ್ನು ಗೌರಿಬಾಗಿನ ಎಂದು ಕರೆಯುತ್ತಾರೆ. ಸ್ವರ್ಣಗೌರೀ ವ್ರತವನ್ನು ತಪ್ಪದೆ ಪ್ರತಿವರ್ಷದಲ್ಲೂ ಆಚರಿಸುತ್ತಾರೆ. ಗೌರಿಯನ್ನು ಎಲ್ಲ ಮನೆಗಳಲ್ಲೂ ಇಡುವುದಿಲ್ಲ. ಇಡುವ ಪದ್ಧತಿ ಇಲ್ಲದವರು ಗೌರಿಯನ್ನು ಇಟ್ಟು ಪೂಜೆಮಾಡುವ ಮನೆಗೆ ಹೋಗಿ ಅಲ್ಲೇ ವಿಧಿವತ್ತಾಗಿ ಗೌರಿಯನ್ನು ಪೂಜಿಸುತ್ತಾರೆ. ಸ್ತ್ರೀಯರಿಗೆ ಇದೊಂದು ಸಂಭ್ರಮದ ಹಬ್ಬ.

ವಿವಾಹದ ದಿವಸದಲ್ಲಿ ಕನ್ಯಾದಾನಕ್ಕೆ ಪೂರ್ವಭಾವಿಯಾಗಿ ಕನ್ಯೆ ಗೌರೀಪೂಜೆಯನ್ನು ಮಾಡುವುದು ಕೆಲವರಲ್ಲಿರುವ ಪದ್ಧತಿ.

ಸ್ವರ್ಣಗೌರೀ ಪೂಜೆಯಂತೆಯೇ ಮಂಗಳಗೌರೀ ಪೂಜೆಯೂ ಬಹು ಮುಖ್ಯವಾದ್ದು. ಸ್ತ್ರೀಯರು ಇದನ್ನು ಸೌಮಾಂಗಲ್ಯ ವೃದ್ಧಿಗಾಗಿ ಮಾಡುತ್ತಾರೆ. ಶ್ರಾವಣಮಾಸದ ಎಲ್ಲ ಮಂಗಳವಾರಗಳಲ್ಲೂ ಈ ವ್ರತವನ್ನು ಮಾಡುತ್ತಾರೆ. ವಿವಾಹವಾದ ವರ್ಷದಲ್ಲಿ ತಂದೆಯ ಗೃಹದಲ್ಲೂ ಬಳಿಕ ನಾಲ್ಕು ವರ್ಷಗಳ ಕಾಲ ಪತಿಯ ಗೃಹದಲ್ಲೂ ಈ ವ್ರತವನ್ನು ಮಾಡಿ ವ್ರತೋದ್ಯಾಪನೆ ಮಾಡುತ್ತಾರೆ. ಸೂರ್ಯ ಹಸ್ತನಕ್ಷತ್ರಕ್ಕೆ ಪ್ರವೇಶಮಾಡುವ ದಿನದಲ್ಲಿ ಹಸ್ತಗೌರೀ ವ್ರತ ಮಾಡಬೇಕು. ಆನೆಯ ಮೇಲೆ ಗೌರಿಯನ್ನಿಟ್ಟು ಪೂಜಿಸುವುದರಿಂದ ಇದಕ್ಕೆ ಹಸ್ತ ಗೌರೀವ್ರತವೆಂದು ಹೆಸರು. ಈ ವ್ರತವನ್ನು ಗಾಂಧಾರಿ ಕುಂತಿಯರು ಮಾಡಿದರೆಂದು ವ್ರತಕಥೆಯಲ್ಲಿದೆ. ಇದಕ್ಕೆ ಐರಾವತ ಪೂಜೆ ಎಂಬ ಹೆಸರೂ ಇದೆ. ಇದರಂತೆಯೇ ಭಿನ್ನ ಭಿನ್ನ ಕಾಲಗಳಲ್ಲಿ ಮಾಡುವ ಹಲವು ಗೌರೀಪೂಜೆಗಳಿವೆ. ಅವುಗಳಲ್ಲಿ ಈಗ ಪ್ರಚಲಿತವಾಗಿರುವ ಕೆಲವು ವ್ರತಗಳ ಹೆಸರು ಮತ್ತು ವ್ರತಾನುಷ್ಠಾನ ಕಾಲ ಹೀಗಿದೆ. ಚೈತ್ರ ಮಾಸದ ಶುಕ್ಲಪಕ್ಷ ತೃತೀಯ ದಿವಸ ವಾರ್ತಾಕ ಗೌರೀವ್ರತ, ವೈಶಾಖ ಮಾಸದ ಶುಕ್ಲಪಕ್ಷ ಪಂಚಮಿಯ ದಿವಸ ಲಾವಣ್ಯಗೌರೀವ್ರತ, ಜ್ಯೇಷ್ಠ ಶುಕ್ಲಪಕ್ಷದ ಪ್ರಥಮಾ ದಿವಸ ಪುನ್ನಾಗಗೌರೀವ್ರತ, ಜ್ಯೇಷ್ಠ ಶುಕ್ಲಪಕ್ಷದ ತೃತೀಯ ದಿವಸ ಕದಳೀಗೌರೀವ್ರತ, ಶ್ರಾವಣ ಶುಕ್ಲಪಕ್ಷದ ತೃತೀಯ ದಿವಸ ಸಂಪದ್ಗೌರೀವೃತ, ಮಾಘ ಶುಕ್ಲಪಕ್ಷದ ತೃತೀಯ ದಿವಸ ಮೌನಗೌರೀವ್ರತ.

ಸೂರ್ಯೋದಯ ಕಾಲದಲ್ಲಿ ಉಕ್ತತಿಥಿ ಇರುವ ದಿವಸದಲ್ಲೇ ವ್ರತಾನುಷ್ಠಾನ ಮಾಡಬೇಕು.

ಕನ್ಯಾಕುಬ್ಜದಲ್ಲಿ ಪಾರ್ವತಿ ಗೌರೀಮೂರ್ತಿಯಾಗಿ ಪೀಠಾರೂಢಳಾಗಿದ್ದಳೆಂದು ದೇವಿಭಾಗವತದಲ್ಲಿದೆ. (ಎಸ್.ಎನ್.ಕೆ.)

**ಗೌರಿಬಿದನೂರು :** ಕರ್ನಾಟಕ ರಾಜ್ಯದ ಚಿಕ್ಕಬಳ್ಳಾಪುರ (ಹಿಂದೆ ಕೋಲಾರ) ಜಿಲ್ಲೆಯ ಒಂದು ತಾಲ್ಲೂಕು; ಅದರ ಮುಖ್ಯ ಪಟ್ಟಣ. ಕೋಲಾರ ಜಿಲ್ಲೆಯ ವಾಯವ್ಯದಲ್ಲಿ ಉ.ಅ. $13^0$ $25^1$ – $13^0$ $47^1$ ಮತ್ತು ಪೂ. ರೇ. $77^0$ 22′–$77^0$ 43′ ನಡುವೆ ಇರುವ ಈ ತಾಲ್ಲೂಕಿನ ಮೇರೆಗಳು ಹೀಗಿವೆ: ಪಶ್ಚಿಮದಲ್ಲಿ ತುಮಕೂರು ಜಿಲ್ಲೆಯ ಕೊರಟಗೆರೆ ಮತ್ತು ಮಧುಗಿರಿ ತಾಲ್ಲೂಕುಗಳು, ಉತ್ತರದಲ್ಲಿ ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯ ಹಿಂದೂಪುರ ತಾಲ್ಲೂಕು, ಪೂರ್ವದಲ್ಲಿ ಕೋಲಾರ ಜಿಲ್ಲೆಯ ಗುಡಿಬಂಡೆ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಚಿಕ್ಕಬಳ್ಳಾಪುರ ತಾಲ್ಲೂಕುಗಳು, ದಕ್ಷಿಣದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕು. ಗೌರಿಬಿದನೂರು ತಾಲ್ಲೂಕಿನ ವಿಸ್ತೀರ್ಣ 881.7 ಚ.ಕಿಮೀ. ಜನಸಂಖ್ಯೆ 2,71,068 (2001). ಗೌರಿಬಿದನೂರು, ಹೊಸೂರು, ಮಂಚೇನಹಳ್ಳಿ, ನಗರಗೆರೆ, ದಾರಿನಾಯ್ಕನಪಾಳ್ಯ, ತೊಂಡೆಭಾವಿ – ಇವು ಇಲ್ಲಿಯ ಹೋಬಳಿಗಳು. ತಾಲ್ಲೂಕಿನಲ್ಲಿ 204 ಗ್ರಾಮಗಳೂ 2 ಪಟ್ಟಣಗಳೂ ಇವೆ. ತಾಲ್ಲೂಕಿನ ಆಗ್ನೇಯ ದಿಕ್ಕಿನಿಂದ ಉತ್ತರ ದಿಕ್ಕಿಗೆ ಉತ್ತರ ಪಿನಾಕಿನಿ ನದಿ ಹರಿಯುತ್ತದೆ. ಇಡೀ ತಾಲ್ಲೂಕು ಈ ನದಿಕಣಿವೆ ಪ್ರದೇಶ. ಪೂರ್ವದಲ್ಲಿ ನಂದೀದುರ್ಗ ಗಿರಿಶ್ರೇಣಿಯೂ ಪಶ್ಚಿಮದಲ್ಲಿ ಮಾಕಳಿದುರ್ಗದಿಂದ ಆರಂಭವಾಗುವ ಗಿರಿಪಂಕ್ತಿಯೂ ಈ ತಾಲ್ಲೂಕನ್ನು ತಬ್ಬಿ ಹಿಡಿದಿವೆ. ಉತ್ತರ ಪಿನಾಕಿನಿಯ ಒಂದು ಉಪನದಿ ಕುಮುದ್ವತಿ ಅಥವಾ ಕುಂದಾರ್. ಇದು ಬೆಂಗಳೂರು ಜಿಲ್ಲೆಯಲ್ಲಿ ಮಾಕಳಿದುರ್ಗದ ಪಶ್ಚಿಮದಲ್ಲಿ ಉಗಮಿಸಿ, ದಕ್ಷಿಣೋತ್ತರವಾಗಿ ತಾಲ್ಲೂಕಿನ ಮೂಲಕ ಹರಿದು, ಮಧುಗಿರಿ ತಾಲ್ಲೂಕನ್ನು ಪ್ರವೇಶಿಸುತ್ತದೆ. ಮಾಕಳಿದುರ್ಗದ ಪೂರ್ವದಿಂದ ಸಣ್ಣ ಹೊಳೆಯೊಂದು ತೊಂಡೆಭಾವಿ ಹೋಬಳಿಯ ಮೂಲಕ ಹರಿದು ಬೊಮ್ಮಸಂದ್ರಕ್ಕೆ ಪೂರ್ವದಲ್ಲಿ ಉತ್ತರ ಪಿನಾಕಿನಿಯನ್ನು ಕೂಡುತ್ತದೆ.

ತಾಲ್ಲೂಕು ಅಕ್ಕಪಕ್ಕದ ತಾಲ್ಲೂಕುಗಳಿಗಿಂತ ತಗ್ಗಿನಲ್ಲಿದೆ. ನೆಲ ಸಡಿಲ, ಫಲವತ್ತು. ಗೌರಿಬಿದನೂರು ಪಟ್ಟಣದ ಬಳಿ ನೀರು ಮೇಲೆಯೇ ಸಿಗುತ್ತದೆ. ಜೊತೆಗೆ ನದೀ ನಾಲೆಗಳಿಂದ ನೀರಾವರಿ ಸೌಕರ್ಯವಿದೆ. ಬತ್ತ, ಕಬ್ಬು, ಅರಸಿನ, ತೆಂಗು, ಅಡಕೆ ಮುಖ್ಯ ಬೆಳೆಗಳು. ಬೆಟ್ಟ ಪ್ರದೇಶದಲ್ಲಿ ಮರಸೇಬು ವಿಶೇಷ.

ಬೆಂಗಳೂರು-ಗುಂತಕಲ್ ರೈಲುಮಾರ್ಗ ತಾಲ್ಲೂಕಿನ ಮಧ್ಯಭಾಗದಲ್ಲಿ ದಕ್ಷಿಣೋತ್ತರವಾಗಿ ತೊಂಡೆಭಾವಿ, ಗೌರಿಬಿದನೂರು ಮತ್ತು ದೊಡ್ಡ ಕುರುಗೋಡು ಮೂಲಕ ಹಾದುಹೋಗುತ್ತದೆ. ಗೌರಿಬಿದನೂರು ಪಟ್ಟಣದಿಂದ ಗುಡಿಬಂಡೆ, ಚಿಕ್ಕಬಳ್ಳಾಪುರ, ಹಿಂದೂಪುರ ಮುಂತಾದ ಸ್ಥಳಗಳಿಗೂ ತೊಂಡೆಭಾವಿಯಿಂದ ಮಧುಗಿರಿಗೂ ರಸ್ತೆಗಳುಂಟು.

ಗೌರಿಬಿದನೂರು ಈ ತಾಲ್ಲೂಕಿನ ಆಡಳಿತ ಕೇಂದ್ರ. ಇದು ಕೋಲಾರಕ್ಕೆ ವಾಯವ್ಯದಲ್ಲಿ 90 ಕಿಮೀ ದೂರದಲ್ಲಿ ಉತ್ತರ ಪಿನಾಕಿನಿ ನದಿಯ ಎಡದಂಡೆಯ ಮೇಲಿದೆ. ಬೆಂಗಳೂರು-ಗುಂತಕಲ್ ರೈಲುಮಾರ್ಗದಲ್ಲಿ ಇದೊಂದು ನಿಲ್ದಾಣ. ದೊಡ್ಡಬಳ್ಳಾಪುರ-ಹಿಂದೂಪುರ ರಸ್ತೆ ಇದರ ಮೂಲಕ ಸಾಗುತ್ತದೆ. ಬೆಂಗಳೂರಿನಿಂದ ಇಲ್ಲಿಗೆ 80 ಕಿಮೀ ದೂರ. ಇಲ್ಲಿ ಪುರಸಭೆ ಇದೆ. ಜನಸಂಖ್ಯೆ 80,673 (2001).

ಇದು ಹಿಂದೆ ವಿದುರನ ವಾಸಸ್ಥಳವಾಗಿತ್ತೆಂದೂ ಆದ್ದರಿಂದ ಇದಕ್ಕೆ ವಿದುರೂರು ಎಂಬ ಹೆಸರಿತ್ತೆಂದೂ ಹೇಳಲಾಗಿದೆ. ಇಲ್ಲಿಗೆ 6 ಕಿಮೀ ಉತ್ತರದಲ್ಲಿ, ದೊಡ್ಡ ಕುರುಗೋಡು ಬಳಿ ವಿದುರನೇ ನೆಟ್ಟನೆಂದು ನಂಬಲಾದ ಒಂದು ಅಶ್ವತ್ಥವೃಕ್ಷವುಂಟು. ಇದನ್ನು ಜನರು ಪೂಜಿಸುತ್ತಾರೆ. 1938ರ ಏಪ್ರಿಲ್ 25 ರಂದು ವಿದುರಾಶ್ವತ್ಥದಲ್ಲಿ ಆಗಿನ ಸಂಸ್ಥಾನ ಸರ್ಕಾರದ ಪ್ರತಿಬಂಧಕಾಜ್ಞೆಯನ್ನುಲ್ಲಂಘಿಸಿ ಕಾಂಗ್ರೆಸ್ ಧ್ವಜವನ್ನು ಆರೋಹಣ ಮಾಡಲು ಸತ್ಯಾಗ್ರಹಿಗಳು ಪ್ರಯತ್ನಿಸಿದಾಗ ಪೋಲಿಸರು ಗುಂಡು ಹಾರಿಸಿದ ಫಲವಾಗಿ ಹತ್ತು ಮಂದಿ ಮಡಿದರು. ಮೈಸೂರು ಸಂಸ್ಥಾನದ ಜವಾಬ್ದಾರಿ ಸರ್ಕಾರ ಹೋರಾಟದಲ್ಲಿ ಈ ದುರಂತ ಒಂದು ಮರೆಯದ ನೆನಪು.


ಹಿಂದೆ ಗೌರಿಬಿದನೂರು ಪಟ್ಟಣ ದಾರಿನಾಯ್ಕನಪಾಳ್ಯದ ಒಡೆಯನ ವಶದಲ್ಲಿತ್ತು. ಆತ ತನ್ನ ಮಗಳಾದ ಗೌರಿಗೆ ಇದನ್ನು ಬಳುವಳಿಯಾಗಿ ಕೊಟ್ಟ. ವಿದುರೂರು ಎಂಬ ಹೆಸರಿಗೆ ಆಕೆಯ ಹೆಸರೂ ಸೇರಿಕೊಂಡು ಇದು ಗೌರಿವಿದುರೂರು ಎನಿಸಿಕೊಂಡಿತು. ಅನಂತರ ಮುಸ್ಲಿಮರು ಇದನ್ನು ಗೋರಿಬಿದನೂರು ಎಂದು ಕರೆದರು. ಇದರ ಬಳಿಯಲ್ಲಿ ನಿರ್ಮಿಸಲಾಗಿದ್ದ ಗೋರಿಗಳಿಂದಾಗಿ ಇದಕ್ಕೆ ಈ ಹೆಸರು ಬಂತು. ಉತ್ತರ ಪಿನಾಕಿನಿ ನದಿಯ ಆಚೆಯ ದಡದಲ್ಲಿ, ಹಿರೇಬಿದನೂರಿನಲ್ಲಿ, ಬಿಜಾಪುರದ ಒಬ್ಬ ಶ್ರೀಮಂತನಾಗಿದ್ದ ಹುಸೇನ್ ಷಹ ಮಿರ್ಜಾನ ದರ್ಗಾ ಇದೆ. ಹುಸೇನ್ ಷಹ ಮಿರ್ಜಾ, ಆತನ ಹೆಂಡತಿ ಸೈದನಿ ಬೀ, ಸೊಸೆ ನ್ಯಾಮತ್ ಬೀ, ನ್ಯಾಮತಳ ಮಗಳು ಸಕೀಮಾ ಬೀ ಇವರ ಗೋರಿಗಳಿವೆ. ನ್ಯಾಮತ್‌ಬೀ ತುಂಬ ಪರಿಶುದ್ಧ ಜೀವನ ನಡೆಸುತ್ತಿದ್ದದ್ದರಿಂದ ಇದಕ್ಕೆ ನ್ಯಾಮತ್ ಬೀ ದರ್ಗಾ ಎಂದೂ ಹೆಸರು ಬಂದಿದೆ. ಅದೇ ಕಾಲದಲ್ಲಿ ಕಟ್ಟಲಾದ ದರ್ಗಾ ಒಂದು ಗೌರಿಬಿದನೂರಿನಲ್ಲೂ ಇದೆ. ಅದು ಜಲಾಲ್ ಬಖಾರಿ ವಲಿಯ ದರ್ಗಾ.

ಗೌರಿಬಿದನೂರಿನ ವೆಂಕಟರಮಣ ದೇವಸ್ಥಾನದ ವಿಗ್ರಹದ ಎತ್ತರ 4 ಅಡಿ. ಇಲ್ಲಿಯ ಇನ್ನೊಂದು ದೇವಸ್ಥಾನ ನವಗ್ರಹಗಳದ್ದು. ರೈಲುಮಾರ್ಗ ನಿರ್ಮಾಣವಾದಂದಿನಿಂದ ಗೌರಿಬಿದನೂರು ಪ್ರವರ್ಧಮಾನವಾಗಿದೆ. ಇಲ್ಲೊಂದು ಸಕ್ಕರೆ ಕಾರ್ಖಾನೆಯುಂಟು. ಒಂದು ಕಾಲೇಜೂ ಇದೆ. ಗೌರಿಬಿದನೂರಿನಲ್ಲಿ ಭಾಭಾ ಅಣುಶಕ್ತಿ ಸಂಶೋಧನ ಸಂಸ್ಥೆಗೆ ಸೇರಿದ ಭೂಕಂಪನ ಮಾಪನ ಕೇಂದ್ರವೊಂದುಂಟು. (ಕೆ.ಆರ್)

**ಗೌರೀಶ ಕಾಯ್ಕಿಣಿ :** 1912–2002. ಕನ್ನಡದ ವೈಚಾರಿಕ ಬರೆಹಗಳ ಹೆಸರಾಂತ ಲೇಖಕ. ಇವರು 1912ರ ಸೆಪ್ಟೆಂಬರ್ 12ರಂದು ಉತ್ತರ ಕನ್ನಡ ಜಿಲ್ಲೆ ಗೋಕರ್ಣದಲ್ಲಿ ಜನಿಸಿದರು. ತಂದೆ ವಿಠ್ಠಲರಾವ್ ವೆಂಕಟರಾವ್ ಕಾಯ್ಕಿಣಿ, ತಾಯಿ ಸೀತಾ ಬಾಯಿ. ಇವರ ಪ್ರಾಥಮಿಕ ವ್ಯಾಸಂಗ ಗೋಕರ್ಣದಲ್ಲಿ, ಮಾಧ್ಯಮಿಕ ಶಿಕ್ಷಣ ಕುಮಟೆಯ ಗಿಬ್ ಹೈಸ್ಕೂಲಿನಲ್ಲಿ ಆಯಿತು. ಮುಂದೆ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಇಂಟರ್‌ಮೀಡಿಯೆಟ್ ವರೆಗೆ ಓದಿದರು. ಅನಂತರ ಬಂಕಿಕೊಡ್ಲಿನ ಆನಂದಾಶ್ರಮ ಹೈಸ್ಕೂಲಿನಲ್ಲಿ ಶಿಕ್ಷಕರಾಗಿ ಸೇರಿಕೊಂಡು ಎಸ್.ಟಿ.ಸಿ. ಶಿಕ್ಷಕರ ತರಬೇತಿಯಲ್ಲಿ ಮುಂಬಯಿ ಪ್ರಾಂತಕ್ಕೆ ಪ್ರಥಮರಾಗಿ ತೇರ್ಗಡೆ ಹೊಂದಿದರು (1945). ಅದೇ ಸಮಯ ಹಿಂದಿ ವಿಶಾರದ ಪರೀಕ್ಷೆ ಯಲ್ಲಿಯೂ ಉತ್ತೀರ್ಣರಾದರು. ಬಂಕಿಕೊಡ್ಲು ಆನಂದಾಶ್ರಮ, ಗೋಕರ್ಣದ ಭದ್ರಕಾಳಿ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿ ದುಡಿದು (1937–76) ನಿವೃತ್ತರಾದರು. 1973ರಲ್ಲಿ ಇವರಿಗೆ ಆದರ್ಶ ಶಿಕ್ಷಕ ಪ್ರಶಸ್ತಿ ಬಂತು.

ಎಳೆವಯಸ್ಸಿನಲ್ಲಿಯೇ ತಂದೆಯನ್ನು ಕಳೆದುಕೊಂಡ ಇವರು ಬೆಳೆದದ್ದು ತಾಯಿಯ ತವರು ಮನೆಯಲ್ಲಿ; ಮನೆಯ ಸಾಂಪ್ರದಾಯಿಕ ವಾತಾವರಣದಲ್ಲಿ, ತಾಯಿ ಮತ್ತು ದೊಡ್ಡಮ್ಮನವರ ಪ್ರೀತಿಯಲ್ಲಿ. ಮನೆಗೆ ಬರುತ್ತಿದ್ದ ಶಾಂಡಿಲ್ಯ ಮಹಾರಾಜರೆಂಬ ಋಷಿಗಳ

ಮಾರ್ಗದರ್ಶನದಲ್ಲಿ, ಕುಂಭೇಶ್ವರ ಮಾಸ್ತರ್, ಎನ್.ಎಸ್. ಕಾಮತರಂತಹ ಗುರುಗಳು ನೀಡಿದ ಪ್ರೋತ್ಸಾಹದಲ್ಲಿ ಬೆಳೆದರು. ಮನೆಯಲ್ಲಿ ಓದುತ್ತಿದ್ದ ಮರಾಠಿ ಧಾರ್ಮಿಕ ಗ್ರಂಥಗಳಿಂದಲೂ ಧಾರ್ಮಿಕ ವಿಧಿವಿಧಾನಗಳಿಂದಲೂ ಶಾಂಡಿಲ್ಯ ಮಹಾರಾಜರ ವಿದ್ವತ್‍ಪೂರ್ಣ ಪ್ರವಚನದಿಂದಲೂ ಗೌರೀಶರಲ್ಲಿ ಓದುವ ಅಭಿರುಚಿ ಬೆಳೆಯಿತು. ಇವರು ಮೊದಲು ಮರಾಠಿಯ ಭಕ್ತಿಗೀತೆಗಳನ್ನು ಆಧರಿಸಿ ತಮ್ಮದೇ ಆದ ಭಕ್ತಿಗೀತೆ, ರಾಷ್ಟ್ರೀಯ ಸ್ಫೂರ್ತಿಗೀತೆ, ಭಾವಗೀತೆಗಳನ್ನು ರಚಿಸ ತೊಡಗಿದರು. ಮರಾಠಿಯಲ್ಲಿ ಶಾಂಡಿಲ್ಯ ಪ್ರೇಮಸುಧಾ ಎಂಬ ಭಕ್ತಿಗೀತೆಗಳ ಸಂಗ್ರಹ ಪ್ರಕಟಿಸಿದ್ದರು. ಅನಂತರ ನಂದಿನಿ ಪತ್ರಿಕೆಯಲ್ಲಿ ಸಂತ ಮೀರಾಬಾಯಿಯನ್ನು ಕುರಿತು ಒಂದು ಕಥೆ ಬರೆದರು. ಮುಂದೆ ನಂದಿನಿಯಲ್ಲಿ ಅನೇಕ ಲೇಖನಗಳನ್ನು ಬರೆದರು.



ಮಿಂಚಿನ ಬಳ್ಳಿಯು ಬುರ್ಲಿ ಬಿಂದುಮಾಧವಾಚಾರ್ಯರ ಒತ್ತಾಸೆಯಿಂದ ಮನೋವಿಜ್ಞಾನದ ರೂಪರೇಖೆಗಳು ಎಂಬ ಗ್ರಂಥ ಬರೆದರು. ಇದು ಇವರ ಮೊದಲ ಕನ್ನಡ ಗ್ರಂಥ (1941). ಅಂದಿನ ದಿನಗಳಲ್ಲಿ ಕನ್ನಡ ನಾಟಕಗಳ ಅಗತ್ಯವನ್ನು ಮನಗಂಡು ಭೂಕೈಲಾಸ, ಆಶಾನಿರಾಶಾ, ಅಧಃಪಾತ, ಚಂದ್ರಗ್ರಹಣ, ತ್ರಿದಂಡಿ ಸನ್ಯಾಸ, ರಾಜ್ಯಾರೋಹಣ, ಸ್ವಯಂಸೇವಕ, ಮಾಡಿದ್ದೊಂದು ಆದದ್ದೊಂದು, ಚಿದಂಬರ ರಹಸ್ಯ, ಬೆಳ್ಳಿಯ ಬಟ್ಟಲು ಎಂಬ ನಾಟಕಗಳನ್ನು ಕನ್ನಡಕ್ಕೆ ತಂದರು. ಇವುಗಳಲ್ಲಿ ಬೆಳ್ಳಿಯ ಬಟ್ಟಲು ಇಂಗ್ಲಿಷಿನಿಂದಲೂ ಉಳಿದವು ಮರಾಠಿಯಿಂದಲೂ ಅನುವಾದಗೊಂಡಿವೆ. ಈ ನಾಟಕಗಳು ರಂಗಭೂಮಿಗೆ ಬಂದರೂ ಪುಸ್ತಕ ರೂಪದಲ್ಲಿ ಪ್ರಕಟವಾಗಲಿಲ್ಲ.

ಇವರು ಇಂಗ್ಲಿಷ್, ಸಂಸ್ಕೃತ, ಹಿಂದಿ, ಮರಾಠಿ, ಕನ್ನಡ, ಕೊಂಕಣಿ ಭಾಷೆಯ ಕೃತಿಗಳನ್ನೂ ಕಾರಂತ, ಬೇಂದ್ರೆ, ಶಂಬಾ, ಮಾಸ್ತಿ, ಶ್ರೀರಂಗ, ಗೋಕಾಕರ ಕನ್ನಡ ಕೃತಿಗಳನ್ನೂ ಓದಿ ಜ್ಞಾನಕ್ಷಿತಿಜವನ್ನು ವಿಸ್ತರಿಸಿಕೊಂಡರು. ಗಾಂಧಿವಾದ, ಮಾರ್ಕ್ಸವಾದ, ಎಂ. ಎನ್. ರಾಯ್‍ವಾದ, ಲೋಹಿಯಾವಾದಗಳನ್ನೂ ಅರವಿಂದ ತತ್ತ್ವಗಳನ್ನೂ ರಾಮಕೃಷ್ಣ ಪರಮಹಂಸ ಮತ್ತು ವಿವೇಕಾನಂದರ ವಿಚಾರಗಳನ್ನೂ ಕುರಾನ್, ಬೈಬಲ್‍ಗಳನ್ನೂ ಪಾಶ್ಚಾತ್ಯ, ಪೌರಸ್ತ್ಯ ತತ್ತ್ವಾದರ್ಶನಗಳನ್ನೂ ಅಭ್ಯಸಿಸಿ ತಮ್ಮದೇ ಆದ ವೈಚಾರಿಕ ನಿಲುವನ್ನು ರೂಪಿಸಿಕೊಂಡರು.

ಗಂಡು ಹೆಣ್ಣು (ವಿಲ್ ಡ್ಯುರಾಂಟನ ಕೃತಿಯ ಆಧಾರ), ಮಾರ್ಕ್ಸ್‍ವಾದ, ವಿಚಾರವಾದ, ನಾಸ್ತಿಕನು ಮತ್ತು ದೇವರು, ಭಾರತೀಯ ಸಂಪ್ರದಾಯಗಳು ಮತ್ತು ಕುಟುಂಬ, ಸ್ವಾತಂತ್ರ್ಯೋತ್ತರ ವಿಚಾರ ಸಾಹಿತ್ಯ, ಪ್ರಜ್ಞಾನೇತ್ರದ ಬೆಳಕಿನಲ್ಲಿ, ಕಟಾಕ್ಷ, ಚೆನ್ನವೀರ ಕಣವಿಯವರ ಕಾವ್ಯದೃಷ್ಟಿ, ಕಂಪಿನಕರೆ (ಬೇಂದ್ರೆ ಕಾವ್ಯದೃಷ್ಟಿ), ವಾಲ್ಮೀಕಿ ತೂಕಡಿಸಿದಾಗ ಮೊದಲಾದ ವೈಚಾರಿಕ ವಿಮರ್ಶೆಯ ಗ್ರಂಥಗಳನ್ನು ಬರೆದರು. ಅನೇಕ ಜೀವನ ಚರಿತ್ರೆ, ವ್ಯಕ್ತಿಚಿತ್ರಗಳನ್ನು ರಚಿಸಿದರು.

ಇವರು ಅನುವಾದ ಕ್ಷೇತ್ರದಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದರು. ಮಲೆನಾಡಿಗರು (ಥಾಮಸ್ ಹಾರ್ಡಿ), ಮಣ್ಣಿನ ಮನುಷ್ಯ, ಬರ್ಲಿನ್ ಬಂತು ಗಂಗೆಯ ತಡಿಗೆ (ಬವಾಡೆಕರ್) ಎಂಬ ಮೂರು ಕಾದಂಬರಿಗಳನ್ನು ಕನ್ನಡಕ್ಕೆ ತಂದಿದ್ದಾರೆ. ಇವುಗಳಲ್ಲಿ ಮೊದಲನೆಯದು ಇಂಗ್ಲಿಷ್ ಕೃತಿ, ಎರಡನೆಯದು ಒರಿಯಾ, ಕೊನೆಯದು ಮರಾಠಿ.

ಒಲವಿನ ಒಗಟು ಇವರ ಪ್ರಥಮ ಪ್ರಕಟಿತ ನಾಟಕ. ಇಂಗ್ಲಿಷ್, ಕನ್ನಡ, ಮರಾಠಿ, ಕೊಂಕಣಿ ಭಾಷೆಗಳಲ್ಲಿ ಇವರು 55ಕ್ಕೂ ಮಿಕ್ಕು ಗ್ರಂಥಗಳನ್ನು ಬರೆದಿದ್ದಾರೆ. ನ್ಯಾಷನಲ್ ಇಂಟಿಗ್ರೇಶನ್ ಇನ್ ಆಕ್ಶನ್, ಸರ್.ಎಂ. ವಿಶ್ವೇಶ್ವರಯ್ಯ, ಶಾಮರಾವ್ ವಿಠ್ಠಲ ಕಾಯ್ಕಿಣಿ, ಕಾಸ್ಟ್ ಅಂಡ್ ಕಾಸ್ಟಿಸಂ: ಇಟ್ಸ್ ಕಾಸ್ ಅಂಡ್ ಕ್ಯೂರ್, ಇನ್‍ಫ್ಲೂಯೆನ್ಸ್ ಆಫ್ ಕನ್ನಡ ಆನ್ ಕೊಂಕಣಿ – ಇವು ಇವರ ಇಂಗ್ಲಿಷ್ ಕೃತಿಗಳು (ಕೊನೆಯ ಎರಡು ಕೃತಿಗಳು ಪ್ರಕಟವಾಗಿಲ್ಲ.)

ಮೈಸೂರು ವಿಶ್ವವಿದ್ಯಾನಿಲಯಕ್ಕಾಗಿ ಇವರು ದಿ ಸರ್ವೆ ಆಫ್ ಹ್ಯೂಮನ್ ಡೆಸ್ಟಿನಿ ಮತ್ತು ಕರ್ನಾಟಕ ವಿಶ್ವವಿದ್ಯಾಲಯಕ್ಕಾಗಿ ದಿ ಫ್ಯೂಚರ್ ಪೊಯೆಟ್ರ ಬೈ ಅರಬಿಂದೊ ಎಂಬ ಎರಡು ಗ್ರಂಥಗಳನ್ನು ಕನ್ನಡಕ್ಕೆ ಅನುವಾದಿಸಿಕೊಟ್ಟಿದ್ದಾರೆ. ಇವರು ಸುಮಾರು ನಲವತ್ತು ಗೌರವ ಗ್ರಂಥಗಳಿಗೆ, ಸ್ಮರಣ ಸಂಚಿಕೆಗಳಿಗೆ ನೂರಾರು ಲೇಖನಗಳನ್ನು ಬರೆದಿದ್ದಾರೆ. ಕನ್ನಡದ ಅಂಕಣ ಬರೆಹಗಾರರಲ್ಲಿ ಕಾಯ್ಕಿಣಿಯವರೂ ಒಬ್ಬರು. ಜನಸೇವಕ ಪತ್ರಿಕೆಗಾಗಿ ಇವರು ಪ್ರತಿವಾರವೂ ಮೂರು ಅಂಕಣ ಬರೆಯುತ್ತಿದ್ದರು (1955–72). ವಾರದ ಉಪ್ಪಿನಕಾಯಿ ಎಂಬ ಅಂಕಣದಲ್ಲಿ ಅಡಿಗೆಭಟ್ಟ ಎಂಬ ಕಾವ್ಯನಾಮದಿಂದಲೂ ವಾರದ ವಿಶ್ವ ಎಂಬ ಅಂಕಣದಲ್ಲಿ ವೈಶ್ವಾನರ ಎಂಬ ಕಾವ್ಯನಾಮದಿಂದಲೂ ಸಾಹಿತ್ಯದರ್ಪಣ ಅಂಕಣವನ್ನು ಜಿ.ವಿ.ಕೆ. ಎಂಬ ಹೆಸರಿನಲ್ಲೂ ಬರೆಯುತ್ತಿದ್ದರು. ಬೆಳಕು (ಧಾರವಾಡ), ನಾಗರಿಕ (ಕಾರವಾರ) ಪತ್ರಿಕೆಗಳ ಪ್ರಧಾನ ಸಂಪಾದಕರಾಗಿದ್ದರು. ಜನಪ್ರಗತಿ, ಸಮನ್ವಯ (ಶಿರಸಿ), ಕರಾವಳಿ ಗ್ರಾಮ ವಿಕಾಸ, ಕಸ್ತೂರಿ, ಗ್ರಾಮ ಜೀವನ ಮತ್ತು ಸಂಯುಕ್ತ ಕರ್ನಾಟಕ ಪತ್ರಿಕೆಗಳಲ್ಲಿಯೂ ಇವರು ಅಂಕಣಗಳನ್ನು ಬರೆದಿದ್ದಾರೆ. ಇವರ ಅಪ್ರಕಟಿತ ಕೃತಿಗಳು ಹಾಗೂ ಲೇಖನಗಳ ರಾಶಿ ಅಪಾರವಾಗಿವೆ.

ಇವರು ಪ್ರೋಗ್ರೆಸ್ ಮೈಸೂರ್ ಸಂಪಾದಕ ಮಂಡಳಿ, ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ವಿಭಾಗದ ಸಲಹಾ ಸಮಿತಿ, ಆಕಾಶವಾಣಿ ಸಲಹಾ ಸಮಿತಿ ಇವುಗಳ ಸದಸ್ಯರೂ ಕನ್ನಡ ಜಿಲ್ಲಾ ಲೇಖಕ, ಪ್ರಕಾಶಕ, ಪತ್ರಕರ್ತರ ಸಂಘದ ಅಧ್ಯಕ್ಷರೂ ಆಗಿದ್ದರು. ಇವರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವ ಗೌರವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಶಂಬಾ ವಿಚಾರ ವೇದಿಕೆಯ ಸಂಶೋಧನ ಪ್ರಶಸ್ತಿ, ಉಗ್ರಾಣ ಮಂಗೇಶರಾವ್ ಪ್ರಶಸ್ತಿಗಳು ದೊರಕಿವೆ.

ಇವರ ಪತ್ನಿ ಶಾಂತಾ. ಇವರ ಪುತ್ರ ಜಯಂತ ಕಾಯ್ಕಿಣಿಯವರು ಕನ್ನಡದ ಹೊಸಪೀಳಿಗೆಯ ಮಹತ್ತ್ವದ ಲೇಖಕರಾಗಿದ್ದಾರೆ. ಗೌರೀಶರು ಗೋಕರ್ಣದಲ್ಲಿ 2002ರ ನವೆಂಬರ್ 14ರಂದು ನಿಧನಹೊಂದಿದರು. (ಎಸ್.ಎಂ.ಕೆ.)

**ಗೌವರ್ :** ವೇಲ್ಸಿನ ಪಶ್ಚಿಮ ಗ್ಲಮಾರ್ಗನಿನ ಒಂದು ಪರ್ಯಾಯದ್ವೀಪ; ಸ್ವಾನ್‍ಸೀ ಕೌಂಟಿಯ ಅಂಗ. ಇದರ ಉತ್ತರದಲ್ಲಿ ಬರ್ರೀ ಖಾರಿಯೂ ದಕ್ಷಿಣದಲ್ಲಿ ಬ್ರಿಸ್ಟಲ್ ಕಾಲುವೆಯೂ ಇವೆ. ಈ ಪರ್ಯಾಯದ್ವೀಪದ ಬಹುಭಾಗ ಶಿಲಾಮಯ. 45–135 ಮೀ ಎತ್ತರದ ಪ್ರಸ್ಥಭೂಮಿ ಇದನ್ನು ಬಹುತೇಕ ಆವರಿಸಿಕೊಂಡಿದೆ. 180 ಮೀ ಗಿಂತ ಎತ್ತರದ ಗಿರಿಶ್ರೇಣಿಗಳಿವೆ. ಗೌವರಿನ ಹಲವು ಸಣ್ಣ ನದಿಗಳು ರಭಸದಿಂದ ಹರಿಯುತ್ತವೆ. ಪ್ರಸ್ಥಭೂಮಿ ನೆಲವನ್ನು ಆಳವಾಗಿ ಕೊರೆದಿದೆ. ದಕ್ಷಿಣ ಗೌವರಿನ ಕರಾವಳಿ ನಿಸರ್ಗಸೌಂದರ್ಯದಿಂದ ಕೂಡಿದ್ದು ಇಲ್ಲಿ ಪ್ರವಾಸೋದ್ಯಮ ವಿಶೇಷವಾಗಿ ಬೆಳೆದಿದೆ. ಪ್ರವಾಸಿಗರಿಗಾಗಿ ಅಲ್ಲಲ್ಲಿ ವಿಶ್ರಾಂತಿಧಾಮಗಳನ್ನೂ ಉಪವನಗಳನ್ನೂ ನಿರ್ಮಿಸಲಾಗಿದೆ. ಸಮುದ್ರತೀರದ ಕೆಲವು ಪ್ರಪಾತ ಪ್ರದೇಶಗಳನ್ನು ರಾಷ್ಟ್ರೀಯ ಟ್ರಸ್ಟ್‍ಗಳೆಂದು ಸಾರಿ ಅವನ್ನು ರಕ್ಷಿಸಲು ವ್ಯವಸ್ಥೆ ಮಾಡಲಾಗಿದೆ. ಗೌವರ್ ಜನ ತಮ್ಮ ಮೂಲಭಾಷೆ, ಉಡುಪು ಮತ್ತು ಸಂಪ್ರದಾಯಗಳನ್ನು ಕಾಪಾಡಿಕೊಂಡು ಬಂದಿದ್ದಾರೆ.

ಆದಿಮಾನವನ ವಾಸಸ್ಥಾನವಾಗಿ ಗೌವರ್ ಜಿಲ್ಲೆಗೆ ಒಂದು ಇತಿಹಾಸವಿದೆ. 1823 ರಲ್ಲಿ ಪೆವಿಲ್ಯಾಂಡಿನ ಗೋಟ್ ಗುಹೆಯಲ್ಲಿ ಅಂತ್ಯ ಹಳೆಶಿಲಾಯುಗದ ಮಾನವನದೆಂದು ನಿರ್ಣಯಿಸಲಾದ ಒಂದು ಅಸ್ಥಿಪಂಜರ ಸಿಕ್ಕಿತು. ಇದು ಪೆವಿಲ್ಯಾಂಡಿನ ರೆಡ್ ಲೇಡಿ ಎಂದು ಪ್ರಸಿದ್ಧವಾಯಿತು. ಆದರೆ ಇದು ಪುರುಷನ ಅಸ್ಥಿಯೆಂದು ಈಗ ಖಚಿತಗೊಂಡಿದೆ. ಇದರ ಕಾಲಮಾನ 33,000 ವರ್ಷ. ಗೌವರಿನ ಪಶ್ಚಿಮ ದಿಣ್ಣೆ ಪ್ರದೇಶದಲ್ಲಿ ಅನೇಕ ಗೋರಿಕಲ್ಲುಗಳೂ ಬೇರೆಬೇರೆ ಯುಗಗಳ ಗೋರಿದಿಬ್ಬಗಳೂ ಸಿಕ್ಕಿವೆ. ಕಬ್ಬಿಣ ಯುಗದಲ್ಲೂ ಅನಂತರದ ಯುಗಗಳಲ್ಲೂ ಇಲ್ಲಿಯ ಮಲೆತಲೆಗಳ ಮೇಲೆ ಮಾನವವಸತಿ ಇತ್ತು. ರೋಮನರ ಕಾಲದಲ್ಲಿ ಗೌವರಿನ ಲೌಗರ್‍ನಲ್ಲಿ ಜನವಸತಿಯಿತ್ತು. ಆಯ್ಸ್ಟರ್‍ಮೌತ್‍ನಲ್ಲಿ ಒಂದು ಕುಟೀರ ಸಿಕ್ಕಿದೆ. ರೋಮನರ ನಿರ್ಗಮನಕ್ಕೂ ನಾರ್ಮನರ ಆಗಮನಕ್ಕೂ ನಡುವಣ ಕಾಲದಲ್ಲಿ ಕೆಲ್ಟಿಕ್ ಕ್ರೈಸ್ತಧರ್ಮ ಇಲ್ಲಿ ಪ್ರಸಾರವಾಯಿತು. ಆಗ ಇಲ್ಲಿ ಹಲವು ಚರ್ಚುಗಳು ನಿರ್ಮಾಣವಾದವು. ಇದಲ್ಲದೆ ಗೌವರಿನ ಕರಾವಳಿಯಲ್ಲಿ ಸ್ಕಾಂಡಿನೇವಿಯನ್ ಆಕ್ರಮಣದ ಹಲವು ಕುರುಹುಗಳು ಕಂಡುಬರುತ್ತವೆ. ಸ್ಕಾಂಡಿನೇವಿಯನ್ ಹೆಸರುಗಳನ್ನು ಹೋಲುವ ಹಲವು ಸ್ಥಳನಾಮಗಳು ಇಲ್ಲಿವೆ. 1100ರ ಅನಂತರ ವಾರ್‍ವಿಕ್‍ನ ಅರ್ಲ್ ಹೆನ್ರಿ ಡಿ ನ್ಯೂಬರ್ಗ್ ಗೌವರನ್ನು ಗೆದ್ದುಕೊಂಡ. 1536 ರಲ್ಲಿ ಗೌವರನ್ನು ಗ್ಲಮಾರ್ಗನ್ ಕೌಂಟಿಯಲ್ಲಿ ಸೇರಿಸಲಾಯಿತು.

16 ಮತ್ತು 17ನೆಯ ಶತಮಾನಗಳಲ್ಲಿ ಉತ್ತರ ಗೌವರಿನಲ್ಲಿ ಅಲ್ಪಸ್ವಲ್ಪ ಕಲ್ಲಿದ್ದಲು ಗಣಿ ಕೆಲಸ ನಡೆಯುತ್ತಿತ್ತು. ಮೂಲತಃ ಇದು ಒಂದು ಕೃಷಿ ಪ್ರಧಾನ ಜಿಲ್ಲೆ. ಮಿಶ್ರ ವ್ಯವಸಾಯ, ಹೈನು ಉತ್ಪತ್ತಿ ಮುಖ್ಯ. ಬಿಷಪ್‍ಸ್ಟನ್ ಮತ್ತು ರೊಸಿಲಿಗಳಲ್ಲಿ ಮಾರಾಟಕ್ಕಾಗಿ ತರಕಾರಿ ಬೆಳೆಯುತ್ತಾರೆ. (ಎಚ್.ಆರ್.ಆರ್.ಬಿ.)

**ಗೌಸ್, ಯೋಹಾನ್ ಕಾರ್ಲ್ ಫ್ರೀಡರಿಚ್ :** 1777–1855. ಪ್ರಪಂಚದ ಸಾರ್ವಕಾಲಿಕ ಮಹಾ ಗಣಿತವಿದ್ವಾಂಸರಲ್ಲಿ ಒಬ್ಬ. ಕ್ರೋನೆಕರನ (1823–91) ಮಾತಿನಲ್ಲಿ 'ನಮ್ಮ ಶತಮಾನದ ಗಣಿತಶಾಸ್ತ್ರ ನೂತನ ವೈಜ್ಞಾನಿಕ ಭಾವನೆಗಳಾಗಿ ಆವಾಹಿಸಿದ್ದೇ ನಿದ್ದರೂ ಅವೆಲ್ಲವೂ ಗೌಸ್ ಪ್ರಣೀತ ವಾದವುಗಳೇ'. ವಿಶ್ಲೇಷಣ ಗಣಿತದ ಸೂಕ್ಷ್ಮಗಳನ್ನು ತನ್ನ 16–17ನೆಯ ವಯಸ್ಸಿನಲ್ಲೇ ಕಂಡುಕೊಂಡು ಆ ಗಣಿತವನ್ನು ಸುಭದ್ರ ತಳಪಾಯದ ಮೇಲೆ ನಿಲ್ಲಿಸಿ ಅದರ ವಿಸ್ತರಣೆಗೆ ಬುನಾದಿ ಸ್ಥಾಪಿಸಿದ ಯುಗಪುರುಷನಿವ. ಅಯೂಕ್ಲಿಡೀಯ ಜ್ಯಾಮಿತಿಯ ಮೂಲ ಭಾವನೆಗಳನ್ನು ಕಂಡುಕೊಂಡು ಆ ಜ್ಯಾಮಿತಿಯ ಸ್ಥಾಪನೆಗೆ ಕಾರಣರಾದವರಲ್ಲಿ ಒಬ್ಬನೀತ. ಅನ್ವಯ ಗಣಿತ, ಖಗೋಳ ವಿಜ್ಞಾನ ಮುಂತಾದ ಕ್ಷೇತ್ರಗಳಲ್ಲಿಯೂ ಕೈಯಾಡಿಸಿ ತನ್ನ ಸ್ಥಿರ ಮುದ್ರೆಗಳನ್ನು ಅಲ್ಲೆಲ್ಲ ಗೌಸ್ ಒತ್ತಿದ್ದಾನೆ.

## ಗೌಸ್, ಯೋಹಾನ್ ಕಾರ್ಲ್ ಫ್ರೀಡರಿಚ್

ಜರ್ಮನಿಯ ಬ್ರನ್ಸ್‌ವಿಕ್ ಎಂಬಲ್ಲಿ 1777ರ ಎಪ್ರಿಲ್ 30 ರಂದು ಗೌಸ್ ಜನಿಸಿದ. ಕಡು ನಿಷ್ಠುರಿಯೂ ಪ್ರಾಮಾಣಿಕನೂ ಆದ ತಂದೆ, ಬಲು ನಿಶಿತಮತಿಯ ತಾಯಿ, ಎಲ್ಲವನ್ನೂ ಮುಳುಗಿಸುವ ದಟ್ಟದಾರಿದ್ರ್ಯ. ಇಂಥ ಪರಿಸರದಲ್ಲಿ ಕೂಲಿಯೊಂದೇ ಈ ಕೂಸಿನ ಮುಂದಿದ್ದ ಹಾದಿ. ಆದರೆ ತಾಯಿ ಡೊರೋತಿಗೆ ತನ್ನ ಮಗನ ಪ್ರತಿಭೆಯ ಪಾರಲೌಕಿಕತೆಯ ವಿಚಾರದಲ್ಲಿ ಅಪ್ರತಿಮ ವಿಶ್ವಾಸ ವಿದ್ದದ್ದರಿಂದ ಇವನಿಗೆ ವಿದ್ಯಾವ್ಯಾಸಂಗ ಸಾಧ್ಯವಾಯಿತು. ಆಕೆ ತನ್ನ ಗಂಡನ ಪ್ರತಿಗಾಮೀ ಪ್ರವೃತ್ತಿಯನ್ನು ತೀವ್ರವಾಗಿ ಪ್ರತಿಭಟಿಸಿ ಮಗನ ವಿದ್ಯಾಭ್ಯಾಸಕ್ಕೆ ನೆರವಾದಳು. ತೀರ ಎಳವೆಯಲ್ಲೇ ಪ್ರಕಟವಾದ ಗೌಸನ ಪ್ರತಿಭೆ ಈತನ ಮರಣಪರ್ಯಂತವೂ ಅವ್ಯಾಹತವಾಗಿ ಪ್ರಕಾಶಿಸಿತು. ಮೂರು ವರ್ಷದ ಮಗು ಅಕ್ಷರಾಭ್ಯಾಸಕ್ಕೆ ಮೊದಲೇ ಅಂಕಗಳ ಸ್ವರೂಪವನ್ನು ಮನಗಂಡಿತು. ತಂದೆ ಒಂದು ದಿನ ಕೂಲಿ ಬಟವಾಡೆ ಮಾಡುತ್ತಿದ್ದಾಗ ಲೆಕ್ಕತಪ್ಪಿತೆಂದು ಅಕ್ಷರಾಭ್ಯಾಸ ಮಾಡುತ್ತಿದ್ದ ಮಗು ಹೇಳಿತಂತೆ. ಪ್ರಾಯಶಃ ಗೌಸನ ಅನುಪಮ ಜ್ಞಾಪಕಶಕ್ತಿ ಮತ್ತು ಪ್ರತಿಭೆ ಬೇರೆ ಯಾವ ಗಣಿತಜ್ಞರಲ್ಲಿಯೂ ಇರಲಿಲ್ಲ.



ಅಂದು ಜರ್ಮನಿಯಲ್ಲಿ ನಮ್ಮ ಕೂಲಿಮಠದಂಥ ಶಾಲೆಗಳಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ನಡೆಯುತ್ತಿತ್ತು. ಇಂಥ ಒಂದು ಶಾಲೆಯಲ್ಲಿ ಗೌಸನ ವಿದ್ಯಾಭ್ಯಾಸ ಪ್ರಾರಂಭವಾಯಿತು. ಇಲ್ಲಿ ಒಂದು ವಿಚಿತ್ರ ಘಟನೆ ನಡೆಯಿತು. ಸೋಮಾರಿಯೂ ಒರಟನೂ ಆಗಿದ್ದ ಉಪಾಧ್ಯಾಯ ಮಕ್ಕಳಿಗೆ ಅತಿ ಕಠಿನವಾದ ಸಂಕಲನ ಲೆಕ್ಕವನ್ನು ಕೊಟ್ಟು ಬಳಿಕ ತಾನು ಗೊರಕೆ ಹೊಡೆಯುತ್ತಿದ್ದ. ಗೌಸ್ ಮೂರನೆಯ ತರಗತಿಯಲ್ಲಿದ್ದಾಗ (ವಯಸ್ಸು 10) ಈ ಕೆಳಗಿನ ಮಾದರಿಯ ಒಂದು ಲೆಕ್ಕವನ್ನು ಉಪಾಧ್ಯಾಯ ಮಕ್ಕಳಿಗೆ ವಿಧಿಸಿದ:

81297 + 81495 + 81693 + ................+ 100899 – ಈ ಶ್ರೇಣಿಯ ಮೊತ್ತವೆಷ್ಟು? ಇದೊಂದು ಸಮಾಂತರ ಶ್ರೇಣಿ; ಇದರಲ್ಲಿ 100 ಪದಗಳಿವೆ. ಇದರ ಸಾಮಾನ್ಯ ವ್ಯತ್ಯಾಸ 198. ಇಂದಿನ ಕಾಲೇಜು ಗಣಿತ ವಿದ್ಯಾರ್ಥಿಗಳಿಗೆ ಪರಿಚಯವಿರುವ ಒಂದು ಸೂತ್ರದ ಅನುಸಾರ

[ಮೊತ್ತ= ಪದಗಳ ಸಂಖ್ಯೆ X (ಮೊದಲ ಪದ+ಕೊನೆಯ ಪದ)]
2

ಉತ್ತರವನ್ನು ಒಡನೆಯೆ ಬರೆಯಬಹುದು. ಆದರೆ ಗೌಸನಿಗೆ ಇಂಥ ಶ್ರೇಣಿಯ ಪರಿಚಯವಾಗಲೀ ಈ ಸೂತ್ರದ ಇರವಿನ ಅರಿವಾಗಲೀ ಇದ್ದೇ ಇರಲಿಲ್ಲ. ಹಾಗಿದ್ದರೂ ಈತನ ಪ್ರತಿಭೆ ಸಮಾಂತರ ಶ್ರೇಣಿಯ ಗುಣವನ್ನು ಕಂಡುಕೊಂಡು ಅದರ ಮೊತ್ತವನ್ನು ಒಂದೇ ಹೆಜ್ಜೆಯಲ್ಲಿ ಪಡೆಯಿತು! ಬಾಲಕ ಗೌಸ್ ತನ್ನ ಸ್ಲೇಟಿನಲ್ಲಿ ಬರೆದದ್ದು ಕೇವಲ ಉತ್ತರವನ್ನು ಮಾತ್ರ. ಇದನ್ನು ಕಂಡು ಬೆರಗಾದ ಉಪಾಧ್ಯಾಯ ಇಂಥ ಪ್ರಚಂಡ ಮೇಧಾವಿಗೆ ತಾನು ಪಾಠ ಹೇಳುವುದು ಮೂರ್ಖತನವೆಂದು ಭಾವಿಸಿ ಈತನಿಗೆ ಅತ್ಯುತ್ತಮವಾದ ಅಂಕಗಣಿತ ಪುಸ್ತಕವನ್ನು ಕೊಂಡುಕೊಟ್ಟು ಮುಂದೆ ಇವನ ಗಣಿತ ವ್ಯಾಸಂಗಕ್ಕೆ ಪ್ರೋತ್ಸಾಹಿಸಿದ. ಅಲ್ಲದೆ ತನ್ನ ಕೈಕೆಳಗೆ ಕೆಲಸ ಮಾಡುತ್ತಿದ್ದ ಗಣಿತ ಪ್ರವೀಣ ಮಾರ್ಟಿನ್ ಬಾರ್ಟಲ್ಸ್ ಎಂಬ ತರುಣ ಉಪಾಧ್ಯಾಯನಿಂದ ಗೌಸನಿಗೆ ನೆರವು ದೊರೆಯುವಂತೆ ಏರ್ಪಾಡು ಕೂಡ ಮಾಡಿದ. ಬಾರ್ಟಲ್ಸ್ ಮತ್ತು ಗೌಸ್ ಜೊತೆಗೂಡಿ ಗಣಿತಾಭ್ಯಾಸ ಮಾಡಿ ಹೊಸ ಹೊಸ ಸಾಧನೆಗಳನ್ನು ಕಂಡುಹಿಡಿದರು. ಹತ್ತುವರ್ಷದ ಗೌಸ್ ದ್ವಿಪದ ಪ್ರಮೇಯದ (ಬೈನಾಮಿಯಲ್ ಥಿಯೋರಮ್) ಸಾಧನೆಯನ್ನು ಸಿದ್ಧಿಸಿ ಗಣಿತದ ಇತಿಹಾಸದಲ್ಲಿ ಹೊಸ ದಾಖಲೆಯನ್ನು ಸ್ಥಾಪಿಸಿದ.

$$(1+x)^n = 1 + \frac{n}{1}x + \frac{n(n-1)}{2!}x^2 + \frac{n(n-1)(n-2)}{3!}x^3 + \ldots\ldots_\ x^n$$

ಎಂಬುದು ದ್ವಿಪದ ಪ್ರಮೇಯದ ನಿರೂಪಣೆ. ಇಲ್ಲಿ n ಒಂದು ಧನ ಪೂರ್ಣಾಂಕ; x ಯಾವುದೇ ನೈಜ ಸಂಖ್ಯೆ. ಈತ n ನ ಬೆಲೆಯ ಮೇಲಿನ ನಿರ್ಬಂಧವನ್ನು ತೆಗೆದು ಹಾಕಿದರೆ ಬಲಗಡೆಯಲ್ಲಿರುವ ಪದಗಳ ಸಂಖ್ಯೆ ಅನಂತವಾಗುತ್ತದೆ. ಹೀಗೆ ದೊರೆಯುವ ಅನಂತ ಶ್ರೇಣಿ ಅಭಿಸರಿಸಿ ಅದರ ಪರಿಮಿತಿ $(1+x)n$ ಆಗಬೇಕಾದರೆ x ನ ಬೆಲೆಯ ಮೇಲೆ $|x|< 1$ ಎಂಬ ನಿರ್ಬಂಧವನ್ನು ವಿಧಿಸಬೇಕು. ಇದನ್ನು ಆವಿಷ್ಕರಿಸಿದ ಗೌಸ್ ಅನಂತ ಶ್ರೇಣಿಗಳ ಅಭಿಸರಣೆ ಮತ್ತು ಅಪಸರಣೆ ಎನ್ನುವ ಫಲವತ್ತಾದ ಮತ್ತು ವಿಶೇಷ ಕೃಷಿ ಮಾಡಿಲ್ಲದ ನೂತನ ಕ್ಷೇತ್ರವನ್ನು ಪ್ರವೇಶಿಸಿದ. ಇದರಿಂದ ಗಣಿತ ಶಾಖೋಪಶಾಖೆಗಳಾಗಿ ಬೆಳೆಯಲು ಅನುಕೂಲವಾಯಿತು. ನ್ಯೂಟನ್ (1642–1727), ಆಯ್ಲರ್ (1707–83) ಮತ್ತು ಲಗ್ರಾಂಜ್ (1736–1813) ಮೊದಲಾದ ಖ್ಯಾತ ಗಣಿತಜ್ಞರ ಕಾಲದ ಗಣಿತಕ್ಕಿಂತ ಭಿನ್ನವಾದ, ಕ್ರಾಂತಿಕಾರಕವಾದ ತಳಭದ್ರವಾದ ಗಣಿತ ಉದ್ಭವಿಸಿತು. ಯಾವುದೇ ಪ್ರಮೇಯವನ್ನು ಸಾರ್ವತ್ರೀಕರಿಸುವ (ಜನರಲೈಸ್) ಮನೋಧರ್ಮ ಗೌಸನದು. ಇದಕ್ಕೆ ಎರಡು ಉದಾಹರಣೆಗಳನ್ನು ಕೊಡಬಹುದು. ಒಂದು ಹೈಪರ್ ಜ್ಯಾಮಿತೀಯ ಅನಂತಸರಣಿ:

$$1 + \frac{ab}{c}x + \frac{a(a+1)b(b+1)}{c(c+1)2!}x^2 + \frac{a(a+1(a+2)b(b+1)(b+2)}{c(c+1)(c+2)3!}x^3 + \ldots\ldots\ldots\ldots\infty$$

ಈ ಅನಂತ ಶ್ರೇಣಿಯಲ್ಲಿ $a, b, c, x$ ಪದಗಳು ಯಾವ ನಿರ್ಬಂಧಗಳಿಗೆ ಒಳಪಟ್ಟರೆ ಇದು ಅಭಿಸರಿಸುತ್ತದೆ ಎಂಬುದನ್ನು ಈತ ಪೂರ್ಣವಾಗಿ ವಿಶ್ಲೇಷಿಸಿದ. ಇಲ್ಲಿ $a, b, c, x$ ಗಳಿಗೆ ವಿವಿಧ ಬೆಲೆಗಳನ್ನು ಆದೇಶಿಸುವುದರಿಂದ ಬರುವ ಅನೇಕ ಅನಂತ ಶ್ರೇಣಿಗಳು ಗಣಿತ ಮತ್ತು ಭೌತಶಾಸ್ತ್ರಗಳಲ್ಲಿ ವಿಶೇಷವಾಗಿ ಬಳಕೆಯಲ್ಲಿವೆ.

ಇಂಥ ಗಣಿತ ಸೃಷ್ಟಿಯ ಹಿನ್ನೆಲೆಯಲ್ಲಿ ಗೌಸ್ ಮಾಡಿದ ತಪಸ್ಸೇ ಕಾರಣ ಎಂಬುದನ್ನು ಮರೆಯಬಾರದು. ಇವನ ಸಾಧನೆಯನ್ನು ಊಹಿಸುವುದೂ ಬಹಳ ಕಷ್ಟ. ಅನವರತವೂ ಇವನ ಮನಸ್ಸು ಗಣಿತ ಸಮಸ್ಯೆಗಳಲ್ಲಿಯೇ ತಲ್ಲೀನವಾಗಿರುತ್ತಿತ್ತು. ಸಾಧಾರಣವಾದ ಲೆಕ್ಕಾಚಾರಗಳು ಇವನಿಗೆ ಲೀಲಾಜಾಲ. ಯಾವುದೋ ಒಂದು ಸಂದರ್ಭದಲ್ಲಿ + ಅಥವಾ – ಚಿಹ್ನೆ ಹಾಕಲು ಹಲವಾರು ದಿವಸಗಳ ಕಾಲವೇ ಚಿಂತಿಸಿದನಂತೆ. ಇಂಥ ಚಿಂತನೆ ವ್ಯರ್ಥ ಕಾಲಹರಣವಲ್ಲವೇ ಎಂದು ಪ್ರಶ್ನಿಸಿದಾಗ ಗೌಸ್ ಕೊಟ್ಟ ಉತ್ತರ 'ನಾನು ಚಿಂತಿಸಿದ ಸಮಸ್ಯೆಗೆ ಉತ್ತರ ಬರುವ ಹಾದಿಯಲ್ಲಿ ವಿಪುಲ ವಿಚಾರಗಳು ಹೊರಹೊಮ್ಮುತ್ತವೆ. ಆದ್ದರಿಂದ ಚಿಂತನೆ ಮಾಡುವವನಿಗೆ ಯಾವ ಸಮಸ್ಯೆಯೂ ಅಪರಿಹಾರ್ಯವಲ್ಲ'.

ಗೌಸನ ಸರ್ವಗ್ರಾಹೀ ಮನಸ್ಸು ಮುಂದೆ ಯೂಕ್ಲಿಡ್ ಜ್ಯಾಮಿತಿಯನ್ನು ಕೂಲಂಕಷವಾಗಿ ವಿಮರ್ಶಿಸಲು ತೊಡಗಿತು. ಅದರ ಸಾಧನೆಗಳನ್ನೂ ಆಧಾರ ಭಾವನೆಗಳನ್ನೂ ಈತ ಪರೀಕ್ಷಿಸಿದ. ಈ ಜಾಡಿನಲ್ಲಿ ಸಾಧನೆ ಎಂಬುದರ ಸರಿಯಾದ ಕಲ್ಪನೆಯನ್ನು ಮೊಟ್ಟಮೊದಲಿಗೆ ನಿರೂಪಿಸಿದವನೇ ಗೌಸ್ ಎಂದು ಹೇಳಬಹುದು. ಅಂದಿನವರೆಗೆ ಎಲ್ಲ ಗಣಿತಜ್ಞರೂ ಯೂಕ್ಲಿಡನ ಅವಿಚ್ಛಿನ್ನ ಭಕ್ತರಾಗಿದ್ದರು. ಗೌಸ್ ಆದರೋ ಯೂಕ್ಲಿಡ್ ಜ್ಯಾಮಿತಿಯ ತಳಪಾಯವನ್ನೆ ಜಗ್ಗಿಸಿ ಅಯೂಕ್ಲಿಡೀಯ ಜ್ಯಾಮಿತಿಗೆ ಪ್ರವರ್ತಕನೆನ್ನಿಸಿದ. ಇವನ ಅತ್ಯಂತ ಹಿರಿಯ ಕಾಣಿಕೆ ಹಾಗೂ ಪ್ರೀತಿಯ ಅಧ್ಯಯನ ಅಂಕಗಣಿತ ಶಾಸ್ತ್ರದಲ್ಲಿ. ಆ ಶಾಸ್ತ್ರಕ್ಕೆ ಗೌಸ್‌ನ ಅಧ್ಯಯನ ಮೆರುಗು ಕೊಟ್ಟಿತು.

ಬಾಲಕ ಗೌಸ್ ಪ್ರಕಟಿಸಿದ ಅಸಮಾನ ಪ್ರತಿಭೆಯನ್ನು ಕೇಳಿ ಸಂತೋಷಪಟ್ಟು ಬ್ರನ್ಸ್‌ವಿಕಿನ ಡ್ಯೂಕ್ ಈತನ ವಿದ್ಯಾಭ್ಯಾಸದ ಪೂರ್ಣ ಜವಾಬ್ದಾರಿ ವಹಿಸಿಕೊಂಡ. ಆತನ ನೆರವಿನಿಂದ ಗೌಸ್ ಯಾವ ಆರ್ಥಿಕಾತಂಕಗಳೂ ಇಲ್ಲದೆ ನಿಶ್ಚಿಂತೆಯಿಂದ ವಿದ್ಯಾಭ್ಯಾಸವನ್ನು ಮುಂದುವರಿಸುವುದು ಸಾಧ್ಯವಾಯಿತು. ತನ್ನ 18ನೆಯ ವಯಸ್ಸಿನಲ್ಲಿ (1795) ಈತ ಕಾಲೇಜಿಗೆ ಪ್ರವೇಶಿಸಿದ. ಇಷ್ಟು ಹೊತ್ತಿಗಾಗಲೇ ಇವನು, ರೀಮಾನಿಯನ್ ಜ್ಯಾಮಿತಿಯಲ್ಲಿ ಬರುವ ಕನಿಷ್ಠ ವರ್ಗ ವಿಧಾನದಲ್ಲಿ ಮತ್ತು ಸಂಭಾವ್ಯತಾ ಸಿದ್ಧಾಂತದಲ್ಲಿ ಸಾಕಷ್ಟು ಸ್ವತಂತ್ರ ಚಿಂತನೆ ನಡೆಸಿ ಪರಿಣತಿಗಳಿಸಿದ್ದ. ಕಾಲೇಜಿನಲ್ಲಿ ಭಾಷಾಶಾಸ್ತ್ರವನ್ನು ಅಭ್ಯಸಿಸಬೇಕೇ ಗಣಿತಶಾಸ್ತ್ರವನ್ನು ಅಭ್ಯಸಿಸಬೇಕೇ ಎಂಬ ವಿಚಾರದಲ್ಲಿ ಒಮ್ಮೆ ಸಂದೇಹ ಮೂಡಿದರೂ 1796ರ ವೇಳೆಗೆ ಗೌಸ್ ತನ್ನ ಭವಿಷ್ಯ ಪಥವನ್ನು ನಿರ್ಧರಿಸಿದ. ಅದು ಇವನ ಜೀವನದಲ್ಲಿ ಹೇಗೋ ಹಾಗೆ ಗಣಿತೇತಿಹಾಸದಲ್ಲೂ ಒಂದು ಸಂಕ್ರಮಣ ಮುಹೂರ್ತವಾಯಿತು. ಗೌಸ್ ಎಷ್ಟು ದೊಡ್ಡವನೆಂಬುದನ್ನು ಈತ ಪ್ರಕಟಿಸಿದ ಗ್ರಂಥಗಳಿಂದಾಗಲೀ 1791ರಿಂದ ಮುಂದಕ್ಕೆ ಇವನು ಬರೆದಿಟ್ಟ ದಿನಚರಿಗಳಿಂದಾಗಲೀ ಅಳೆಯುವುದು ಕಷ್ಟ. ಏಕೆಂದರೆ ಇವನ ಮನಸ್ಸಿನ ಅಸಾಧ್ಯ ಪ್ರವಾಹಕ್ಕೆ ಅಣೆಕಟ್ಟು ಕಟ್ಟುವುದು ಬಹು ಕಠಿಣ. ಇವನು ತನ್ನ ಸಂಶೋಧನೆಗಳನ್ನು ಪರಿಪೂರ್ಣ ಮಟ್ಟಕ್ಕೆ ಕೊಂಡೊಯ್ಯದಲ್ಲದೆ ಪ್ರಕಟಿಸುತ್ತಿರಲಿಲ್ಲ. ಮಧ್ಯದ ಹಂತಗಳ ನಿರೂಪಣೆಯನ್ನೇ ಮಾಡುತ್ತಿರಲಿಲ್ಲ. ಹೀಗಾಗಿ ಈ ಪರಿಪೂರ್ಣ ಫಲಿತಾಂಶಗಳನ್ನು ಬಿಡಿಸುವುದೇ ಮುಂದಿನವರಿಗೆ ಒಂದು ಸವಾಲಾಯಿತು. ಗೌಸ್ ಎಲ್ಲವನ್ನೂ ಸರಳವಾಗಿ, ಸಾಧಾರಣರಿಗೆ ಅರ್ಥವಾಗುವಂತೆ ಬರೆದಿದ್ದರೆ ವಿಜ್ಞಾನ ಇನ್ನೂ 500 ವರ್ಷ ಮುನ್ನಡೆಯುತ್ತಿತ್ತಂತೆ. 'ಕೆಲವೇ, ಆದರೆ ಪಕ್ವ' – ಇದು ಗೌಸನ ಜೀವನಸೂತ್ರ.

1799 ರಲ್ಲಿ ಗೌಸ್ ಹೆಲ್ಮ್‌ಸ್ಟೆಡ್ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಗಣಿತ ಕೃತಿಗೆ ಡಾಕ್ಟರೇಟ್ ಪದವಿ ಬಂದಿತು. 1807ರಲ್ಲಿ ಗಾಟಿಂಗೆನ್ ವೀಕ್ಷಣಾಲಯದ ನೇತಾರನಾಗಿಯೂ ಪ್ರಾಧ್ಯಾಪಕನಾಗಿಯೂ ನೇಮಕಗೊಂಡು ತನ್ನ ಮರಣಪರ್ಯಂತವೂ ಅಲ್ಲಿಯೇ ಅವಿರತವಾಗಿ ಶ್ರಮಿಸಿದ. ತನ್ನ ಅಚ್ಚುಮೆಚ್ಚಿನ ಅಂಕಗಣಿತಶಾಸ್ತ್ರದ ಸಂಶೋಧನೆಯಲ್ಲೇ ನಿರತನಾಗಿದ್ದ ಗೌಸನನ್ನು ಭೌತಶಾಸ್ತ್ರವೂ ಖಗೋಳಶಾಸ್ತ್ರವೂ ಆಕರ್ಷಿಸಿದುವು. ನ್ಯೂಟನ್ ನಡೆಸಿದ್ದ ಸಂಶೋಧನೆಗಳ ಆಕಾಶ ಗತಿವಿಜ್ಞಾನದಲ್ಲಿ ಗೌಸ್ ಬಲು ಮುಂದಕ್ಕೆ ನಿಷ್ಕೃಷ್ಟವಾಗಿ ಗಣಿಸಿದ ಕೂಡ. ಇಂಥ ಸಂಶೋಧನೆಯಲ್ಲಿ ಆ ಮೊದಲು ಲೆಪ್ಲಾಸ್ (1749–1827), ಆಯ್ಲರ್ ಮೊದಲಾದ ಖ್ಯಾತ ಗಣಿತಜ್ಞರೂ ಬಹುವಾಗಿ ಶ್ರಮಿಸಿದ್ದರೂ ಪೂರ್ಣ ಯಶಸ್ಸು ಪಡೆದಿರಲಿಲ್ಲ. ಇದು ಅತ್ಯಂತ ಕಠಿಣವಾದ ಗಣಿತವೆಂದು ನ್ಯೂಟನ್ ಅಭಿಪ್ರಾಯಪಟ್ಟಿದ್ದ.

ಗೌಸನ ವೈವಾಹಿಕ ಜೀವನ ಅಷ್ಟು ತೃಪ್ತಿಕರವಾಗಿರಲಿಲ್ಲ. ಮದುವೆಯಾದ ತರುಣದಲ್ಲೆ ಮೊದಲನೆಯ ಹೆಂಡತಿಯನ್ನು ಕಳೆದುಕೊಂಡು ಅತೀವ ದುಃಖಕ್ಕೀಡಾದ. ಮಕ್ಕಳ ದೈನ್ಯವನ್ನು ನೀಗಿಸುವ ಉದ್ದೇಶದಿಂದ ಮರುಮದುವೆ ಮಾಡಿಕೊಂಡ. ಆದರೆ ಮಕ್ಕಳು ಇವನ ಮನಸ್ಸಿಗೆ ಹಿತವಾಗುವಂತೆ ನಡೆಯಲಿಲ್ಲ.

ಗೌಸ್ ಬಿಟ್ಟು ಹೋದ ಗಣಿತ ನಿಧಿಯಲ್ಲಿ ಕೆಲವು ಮುಖ್ಯಾಂಶಗಳನ್ನು ಇಲ್ಲಿ ಗುರುತಿಸಿದೆ.

1, 2, 3, 5, 7, 11 .... .... ಇತ್ಯಾದಿ ಪೂರ್ಣಾಂಕಗಳನ್ನು ಅಪವರ್ತಿಸಲಾಗುವುದಿಲ್ಲ. ಇವುಗಳಿಗೆ ಅವಿಭಾಜ್ಯ ಸಂಖ್ಯೆಗಳೆಂದು (ಪ್ರೈಮ್ ನಂಬರ್ಸ್) ಹೆಸರು. ಯೂಕ್ಲಿಡ್‌ನ ಕಾಲದಿಂದ ಇಂದಿನವರೆಗೂ ಇವುಗಳಿಗೆ ಸಂಬಂಧಿಸಿದಂತೆ ಅನೇಕ ಗಹನ ಸಮಸ್ಯೆಗಳು ಹೊರಬಿದ್ದಿವೆ. ಇಂಥ ಸಂಖ್ಯೆಗಳು ಅನಂತ ಎಂದು ಸಾಧಿಸಲಾಗಿದೆ. ಆದರೆ ಅವುಗಳ ವಿತರಣೆ ಎಂದರೆ ಸ್ಥಾನಾಂಕದ ಬಗ್ಗೆ ಯಾವ ಅವಧಿಯುತ ನಿಯಮವಾಗಲೀ ಸೂತ್ರವಾಗಲೀ ನಿರ್ದಿಷ್ಟವಾಗಿಲ್ಲ. ಯಾವುದೇ ದತ್ತ ಸಂಖ್ಯೆ ಅವಿಭಾಜ್ಯವಾಗುವ ಸಂಭಾವ್ಯತೆ ಎಷ್ಟು ? ಈ ಪ್ರಶ್ನೆಗೆ ಗೌಸ್ ಉತ್ತರ ಬರೆದಿಟ್ಟಿದ್ದಾನೆ: a ಎಂಬ ದೊಡ್ಡ ಸಂಖ್ಯೆಯನ್ನು ಅದರ ಲಘುಗಣಕದಿಂದ (ಲಾಗರಿತಮ್) ಭಾಗಿಸಿದಾಗ ಬರುವ ಭಾಗಲಬ್ಧ a ಗಿಂತ ಚಿಕ್ಕದಾದ ಒಟ್ಟು ಅವಿಭಾಜ್ಯಗಳ ಸಂಖ್ಯೆಯನ್ನು ಸನ್ನಿಹಿತವಾಗಿ ಕೊಡುತ್ತದೆ. a ದೊಡ್ಡದಾದಷ್ಟೂ ಈ ಸೂತ್ರ ಹೆಚ್ಚು ನಿಖರವಾದ ಬೆಲೆ ಕೊಡುತ್ತದೆ. ಗೌಸ್ ತನ್ನ 14ನೆಯ ವಯಸ್ಸಿನಲ್ಲಿ ಒಂದು ಕೋಷ್ಟಕದ ಹಿಂಭಾಗದಲ್ಲಿ ಬರೆದಿಟ್ಟಿದ್ದ ಈ ಸೂತ್ರವನ್ನು ತೀರ ಈಚೆಗೆ ಸಾಧಿಸಲಾಯಿತಷ್ಟೆ. ಇವನು ಬರೆದ ಗ್ರಂಥಗಳಲ್ಲಿ ಶಿಖರ ಪ್ರಾಯವಾದದ್ದು 'ಅಂಕಗಣಿತ ಶಾಸ್ತ್ರದ ಸಂಶೋಧನೆಗಳು' (1801). ಇದು ಗಣಿತಶಾಸ್ತ್ರಕ್ಕೆ ಹೊಸ ರೂಪ ಕೊಟ್ಟಿತಲ್ಲದೆ ಅದರ ಬಹು ಶಾಖಾವೃದ್ಧಿಗೆ ಕಾರಣವೂ ಆಯಿತು. ಇದನ್ನು ಸಪ್ತಮುದ್ರೆಗಳ ಗ್ರಂಥ (ಬುಕ್ ಆಫ್ ಸೆವೆನ್ ಸೀಲ್ಸ್) ಎಂದು ವಿಮರ್ಶಕರು ಕರೆದಿದ್ದಾರೆ. ವಿಜ್ಞಾನದ ವಿವಿಧ ಶಾಖೆಗಳಲ್ಲಿ ಪರಿಪೂರ್ಣ ಪಾಂಡಿತ್ಯ ಪಡೆದ ಕೊನೆಯ ವಿಜ್ಞಾನಿ ಗೌಸ್. ಮಿಶ್ರಸಂಖ್ಯೆಗಳಿಗೆ (ಕಾಂಪ್ಲೆಕ್ಸ್ ನಂಬರ್ಸ್) ಜ್ಯಾಮಿತೀಯ ಸ್ವರೂಪ ಕೊಟ್ಟು ಮಿಶ್ರ ಚರಗಳ ಸಿದ್ಧಾಂತಕ್ಕೆ ನಿರ್ದಿಷ್ಟ ರೂಪ ಕೊಟ್ಟು ಬೆಳೆಸಿದವನೀತ. ಮಿಶ್ರಸಂಖ್ಯೆಗಳನ್ನು ಬಳಸಿ ಹೊಸ ಅವಿಭಾಜ್ಯ ಸಂಖ್ಯೆಗಳನ್ನು ವ್ಯಾಖ್ಯೆ ಮಾಡಿದ. 3 ಎಂಬುದು ಈ ಅರ್ಥದಲ್ಲಿ ಅವಿಭಾಜ್ಯ. ಆದರೆ $1 + 2i$, $1 - 2i$ ಎಂಬ ಅಪವರ್ತನಗಳನ್ನು ಹೊಂದಿರುವ 5 ಎಂಬ ಸಂಖ್ಯೆ ಅವಿಭಾಜ್ಯವಲ್ಲ. ಇಲ್ಲಿ $i = \sqrt{-1}$. ಇಂಥ ಮಿಶ್ರಸಂಖ್ಯೆಗಳು ಅನೇಕ ಸಮಸ್ಯೆಗಳನ್ನು ಪರಿಹರಿಸಿದವು. ಬೀಜಗಣಿತದಲ್ಲಿ ಪ್ರಸಿದ್ಧವಾದ ಬೀಜಗಣಿತದ ಮೂಲ ಪ್ರಮೇಯದ ನಿರೂಪಣೆ ಹೀಗಿದೆ: ನೈಜಸಂಖ್ಯೆಗಳನ್ನು ಗುಣಾಂಕಗಳಾಗಿ ಪಡೆದಿರುವ ಪ್ರತಿಯೊಂದು ಬೀಜಗಣಿತೀಯ ಸಮೀಕರಣಕ್ಕೂ ಕೊನೆಯ ಪಕ್ಷ ಒಂದು ಮೂಲವಾದರೂ (ರೂಟ್) ಉಂಟು. ಗೌಸ್ ಈ ಪ್ರಮೇಯವನ್ನು ನೈಜಸಂಖ್ಯೆಗಳನ್ನು ಬಳಸಿ ಸಾಧಿಸಿದನಲ್ಲದೆ ಮಿಶ್ರ ಚರಗಳ ಸಿದ್ಧಾಂತ ರೀತ್ಯ ಸಹ ಸಾಧಿಸಿದ. ಇಂದು ಪ್ರಸಿದ್ಧವಾಗಿರುವ ಮತ್ತು ಪ್ರಚಲಿತ ಕೋಷಿ ಪ್ರಮೇಯವೆಂದು ಹೆಸರಾದ

$$\int_C f(z)dz = 0$$

(ಇಲ್ಲಿ $c$ ಎಂಬುದು ಒಂದು ಸಂವೃತ್ತ ರೇಖೆ) ಎಂಬುದನ್ನು ಕೋಷಿಗಿಂತ ಮೊದಲೇ ಗೌಸ್ ಸಾಧಿಸಿದನಲ್ಲದೆ ವಿಶ್ಲೇಷಕ ಉತ್ಪನ್ನಗಳ ಬಗ್ಗೆ ಅನೇಕ ವಿಚಾರಗಳನ್ನು ಕೂಡ ಪ್ರಕಟಿಸಿದ. ವಿದ್ಯುತ್ ಮತ್ತು ಕಾಂತ ಪ್ರಕರಣಗಳಲ್ಲಿ ಈತನ ಸಂಶೋಧನೆಗಳು ಉನ್ನತ ಮಟ್ಟದ್ದಾಗಿದ್ದುವು. ಗಾಟಿಂಗೆನ್ ಪಟ್ಟಣದಿಂದ ಹ್ಯಾನೊವರ್ ನಗರಕ್ಕೆ ತಂತಿ ಸಮಾಚಾರ ಕಳುಹಿಸುವ ಮೊದಲ ಪ್ರಯತ್ನಕ್ಕೆ ಇವು ಕಾರಣವಾದವು. $x^n = 1$ ಎಂಬ ಸಮೀಕರಣದ ($n$ ಎಂಬುದು ಧನ ಪೂರ್ಣಾಂಕ) ಮೂಲಗಳನ್ನು ಒಂದು ವೃತ್ತದ ಮೇಲೆ ಗುರ್ತಿಸುವುದರ ಮೂಲಕ 17 ಭುಜಗಳಿರುವ ಸಮಭುಜಾಕೃತಿಯನ್ನು ಕೇವಲ ಕೈವಾರ ಮತ್ತು ಮಾನಕ ಪಟ್ಟಿಗಳ ಸಹಾಯದಿಂದಲೇ ರಚಿಸಿದ; ಮತ್ತು ಈ ವಾದವನ್ನು ಸಾರ್ವತ್ರೀಕರಿಸಿದ [$n = n=2^{p+1}$, $p=2^k$, $n$ ಅವಿಭಾಜ್ಯ, $k = 0, 1, 2, 3, ....$ ಆಗಿದ್ದು $n$ ಭುಜಗಳಿರುವ ಆಕೃತಿಯ ರಚನೆ].

1820 ರಿಂದ ಈಚೆಗೆ ಇನ್ನೂ ಮಹತ್ತರ ಕ್ಷೇತ್ರದಲ್ಲಿ ಕೃಷಿಗೆ ಪ್ರಾರಂಭ ಮಾಡಿ ದೂರ ಸಾಗಿದ. ರೇಖೀಯ ನಿರ್ದೇಶಕಗಳನ್ನು (ಕರ್ವಿಲೀನಿಯರ್ ಕೋ ಆರ್ಡಿನೇಟ್ಸ್) ಬಳಸಿ ಘನವಸ್ತುಗಳ ಮೇಲ್ಮೈಯ ಸ್ವರೂಪ ಮತ್ತು ಗುಣಗಳನ್ನು ಆಳವಾಗಿ ಅಭ್ಯಸಿಸಿದ. ds ಎಂಬುದು ಮೇಲ್ಮೈಯ ಒಂದು ಸಣ್ಣ ತುಣುಕಾದರೆ $ds^2=Edu^2+Fdudv+Gdv^2$ ಎಂಬ ಸಮೀಕರಣ $ds$ ಎಂಬುದನ್ನು ನಿರ್ದೇಶಕಗಳಲ್ಲಿ ಸೂಚಿಸುತ್ತದೆ. ಇಂಥ ಮೇಲ್ಮೈಯ ಒಟ್ಟು ವಕ್ರತೆ (ಕರ್ವೆಚರ್) $E, F, G$ ಗಳನ್ನು ಅವಲಂಬಿಸಿದೆ ಎಂಬುದನ್ನು ಸ್ಪಷ್ಟಪಡಿಸಿದ. ಅವಕಲ ಜ್ಯಾಮಿತಿಯನ್ನು (ಡಿಫರೆನ್ಶಿಯಲ್ ಜಿಯೊಮೆಟ್ರಿ) ಪುಷ್ಟವಾಗಿ ಬೆಳೆಸಿದ.

ಅಧಿಕಾರ, ಕೀರ್ತಿ, ಪ್ರತಿಷ್ಠೆ, ಪ್ರಶಂಸೆ ಇತ್ಯಾದಿ ಪ್ರಲೋಭನೆಗಳಿಗೂ ಗೌಸನಿಗೂ ಮಹದಂತರ. ಇವನು ವಿಹರಿಸುತ್ತಿದ್ದುದು ಲೋಕಾತೀತ ಗಣಿತ ಪ್ರಪಂಚದಲ್ಲಿ. ಈತನ ಕೊನೆಯ ದಿನಗಳು ಪೂರ್ಣ ಸಂತೃಪ್ತಿಯಿಂದ ಸಾಗಿದ್ದುವು. ರಷ್ಯನ್ ಭಾಷೆಯನ್ನು ಕಲಿಯಲು ತೊಡಗಿ (77) ಸ್ವಲ್ಪ ಮುಂದುವರಿದಿದ್ದ. ಸಂಸ್ಕೃತಾಭ್ಯಾಸ ಸ್ವಲ್ಪ ಮಾಡಿದರೂ ಆಸಕ್ತಿ ಮೂಡಲಿಲ್ಲ. 1855ರ ಫೆಬ್ರವರಿ 25 ರಂದು ಗಣಿತಜ್ಞರ ರಾಜ (ಪ್ರಿನ್ಸ್ ಆಫ್ ಮ್ಯಾಥಮ್ಯಾಟೀಶಿಯನ್ಸ್) ಗೌಸ್ ನಿಧನನಾದ. (ಕೆ.ಎಂಎಎನ್.)

**ಗೌಹತಿ (ಗುವಾಹತಿ) :** ಅಸ್ಸಾಮಿನ ಕಾಮರೂಪ ಜಿಲ್ಲೆಯ ಮುಖ್ಯ ಪಟ್ಟಣ. ಅಸ್ಸಾಂ ರಾಜ್ಯದ ಸಾಂಸ್ಕೃತಿಕ ಕೇಂದ್ರ. ಇದು ಉ. ಅ. $26^0$ 11′ ಪೂ.ರೇ. $91^0$ 45′ ಮೇಲೆ ಇದೆ. ಜನಸಂಖ್ಯೆ 9,63,429 (2011). ಬ್ರಹ್ಮಪುತ್ರಾ ನದಿಯ ಮೇಲಿದೆ. ಏಕಕಾಲದಲ್ಲಿ ರೈಲು ಮತ್ತು ರಸ್ತೆ ಸಂಚಾರಕ್ಕೆ ಅನುಕೂಲವಾಗುವಂತೆ ಈ ನದಿಗೆ ಅಡ್ಡಲಾಗಿ ಕಟ್ಟಲಾಗಿರುವ ದೊಡ್ಡ ಸೇತುವೆಗೆ ಪಾಂಡು ಸೇತುವೆ ಎಂದು ಹೆಸರು. ಈ ನಗರದ ಒಂದು ಕಡೆ ದಟ್ಟಕಾಡು, ಅರ್ಧಚಂದ್ರಾಕಾರದ ಬೆಟ್ಟ, ಮತ್ತೊಂದು ಕಡೆ ಅಗಲವಾದ ಬ್ರಹ್ಮಪುತ್ರಾ ಪ್ರವಾಹ– ಇದೊಂದು ರಮಣೀಯ ದೃಶ್ಯ. ಈ ನಗರ ಇಡೀ ಈಶಾನ್ಯ ಭಾರತದ ಹೆಬ್ಬಾಗಿಲಿನಂತಿದೆ. ಅಲ್ಲದೆ ಇದು ಈಶಾನ್ಯ ಭಾರತದಲ್ಲಿಯೇ ಪ್ರಮುಖವಾದ ವಾಣಿಜ್ಯ ಹಾಗೂ ಶೈಕ್ಷಣಿಕ ಕೇಂದ್ರವಾಗಿದೆ.




ಒಂದು ಹಿಂದು ದೇವಾಲಯ

ಕೇಂದ್ರ ರಾಜ್ಯಸರ್ಕಾರಗಳ ಕಚೇರಿಗಳೂ ರಾಜ್ಯದ ಉಚ್ಚ ನ್ಯಾಯಾಲಯವೂ ಇಲ್ಲಿವೆ. ಗೌಹತಿ ಪ್ರಮುಖ ವಿದ್ಯಾಕೇಂದ್ರ. ಅನೇಕ ಪ್ರೌಢಶಾಲೆಗಳೂ ಇಂಜಿನಿಯರಿಂಗ್, ಮೆಡಿಕಲ್ ಮತ್ತು ವೆಟರನರಿ ಕಾಲೇಜುಗಳೂ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆಯೂ ಸ್ಥಾಪನೆಗೊಂಡಿವೆ. ಗೌಹತಿ ವಿಶ್ವವಿದ್ಯಾಲಯ ಈಶಾನ್ಯ ರಾಜ್ಯಗಳಲ್ಲೆಲ್ಲ ಪ್ರಸಿದ್ಧವಾದ್ದು. 1948 ರಲ್ಲಿ ಆರಂಭವಾದ ಈ ವಿಶ್ವವಿದ್ಯಾಲಯದ ಕಾರ್ಯಾಲಯ ಗೌಹತಿಯಲ್ಲಿದೆ. ಈ ನಗರದಲ್ಲಿ ಒಂದು ವಸ್ತು ಸಂಗ್ರಹಾಲಯವೂ ಒಂದು ಮೃಗಾಲಯವೂ ಉಂಟು. ನಗರಕ್ಕೆ 3 ಕಿಮೀ ದೂರದಲ್ಲಿ ಬೆಟ್ಟವೊಂದರ ಮೇಲಣ ಕಾಮಾಖ್ಯ ದೇವಾಲಯ, ಬ್ರಹ್ಮಪುತ್ರಾ ನದಿಯ ಶಿಲಾ ದ್ವೀಪವೊಂದರ ಮೇಲಣ ಉಮಾನಂದ ದೇವಾಲಯ, ಅಶ್ವಕ್ರಾಂತ ಮತ್ತು ನವಗ್ರಹ ದೇವಾಲಯಗಳು, ವಸಿಷ್ಠ ಆಶ್ರಮ – ಇವು ಈ ನಗರದ ಆಸುಪಾಸಿನ ಹಿಂದೂ ಕ್ಷೇತ್ರಗಳು. ಸಕಲೇಶ್ವರ ಬೆಟ್ಟದ ಬುಡದಲ್ಲಿ ಹಲವು ಸ್ಮಾರಕಗಳೂ ಕೆರೆಗಳೂ ಇವೆ. ಗೌಹತಿ ನಿವಾಸಿಗಳಲ್ಲಿ ಅಸ್ಸಾಮಿ ಭಾಷೆ ಆಡುವವರೇ ಹೆಚ್ಚು.

ಬೇಸಗೆಯಲ್ಲಿ ಇಲ್ಲಿ ಬಹಳ ಬಿಸಿಲು, ಚಳಿಗಾಲದಲ್ಲಿ ಬಹಳ ಚಳಿ. ಮಳೆ ಹೆಚ್ಚು. ಈ ಪ್ರದೇಶದ ಬೆಳೆಗಳಲ್ಲಿ ಮುಖ್ಯವಾದವು ಬತ್ತ, ಸೆಣಬು ಮತ್ತು ಎಣ್ಣೆಕಾಳುಗಳು. ಬ್ರಹ್ಮಪುತ್ರಾನದಿಯಲ್ಲಿ ಮೀನುಹಿಡಿಯುವುದು ಅನೇಕರ ವೃತ್ತಿ.

ಗೌಹತಿ ನಗರ ರಾಜ್ಯದ ಮುಖ್ಯ ವಾಣಿಜ್ಯ ಕೇಂದ್ರ. ಇದಕ್ಕೆ ಭೂ, ಜಲ, ವಾಯು ಸಂಪರ್ಕವಿದೆ. ರಾಜ್ಯದ ಎಲ್ಲೆಡೆಗಳಿಗೂ ಇಲ್ಲಿಂದ ರಸ್ತೆಗಳುಂಟು. ಇದು ಪ್ರಮುಖ ವಿಮಾನನಿಲ್ದಾಣಗಳಲ್ಲೊಂದು. ಈಶಾನ್ಯ ಭಾರತದ ಇತರ ರಾಜ್ಯಗಳಾದ ನಾಗಾಲೆಂಡ್, ತ್ರಿಪುರ, ಮಣಿಪುರ, ಮಿಜೋರಾಂ ಮತ್ತು ಅರುಣಾಚಲ ಪ್ರದೇಶಗಳಿಗೆ ಹೋಗುವ ವಿಮಾನಗಳೆಲ್ಲವೂ ಗೌಹತಿಯ ಮೂಲಕವೇ ಹೋಗಬೇಕು. ಇದಕ್ಕೆ ಸಮೀಪದಲ್ಲಿ ನೂನ್‌ಮತಿ ತೈಲ ಶುದ್ಧೀಕರಣ ಕೇಂದ್ರವಿದೆ (ಗುವಾಹತಿ ರಿಫೈನರಿ). ಮಕ್ಕಳ ಹಾಲಿನ ಪುಡಿಯನ್ನು ಉತ್ಪಾದಿಸುವ ಕಾರ್ಖಾನೆಯೂ (ಅಮುಲ್) ಇಲ್ಲಿದೆ. ಗುವಾಹತಿ ಟೀ ಆಕ್ಷನ್ ಸೆಂಟರ್ ಪ್ರಪಂಚದಲ್ಲೇ ಅತಿದೊಡ್ಡ ಚಹಸೊಪ್ಪಿನ ಮಾರುಕಟ್ಟೆಗಳಲ್ಲೊಂದು.



ಬ್ರಹ್ಮಪುತ್ರಾ ನದಿಯ ದಡದ ಒಂದು ದೇವಾಲಯ ಮತ್ತು ಸ್ನಾನಘಟ್ಟ

ಭಾರತದ ಪುರಾಣಪ್ರೋಕ್ತವಾದ ನಗರಗಳಲ್ಲಿ ಗೌಹತಿಯೂ ಒಂದು. ಇದು 400ರ ಸುಮಾರಿನಲ್ಲಿ ಕಾಮರೂಪ ರಾಜ್ಯದ ರಾಜಧಾನಿಯಾಗಿತ್ತೆಂದು ತಿಳಿದುಬರುತ್ತದೆ. ಆಗ ಇದಕ್ಕೆ ಪ್ರಾಗ್‌ಜ್ಯೋತಿಪುರವೆಂದು ಹೆಸರಿತ್ತು. 17 ನೆಯ ಶತಮಾನದಲ್ಲಿ 50 ವರ್ಷಗಳ ಅವಧಿಯಲ್ಲಿ, ಎಂಟು ಸಾರಿ ಇದನ್ನು ಮುಸ್ಲಿಮರೂ ಅಹೋಂ ದೊರೆಗಳೂ ಒಬ್ಬರಿಂದೊಬ್ಬರು ವಶಪಡಿಸಿಕೊಂಡಿದ್ದರು. 1681ರಲ್ಲಿ ಇದು ಕೆಳ ಅಸ್ಸಾಮಿನ ಅಹೋಂ ರಾಜ್ಯಪಾಲನ ಅಧಿಕಾರಸ್ಥಾನವೂ 1786 ರಲ್ಲಿ ಅಹೋಂ ದೊರೆಯ ರಾಜಧಾನಿಯೂ ಆಯಿತು. 1816 ಬರ್ಮೀಯರು ಇದನ್ನು ಆಕ್ರಮಿಸಿಕೊಂಡಿದ್ದರು. 1826ರಲ್ಲಿ ಅಸ್ಸಾಂ ಬ್ರಿಟಿಷರ ವಶವಾದಾಗ ಇದು ಅಸ್ಸಾಮಿನ ಆಡಳಿತಕೇಂದ್ರವಾಯಿತು. 1874 ರಲ್ಲಿ ರಾಜಧಾನಿಯನ್ನು ಷಿಲಾಂಗಿಗೆ ವರ್ಗಮಾಡಲಾಯಿತು. ಮೇಘಾಲಯ ರಾಜ್ಯ ಸ್ಥಾಪನೆಯಾದ ಮೇಲೆ ಅಸ್ಸಾಂ ಮೇಘಾಲಯಗಳೆರಡಕ್ಕೂ ಷಿಲಾಂಗೇ ರಾಜಧಾನಿಯಾಗಿತ್ತು.

1897 ರಲ್ಲಿ ಭೂಕಂಪದಿಂದಾಗಿ ಈ ನಗರ ನಾಶವಾಗಿತ್ತು. ಇದನ್ನು ಪುನರ್ ನಿರ್ಮಿಸಲಾಗಿದೆ. (ಎಂ.ಆರ್.ಜಿ.)

**ಗ್ಡಿನ್ಯಾ :** ಪೋಲೆಂಡಿನ ಒಂದು ನಗರ, ರೇವುಪಟ್ಟಣ. ಗ್ಡನ್ಸ್ಕ ಪ್ರಾಂತ್ಯದಲ್ಲಿ, ಡ್ಯಾನ್ಸಿಗ್ ಖಾರಿಯಲ್ಲಿ, ಡ್ಯಾನ್ಸಿಗ್‌ಗೆ 16 ಕಿಮೀ ದೂರದಲ್ಲಿದೆ. ಜನಸಂಖ್ಯೆ 2,47,324 (2010). 1919 ರ ವರ್ಸೇಲ್ಸ್ ಕೌಲಿನ ಪ್ರಕಾರ ಪೋಲೆಂಡಿಗೆ ಹಿಂದಿರುಗಿಸಲಾದ ಬಾಲ್ಟಿಕ್ ಕರಾವಳಿಯ ಸಣ್ಣ ಮೀನುಗಾರ ಗ್ರಾಮವಾಗಿದ್ದ ಗ್ಡಿನ್ಯಾವನ್ನು ಪೋಲಿಷ್ ಸರ್ಕಾರ ಡ್ಯಾನ್ಸಿಗ್‌ಗೆ ಪ್ರತಿಯಾಗಿ ಒಂದು ಬಂದರಾಗಿ ಪರಿವರ್ತಿಸಿತು. 1924 ರಿಂದ ಈಚೆಗೆ ಅದು ಬಾಲ್ಟಿಕ್ ಕರಾವಳಿಯ ಪ್ರಮುಖ ರೇವುಪಟ್ಟಣವಾಯಿತು. ಎರಡನೆಯ ಮಹಾಯುದ್ಧ ಕಾಲದಲ್ಲಿ ಜರ್ಮನರು ಇದನ್ನು ಆಕ್ರಮಿಸಿಕೊಂಡರು. ಇದರ ಹೆಸರು ಗೋಟೆನ್‌ಹ್ಯಾಫೆನ್ ಎಂದು ಬದಲಾವಣೆಗೊಂಡಿತು. ಹಲವು ಪೋಲಿಷರು ಕೊಲೆಗೆ ಈಡಾದರು. ಅನೇಕರು ದೇಶಭ್ರಷ್ಟರಾದರು. ಅವರ ಆಸ್ತಿಯನ್ನು ಜರ್ಮನರು ವಶಪಡಿಸಿಕೊಂಡರು. ಜರ್ಮನರು ಸೋತು ಹಿನ್ನಡೆಯುತ್ತಿದ್ದಾಗ ಬಂದರನ್ನು ಬಹುತೇಕ ನಾಶಗೊಳಿಸಿದ್ದರು. ಯುದ್ಧಾನಂತರ ಕಾಲದಲ್ಲಿ ಬಂದರು ಸ್ಥಾವರಗಳು ಮತ್ತೆ ನಿರ್ಮಿತವಾದುವು. ಈಗ ಇದು ಡ್ಯಾನ್ಸಿಗ್ ಮತ್ತು ಸಾಪಾಟ್‌ಗಳೊಂದಿಗೆ ಒಂದು ಬಂದರಾಗಿದೆ. ಇದು ಪೋಲಿಷ್ ನೌಕಾನೆಲೆ, ಪ್ರಯಾಣಿಕ ಹಡಗು ಬಂದರು. ಕಲ್ಲಿದ್ದಲು, ನಾಟಾ, ಸಕ್ಕರೆ ರಫ್ತಾಗುತ್ತವೆ. ಕಬ್ಬಿಣ, ಅದಿರು, ಗೊಬ್ಬರ, ಆಹಾರಪದಾರ್ಥ ಇವು ಆಮದುಗಳು. ರಾಜ್ಯ ನೌಕಾಶಾಲೆ, ಸಾಗರಿಕ ಮೀನುಗಾರಿಕೆ ತಾಂತ್ರಿಕ ಕಾಲೇಜು, ಸಮುದ್ರ ಮೀನುಗಾರಿಕೆ ಸಂಸ್ಥೆ, ನೌಕಾ ವಸ್ತುಸಂಗ್ರಹಶಾಲೆ – ಇವು ಇಲ್ಲಿಯ ಮುಖ್ಯ ಸಂಸ್ಥೆಗಳು. ಇಲ್ಲೊಂದು ನಾಟ್ಯಶಾಲೆಯೂ ಇದೆ. (ಎನ್.ಪಿ.ವಿ.)

**ಗ್ಯಾಂಗ್ :** ಲೋಹಮಿಶ್ರಿತ ಅದಿರು ನಿಕ್ಷೇಪಗಳಿಗೆ ಸಂಬಂಧಿಸಿದಂಥ ಬೆಲೆಯಿಲ್ಲದ ಖನಿಜಗಳ ಹೆಸರು. ನಿಕ್ಷೇಪಗಳು ಯಾವ ರೀತಿ ಉತ್ಪತ್ತಿಯಾಗಿದ್ದರೂ ಕೆಲವು ಅನುಪಯುಕ್ತ ವಸ್ತುಗಳು ಅವುಗಳೊಡನೆ ವಿವಿಧ ಪ್ರಮಾಣಗಳಲ್ಲಿ ಮಿಶ್ರಿತವಾಗಿರುತ್ತವೆ. ಉಪಯುಕ್ತ ಲೋಹದೊಡನೆ ಲೋಹೇತರ ಖನಿಜಗಳೂ ಶಿಲಾಚೂರುಗಳೂ ಕೂಡಿರುವುವಲ್ಲದೆ ಕೆಲವು ಸಂದರ್ಭದಲ್ಲಿ ಅನುಪಯುಕ್ತ ಖನಿಜಗಳೂ ಇರುವುದುಂಟು. ಇವೇ ಗ್ಯಾಂಗ್. ಅಲೋಹ ನಿಕ್ಷೇಪಗಳಲ್ಲಿ ಉಪಯುಕ್ತ ಖನಿಜಗಳೊಡನೆ ಕೂಡಿರುವ ಉಪಯೋಗವಿಲ್ಲದ ಪದಾರ್ಥಗಳನ್ನು ಅನುಪಯುಕ್ತ ವಸ್ತುಗಳು ಎಂದು ಕರೆಯುವರು. ಹಲವು ವೇಳೆ ಆರ್ಥಿಕ ದೃಷ್ಟಿಯಿಂದ ಕೆಳದರ್ಜೆಯ ಅದಿರಿನೊಡನೆ ಬೆಲೆಬಾಳುವ ಖನಿಜಗಳು ಗ್ಯಾಂಗ್ ರೂಪದಲ್ಲಿ ದೊರೆತು ಅದಿರಿನ ಬೆಲೆಯನ್ನು ಹೆಚ್ಚಿಸುವುದೂ ಉಂಟು. ಗ್ಯಾಂಗಿನಲ್ಲಿರುವ ಪದಾರ್ಥಗಳನ್ನು ಉಪಪದಾರ್ಥಗಳನ್ನಾಗಿ ಬೇರ್ಪಡಿಸಬಹುದು. ಆಗ ಗ್ಯಾಂಗಿನಲ್ಲಿರುವ ಬೆಲೆಬಾಳುವ ಪದಾರ್ಥಗಳ ದೆಸೆಯಿಂದ ಕೆಳದರ್ಜೆಯ ಅದಿರನ್ನು ಕೂಡ ಗಣಿಗಾರಿಕೆಯಿಂದ ತೆಗೆಯಬಹುದು. ಸಾಮಾನ್ಯವಾಗಿ ಖನಿಜ ಸಂಸ್ಕರಣ ನಡೆಯುವಾಗ ಈ ಅನುಪಯುಕ್ತ ವಸ್ತುಗಳನ್ನು ಬೇರ್ಪಡಿಸುತ್ತಾರೆ. ಉದಾಹರಣೆಗೆ ಕೋಲಾರದ ಚಿನ್ನದ ಗಣಿಯಲ್ಲಿ ಚಿನ್ನದ ಜೊತೆಯಲ್ಲಿ ಬೆಳ್ಳಿಯನ್ನೂ ಉಪಪದಾರ್ಥವಾಗಿ ಶೇಖರಿಸುತ್ತಾರೆ. (ಟಿ.ಟಿ.)

**ಗ್ಯಾಂಗ್ಟ್‌ಸೆ :** ಮಧ್ಯ ಟಿಬೆಟಿನ ಒಂದು ಪಟ್ಟಣ. ನ್ಯಾಂಗ್ ಚು ನದಿಯ ದಂಡೆಯ ಮೇಲೆ ಇದೆ. ಜನಸಂಖ್ಯೆ ಸು. 62,000 (2012). ಗಿರಿಯೇಣೊಂದರ (4000 ಮೀ, 13,125') ಮೇಲೆ ನಿರ್ಮಿತವಾದ ಈ ನಗರದ ಎರಡು ಮುಖ್ಯ ಕಟ್ಟಡಗಳಲ್ಲಿ ಒಂದು



ಗ್ಯಾಂಗ್ಟ್‌ಸೆ ಪಟ್ಟಣದ ಹೊರವಲಯದಲ್ಲಿರುವ ಬೌದ್ಧ ಸ್ಮಾರಕ

ಇಲ್ಲಿಯ ಕೋಟೆ. ಅದು ಈಗ ಸ್ಥಳೀಯ ನ್ಯಾಯಾಲಯ. ಇನ್ನೊಂದು, ಲಾಮಗಳ ಮಠವಾಗಿದ್ದ ಕಟ್ಟಡ. 1954 ರ ಪ್ರವಾಹದಲ್ಲಿ ಈ ನಗರ ಬಹುತೇಕ ನಾಶವಾಗಿತ್ತು. ಈಗ ಇದನ್ನು ಮತ್ತೆ ನಿರ್ಮಿಸಲಾಗಿದೆ.

ಗ್ಯಾಂಗ್ಟ್‌ಸೆ ಒಂದು ವ್ಯಾಪಾರ ಕೇಂದ್ರ. ಲಾಸ, ಷಿಗಾಟ್ಸೆ, ಯೂಟುಂಗ್‌ಗಳಿಗೆ ಇಲ್ಲಿಂದ ಹೆದ್ದಾರಿಯುಂಟು. ಉಣ್ಣೆ, ತುಪ್ಪಳ, ಕಸ್ತೂರಿ, ಬೆಣ್ಣೆ, ಬಾರ್ಲಿ, ಚಹ, ಹೊಗೆಸೊಪ್ಪು, ಸಕ್ಕರೆ, ಹತ್ತಿ, ಜವಳಿ, ಒಣಗಿದ ಹಣ್ಣು, ಕಬ್ಬಿಣ ಸಾಮಾನು, ಮರದ ಬೋಗುಣಿ, ಅಕ್ಕಿ, ಮುಂತಾದ ಸರಕುಗಳು ಇಲ್ಲಿಗೆ ಬರುತ್ತವೆ. (ಎನ್.ಪಿ.ವಿ.)

**ಗ್ಯಾಂಟನ ಕಾರ್ಯ ಮತ್ತು ಬೋನಸ್ ಪದ್ಧತಿ :** ವೈಜ್ಞಾನಿಕ ವ್ಯವಸ್ಥಾಪನೆಯ ಪಿತನೆನಿಸಿದ ಫ್ರೆಡರಿಕ್ ಟೇಲರನೊಂದಿಗೆ ಕೆಲಸ ಮಾಡುತ್ತಿದ್ದ ಹೆನ್ರಿ ಎಲ್ ಗ್ಯಾಂಟ್ ಎಂಬವನು ರೂಪಿಸಿದ ಕೂಲಿ ಪಾವತಿ ಪದ್ಧತಿ (ಗ್ಯಾಂಟ್ ಟಾಸ್ಕ ಅಂಡ್ ಬೋನಸ್ ಸಿಸ್ಟಮ್). ಒಂದು ಕಾರ್ಖಾನೆಯಲ್ಲಿಯ ಕೆಲಸದ ಸ್ವರೂಪ ಮತ್ತು ಪರಿಸ್ಥಿತಿಗಳ ಅಧ್ಯಯನ ಮಾಡಿ, ಅತ್ಯಂತ ಸಮರ್ಪಕ ಪರಿಸ್ಥಿತಿಯಲ್ಲಿ ಒಬ್ಬ ಪ್ರಸಾಮಾನ್ಯ ಕಾರ್ಮಿಕನ ಸಾಮರ್ಥ್ಯ ಎಷ್ಟಿರುತ್ತದೆಂಬುದನ್ನು ನಿರ್ಧರಿಸಲಾಗುತ್ತದೆ. ಇದರ ಆಧಾರದ ಮೇಲೆ ಒಂದು ನಿಗದಿಯಾದ ಸಮಯದಲ್ಲಿ ನಿರ್ದಿಷ್ಟವಾದ ಕಾರ್ಯವನ್ನು ಮಾಡಲಾಗುತ್ತದೆ. ಒಬ್ಬ ಕಾರ್ಮಿಕ ಆ ಕಾರ್ಯವನ್ನು ಆ ಸಮಯದಲ್ಲಿ ಮುಗಿಸಿದ ಪಕ್ಷದಲ್ಲಿ ಅವನಿಗೆ ಅವನ ಕೂಲಿಯ ಜೊತೆಗೆ ಆ ಕಾರ್ಯಕ್ಕೆ ಗೊತ್ತುಮಾಡಲಾದ ಶಿಷ್ಟ ಸಮಯದ (ಸ್ಟಾಂಡರ್ಡ್ ಟೈಂ) ಶೇ.

25 ರಿಂದ ಶೇ. 50ರ ವರೆಗೆ ಅಧಿಕ ಸಮಯದ ಸಂಭಾವನೆ ಲಭ್ಯವಾಗುತ್ತದೆ. ಇದು ಅಧ್ಯಂಶ ಅಥವಾ ಬೋನಸ್. ನಿಗದಿಯಾದ ಸಮಯದಲ್ಲಿ ನಿರ್ದಿಷ್ಟವಾದ ಕೆಲಸವನ್ನು ಅವನು ಮಾಡದಿದ್ದ ಪಕ್ಷದಲ್ಲಿ ಅವನಿಗೆ ನಿಗದಿಯಾದ ದರದಲ್ಲಿ ಕೂಲಿ ಮಾತ್ರ ದೊರಕುತ್ತದೆ. ಹೀಗಾಗಿ, ಅಷ್ಟೇನೂ ದಕ್ಷನಲ್ಲದ ಕಾರ್ಮಿಕನಿಗೆ ಕನಿಷ್ಠ ವೇತನದ ಖಾತರಿ ಇರುತ್ತದೆ. ಇದು ಮಾನವೀಯ ದೃಷ್ಟಿಯಿಂದ ಅಗತ್ಯ. ಆದರೆ ದಕ್ಷನಾದ ಕಾರ್ಮಿಕನಿಗೆ ಅವನ ದಕ್ಷತೆಗೆ ಅನುಗುಣವಾಗಿ ಅಧಿಕ ಸಂಪಾದನೆ ಆಗುತ್ತದೆ; ಅವನ ದಕ್ಷತೆಗೆ ತಕ್ಕ ಪ್ರತಿಫಲ ಲಭ್ಯವಾಗುತ್ತದೆ. ನಿಗದಿಯಾದ ಮಟ್ಟದ ವರೆಗೆ ಕಾರ್ಮಿಕನ ಸಂಪಾದನೆ ($E$), ಅವನ ಕೆಲಸದ ವೇಳೆ ($T$) ಮತ್ತು ನಿಗದಿಯಾದ ಕೂಲಿದರ ($R$)– ಇವಕ್ಕೆ ಅನುಗುಣವಾಗಿರುತ್ತದೆ. ಎಂದರೆ:

$$E= TR$$

ಕಾರ್ಮಿಕ ನಿಗದಿಯಾದ ಮಟ್ಟವನ್ನು ನಿಲುಕಿದರೆ ಅಥವಾ ಅದನ್ನೂ ಮೀರಿದರೆ ಅವನ ಸಂಪಾದನೆಗೂ ($E$) ನಿಗದಿಯಾದ ಅವಧಿಯ ಕೂಲಿದರಕ್ಕೂ ($R$) ನಿಗದಿಯಾದ ಕಾರ್ಯವನ್ನು ಪೂರೈಸಲು ನಿರ್ಧರಿಸಲಾದ ಶಿಷ್ಟ ಸಮಯಕ್ಕೂ ($S$) ಇರುವ ಸಂಬಂಧವನ್ನು ಮುಂದಿನ ಸಮೀಕರಣ ಸೂಚಿಸುತ್ತದೆ:

$$E = (S+pS)\,R$$

(ಮೇಲಣ ಸಮೀಕರಣದಲ್ಲಿ $p$ ಎಂಬುದು ಕಾರ್ಯವನ್ನು ಪೂರೈಸಲು ನಿಗದಿಯಾದ ಶಿಷ್ಟಸಮಯದ ಶತಾಂಶ).

ಒಂದು ಮೋಟಾರು ಕಾರ್ಖಾನೆಯಲ್ಲಿ ಒಬ್ಬ ಪ್ರಸಾಮಾನ್ಯ ಕಾರ್ಮಿಕ 8 ಗಂಟೆಗಳ ದುಡಿತದ ದಿನದಲ್ಲಿ 32 ಚಕ್ರಗಳನ್ನು ಜೋಡಿಸಬಹುದೆಂದು ನಿರ್ಧರಿಸಲಾಗಿದೆಯೆಂದೂ, ಅವನ ದಿನಗೂಲಿ ದರ ರೂ. 8 (ಗಂಟೆಗೆ 1 ರೂ.) ಎಂದೂ, ನಿರ್ಧರಿಸಲಾದ ಸಮಯದ ಶೇ. 25 ರಷ್ಟು ಬೋನಸ್ಸನ್ನು ನೀಡಲು ಕಾರ್ಖಾನೆ ತೀರ್ಮಾನಿಸಿದೆಯೆಂದೂ ಭಾವಿಸೋಣ. ಒಂದು ಚಕ್ರವನ್ನು ಜೋಡಿಸಲು ನೀಡಲಾದ ಸಮಯ 0.25 ಗಂಟೆ. $A$ ಎಂಬ ಒಬ್ಬ ಕಾರ್ಮಿಕ 8 ಗಂಟೆಗಳ ದುಡಿತದ ದಿನದಲ್ಲಿ 30 ಚಕ್ರಗಳನ್ನಷ್ಟೇ ಜೋಡಿಸಿದರೆ ಅವನಿಗೆ ಆ ದಿನದ ಕೂಲಿ ಮಾತ್ರ (ರೂ. 8) ದೊರಕುತ್ತದೆ. $B$ ಎಂಬ ಇನ್ನೊಬ್ಬ ಕೆಲಸಗಾರ 8 ಗಂಟೆಗಳ ದುಡಿತದ ದಿನಕ್ಕೆ ನಿಗದಿಯಾದ 32 ಚಕ್ರಗಳನ್ನು ಆ ಅವಧಿಯಲ್ಲಿ ಜೋಡಿಸಿ ಪೂರೈಸಿದರೆ ಅವನ ಸಂಪಾದನೆ ಹೀಗಿರುತ್ತದೆ:

$E$ = $g$ರೂ. (8 + 1/4x8) x 1 = $g$ ರೂ. 10


$\left(6+\frac{9}{4}\right)$ $c$ ಎಂಬುವನು 8 ಗಂಟೆಗಳ ದಿನದಲ್ಲಿ 36 ಚಕ್ರಗಳನ್ನು ಜೋಡಿಸಿದ ಪಕ್ಷದಲ್ಲಿ, ಅಷ್ಟು ಸಂಖ್ಯೆಯ ಚಕ್ರಗಳನ್ನು ಜೋಡಿಸಲು ನೀಡಲಾದ ಶಿಷ್ಟ ಸಮಯದ (0.25X36 ಗಂಟೆ) ಕೂಲಿಯ ಜೊತೆಗೆ ಆ ಸಮಯದ ಶೇ.25 ರಷ್ಟಕ್ಕೆ ($\frac{0.25\times 36}{4}$ ಗಂಟೆ) ಸಲ್ಲಬೇಕಾದ ಕೂಲಿಯನ್ನು ಬೋನಸ್ಸಾಗಿ ಕೊಡಲಾಗುತ್ತದೆ:

$E$ = ರೂ. X1 = ರೂ. 11¼

ಶಿಷ್ಟಮಟ್ಟಕ್ಕಿಂತ ಕಡಿಮೆ ಉತ್ಪಾದಿಸುವ ಕಾರ್ಮಿಕನಿಗೆ ದಿನದ ದರದ ಕೂಲಿಯ ಭರವಸೆ ಇರುವುದೂ ಶಿಷ್ಟಮಟ್ಟದಲ್ಲಿ ಅಥವಾ ಅದಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಉತ್ಪಾದಿಸುವವನಿಗೆ ಉತ್ಪಾದನಾಗುಣದ ಕೂಲಿ ದೊರಕುವುದೂ ಈ ಪದ್ಧತಿಯ ವೈಶಿಷ್ಟ್ಯ. ಇದೊಂದು ಸರಳವಿಧಾನ. ಮಾನವೀಯ ದೃಷ್ಟಿ, ಹೆಚ್ಚು ದಕ್ಷತೆಯಿಂದ ಕೆಲಸ ಮಾಡಲು ಉತ್ತೇಜನ– – ಎರಡನ್ನೂ ಇದರಲ್ಲಿ ಹೊಂದಿಸಲಾಗಿದೆ. ಕೆಲಸಗಾರ ಹೆಚ್ಚು ದಕ್ಷನೂ ಕುಶಲನೂ ಆಗುವಂತೆ ತರಬೇತು ನೀಡುವುದಕ್ಕೂ ಗಮನ ನೀಡಲಾಗುತ್ತದೆ. ಒಬ್ಬ ಫೋರ್‌ಮನನ (ಕಾರ್ಯ ಪ್ರಮುಖ ಅಥವಾ ಮೇಸ್ತ್ರಿ) ಅಧೀನದಲ್ಲಿರುವ ಕೆಲಸಗಾರರ ಪೈಕಿ ನಿರ್ದಿಷ್ಟ ಸಂಖ್ಯೆಯ ಕಾರ್ಮಿಕರು ಬೋನಸ್ ಸಂಪಾದಿಸಿದರೆ ಅಂಥ ಫೋರ್‌ಮನನಿಗೂ ಬೋನಸ್ ನೀಡಲಾಗುವುದರಿಂದ, ತನ್ನ ಕೈಕೆಳಗಿನ ಕಾರ್ಮಿಕರು ಹೆಚ್ಚು ದಕ್ಷರಾಗುವಂತೆ ಮಾಡಲೂ ಉತ್ಪಾದನೆಗೆ ಇರುವ ತಡೆಗಳನ್ನು ನಿವಾರಿಸಲೂ ಅವನಿಗೆ ಕಣಿಗು, ಉತ್ತೇಜನ ನೀಡಿದಂತಾಗುತ್ತದೆ.

ಗ್ಯಾಂಟನ ಕೂಲಿ ಪಾವತಿ ವಿಧಾನ ಅನೇಕ ಕಾರ್ಖಾನೆಗಳಲ್ಲಿ ಯಶಸ್ವಿಯಾಗಿದೆಯಾದರೂ ಕಾರ್ಮಿಕರಲ್ಲಿ ಬೋನಸ್ ಸಂಪಾದಿಸುವವರು, ಸಂಪಾದನೆ ಮಾಡಲಾಗದವರು ಎಂಬ ಎರಡು ವರ್ಗಗಳನ್ನು ನಿರ್ಮಿಸುವುದಾದ್ದರಿಂದ ಇದು ಒಳ್ಳೆಯ ಪದ್ಧತಿ ಅಲ್ಲವೆಂದು ಟೀಕಿಸಲಾಗಿದೆ. ಆದರೆ ದಕ್ಷತೆಗೆ ಉತ್ತೇಜನ ನೀಡುವ ಎಲ್ಲ ಪದ್ಧತಿಗಳಲ್ಲೂ ಇಂಥ ಅಂತರ ಅನಿವಾರ್ಯವೆಂಬುದು ಈ ಟೀಕೆಗೆ ನೀಡಲಾಗಿರುವ ಉತ್ತರ. (ಡಿ.ಎಸ್.ಎಸ್.ಎಂ.)

**ಗ್ಯಾಂಬಿಯ :** ಪಶ್ಚಿಮ ಆಫ್ರಿಕದ ಒಂದು ದೇಶ. ಆ ಖಂಡದಲ್ಲೇ ಅತ್ಯಂತ ಕಿರಿದು. ಈ ದೇಶದ ಪಶ್ಚಿಮದಲ್ಲಿ ಅಟ್ಲಾಂಟಿಕ್ ಸಾಗರವಿದೆ. ಉಳಿದ ಮೂರು ಕಡೆಯೂ ಸೆನಿಗಾಲ್ ಗಣರಾಜ್ಯ ಸುತ್ತುವರಿದಿದೆ. ಉ.ಅ. 13°–14° ಮತ್ತು ಪ.ರೇ. 14°30"–17° ನಡುವೆ ಇರುವ ಈ ದೇಶ ಗ್ಯಾಂಬಿಯ ನದಿಯ ಅಟ್ಲಾಂಟಿಕ್ ಸಾಗರದ ದಿಕ್ಕಿನ ಹರಿವಿನ ಕೊನೆಯ 480 ಕಿಮೀ ಇಬ್ಬದಿಯಲ್ಲೂ ಸಮಾನಾಂತರವಾಗಿ ಹಬ್ಬಿದೆ. ನದೀ ಭಾಗವೂ ಸೇರಿ ಈ ದೇಶದ ವಿಸ್ತೀರ್ಣ 11,295 ಚ.ಕಿಮೀ. ಜನಸಂಖ್ಯೆ 17,82,893 (2009). ಗ್ಯಾಂಬಿಯದ ರಾಜಧಾನಿ ಬಂಜುಲ್.



**ಮೇಲ್ಮೈಲಕ್ಷಣ:** ಗ್ಯಾಂಬಿಯವನ್ನು ಮೂರು ವಿಭಾಗಗಳಾಗಿ ವಿಂಗಡಿಸಬಹುದು: 1. ನದೀ ಕಣಿವೆಯ ಪ್ರದೇಶ, ನೆರೆಮಣ್ಣಿನ ಫಲವತ್ತಾದ ಭೂಮಿ. ಮಳೆಗಾಲದಲ್ಲಿ ಇದು ಪ್ರವಾಹದಿಂದ ಆವೃತವಾಗಿರುತ್ತದೆ. 2. ಪ್ರಸ್ಥಭೂಮಿಯ ಕಚ್ಚುಕಚ್ಚಾದ ಏಣಿನ ಪ್ರದೇಶ. ಇದು ಮರಳ್ಗಲ್ಲಿನ ಕಡಿದಾದ ಬೆಟ್ಟಗಳಿಂದಲೂ ನಡುನಡುವೆ ಮರಳಿನ ಕಣಿವೆಗಳಿಂದಲೂ ಕೂಡಿದ್ದು. 3. ಮರುಳುಗಲ್ಲಿನ ಪ್ರಸ್ಥಭೂಮಿ. ಇದು ಕೆಲವೆಡೆ ಸೆನಿಗಾಲ್‌ನೊಳಕ್ಕೂ ಚಾಚಿಕೊಂಡಿದೆ. ಇದು ಅಷ್ಟೇನೂ ಫಲವತ್ತಾದ ಪ್ರದೇಶವಲ್ಲ.

**ವಾಯುಗುಣ:** ಗ್ಯಾಂಬಿಯದ್ದು ಉಷ್ಣವಲಯದ ವಾಯುಗುಣ. ಜೂನ್–ಅಕ್ಟೋಬರ್ ಮಳೆಗಾಲ. ಅನಂತರ ಒಣಹವೆ; ಉಷ್ಣತೆ ಕಡಿಮೆ. ಆಗ ದೂಳಿನಿಂದ ಕೂಡಿದ ಗಾಳಿ ಸಹಾರ ಮರುಭೂಮಿಯಿಂದ ಆಗಿಂದಾಗ್ಗೆ ಈ ದೇಶದ ಮೇಲೆ ಬೀಸುವುದುಂಟು. ವಾರ್ಷಿಕ ಸರಾಸರಿ ಮಳೆ 40". ಕರಾವಳಿಯಿಂದ ಒಳನಾಡಿನವರೆಗೆ ಮಳೆ 66" ರಿಂದ 24" ವರೆಗೆ ವ್ಯತ್ಯಾಸವಾಗುತ್ತದೆ. ಆಗಸ್ಟ್ ತಿಂಗಳಲ್ಲಿ ಅತಿ ಹೆಚ್ಚು ಮಳೆ. ಬೇಸಗೆಯಲ್ಲಿ ಉಷ್ಣತೆ 110° ಫ್ಯಾ.ವರೆಗೆ ಏರುವುದುಂಟು. ಒಣಹವೆಯ ಕಾಲದಲ್ಲಿ ಕರಾವಳಿಯ ಬಳಿಯ ಉಷ್ಣತೆ 65°–90° ಫ್ಯಾ; ಒಳನಾಡಿನಲ್ಲಿ 50°–105° ಫ್ಯಾ.

**ಸ್ವಾಭಾವಿಕ ಸಸ್ಯವರ್ಗ:** ಇಲ್ಲಿಯದು ಸವಾನ ಮಾದರಿಯ ಸಸ್ಯವರ್ಗ. ನದಿಯ ಬದಿಗಳಲ್ಲಿ ಅಂಚುಗಳಂತೆ ಕಾಡುಗಳು ಬೆಳೆದಿವೆ. ನದಿ ತೀರದ ಅರಣ್ಯಗಳಲ್ಲಿ ಪಶ್ಚಿಮ ಆಫ್ರಿಕನ್ ಪ್ರರೂಪಕ್ಕೆ ಸೇರಿದ ಹಲವು ಪಕ್ಷಿಗಳು ಜೀವಿಸುತ್ತವೆ. ನೈಲ್ ನದಿಯಲ್ಲಿರುವಂಥ ಮೊಸಳೆಗಳು ಗ್ಯಾಂಬಿಯ ನದಿಯ ಉದ್ದಕ್ಕೂ ಕರಾವಳಿಯ ಲಗೂನುಗಳಲ್ಲೂ ಉಂಟು. ಅಲ್ಲಲ್ಲಿ ನೀರಾನೆಗಳಿವೆ. ಸವಾನದಲ್ಲಿ ಜಿಂಕೆ, ಕೋತಿ ಮುಂತಾದ ಪ್ರಾಣಿಗಳುಂಟು. ವ್ಯವಸಾಯದಿಂದಾಗಿ ಹಲವು ಪ್ರಾಣಿಗಳು ಇಂದು ಇಲ್ಲದಂತಾಗಿವೆ. ಬೋಗನ್‌ವಿಲ ಕಣಿಗಲು, ಹಲವು ಬಗೆಯ ದಾಸವಾಳ ಇವು ಅರಣ್ಯದ ಮುಖ್ಯ ಮರಗಳು.

**ಇತಿಹಾಸ:** ಈ ಪ್ರದೇಶ ಹಿಂದೆ 1200 ರಿಂದ 1400ರಲ್ಲಿ ಬಲಿಷ್ಠ ಮಾಲಿ ಸಾಮ್ರಾಜ್ಯಕ್ಕೆ ಸೇರಿತ್ತು. ಪೋರ್ಚುಗೀಸ್ ನಾವಿಕರು 1455ರಲ್ಲಿ ಗ್ಯಾಂಬಿಯ ನದಿಯನ್ನು ಕಂಡರು. ಗುಲಾಮರ ಸಂಪಾದನೆಯೂ ಹತ್ತಿರದಲ್ಲೇ ಇತ್ತೆಂದು ನಂಬಲಾಗಿದ್ದ ಚಿನ್ನದ ನದಿಯನ್ನು ತಲುಪುವುದೂ ಅವರ ಮುಖ್ಯ ಉದ್ದೇಶಗಳಾಗಿದ್ದುವು. 1500ರಲ್ಲಿ ತೀರಪ್ರದೇಶ ಬ್ರಿಟಿಷ್ ಮತ್ತು ಪೋರ್ಚುಗೀಸರ ಗುಲಾಮರ ವ್ಯಾಪಾರಕ್ಕೆ ಪ್ರಸಿದ್ಧವಾಗಿತ್ತು. 1588ರಲ್ಲಿ ಪೋರ್ಚುಗೀಸರು ಗ್ಯಾಂಬಿಯ ನದಿಯಲ್ಲಿ ವ್ಯಾಪಾರ ಮಾಡುವ ಹಕ್ಕನ್ನು ಕೆಲವು ಇಂಗ್ಲಿಷ್ ವರ್ತಕರಿಗೆ ಮಾರಿದರು. 1618ರಲ್ಲಿ 1ನೆಯ ಜೇಮ್ಸ್ ದೊರೆ ವ್ಯಾಪಾರ ಸಂಸ್ಥೆಯೊಂದಕ್ಕೆ ಸನ್ನದು ನೀಡಿದ. ಅದರ ಮೊದಲನೆಯ ಪ್ರತಿನಿಧಿಯನ್ನು ಸ್ಥಳೀಯ ಜನರು ಕೊಲೆ ಮಾಡಿದರು. ಅವನ ಅನಂತರ ಬಂದ ರಿಚರ್ಡ್ ಜಾಬ್ಸನ್ ಬ್ಯಾರಕುಂಡದ ವರೆಗೂ ಹೋಗಿದ್ದ. 1660ರಲ್ಲಿ ಇಂಗ್ಲೆಂಡಿನ ಜೇಮ್ಸ್ ಎಂಬುವನು ಸ್ಥಳೀಯ ಮುಖ್ಯಸ್ಥನೊಬ್ಬನಿಂದ ನದಿಯೊಳಗಿನ ದ್ವೀಪವೊಂದನ್ನು ಕೊಂಡು ಅಲ್ಲೊಂದು ಕೋಟೆ ಕಟ್ಟಿದ. ಇದು ಅನಂತರ ಫೋರ್ಟ್ ಜೇಮ್ಸ್ ದ್ವೀಪವೆಂದು ಹೆಸರಾಯಿತು. 1661ರಲ್ಲಿ 2ನೆಯ ಚಾರ್ಲ್ಸ್ ದೊರೆ ಸಾಹಸಿಗಳ ಇನ್ನೊಂದು ತಂಡಕ್ಕೆ ಇಲ್ಲಿ ವ್ಯಾಪಾರ ಹಕ್ಕುಗಳನ್ನು ಕೊಟ್ಟ. 1681ರಲ್ಲಿ ಫ್ರೆಂಚರು ಗೋರಿ ಎಂಬಲ್ಲಿದ್ದ ತಮ್ಮ ನೆಲೆಯಿಂದ ಗ್ಯಾಂಬಿಯ ನದಿಯ ಉತ್ತರ ಭಾಗದಲ್ಲಿ ವಿಸ್ತರಿಸಿಕೊಂಡರು. ಅನಂತರದ ನೂರು ವರ್ಷಗಳು ಫ್ರೆಂಚ್ ಮತ್ತು ಬ್ರಿಟಿಷರು ನದಿ ವ್ಯಾಪಾರದ ಮೇಲೆ ಹತೋಟಿ ಸಾಧಿಸಲು ಹೋರಾಡಿದರು. ಯುದ್ಧಗಳಲ್ಲಿ ನಾಲ್ಕು ಸಾರಿ ಫೋರ್ಟ್ ಜೇಮ್ಸ್ ದ್ವೀಪವನ್ನು ಹಿಡಿದುಕೊಂಡಿದ್ದರು. 1713 ಒಪ್ಪಂದದ ಪ್ರಕಾರ

ಅದನ್ನು ಬ್ರಿಟಿಷರಿಗೆ ಬಿಟ್ಟುಕೊಡಬೇಕಾಯಿತು. ಫ್ರೆಂಚರು 1779ರಲ್ಲಿ ಫೋರ್ಟ್ ಜೇಮ್ಸನ್ನು ನಾಶಮಾಡಿದರು. ಆದರೆ 1783ರ ವರ್ಸೇಲ್ಸ್ ಒಪ್ಪಂದದ ಪ್ರಕಾರ ಬ್ರಿಟಿಷರಿಗೆ ಗ್ಯಾಂಬಿಯ ನದಿಯ ಮೇಲಣ ಹಕ್ಕು ಉಳಿಯಿತು. ಬ್ರಿಟಿಷರು ಈಗಿನ ಗ್ಯಾಂಬಿಯ ಮತ್ತು ಸೆನಿಗಾಲ್‌ನ ಕೆಲವು ಪ್ರದೇಶವನ್ನು 1765ರಲ್ಲಿ ನೆಲೆಯಾಗಿ ಮಾಡಿಕೊಂಡು ಸೆನೆಗ್ಯಾಂಬಿಯ ಎಂಬ ಹೆಸರಿನಿಂದ ಕರೆಯುತ್ತಿದ್ದರು. 1783ರಲ್ಲಿ ಬ್ರಿಟಿಷರು ಸೆನಿಗಾಲ್ ಪ್ರದೇಶವನ್ನು ಫ್ರಾನ್ಸ್‌ಗೆ ವಹಿಸಿಕೊಟ್ಟರು.

ಕೋಂಬೋ ಪ್ರದೇಶದ ಮುಖ್ಯಸ್ಥ 1816ರಲ್ಲಿ ಬಂಜುಲ್ ದ್ವೀಪವನ್ನು ಬ್ರಿಟಿಷರಿಗೆ ಕೊಟ್ಟ. ಇದು ಸೇಂಟ್ ಮೇರಿ ದ್ವೀಪವೆಂದು ಹೆಸರಾಯಿತು. ಬ್ರಿಟಿಷರು ಅಲ್ಲಿ ವಸಾಹತು ಕಾರ್ಯದರ್ಶಿಯ ಹೆಸರಿನಲ್ಲಿ ಬ್ಯಾತರ್ಸ್ಟ್ ನಗರವನ್ನು ಸ್ಥಾಪಿಸಿದರು. ಅದು 1821ರಲ್ಲಿ ಸಿಯೆರ ಲಿಯೋನ್ ವಸಾಹತಿಗೆ ಅಧೀನವಾಯಿತು; 1843ರಲ್ಲಿ ಪ್ರತ್ಯೇಕ ವಸಾಹತಾಯಿತು. 1866ರಲ್ಲಿ ಮತ್ತೆ ಪಶ್ಚಿಮ ಆಫ್ರಿಕದ ವಸಾಹತಿನ ಭಾಗವಾಗಿದ್ದು ಮತ್ತೆ 1888ರಲ್ಲಿ ಪ್ರತ್ಯೇಕವಾಯಿತು. ಗ್ಯಾಂಬಿಯ ನದಿಯ ಉತ್ತರದಲ್ಲಿದ್ದ ಫ್ರೆಂಚ್ ಪ್ರದೇಶ ಆಲ್ಬ್ರೆಡ್ 1857ರಲ್ಲಿ ಬ್ರಿಟಿಷರಿಗೆ ಸೇರಿತು.

ಅನಂತರ ಹಲವಾರು ಪ್ರದೇಶಗಳು ಫ್ರೆಂಚರಿಗೂ ಬ್ರಿಟಿಷರಿಗೂ ನಡುವೆ ವಿನಿಮಯವಾದುವು. ಫ್ರೆಂಚರಿಂದ ಬೇರೆ ಪ್ರದೇಶ ಪಡೆದು ಗ್ಯಾಂಬಿಯವನ್ನು ಅವರಿಗೆ ಕೊಡುವ ಬಗ್ಗೆ ಸಂಧಾನಗಳು ನಡೆದಿದ್ದುವು. ಆದರೆ ಅವು ಮುರಿದು ಬಿದ್ದುವು. ಫ್ರೆಂಚರು ಸೆನಿಗಾಲಿನಲ್ಲಿ ತಮ್ಮ ಆಡಳಿತ ವಿಸ್ತರಿಸುತ್ತಿದ್ದರು. ಕೊನೆಗೆ 1889ರ ಒಪ್ಪಂದದ ಪ್ರಕಾರ ಗ್ಯಾಂಬಿಯ ನದಿಯ ಅಕ್ಕಪಕ್ಕಗಳಲ್ಲಿ ಕಿರಿದಾದ ಪ್ರದೇಶ ಬ್ರಿಟಿಷರದಾಗಿ ಉಳಿಯಿತು. ಇದು ಬ್ರಿಟಿಷ್ ಆರಕ್ಷಿತ ಪ್ರದೇಶವಾಯಿತು. 1902ರಲ್ಲಿ ಈಗಿನ ಗ್ಯಾಂಬಿಯ ಬ್ರಿಟಿಷರ ಆಳಿಕೆಗೆ ಒಳಪಟ್ಟಿತು.

ಎರಡನೆಯ ಮಹಾಯುದ್ಧದ (1945) ನಂತರ ಗ್ಯಾಂಬಿಯ ಕ್ರಮಕ್ರಮವಾಗಿ ಸ್ವಾಯತ್ತತೆ ಗಳಿಸಿತು. ಗ್ಯಾಂಬಿಯ ಸ್ವಾತಂತ್ರ್ಯ ಪಡೆದದ್ದು 1963ರಲ್ಲಿ. ಡೇವಿಡ್‌ಜವರ ಮೊದಲ ಪ್ರಧಾನಮಂತ್ರಿಯಾದ. ಸಂಪೂರ್ಣ ಸ್ವಾತಂತ್ರ್ಯವನ್ನು 1965ರ ಫೆಬ್ರವರಿ 18ರಂದು ಪಡೆಯಿತು. 1970ರ ಏಪ್ರಿಲ್ 24ರಂದು ಗಣರಾಜ್ಯವಾಯಿತು. ಡೇವಿಡ್‌ಜವರ ಮೊದಲ ಅಧ್ಯಕ್ಷನಾಗಿ ಚುನಾಯಿತನಾದ. ಇವನ ಸರ್ಕಾರ ರಸ್ತೆಗಳನ್ನು, ನೌಕಯಾನ ಮಾರ್ಗ, ಬಂಜುಲ್ ಬಂದರು ಮತ್ತು ಯನ್‌ಡಮ್ ವಿಮಾನ ನಿಲ್ದಾಣವನ್ನು ಅಭಿವೃದ್ಧಿಪಡಿಸಿತು. ಪ್ರವಾಸೋದ್ಯಮ ತ್ವರಿತವಾಗಿ ಅಭಿವೃದ್ಧಿ ಹೊಂದಿತು. ಹಾಗಾದರೂ ಕ್ಷಾಮ ವ್ಯವಸಾಯೋತ್ಪನ್ನಗಳನ್ನು ಕುಂಠಿತಗೊಳಿಸಿತು. ದೇಶದ ಆರ್ಥಿಕ ಸ್ಥಿತಿಗೆ ಧಕ್ಕೆ ತಂದಿತು.

1982ರಲ್ಲಿ ಗ್ಯಾಂಬಿಯ ಮತ್ತು ಸನಿಗಾಲ್ ಒಕ್ಕೂಟ ರಚಿಸಿಕೊಂಡವು. ಇದನ್ನು ಸೆನೆಗ್ಯಾಂಬಿಯ ಎಂದು ಕರೆದರು. ಈ ಒಕ್ಕೂಟದಿಂದ ಎರಡು ದೇಶಗಳ ಆರ್ಥಿಕಸ್ಥಿತಿ ಬಲಗೊಂಡಿತು. ಎರಡು ದೇಶಗಳ ಸೈನ್ಯಗಳು ಒಂದುಗೂಡಿದವು. ಆದರೆ ಎರಡೂ ದೇಶಗಳ ನಡುವಿನ ವಿವಾದಗಳು 1989ರಲ್ಲಿ ಒಕ್ಕೂಟವನ್ನು ಅಂತ್ಯಗೊಳಿಸಿತು. 1994ರಲ್ಲಿ ಗ್ಯಾಂಬಿಯ ಸೈನ್ಯಾಧಿಕಾರಿಗಳ ಒಂದು ಗುಂಪು ಯಹ್ಯ ಜಮ್ಮೆಹ್ ನಾಯಕತ್ವದಲ್ಲಿ ಜವರ ಆಳಿಕೆಯನ್ನು ಕೊನೆಗೊಳಿಸಿತು. ಆಡಳಿತವನ್ನು ಮಿಲಿಟರಿ ಕೌನ್ಸಿಲಿನ ಮೂಲಕ ನಡೆಸಿದರು. 1996ರ ಆಗಸ್ಟ್‌ನಿಂದ ಹೊಸ ಸಂವಿಧಾನ ಅಳವಡಿಸಿಕೊಂಡರು. ಯಹ್ಯ ಜಮ್ಮೆಹ್ ಅಧ್ಯಕ್ಷ ಚುನಾವಣೆಯಲ್ಲಿ ಜಯಶೀಲನಾದನು. ಚುನಾವಣೆ ಮುಗಿದ ಅನಂತರ ಮಿಲಿಟರಿ ಕೌನ್ಸಿಲ್ ಅನ್ನು ವಿಸರ್ಜಿಸಿದನು. 1997ರಲ್ಲಿ ನ್ಯಾಷನಲ್ ಅಸೆಂಬ್ಲಿ ಚುನಾವಣೆ ನಡೆಯಿತು. 2012ರಲ್ಲೂ ಯಹ್ಯ ಜಮ್ಮೆಹ್ ಅಧ್ಯಕ್ಷ.

**ಆಡಳಿತ:** ಗ್ಯಾಂಬಿಯದ ಪ್ರತಿನಿಧಿಸಭೆಯಲ್ಲಿ ಐದು ವರ್ಷಗಳ ಅವಧಿಗೆ ಚುನಾಯಿತರಾದ 32 ಸದಸ್ಯರಿರುತ್ತಾರೆ. 8 ಮಂದಿ ವಿಶೇಷ ಸದಸ್ಯರು. ಇವರಲ್ಲಿ ನಾಲ್ವರು ಬಣನಾಯಕರು, 3 ಮಂದಿ ನಾಮನಿರ್ದೇಶಿತ ಸದಸ್ಯರು ಮತ್ತು ಅಟಾರ್ನಿ ಜನರಲ್ ರಾಷ್ಟ್ರಾಧ್ಯಕ್ಷ ಅದರಿಂದ ಚುನಾಯಿತನಾಗುತ್ತಾನೆ. ಆತ ಒಬ್ಬ ಉಪರಾಷ್ಟ್ರಾಧ್ಯಕ್ಷನನ್ನು ನೇಮಿಸುತ್ತಾನೆ. ಇವನು ಪ್ರಧಾನಮಂತ್ರಿಯ ಅಧಿಕಾರಗಳನ್ನು ಹೊಂದಿರುತ್ತಾನೆ.

ಇಲ್ಲಿಯ ನ್ಯಾಯಪದ್ಧತಿ ಬ್ರಿಟಿಷ್ ಮಾದರಿಯದು. ಗ್ಯಾಂಬಿಯದಲ್ಲಿ ಒಂದು ಉಚ್ಚತಮ ನ್ಯಾಯಾಲಯ, ಅಪೀಲು ಕೋರ್ಟು ಮತ್ತು ಅಧೀನ ನ್ಯಾಯಾಲಯಗಳಿವೆ. ಮಹಮದೀಯ ಪ್ರಜೆಗಳಿಗಾಗಿ ಮುಸ್ಲಿಂ ನ್ಯಾಯಾಲಯಗಳುಂಟು.

**ಜನಜೀವನ:** ಗ್ಯಾಂಬಿಯದಲ್ಲಿ ಆಫ್ರಿಕದ ಹಲವು ಬಣಗಳಿಗೆ ಸೇರಿದ ಜನರಿದ್ದಾರೆ. ಅವುಗಳಲ್ಲಿ ಬಹು ಮುಖ್ಯ ಬಣ ಮ್ಯಾಂಡಿಂಗೋ. ಪೂರ್ವಭಾಗದಲ್ಲಿ ಫೂಲಾ ಬಣದವರು ಹೆಚ್ಚು. ವೋಲಾಫ್ ಜನ ಬ್ಯಾತರ್ಸ್ಟ್ ನಗರದಲ್ಲಿ ಮತ್ತು ಪಶ್ಚಿಮ ಭಾಗದಲ್ಲಿ ನೆಲೆಸಿದ್ದಾರೆ. ಸೆರಾಹುಲಿಗಳು ಮುಸ್ಲಿಮರು. ಮುಖ್ಯವಾಗಿ ವ್ಯಾಪಾರಿಗಳೂ ಕೃಷಿಕರೂ ಆದ ಇವರು ದೇಶದ ಪೂರ್ವಭಾಗದಲ್ಲಿ ಹೆಚ್ಚಾಗಿರುವರು. ಜೋಲುಗಳೂ ಬಹುತೇಕ ಕೃಷಿಕರು. ಇವರೂ ಇಸ್ಲಾಮಿಗೆ ಪರಿವರ್ತನೆ ಹೊಂದಿದವರು. ಬ್ಯಾತರ್ಸ್ಟ್ ನಗರದಲ್ಲಿ ವೋಲಾಫ್ ಜನ ಹೆಚ್ಚಾಗಿದ್ದರೂ ಗುಲಾಮರಾಗಿದ್ದು ಸ್ವತಂತ್ರರಾದರವರ ವಂಶಕ್ಕೆ ಸೇರಿದ ಆಕು ಜನ ಅಲ್ಲಿಯ ಆರ್ಥಿಕ ಕ್ಷೇತ್ರದಲ್ಲಿ ಪ್ರಮುಖ ಸ್ಥಾನ ಹೊಂದಿದ್ದಾರೆ. ಸೆನಿಗಾಲ್, ಮಾಲಿ, ಗಿನಿಯ ಮತ್ತು ಮಾರಿಟಾನಿಯಗಳಿಂದ ವಲಸೆ ಬಂದ ಜನಕ್ಕೆ ಗ್ಯಾಂಬಿಯ ಆಶ್ರಯ ನೀಡಿದೆ.

ಇಂಗ್ಲಿಷ್ ಇಲ್ಲಿಯ ಸರ್ಕಾರದ ಭಾಷೆ. ಮಲಿಂಕ ಮತ್ತು ವೋಲೋಫ್ ಪ್ರಮುಖ ಭಾಷೆಗಳು.

**ಧರ್ಮ:** ಗ್ಯಾಂಬಿಯದಲ್ಲಿ 12 ನೆಯ ಶತಮಾನದಲ್ಲಿ ಇಸ್ಲಾಮಿನ ಪ್ರಚಾರವಾಯಿತು. ಇಲ್ಲಿಯ ಜನರಲ್ಲಿ ಶೇ. ಸು.90 ಮಂದಿ ಮುಸ್ಲಿಮರು, ಶೇ. 8 ಕ್ರೈಸ್ತರು. ಉಳಿದವರು ಸರ್ವಚೇತನ ಪಂಥದವರು.

**ಶಿಕ್ಷಣ:** ಗ್ಯಾಂಬಿಯದಲ್ಲಿ ಪ್ರಾಥಮಿಕ ಶಾಲೆಗಳು, ಸೆಕೆಂಡರಿ ಶಿಕ್ಷಣ ಶಾಲೆಗಳು ಮತ್ತು ವೃತ್ತಿ ಶಿಕ್ಷಣ ಶಾಲೆಗಳಿವೆ. ಯುನ್‌ಡಂ ನಗರದಲ್ಲಿ ಶಿಕ್ಷಕರ ತರಬೇತು ಸಂಸ್ಥೆ ಇದೆ. ಅರಬ್ಬೀ ಶಿಕ್ಷಣ ನೀಡುವ ಶಾಲೆಗಳು ಹಲವು ಇವೆ.

**ವ್ಯವಸಾಯ, ವಾಣಿಜ್ಯ, ಕೈಗಾರಿಕೆ:** ಉಷ್ಣವಲಯದ ಒಣಬೇಸಾಯದ ಸಸ್ಯಗಳನ್ನು ಇಲ್ಲಿ ಹೆಚ್ಚಾಗಿ ಬೆಳೆಸುತ್ತಾರೆ. ನೆಲಗಡಲೆ ಇಲ್ಲಿಯ ಮುಖ್ಯ ವಾಣಿಜ್ಯ ಬೆಳೆ. ಸಾವೆ, ಮೆಕ್ಕೆ ಜೋಳಗಳೂ ಅಧಿಕವಾಗಿ ಬೆಳೆಯುತ್ತವೆ. ಬತ್ತವನ್ನು ನದೀ ಪ್ರದೇಶದಲ್ಲಿ ಬೆಳೆಯುತ್ತಾರೆ. ಪಶ್ಚಿಮ ಭಾಗದಲ್ಲಿ ಮಾವು, ಕಿತ್ತಳೆ, ಬಾಳೆ, ನಿಂಬೆ ಬೆಳೆಯುತ್ತದೆ. ಅಟ್ಲಾಂಟಿಕ್ ತೀರದಲ್ಲಿ ಮೀನುಗಾರಿಕೆ ಅಭಿವೃದ್ಧಿಯಾಗಿದೆ. ಇಲ್ಲಿಂದ ರಫ್ತಾಗುವ ವಸ್ತುಗಳು ನೆಲಗಡಲೆ, ಕೊಬ್ಬರಿ, ಮತ್ತು ಒಣ ಮೀನು. ಯಂತ್ರೋಪಕರಣ, ಮೋಟಾರು ವಾಹನ, ಪೆಟ್ರೋಲ್, ಬಟ್ಟೆ ಔಷಧ, ಸಿಮೆಂಟ್ ಇವು ಆಮದುಗಳು.

**ಸಾರಿಗೆ ಸಂಪರ್ಕ:** ಗ್ಯಾಂಬಿಯದಲ್ಲಿ ಸರ್ವಋತು ರಸ್ತೆಗಳು ಹೆಚ್ಚಾಗಿ ಇಲ್ಲ. ಫ್ರೆಂಚ್ ಸರ್ಕಾರ ನಿರ್ಮಿಸಿದ ಗ್ಯಾಂಬಿಯಾಂತರ ರಸ್ತೆ ಬಲಿಂಗೊ ಮತ್ತು ಯೆಲಿಟೆಂಡ ಮೂಲಕ ಹೋಗುತ್ತದೆ. ಇದರಿಂದ ಸೆನಿಗಾಲ್‌ನಿಂದ ಕ್ಯಾಸಮಾನ್ಸ್ ನದಿಯವರೆಗೆ ಸಾರಿಗೆ ಸಂಪರ್ಕ ಏರ್ಪಟ್ಟಿದೆ. ಕಿರುದಾರಿಗಳಲ್ಲದೆ 1168 ಕಿಮೀ ಉದ್ದದ ರಸ್ತೆಗಳಿವೆ. ನೀರಿನಲ್ಲಿ 26' ಇಳಿದು ಚಲಿಸುವ ಸಮುದ್ರನೌಕೆಗಳು ಗ್ಯಾಂಬಿಯ ಅಳಿವೆಯಿಂದ ಬ್ಯಾತರ್ಸ್ಟ್ ವರೆಗೂ 17' ಇಳಿದು ಸಂಚರಿಸುವ ಹಡಗುಗಳು ಅಲ್ಲಿಂದ ಮುಂದಕ್ಕೆ ಕುಂಟೌರ್‌ವರೆಗೂ ಯಾನಮಾಡುತ್ತವೆ. ಬ್ಯಾತರ್ಸ್ಟ್ ಮುಖ್ಯಬಂದರು. ಇದು ಸೇಂಟ್ ಮೇರಿ ದ್ವೀಪದ ಮೇಲಿದೆ. ನೆಲಗಡಲೆ ಸಾಗುವುದು ಕುಂಟೌರ್, ಬಲಿಂಗೊ, ಕೌರ್ ಬಂದರುಗಳಿಂದ. ಇತರ ನದೀ ಬಂದರುಗಳು ಜಾರ್ಜ್‌ಟೌನ್ ಮತ್ತು ಫಟಾಟೊ. ಯನ್‌ಡಂನಲ್ಲಿ ವಿಮಾನ ನಿಲ್ದಾಣವಿದೆ. ಲಂಡನ್, ಲಿಸ್ಬನ್ ಮತ್ತು ಪಶ್ಚಿಮ ಆಫ್ರಿಕದ ಪಟ್ಟಣಗಳಿಗೆ ವಿಮಾನಸಂಪರ್ಕ ಉಂಟು. (ವಿ.ಜಿ.ಕೆ.; ಟಿ.ಇ.ಎಚ್.)

**ಗ್ಯಾಂಬಿಯ ನದಿ :** ಪಶ್ಚಿಮ ಆಫ್ರಿಕದ ಒಂದು ನದಿ. ಗಿನಿ ಗಣರಾಜ್ಯದ ಫೂಟ ಜಲಾನ್ ಪ್ರಸ್ಥಭೂಮಿಯಲ್ಲಿ ಸಮುದ್ರಕ್ಕೆ ಕೇವಲ 240 ಕಿಮೀ ದೂರದಲ್ಲಿ ಹುಟ್ಟಿ, ಮೊದಲು ಈಶಾನ್ಯಾಭಿಮುಖವಾಗೂ ಅನಂತರ ಪಶ್ಚಿಮಾಭಿಮುಖವಾಗೂ, ಒಟ್ಟು ಸು. 1120 ಕಿಮೀ ದೂರ ಹರಿದು ಅಟ್ಲಾಂಟಿಕ್ ಸಾಗರವನ್ನು ಸೇರುತ್ತದೆ. ಇದು ಪಶ್ಚಿಮದ ಕಡೆಗೆ ತಿರುಗುವುದು ನೆರಿಕೊ ನದಿಯೊಂದಿಗೆ ಸೇರುವೆಡೆಯಲ್ಲಿ. ಇದರ ಮುಖ್ಯ ಉಪನದಿ ಗ್ರೇ. ಟೆಂಡಾ ಬೆಟ್ಟಗಳಿಂದ ಉತ್ತರಕ್ಕೆ ಹರಿದು ಗ್ಯಾಂಬಿಯ ರಾಜ್ಯದ ಎಲ್ಲೆಗೆ 40 ಕಿಮೀ ದೂರದಲ್ಲಿ ಗ್ಯಾಂಬಿಯ ನದಿಯನ್ನು ಸೇರುತ್ತದೆ. ರಾಜ್ಯದ ಗಡಿಯಲ್ಲಿ ವೇಗವಾಗಿ ಇಳಿಯುತ್ತದೆ. ಜೂನ್ ಮತ್ತು ನವೆಂಬರ್ ತಿಂಗಳುಗಳ ಮಧ್ಯೆ ನದಿಯಲ್ಲಿ ಪ್ರವಾಹ. ನದಿ ಸಮುದ್ರ ಸೇರುವೆಡೆಯಿಂದ 150 ಕಿಮೀ ದೂರದಲ್ಲಿಯ ಎಲಿಫೆಂಟ್ ದ್ವೀಪದ ಬಳಿ ಮತ್ತೆ ಪಶ್ಚಿಮದ ಕಡೆಗೆ ತಿರುಗುತ್ತದೆ. ಅಲ್ಲಿ ಸಾಮಾನ್ಯವಾಗಿ ನದಿಯ ನೀರು ಉಪ್ಪು. ಮಳೆಗಾಲದಲ್ಲಿ ಸಮುದ್ರದಿಂದ 130 ಕಿಮೀ ದೂರದ ಬಲಿಂಗೊ ವರೆಗೆ ನೀರು ಉಪ್ಪಾಗಿರುತ್ತದೆ. ಕೆಲವು ವೇಳೆ 240 ಕಿಮೀ ದೂರದ ಕುನ್ತಾರ್‌ವರೆಗೂ ನದಿ ಉಪ್ಪು ನೀರಿನಿಂದ ಕೂಡಿರುವುದುಂಟು. ನದಿಯ ಎರಡು ದಂಡೆಗಳನ್ನೂ ಗುಲ್ಮ ವೃಕ್ಷಗಳು ಆವರಿಸಿಕೊಂಡಿವೆ. ಇಲ್ಲಿ ನದಿಯ ಪಾತ್ರ ಹೆಚ್ಚು ಅಗಲ. ಎಲಿಫೆಂಟ್ ದ್ವೀಪದ ಬಳಿಯಿಂದಲೇ ನದಿಯ ಅಳಿವೆ ಪ್ರಾರಂಭವಾಗುತ್ತದೆನ್ನಬಹುದು. ಅಲ್ಲಿ 1.6 ಕಿಮೀ ಅಗಲವಿರುವ ನದಿ, ಬ್ಯಾತರ್ಸ್ಟ್ ರೇವಿನ ಬಳಿ 11.2 ಕಿಮೀ ಅಗಲವಾಗಿದೆ. ಆದರೆ ಬ್ಯಾತರ್ಸ್ಟ್ ಅನ್ನು ಒಳಗೊಂಡಿರುವ ಸೇಂಟ್ ಮೇರಿ ದ್ವೀಪದ ದಕ್ಷಿಣ ಚಾಚಿಗೂ ಅದರ ಎದುರಿಗಿನ ದಡಕ್ಕೂ ನಡುವೆ ನದಿಯ ಅಗಲ 4 ಕಿಮೀ. ಅಳಿವೆಯ ಕೆಳಭಾಗದಲ್ಲಿ ಪಾತ್ರದ ನಡುವೆ 1 ಕಿಮೀ ಅಗಲದ ನಾಲೆಯಲ್ಲಿ ಹಡಗು ಸಂಚಾರಕ್ಕೆ ಸೌಲಭ್ಯವುಂಟು. ಆದರೆ ಬ್ಯಾತರ್ಸ್ಟ್‌ಗೂ ಸಮುದ್ರಕ್ಕೂ ನಡುವೆ ಎರಡು ಎಡೆಗಳಲ್ಲಿ ನದಿ ತೀವ್ರವಾಗಿ ತಿರುಗುತ್ತದೆ. ನದೀಮುಖಕ್ಕೆ ಅಡ್ಡಲಾಗಿ ಇರುವ ಅಡಚಣೆಯಿಂದಾಗಿ ಹಡಗಿನ ಪ್ರವೇಶಕ್ಕೆ 26 ಅಡಿ ಅಗಲದಷ್ಟು ಮಾತ್ರ ಅವಕಾಶವುಂಟು. ಸಣ್ಣ ಹಡಗುಗಳು ಇದರ ಮೂಲಕ ಸ್ವಲ್ಪ ದೂರದವರೆಗೆ ಹೋಗಿ ಬರಬಹುದು.

ಟಾಲೆಮಿಗೂ ಅರಬ್ ಭೂಗೋಳಶಾಸ್ತ್ರಜ್ಞರಿಗೂ ಗ್ಯಾಂಬಿಯ ನದಿ ಗೊತ್ತಿತ್ತು. 1291 ರಲ್ಲಿ ಇಟಲಿಯ ಜಿನೋವ ನಗರದ ನಾವಿಕರು ಗ್ಯಾಂಬಿಯ ನದಿಯ ವರೆಗೂ

ಬಂದಿದ್ದಿರಬಹುದು. ಪೋರ್ಚುಗೀಸರಂತೂ ಇದನ್ನು ಕಂಡದ್ದು ನಿಜ. ಆದರೆ ಗ್ಯಾಂಬಿಯ ನದಿಯನ್ನು ಮೊದಲು ಪರಿಶೋಧಿಸಿದವನು (1455) ವೆನಿಸಿನ ಅಲ್ ವಿಸ್ ಕ ಡ ಮೊಸ್ತೊ. ಅನಂತರ ಒಳನಾಡನ್ನು ಪರಿಶೋಧಿಸಿದವರು ಗ್ಯಾಂಬಿಯದ ಮೂಲಕ ಹೋಗುತ್ತಿದ್ದರು. ಇವರಲ್ಲಿ ಪ್ರಮುಖನಾದವನು ಮುಂಗೊ ಪಾರ್ಕ್. ಈತ 1795 ಮತ್ತು 1805 ರಲ್ಲಿ ಕೈಗೊಂಡ ಎರಡು ಪ್ರವಾಸಗಳನ್ನೂ ಈ ನದಿಯಿಂದಲೇ ಆರಂಭಿಸಿದ. ಗ್ಯಾಂಬಿಯದ ಉಗಮ ಸ್ಥಳವನ್ನು ಪತ್ತೆ ಹಚ್ಚಿದವನು (1818) ಗ್ಯಾಸ್ಪರ್ಡ್ ಮೋಲೀನ್ ಎಂಬ ಫ್ರೆಂಚ್ ಪ್ರಜೆ. ನದಿಯ ಮಧ್ಯಭಾಗವನ್ನು ಪರಿಶೋಧಿಸಿದವರು ಆರ್. ಜೆ. ಮ್ಯಾಕ್‌ಡಾನೆಲ್ (1851) ಮತ್ತು ವಿ. ಎಸ್. ಗೌಲ್ಡ್ಸ್‌ಬರಿ (1881). ಮ್ಯಾಕ್ ಡಾನೆಲ್ ಅದನ್ನು ಪರಿಶೋಧಿಸಿದ ಕಾಲದಲ್ಲಿ ಆ ವಸಾಹತಿನ ರಾಜ್ಯಪಾಲನಾಗಿದ್ದ. (ಬಿ.ಎಸ್‌ಎಚ್.)

**ಗ್ಯಾಂಬೆಟ, ಲಿಯಾನ್ :** 1838–82. ಫ್ರೆಂಚ್ ರಾಜಕಾರಣಿ; ತೃತೀಯ ಗಣರಾಜ್ಯದ ಪ್ರಜಾಪ್ರಭುತ್ವದ ಸ್ಥಾಪಕರಲ್ಲೊಬ್ಬ. ಜನನ 1838ರ ಏಪ್ರಿಲ್ 2ರಂದು, ಕೇಆರ್‌ನಲ್ಲಿ. ತಂದೆ ಜೋಸೆಫ್ ಗ್ಯಾಂಬೆಟ, ತಾಯಿ ಒರಾಸಿ ಮ್ಯಾಸಾಬಿ. ಪ್ಯಾರಿಸಿನಲ್ಲಿ ನ್ಯಾಯಶಾಸ್ತ್ರ ವ್ಯಾಸಂಗ ಮಾಡಿ ಅಲ್ಲೇ ನ್ಯಾಯವಾದಿ ವೃತ್ತಿ ಅವಲಂಬಿಸಿದ. 3ನೆಯ ನೆಪೋಲಿಯನನ ನೀತಿಗಳಿಗೆ ಆಗ (1860) ಪ್ರಬಲವಾದ ವಿರೋಧವಿತ್ತು. ಈ ವಿರೋಧ ಪ್ಯಾರಿಸಿನಲ್ಲಿ ಅತ್ಯಂತ ತೀವ್ರವಾಗಿತ್ತು. ಗ್ಯಾಂಬೆಟನಿಗೆ ರಾಜಕೀಯ ಪತ್ರಿಕೋದ್ಯಮದಲ್ಲೂ ರಿಪಬ್ಲಿಕನ್ ಪಕ್ಷದ ಚಟುವಟಿಕೆಗಳಲ್ಲೂ ಆಸಕ್ತಿ ಬೆಳೆಯಿತು.

ಸರ್ಕಾರವಿರೋಧಿ ಚಟುವಟಿಕೆಯ ಆಪಾದನೆ ಹೊರಿಸಿ ವಿಚಾರಣೆಗೆ ಗುರಿಪಡಿಸಲಾಗುತ್ತಿದ್ದ ರಿಪಬ್ಲಿಕನ್ ರಾಜಕಾರಣಿಗಳ ಪರವಾಗಿ ವಾದಿಸುತ್ತಿದ್ದ ತರುಣ ನ್ಯಾಯವಾದಿಗಳಲ್ಲಿ ಗ್ಯಾಂಬೆಟನೂ ಒಬ್ಬನಾಗಿದ್ದ. ಆ ಸಮಯದಲ್ಲಿ ಸರ್ಕಾರವನ್ನು ತೀವ್ರವಾಗಿ ಟೀಕಿಸಲು ಅವಕಾಶ ದೊರಕುತ್ತಿತ್ತು. 1851ರ ಡಿಸೆಂಬರಿನ ಕ್ಷಿಪ್ರಾಕ್ರಮಣವನ್ನು ವಿರೋಧಿಸಿ ಹುತಾತ್ಮನಾದವನೊಬ್ಬನ ಸ್ಮಾರಕ ನಿರ್ಮಿಸಲೆತ್ನಿಸಿದ ಪತ್ರಿಕೋದ್ಯಮಿಗಳ ವಿರುದ್ಧ ಹೂಡಲಾದ ಮೊಕದ್ದಮೆಯಲ್ಲಿ ಆಪಾದಿತರ ಪರವಾಗಿ ವಾದಿಸಿದವರಲ್ಲಿ ಗ್ಯಾಂಬೆಟನೂ ಸೇರಿದ್ದ. ಗ್ಯಾಂಬೆಟ ಮಾಡಿದ ಪುಟ್ಟ ಕಟು ಭಾಷಣ ಪತ್ರಿಕೆಗಳಲ್ಲಿ ಪ್ರಕಟಗೊಂಡು ಈತನಿಗೆ ಪ್ರಸಿದ್ಧಿ ತಂದಿತು. 1869ರ ಚುನಾವಣೆಗಳಲ್ಲಿ ಇವನು ಪ್ಯಾರಿಸ್ ಮತ್ತು ಮಾರ್ಸೇಲ್ಸ್ ಕ್ಷೇತ್ರಗಳಲ್ಲಿ ಸ್ಪರ್ಧಿಸಿ ಎರಡರಲ್ಲೂ ಗೆದ್ದ. ಇವನು ಮಾರ್ಸೇಲ್ಸ್ ಪ್ರತಿನಿಧಿಯಾಗಿರಲು ತೀರ್ಮಾನಿಸಿದನಾದರೂ ಪ್ಯಾರಿಸಿನ ಕಾರ್ಮಿಕ ಕ್ಷೇತ್ರದ ಶಾಶ್ವತ ಪ್ರೀತಿಯನ್ನೂ ಗಳಿಸಿಕೊಂಡ.

ವಿಧಾನಸಭೆಯ ಪ್ರತಿನಿಧಿಯಾಗಿ ಗ್ಯಾಂಬೆಟ ತೀವ್ರಗಾಮಿ ತತ್ತ್ವಗಳನ್ನು ಪ್ರತಿಪಾದಿಸಿದ. ದ್ವಿತೀಯ ಚಕ್ರಾಧಿಪತ್ಯದ ರೀತಿನೀತಿಗಳನ್ನು ವಿರೋಧಿಸುವವರ ನಾಯಕನಾದ. 1870ರಲ್ಲಿ ಫ್ರಾನ್ಸ್ ಜರ್ಮನಿಗಳ ನಡುವೆ ಆರಂಭವಾದ ಯುದ್ಧಕ್ಕೆ ಕಾರಣವಾದ ಕ್ರಮಗಳ ಬಗ್ಗೆ ಇವನ ತೀವ್ರ ವಿರೋಧವಿತ್ತು. ಯುದ್ಧವಂತೂ ಆರಂಭವಾಗಿರುವುದರಿಂದ ಅದನ್ನು ಯಶಸ್ವಿಯಾಗಿ ಕೊನೆಗೊಳಿಸಬೇಕೆಂಬುದು ಇವನ ವಾದವಾಗಿತ್ತು. ಆದರೆ ಯುದ್ಧದಲ್ಲಿ ಫ್ರಾನ್ಸ್ ಪರಾಜಯದ ಹಾದಿ ಹಿಡಿದಿದ್ದ ವಾರ್ತೆ ಪ್ಯಾರಿಸನ್ನು ತಲುಪಿತು. ಪ್ಯಾರಿಸಿನ ರಕ್ಷಣೆಗಾಗಿ ಫ್ರೆಂಚ್ ಪ್ರಾಂತಗಳ ಜನರನ್ನು ಹುರಿದುಂಬಿಸಿ, ಜರ್ಮನ್ ಆಕ್ರಮಣದಿಂದ ದೂರವಾಗಿದ್ದ ಸ್ಥಳಗಳಲ್ಲಿ ಹೊಸ ಸೇನೆ ರೂಪಿಸುವುದಕ್ಕೆ ಇವನು ಪ್ರಯತ್ನಿಸಿದ. ಫ್ರಾನ್ಸಿನ ರಾಜಧಾನಿಯನ್ನು ಜರ್ಮನ್ ಸೇನೆ ಮುತ್ತಿದಾಗ ಗ್ಯಾಂಬೆಟ ಬಲೂನೊಂದರಲ್ಲಿ ಕುಳಿತು ಜರ್ಮನ್ ಸೈನ್ಯಸಾಲಿನ ಮೇಲೆ ತೇಲಿಹೋಗಿ ಏಮಿಯೆನ್ಸ್ ತಲುಪಿ, ಅಲ್ಲಿಂದ ಟೂರ್ ಸೇರಿ, ಅನಾಕ್ರಮಿತ ಫ್ರಾನ್ಸಿನ ಆಡಳಿತದ ನಾಯಕತ್ವ ವಹಿಸಿ ಕೊನೆಯವರೆಗೂ ಹೋರಾಟ ಮುಂದುವರಿಸಲು ಕಂಕಣಬದ್ಧನಾದ. ಆದರೂ 1871ರ ಜನವರಿ 28 ರಂದು ಶಾಂತಿ ಕೌಲಿಗೆ ಸಹಿ ಬಿತ್ತು. ಅದಕ್ಕೆ ಒಪ್ಪಿಗೆ ನೀಡಬೇಕಾಗಿದ್ದ ಹೊಸ ರಾಷ್ಟ್ರೀಯ ಸಭೆಗೆ ನಡೆದ ಚುನಾವಣೆಯಲ್ಲಿ ಗ್ಯಾಂಬೆಟ ಒಂಬತ್ತು ಕ್ಷೇತ್ರಗಳಿಂದ ಸ್ಪರ್ಧಿಸಿ ಗೆದ್ದ. ಸಭೆಯಲ್ಲಿ ಬಹುಮತೀಯರಾಗಿದ್ದ ರಾಜತ್ವವಾದಿಗಳು ಕೌಲಿಗೆ ಒಪ್ಪಿಗೆ ನೀಡಿದರು. ಕೌಲಿನ ಪ್ರಕಾರ ಆಲ್ಸ್ಯಾಸ್–ಲರೇನ್ ಜರ್ಮನಿಗೆ ಸೇರಿದ್ದರಿಂದ ಆಲ್ಸ್ಯಾಸ್ ವಿಭಾಗದ ಕ್ಷೇತ್ರದ ಪ್ರಾತಿನಿಧ್ಯ ಉಳಿಸಿಕೊಂಡಿದ್ದ ಗ್ಯಾಂಬೆಟನಿಗೆ ಸದಸ್ಯತ್ವ ಹೋಯಿತು. ಅನಂತರ ನಡೆದ ಉಪಚುನಾವಣೆಗಳಲ್ಲಿ ಗ್ಯಾಂಬೆಟ ಮತ್ತೆ ಗೆದ್ದ. ಈತನ ಕೀರ್ತಿ ಪ್ರತಿಷ್ಠೆಗಳು ಹೆಚ್ಚಿದವು.

ಮೂರನೆಯ ಗಣರಾಜ್ಯದ ಸ್ಥಾಪನೆಗಾಗಿ ಗ್ಯಾಂಬೆಟ ಬಹುವಾಗಿ ಶ್ರಮಿಸಿದ. ಇವನ ಪ್ರಯತ್ನಗಳಿಂದಾಗಿ ಪ್ರಜಾಪ್ರಭುತ್ವ ಸಂಸ್ಥೆಗಳು ಪುಷ್ಟಿಗೊಂಡವು. ರಿಪಬ್ಲಿಕನ್ ಒಕ್ಕೂಟ ಪ್ರಬಲವಾಯಿತು. 1876ರಲ್ಲಿ ನಡೆದ ಚುನಾವಣೆಗಳಲ್ಲಿ ರಿಪಬ್ಲಿಕನರ ಕೈ ಮೇಲಾಯಿತು. ಆದರೂ 1879ರಲ್ಲಿ ನಡೆದ ಚುನಾವಣೆಗಳಲ್ಲಿ ಗ್ಯಾಂಬೆಟನ ಪಕ್ಷವನ್ನು ಸರಿಗಟ್ಟುವ ಬೇರೆ ಪಕ್ಷ ಇರಲಿಲ್ಲ. ರಿಪಬ್ಲಿಕನ್ ಗಣರಾಜ್ಯ ಸರ್ಕಾರ ಸ್ಥಾಪಿತವಾಯಿತು. ಗ್ಯಾಂಬೆಟ ಪ್ರತಿನಿಧಿಗಳ ಸಭೆಯ (ಚೇಂಬರ್ ಆಫ್ ಡೆಪ್ಯೂಟೀಸ್) ಅಧ್ಯಕ್ಷನಾದ. 1881 ರಲ್ಲಿ ಸರ್ಕಾರ ರಚಿಸುವ ಅವಕಾಶ ಇವನಿಗೆ ಒದಗಿ ಬಂತು. ಆದರೆ ಗ್ಯಾಂಬೆಟ ಹಿಂದೆ ಬಯಸಿದ್ದಂಥ ಬಲಿಷ್ಠ ಸರ್ಕಾರ ಆದಾಗಲಿಲ್ಲ. ಸಂವಿಧಾನಪರಿಷ್ಕರಣ ಕಾರ್ಯದಲ್ಲಿ ಅದು ಅತಿಯಾಗಿ ನಿರತವಾಯಿತು. ಇವನು ಆಶಿಸಿದ್ದ ಸುಧಾರಣೆಗಳು ಪೂರೈಸಲಿಲ್ಲ. 1882 ರಲ್ಲಿ ಆ ಸರ್ಕಾರ ಪತನ ಹೊಂದಿತು. ಆ ವರ್ಷದ ಡಿಸೆಂಬರ್ 31 ರಂದು ಗ್ಯಾಂಬೆಟ ತೀರಿಕೊಂಡ. *

ಗ್ಯಾಂಬೆಟ ಅಧಿಕಾರದಲ್ಲಿದ್ದಾಗಿಗಿಂತ ವಿರೋಧಶಿಬಿರದಲ್ಲಿದ್ದಾಗಲೇ ಹೆಚ್ಚು ಯಶಸ್ವಿಯಾಗಿದ್ದನೆಂದು ಭಾವಿಸಲಾಗಿದೆ. ಪಕ್ಷ ಸಿದ್ಧಾಂತಗಳಿಗಿಂತ ರಾಷ್ಟ್ರೈಕ್ಯಕ್ಕೆ ಹೆಚ್ಚಿನ ಬೆಲೆ ಕೊಟ್ಟು ಗ್ಯಾಂಬೆಟ ತನ್ನ ವಿರೋಧಿಗಳ ಒತ್ತಡಕ್ಕೆ ಹಲವು ಸಾರಿ ಮಣಿದ. ಇದರಿಂದ ಇವನನ್ನು ಸಮಯಸಾಧಕನೆಂದು ಹಲವರು ತಪ್ಪಾಗಿ ತಿಳಿದುಕೊಂಡಿದ್ದರು. ಇವನ ಯಶಸ್ಸಿನ ಫಲವೆಂದರೆ ಫ್ರಾನ್ಸಿನ ಸಂಸದೀಯ ಪ್ರಜಾಪ್ರಭುತ್ವ. ದುರ್ಬಲ ಪಕ್ಷ ವ್ಯವಸ್ಥೆ ಗ್ಯಾಂಬೆಟನ ಸೋಲಿನ ಪರಿಣಾಮ. (ಬಿ.ಎಸ್.ಎ.)

**ಗ್ಯಾಡೊಲಿನ್, ಯೋಹಾನ್ :** 1760–1852. ಫಿನ್ಲೆಂಡಿನ ರಸಾಯನ ವಿಜ್ಞಾನಿ. ಅಬೋನಲ್ಲಿ 1760ರ ಜೂನ್ 5 ರಂದು ಜನನ. ಅಬೊ ಮತ್ತು ಉಪ್ಸಲಾ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾಭ್ಯಾಸ. ರಸಾಯನಶಾಸ್ತ್ರವನ್ನು ಟಾರ್ವನ್ ಒಲೊಫ್ ಬರ್ಗ್‌ಮನ್ ಎಂಬಾತನಲ್ಲಿ ಅಭ್ಯಾಸ ಮಾಡಿ ಬಳಿಕ ಅಬೊ ವಿಶ್ವವಿದ್ಯಾಲಯದಲ್ಲಿ ರಸಾಯನವಿಜ್ಞಾನದ ಪ್ರಾಧ್ಯಾಪಕನಾಗಿ 1797 ರಿಂದ 1822 ರವರೆಗೆ ಸೇವೆ ಸಲ್ಲಿಸಿದ. ಲೋಹ ಮತ್ತು ಖನಿಜಗಳ ಸಂಶೋಧನೆ ಈತನ ಪ್ರಮುಖಾಸಕ್ತಿ. ಸ್ಟಾಕ್‌ಹೋಮ್ ಬಳಿಯ ಇಟರ್ಬಿಯಲ್ಲಿ ದೊರೆತ (1794) ಒಂದು ಗಟ್ಟಿಯಾದ ಕಪ್ಪು ಕಲ್ಲಿನಲ್ಲಿ ವಿರಳ ಭಸ್ಮಧಾತುಗಳನ್ನು ಕಂಡುಹಿಡಿದ ಕೀರ್ತಿ ಈತನದು. ಇವುಗಳ ಪೈಕಿ ಈತ ಆವಿಷ್ಕರಿಸಿದ ಲೋಹಕ್ಕೆ ಇಟ್ರಿಯಮ್ ಎಂಬ ಹೆಸರಿಟ್ಟ. ಈ ಲೋಹಗಳ ಖನಿಜಕ್ಕೆ ಗ್ಯಾಡೊಲಿನ್ನನ ಗೌರವಾರ್ಥವಾಗಿ ಇಂದು ಗ್ಯಾಡೊಲಿನೈಟ್ ಎಂದೇ ಹೆಸರಾಗಿದೆ. ಗ್ಯಾಡೊಲಿನ್ ವಿರಳ ಭಸ್ಮಧಾತುಗಳ ಬಗ್ಗೆ ಹೆಚ್ಚು ಸಂಶೋಧನೆ ಮಾಡಿ ಹೆಸರು ಪಡೆದರೂ ಅವನು ರಸಾಯನಶಾಸ್ತ್ರದ ಇತರ ಭಾಗಗಳಾದ ಸಂಯೋಗ ದ್ರವ್ಯಸಂಬಂಧತೆ (ಸ್ಟಾಯ್‌ಕಿಯೊಮೆಟ್ರಿ), ಉಷ್ಣ ರಸಾಯನಶಾಸ್ತ್ರ ಹಾಗೂ ಕಬ್ಬಿಣದ ಅದಿರುಗಳನ್ನು ವಿಭಜಿಸುವ ಸಲುವಾಗಿ ಸ್ರಾವಕಗಳ ಶೋಧನೆಯಲ್ಲೂ ಆಸಕ್ತನಾಗಿದ್ದ. 1852 ರ ಆಗಸ್ಟ್ 15 ರಂದು ಈತ ಮೃತನಾದ. (ಪಿ.ಜಿ.ಆರ್.)

**ಗ್ಯಾಡೊಲಿನಿಯಮ್ :** ವಿರಳಭಸ್ಮ ಧಾತುಗಳಲ್ಲೊಂದು; ಆವರ್ತಕೋಷ್ಟಕದ 3 ನೆಯ ಗುಂಪಿನಲ್ಲಿದೆ (ಲ್ಯಾಂಥನೈಡ್). ಬೆಳ್ಳಿಯಂತೆ ಬಿಳುಪಾದ ತನ್ಯ (ಡಕ್ಟೈಲ್) ಲೋಹವಿದು. ಆಮ್ಲಜನಕ ಮತ್ತು ನೀರುಗಳೊಡನೆ ಇದರ ವರ್ತನೆ ನಿಧಾನ. $18^\circ$ ಸೆಂ.ಗಿಂತಲೂ ಕಡಿಮೆ ಉಷ್ಣತೆಯಲ್ಲಿ ಫೆರೊಕಾಂತ (ಫೆರೋಮ್ಯಾಗ್ನೆಟಿಕ್) ಅತಿ ಶೀತಾವಸ್ಥೆಯಲ್ಲಿ ಇದು ಅಧಿವಾಹಕ. ದ್ರವನ ಬಿಂದು $1312^\circ$ ಸೆಂ. ಷಟ್ಕೋನಾಕೃತಿಯ ಸಾಂದ್ರತೆ 7.895. ರಾಸಾಯನಿಕ ಸಂಕೇತ Gd. ಪರಮಾಣು ತೂಕ 157.25. ಪರಮಾಣು ಸಂಖ್ಯೆ 64. ಪರಮಾಣು ತೂಕ 152, 154, 155, 156, 157, 158 ಮತ್ತು 160 ಇರುವ ಐಸೊಟೋಪುಗಳನ್ನು ಶೋಧಿಸಲಾಗಿದೆ. ಗ್ಯಾಡೊಲಿನಿಯಮಿನ ಎಲ್ಲ ಸಂಯುಕ್ತಗಳಲ್ಲೂ ದ್ರಾವಣಗಳಲ್ಲೂ ಇದರ ವೇಲೆನ್ಸಿ 3. ಇದರ ಎಲೆಕ್ಟ್ರಾನಿಕ್ ವಿನ್ಯಾಸ $1s^2, 2s^2, 2p^6, 3s^2$ $3p^6\ 3d^{10}\ 4s^2\ 4p^6\ 4d^{10}\ 4f^7\ 5s^2\ 5p^6\ 4d^1\ 6s^2$. ವಿರಳ ಭಸ್ಮಧಾತುಗಳ ಗುಂಪಿನ ಸದಸ್ಯಧಾತುವಾಗಿರುವ ಗ್ಯಾಡೊಲಿನಿಯಮ್ ರಾಸಾಯನಿಕ ಗುಣಲಕ್ಷಣಗಳಲ್ಲಿ ಅವನ್ನು ಪರಸ್ಪರ ಬಹಳವಾಗಿ ಹೋಲುವುದು. ಇದು ಬಿಳಿ ಆಕ್ಸೈಡನ್ನೂ ಬಣ್ಣವಿಲ್ಲದ ಲವಣಗಳನ್ನೂ ಪಡೆದಿದೆ. ಇದರ ದ್ರಾವಣಗಳು ನಿರ್ವರ್ಣ. ಗ್ಯಾಡೊಲಿನಿಯಮ್ ಅಯಾನಿನ ತ್ರಿಜ್ಯ $0.938A^\circ$. $Gd^{3+}$ ಅಯಾನಿಗೆ ರೋಹಿತದ ಅತಿನೇರಳೆ ಪ್ರದೇಶದಲ್ಲಿ ಹೀರುವ ಹಂತಗಳು ಇರುವುದರಿಂದ ಇದನ್ನು ವಿಶ್ಲೇಷಣೆಗೆ ಅಳವಡಿಸಿಕೊಳ್ಳಬಹುದು. ಅಯುಗ್ಮ ಎಲೆಕ್ಟ್ರಾನುಗಳನ್ನು ಪಡೆದಿರುವುದರಿಂದ ಇದರ ಅಯಾನು ಪ್ರಬಲ ಅನುಕಾಂತತೆಯನ್ನು ತೋರಿಸುವುದು.

ಈ ಧಾತುವನ್ನು ಆವಿಷ್ಕರಿಸಿದ ಕೀರ್ತಿ ಜೆ.ಸಿ.ಜಿ. ಡ ಮ್ಯಾರಿಗ್ನಾಕ್ ಮತ್ತು ಪಿ.ಇ.ಎಲ್. ಡ ಬಾಯ್ಸಿ ಬಾಡ್ರಾನ್ ಎಂಬ ಇಬ್ಬರು ವಿಜ್ಞಾನಿಗಳಿಗೆ ಸಲ್ಲುತ್ತದೆ. ಡ ಮ್ಯಾರಿಗ್ನಾಕ್ 1880 ರಲ್ಲಿ ಸಮರ್‌ಸ್ಕೈಟಿನಿಂದ ಹೊಸ ವಿರಳ ಭಸ್ಮಧಾತು ಒಂದನ್ನು ಬೇರ್ಪಡಿಸಿದ. 1886 ರಲ್ಲಿ ಬಾಯ್ಸಿಬಾಡ್ರಾನ್ ಅದರದೇ ಸಾಕಷ್ಟು ಶುದ್ಧವಾದ ಪದಾರ್ಥಗಳನ್ನು ತಯಾರಿಸಿದ. ಫಿನ್‌ಲೆಂಡಿನ ಖ್ಯಾತ ರಸಾಯನ ವಿಜ್ಞಾನಿ ಗ್ಯಾಡೊಲಿನನ ಗೌರವಾರ್ಥ ಆ ಧಾತುವಿಗೆ ಗ್ಯಾಡೊಲಿನಿಯಮ್ ಎಂದೂ, ಧಾತುವಿನ ಆಕ್ಸೈಡಿಗೆ ಗ್ಯಾಡೊಲಿನವೆಂದೂ ಮ್ಯಾರಿಗ್ನಾಕನ ಒಪ್ಪಿಗೆ ಪಡೆದು ಹೆಸರಿಟ್ಟ. ಗ್ಯಾಡೊಲಿನಿಯಮ್ ಇತರ ವಿರಳ ಭಸ್ಮಧಾತುಗಳೊಡನೆ ಅನೇಕ ಖನಿಜಗಳಲ್ಲಿ ಇರುವುದು. ಆದರೆ ವಾಣಿಜ್ಯ ದೃಷ್ಟಿಯಿಂದ ಅದನ್ನು ಮಾನೋಜೈಟಿನಿಂದ ಪ್ರಧಾನವಾಗಿ ಪಡೆಯಲಾಗುತ್ತಿದೆ. ಬ್ಯಾಸ್ನೈಸೈಟ್, ಗ್ಯಾಡೊಲಿನೈಟ್, ಗ್ಸಿನೊಟೈಮ್ ಮತ್ತು ಯುಕ್ಸಿನೈಟುಗಳು ಇದರ ಇತರ ಮುಖ್ಯ ಅದಿರುಗಳು. ಪರಮಾಣು ವಿದಳನೆಯ ಉತ್ಪನ್ನಗಳಲ್ಲಿಯೂ ಗ್ಯಾಡೊಲಿನಿಯಮ್ ದೊರೆಯುತ್ತದೆ. ಎರಡನೆಯ ಮಹಾಯುದ್ಧಕ್ಕೆ ಮುಂಚೆ ಇದನ್ನು ಮುಖ್ಯವಾಗಿ ಆಂಶಿಕ ಸ್ಫಟಿಕೀಕರಣದ ಮೂಲಕ ಶುದ್ಧೀಕರಿಸುತ್ತಿದ್ದರು. ಈಗ ಅಯಾನು ವಿನಿಮಯ ವಿಧಾನಗಳನ್ನು ಅಳವಡಿಸಿಕೊಂಡು ಉತ್ಪಾದಿಸುತ್ತಾರೆ. 30% ನೈಟ್ರಿಕ್ ಆಮ್ಲದಲ್ಲಿನ ಗ್ಯಾಡೊಲಿನಿಯಮ್ ನೈಟ್ರೇಟನ್ನು ಸ್ಫಟಿಕೀಕರಿಸುವುದರಿಂದ ಈ ಲೋಹದ ಸಂಯುಕ್ತಗಳನ್ನು ಇತರ ಲ್ಯಾಂಥನೈಡುಗಳಿಂದ ಪ್ರತ್ಯೇಕಿಸಬಹುದು. ನಿರ್ಜಲ ಗ್ಯಾಡೊಲಿನಿಯಮ್ ಕ್ಲೋರೈಡನ್ನು ಕ್ಯಾಲ್ಸಿಯಮಿನಿಂದ

ಉಷ್ಣಾಪಕರ್ಷಿಸಿ ಲೋಹವನ್ನು ತಯಾರಿಸಬಹುದು. ಗ್ಯಾಡೊಲಿನಿಯಮ್, ಪೊಟಾಸಿಯಂ ಮತ್ತು ಲಿಥಿಯಮ್ ಕ್ಲೋರೈಡುಗಳ ಮಿಶ್ರಣವನ್ನು ವಿದ್ಯುದ್ವಿಶ್ಲೇಷಿಸಿ 98.4% ಶುದ್ಧವಾಗಿರುವ ಗ್ಯಾಡೊಲಿನಿಯಮ್ ಲೋಹವನ್ನು ಪಡೆಯಲಾಗಿದೆ. ಹೀಗೆ ಪಡೆದ ಮಿಶ್ರಲೋಹವನ್ನು ಕ್ವಾರ್ಟ್ಜ್ ನಳಿಗೆಯಲ್ಲಿ ನಿರ್ವಾತ ಆಸವಿಸಿ ಇತರ ಲೋಹಗಳನ್ನು ಆವಿಯಾಗಿಸುವುದರಿಂದ ಶುದ್ಧ ಗ್ಯಾಡೊಲಿನಿಯಮ್ ಲೋಹವನ್ನು ಪಡೆಯಬಹುದು.

$1^{\circ}$K ($-272^{\circ}$ ಸೆ.) ಗಿಂತಲೂ ಕಡಿಮೆ ಉಷ್ಣತೆ ಪಡೆಯುವ ಅತ್ಯಂತ ಶೀತಾವಸ್ಥೆಯ ಅಧ್ಯಯನದ ಪ್ರಾರಂಭದಲ್ಲಿ ಉಪಯೋಗಿಸಿದ್ದು ಗ್ಯಾಡೊಲಿನಿಯಮ್ ಲವಣಗಳನ್ನು. ಪ್ರಕೃತಿಯಲ್ಲಿ ದೊರೆಯುವ ಧಾತುಗಳಲ್ಲೆಲ್ಲ ಉಷ್ಣನ್ಯೂಟ್ರಾನುಗಳನ್ನು ಅತಿ ಹೆಚ್ಚು ಹೀರುವ ಕೊಯ್ತ ಇದಕ್ಕಿದೆ. ಈ ಗುಣಕ್ಕಾಗಿಯೇ ಇದನ್ನು ಪರಮಾಣು ರಿಯಾಕ್ಟರುಗಳಲ್ಲಿ ನಿಯಂತ್ರಕ ರಾಳವಾಗಿ ಉಪಯೋಗಿಸುವ ಸಾಧ್ಯತೆ ಉಂಟು. ಇದರ ವಿಶಾಲ ಕೊಯ್ತಕ್ಕೆ $^{155}$Gd ಮತ್ತು $^{157}$Gd ಐಸೊಟೋಪುಗಳೇ ಕಾರಣ. ಅವು ಉಷ್ಣನ್ಯೂಟ್ರಾನುಗಳನ್ನು ಹೀರಿಕೊಂಡು ಕ್ರಮವಾಗಿ $^{156}$Gd ಮತ್ತು $^{158}$Gd ಐಸೊಟೋಪುಗಳಾಗಿ ಪರಿವರ್ತಿತವಾಗುವವು. ವಿಶೇಷ ಎಲೆಕ್ಟ್ರಾನಿಕ್ ಉಪಕರಣಗಳಲ್ಲಿ, ಹೆಚ್ಚು ಉಷ್ಣತೆಯ ಉಷ್ಣನಿರೋಧಕಗಳಲ್ಲಿ, ಅತಿ ಶೀತಾವಸ್ಥೆಯ ಅಧ್ಯಯನದಲ್ಲಿ ಮತ್ತು ಮಿಶ್ರ ಲೋಹಕಾರಕವಾಗಿ ಗ್ಯಾಡೊಲಿನಿಯಮನ್ನು ಉಪಯೋಗಿಸುತ್ತಾರೆ **ನೋಡಿ– ಲ್ಯಾಂಥನೈಡುಗಳು; ವಿರಳ–ಭಸ್ಮಧಾತುಗಳು.** (ಪಿ.ಜಿ.ಆರ್.)

**ಗ್ಯಾನಿ ಜೈಲ್‌ಸಿಂಗ್ :** 1916–94. ಭಾರತದ ಏಳನೆಯ ರಾಷ್ಟ್ರಪತಿ. ಶ್ರೀಸಾಮಾನ್ಯ ರಾಷ್ಟ್ರಪತಿ ಎಂಬ ಹೆಗ್ಗಳಿಕೆಗೆ ಪಾತ್ರರು. ಅನುಪಮ ಬುದ್ಧಿ ಮತ್ತು ಸಹೃದಯಿ ಗುಣಗಳ ಸಮ್ಮಿಶ್ರಣದ ವ್ಯಕ್ತಿಯೊಬ್ಬರು ರಾಷ್ಟ್ರಸೇವೆಯ ಅತ್ಯುನ್ನತ ಪದವಿಯನ್ನು ಅಲಂಕರಿಸಿದ್ದು ನಾಡಿನ ಹೆಮ್ಮೆ. ಸ್ವಾತಂತ್ರ್ಯ ಹೋರಾಟಗಾರ, ಸಮಾಜ ಸುಧಾರಕ, ದಲಿತರ ರೂವಾರಿ, ರಾಜ್ಯ ಕಾಂಗ್ರೆಸ್ ನಾಯಕ, ಯಶಸ್ವೀ ಮುಖ್ಯಮಂತ್ರಿ ಹಾಗೂ ಕೇಂದ್ರಗೃಹಸಚಿವರಾಗಿ ಗ್ಯಾನಿ ಜೈಲ್‌ಸಿಂಗ್ ಅವರ ಸಾರ್ವಜನಿಕ ಜೀವನ ವಿಭಿನ್ನ, ವಿಶಿಷ್ಟ ಹಾಗೂ ವಿಶಾಲ. ಸ್ವಾತಂತ್ರ್ಯಪೂರ್ವದಲ್ಲಿ ವಿದೇಶೀ ಆಳಿಕೆ, ಅರಸೊತ್ತಿಗೆ ಹಾಗೂ ಪಾಳೇಗಾರಿಕೆ ವಿರುದ್ಧ ಇವರದು ಸತತ ಹೋರಾಟ. ಕೋಮುವಾದ, ಆರ್ಥಿಕ ಅಸಮಾನತೆ ವಿರುದ್ಧ ಸಾಮಾಜಿಕ ನ್ಯಾಯಕ್ಕಾಗಿ ಇವರದು ನಿರಂತರ ಹೋರಾಟ. ಎತ್ತರದ ನಿಲುವು ಆಕರ್ಷಕ ಮೈಕಟ್ಟು, ಬಲು ಚೊಕ್ಕವಾಗಿ ಉಡುಪು ಧರಿಸುವ ಅಭಿರುಚಿ. ಅತ್ಯಂತ ಸರಳ, ದೈವಶ್ರದ್ಧೆಯ ನೈಜಮಣ್ಣಿನ ಮಗ. ಲೋಕತಂತ್ರದ ಮೌಲ್ಯಗಳಲ್ಲಿ ನೆಟ್ಟ ನಂಬಿಕೆ. ಭಾರತೀಯ ಸಾರ್ವಜನಿಕ ಜೀವನದಲ್ಲಿ ಸಹಜವಾಗಿಯೇ ಇವರಿಗೆ ವಿಶಿಷ್ಟ ಸ್ಥಾನ.



ಇವರು 1916 ಮೇ5 ರಂದು ಫರೀದ್‌ಕೋಟ್ ಜಿಲ್ಲೆಯ ಸಂಧ್ವಾನ ಗ್ರಾಮದಲ್ಲಿ ಜನಿಸಿದರು. ಕರಕುಶಲ ಮನೆತನ; ಆದರೆ ಬೇಸಾಯವನ್ನು ಕಸಬಾಗಿ ಮಾಡಿಕೊಂಡಿತ್ತು. ತಂದೆ ಸರ್ದಾರ್ ಕಿಶನ್‌ಸಿಂಗ್‌ರಿಗೆ ಸುಮಾರು 56 ಎಕರೆ ಜಮೀನಿತ್ತು. ಇದು ಜೈಲ್‌ಸಿಂಗ್ ಹಾಗೂ ಇವರ ಇಬ್ಬರು ಸಹೋದರರೊಡನೆ ಹಂಚಿಕೆ ಆಯಿತು. ಪ್ರಭಾವ ಪ್ರತಿಷ್ಠೆಗಳಿಂದ ದೂರವಾದ ಕುಗ್ರಾಮವೊಂದರ ಮಣ್ಣಿನ ಜೋಪಡಿ ಮನೆಯಲ್ಲಿ ಇವರು ಹುಟ್ಟಿ ಬೆಳೆದವರು. ಇವರು ಬಟ್ಟೆ ಹೊಲಿದರು. ಕಲ್ಲು ಒಡೆದರು. ನೇಗಿಲು ಹಿಡಿದು ಬೇಸಾಯ ಮಾಡಿದರು. ರಸ್ತೆ ನಿರ್ಮಾಣದಲ್ಲೂ ದುಡಿದರು. ಬಾವಿ ತೋಡಿದರು. ಖಡ್ಗ ತಯಾರಿಸಿದರು. ಶ್ರೀಸಾಮಾನ್ಯನ ಅಳಲು ಆಶೋತ್ತರಗಳನ್ನು ಸ್ವತಃ ಕಂಡರು. ಇದೇ ಇವರಿಗೆ ಮೂಲ ಶಿಕ್ಷಣವಾಯಿತು. ಜತೆಗೆ ಸಿಖ್ ಪವಿತ್ರ ಗ್ರಂಥಗಳ ವ್ಯಾಸಂಗ, ಕುರಾನ್, ಗೀತೆ, ರಾಮಾಯಣಗಳ ಅಧ್ಯಯನ ಮಾಡಿದರು.

ಬಾಲ್ಯದಿಂದಲೇ ಸಾಹಿತ್ಯ ಅಭಿರುಚಿ ಬೆಳೆಸಿಕೊಂಡ ಇವರ ಸಮವಯಸ್ಕರು ಮೆಟ್ರಿಕ್ ಪರೀಕ್ಷೆ ಪಾಸಾದರೆ ಇವರು ಸಿಖ್ ಧರ್ಮ, ಸಿಖ್ಖರ ಇತಿಹಾಸ ಹಾಗೂ ಶಾಸ್ತ್ರಗಳ ಅಧ್ಯಯನ ಪೂರ್ಣಗೊಳಿಸಿದರು. ಹಿಂದಿ ಮತ್ತು ಉರ್ದು ಭಾಷೆಗಳಲ್ಲಿ ಪಾಂಡಿತ್ಯ ಪಡೆದಿದ್ದರೂ ಅಷ್ಟಾಗಿ ಇಂಗ್ಲಿಷ್ ಬರುತ್ತಿರಲಿಲ್ಲ. ಸ್ವಂತ ಶಕ್ತಿಯಿಂದ ಮೇಲೆ ಬರುವ ಛಲ, ಗುರಿಸಾಧನೆಯ ತಾಳ್ಮೆ, ಶ್ರಮಪೂರ್ಣ ದುಡಿಮೆ, ಅಪ್ಪಟ ಪ್ರಾಮಾಣಿಕತೆ ಸಾಮಾನ್ಯ ಮನುಷ್ಯರನ್ನು ಅತ್ಯುನ್ನತ ಪದವಿಗೆ ಏರಿಸಬಲ್ಲದು ಎಂಬುದಕ್ಕೆ ಇವರು ಒಂದು ನಿಚ್ಚಳ ನಿದರ್ಶನ.

ಭಗತ್‌ಸಿಂಗ್ ಹಾಗೂ ಅವರ ಸಹಚರರು 1931 ಮಾರ್ಚ್ 23ರಂದು ಹುತಾತ್ಮರಾದಾಗ ಇವರಿಗೆ 16 ವರ್ಷ. ಈ ಘಟನೆ ಇವರ ಮೇಲೆ ಗಾಢ ಪರಿಣಾಮ ಬೀರಿತು. 1938ರಲ್ಲಿ ಫರೀದ್‌ಕೋಟ್ ಪ್ರಾಂತದಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಶಾಖೆ ಆರಂಭವಾಗುವುದರೊಡನೆ ಇವರ ಹೋರಾಟದ ಬದುಕು ಆರಂಭವಾಯಿತು. ಅಲ್ಲಿನ ಅರಸೊತ್ತಿಗೆ ಇವರನ್ನು ಸಾಮಾನ್ಯ ಅಪರಾಧಿಯೆಂದು ಪರಿಗಣಿಸಿತು. ಕಾಂಗ್ರೆಸ್ ಕಚೇರಿಯ ಆರಂಭ ಮಹಾರಾಜನ ದೃಷ್ಟಿಯಲ್ಲಿ ರಾಜದ್ರೋಹವಾಯಿತು. ಫರೀದ್‌ಕೋಟ್ ರಾಜ್ಯದಲ್ಲಿ ಕಾಂಗ್ರೆಸ್ ಸ್ಥಾಪನೆ ಮಾಡಿದರೆಂದು ಇವರಿಗೆ 5 ವರ್ಷಗಳ ಜೈಲುಶಿಕ್ಷೆ; ಏಕಾಂತ ವಾಸ, ಬಿಡುಗಡೆಯ ನಂತರವೂ ಇವರಿಗೆ ಕಿರುಕುಳ ಮುಂದುವರೆಯಿತು. ಸ್ವಲ್ಪ ಕಾಲ ರಾಜ್ಯದ ಹೊರಗುಳಿದರು. ತಮ್ಮ ರಾಜ್ಯದಲ್ಲಿ ಸ್ವಾತಂತ್ರ್ಯ ಚಳವಳಿಗೆ ಬೆಂಬಲವನ್ನು ರೂಢಿಸಿದರು. ಇದೇ ಸಮಯದಲ್ಲಿ ಮಹಾತ್ಮ ಗಾಂಧಿಯವರ ಅಹಿಂಸಾತತ್ತ್ವ ಇವರ ಮೇಲೆ ಪ್ರಭಾವ ಬೀರಿತು.

ರಾಷ್ಟ್ರಪಿತ ಹಾಕಿದ ದಾರಿಯಲ್ಲಿ ಸ್ವಾತಂತ್ರ್ಯ ಸಂಗ್ರಾಮ ಮುಂದುವರೆಸಲು 1946ರಲ್ಲಿ ಫರೀದ್‌ಕೋಟ್ ರಾಜ್ಯಕ್ಕೆ ಇವರು ಹಿಂತಿರುಗಿದರು. ರಾಷ್ಟ್ರಧ್ವಜ ಹಾರಿಸಲು ಫರೀದ್‌ಕೋಟ್ ರಾಜ್ಯ ಏಕವ್ಯಕ್ತಿಯಾಗಿ ಎದ್ದು ನಿಂತಿತು. ಆದರೆ ಅಲ್ಲಿನ ಮಹಾರಾಜ ಬರ್ಬರ ದಬ್ಬಾಳಿಕೆ ನಡೆಸಿದ. ವಿಷಯ ಜವಹರಲಾಲ್ ನೆಹರುರವರಿಗೆ ತಿಳಿದು ರಾಷ್ಟ್ರಧ್ವಜ ಹಾರಿಸಲು ಫರೀದ್‌ಕೋಟ್‌ಗೆ ಹೋಗಲು ತೀರ್ಮಾನಿಸಿದರು. ಈ ಪ್ರಸಂಗದಿಂದ ಪಂಡಿತ್‌ಜೀಯವರ ಜೊತೆ ಗ್ಯಾನೀಜೀಯವರ ನಿಕಟ ಬಂಧುತ್ವ ಬೆಳೆಯಿತು. ಯುವ ಹೋರಾಟಗಾರನ ಬಗ್ಗೆ ಪಂಡಿತ್‌ಜೀಗೆ ಅಪಾರ ಅಭಿಮಾನ. ಫರೀದ್‌ಕೋಟ್‌ನಲ್ಲಿ ಪರ್ಯಾಯ ಸರ್ಕಾರದ ರಚನೆ ಗ್ಯಾನಿ ಜೈಲ್‌ಸಿಂಗ್‌ರವರ ಒಂದು ದೊಡ್ಡ ಸಾಹಸದ ಕ್ರಮ. ರಾಜನ ಸರ್ಕಾರದ ವಿರುದ್ಧ ಬಂಡಾಯ ಹೂಡಿದರೆಂಬ ಆರೋಪದ ಮೇಲೆ ಇವರನ್ನು ತಪ್ಪಿತಸ್ಥನೆಂದು ಬಂಧಿಸಲಾಯಿತು.

ಸ್ವಾತಂತ್ರ್ಯಾನಂತರ ಇಂದಿರಾಗಾಂಧಿಯವರ ನಿಕಟವರ್ತಿಯಾಗಿ ಗೃಹಸಚಿವ ಹುದ್ದೆಗೆ ಏರಿದ ಇವರು 1982ರ ಜುಲೈ 25ರಂದು ಭಾರತದ 7ನೆಯ ರಾಷ್ಟ್ರಪತಿಯಾದರು. 1987ರ ಜುಲೈ 25ರವರೆಗೆ ಆ ಹುದ್ದೆಯನ್ನು ಅಲಂಕರಿಸಿದ್ದರು. ಇಂದಿರಾಗಾಂಧಿಯವರ ಅಮಾನುಷ ಹತ್ಯೆ, ತದನಂತರದ ರಾಜಕೀಯ ವಿದ್ಯಮಾನ, ರಾಜೀವ್‌ಗಾಂಧಿ ಪ್ರಧಾನಿಯಾದದ್ದು, ಆ ಸಮಯದಲ್ಲಿ ತಮ್ಮ ಸ್ವತಂತ್ರ ಮನೋಭಾವವನ್ನು ಕೆಲವು ಸಂದರ್ಭಗಳಲ್ಲಿ ಪ್ರಕಟಿಸಿದ್ದು ಜೈಲ್‌ಸಿಂಗ್‌ರವರ ವ್ಯಕ್ತಿತ್ವಕ್ಕೆ ಮೆರುಗು ತಂದುಕೊಟ್ಟಿತು. ಮುದ್ರಿತ ಭಾಷಣ ಮುಗಿಸಿ ಧಿಡೀರ್ ತಮ್ಮ ಅನಿಸಿಕೆಗಳನ್ನು ಪ್ರಕಟಿಸಿಬಿಡುತ್ತಿದ್ದ ಗ್ಯಾನಿ ಜೈಲ್‌ಸಿಂಗ್‌ರವರು ಸದಾ ನಗುಮೊಗದ ಸಜ್ಜನಿಕೆಯ ಸರಳಮೂರ್ತಿ. (ಕೆ.ಎಸ್.ಎ)

**ಗ್ಯಾಬಾನ್ :** ಆಫ್ರಿಕದ ಒಂದು ಗಣರಾಜ್ಯ. ಸಮಭಾಜಕ ವೃತ್ತದ ಮೇಲಿದೆ. ಗ್ಯಾಬಾನಿಗೆ ಪಶ್ಚಿಮದಲ್ಲಿ ಅಟ್ಲಾಂಟಿಕ್ ಸಾಗರ, ಉತ್ತರದಲ್ಲಿ ರಿಯೊಮುನಿ ಮತ್ತು ಕ್ಯಾಮರೂನ್, ಪೂರ್ವ– ದಕ್ಷಿಣಗಳಲ್ಲಿ ಕಾಂಗೊ ಇವೆ. ಗ್ಯಾಬಾನಿನ ವಿಸ್ತೀರ್ಣ 2,67,668 ಚ. ಕಿಮೀ. ಜನಸಂಖ್ಯೆ 14,75,000 (2009). ರಾಜಧಾನಿ ಲೀಬ್ರವೀಲ್.

**ಭೌತಲಕ್ಷಣ:** ಗ್ಯಾಬಾನ್ ರಾಜ್ಯದ ಕರಾವಳಿ ಕಿರಿದಾಗಿದೆ; ಮರಳುಗಲ್ಲು ಮತ್ತು ಮೆಕ್ಕಲುಮಣ್ಣಿನಿಂದ ಕೂಡಿದೆ; ಉತ್ತರಕ್ಕೆ ಹೋದಂತೆ ಅಗಲವಾಗುತ್ತದೆ. ಲೋಪೆಜ್ ಭೂಶಿರಕ್ಕೆ ದಕ್ಷಿಣದಲ್ಲಿ ಅಟ್ಲಾಂಟಿಕ್ ಸಾಗರದ ಬೆಂಗ್ಯುಲ ಪ್ರವಾಹದಿಂದಾಗಿ ಮರಳುದಂಡೆಗಳೇರ್ಪಟ್ಟಿವೆ. ಈ ಕಡಲ ಪ್ರವಾಹ ಪಶ್ಚಿಮ ಆಫ್ರಿಕದ ಅಂಚಿನಲ್ಲಿ ಉತ್ತರಾಭಿಮುಖವಾಗಿ ಸಾಗಿ, ನದಿಗಳು ಸಾಗರಕ್ಕೆ ಬೀಳುವ ಕಡೆ ಮರಳುದಂಡೆಗಳು ಸುತ್ತುವರಿದ ಲಗೂನ್‌ಗಳನ್ನು ನಿರ್ಮಿಸಿದೆ. ಲೋಪೆಜ್ ಭೂಶಿರದ ಬಳಿ ತೀರ ಡೊಂಕಾಗಿದೆ. ಗ್ಯಾಬಾನ್ ನದಿ ಸಾಗರಕ್ಕೆ ಬೀಳುವ ಕಡೆ ವಿಶಾಲವಾದ ಅಳಿವೆಯುಂಟು. ರಾಜ್ಯದ ಒಳನಾಡಿನ ಮೇಲ್ಮೈ ಸಂಕೀರ್ಣವಾದ್ದು. ಉತ್ತರದಲ್ಲಿ ಸ್ಫಟಿಕಾಕಾರದ ಬಂಡೆಗಳಿಂದ ಕೂಡಿದ ಪರ್ವತಗಳ ನಡುವೆ ಉಲೆಯು, ನಟೆಮ್ ಮತ್ತು ಇವಿಂಡೊ ನದೀಬಯಲುಗಳಿವೆ. ದಕ್ಷಿಣದಲ್ಲಿ ಓಗೊವೇ ನದಿ ತಡಿಯಾಕಾರದ ಪರ್ವತಗಳ ನಡುವೆ ಹರಿಯುತ್ತದೆ. ಅಲ್ಲಿ ಮರಳುಗಲ್ಲು ಮತ್ತು ಖನಿಜ ಪದರ ಶಿಲೆಗಳು ಹೆಚ್ಚು; ಲಂಬಾರೇನೇ ಬಳಿ ಬೆಣಚುಕಲ್ಲುಗಳು ಹೇರಳ. ಸಾಗರತೀರದ ದಕ್ಷಿಣ ಭಾಗ ಬೆಟ್ಟ ಸೀಮೆ. ಇದರ ನೆರೆಯ ಬಯಲುಗಳಲ್ಲಿ ನ್ಯಾಂಗ ಮತ್ತು ನೌಗ್ನೀ ನದಿಗಳು ಹರಿಯುತ್ತವೆ. ನೌಗ್ನೀ ನದಿ ಓಗೊವೇಯ ಉಪನದಿ. ನೌಗ್ನೀ ಮತ್ತು ಓಗೊವೇ ನದಿಗಳ ನಡುವಣ ದಟ್ಟ ಪರ್ವತಶ್ರೇಣಿಯಲ್ಲಿ 5,168 (1,575 ಮೀ) ಎತ್ತರದ ಇಬೌಂಡ್ಜಿ ಪರ್ವತವಿದೆ. ಇದು ಗ್ಯಾಬಾನಿನ ಅತ್ಯಂತ ಎತ್ತರವಾದ ಪರ್ವತ.

**ವಾಯುಗುಣ ಮತ್ತು ಸಸ್ಯ ಪ್ರಾಣಿಜೀವನ:** ಗ್ಯಾಬಾನಿನದು ಸಮಭಾಜಕ ವೃತ್ತದ ವಾಯುಗುಣ. ಋತುಗಳ ವ್ಯತ್ಯಾಸ ಅಷ್ಟಾಗಿ ಕಂಡುಬರುವುದಿಲ್ಲ; ಉಷ್ಣತೆಯಲ್ಲೂ ಹೆಚ್ಚು ಬದಲಾವಣೆಗಳಿಲ್ಲ. ಇಡೀ ವರ್ಷ ಮಳೆ ಬೀಳುತ್ತದೆ. ಸಮುದ್ರದ ಬೆಂಗ್ಯುಲ ಶೀತೋದಕ ಪ್ರವಾಹದಿಂದಾಗಿ ಕರಾವಳಿಯಲ್ಲಿ ಉಷ್ಣತೆ ಮತ್ತು ಮಳೆ ಕಡಿಮೆ. ಒಳನಾಡಿನಲ್ಲಿ ಇವೆರಡೂ